# ಕಸ್ತೂರಿ

ಮೇ, ೧೯೮೪



ರೂ. ೨-೫೦

# ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವ್ಯಾಪಕ ಕಾರ್ಯಕ್ರಮ

ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ. ಗುಡಿ ಕೈಗಾರಿಗೆ, ಕೈಮಗ್ಗ ಮತ್ತು ಕರಕುಶಲ ಕೈಗಾರಿಕೋದ್ಯಮಗಳ ಅಭಿವೃದ್ಧಿಗಾಗಿ ಹೊಸ ಉತ್ತೇಜಕ ವಾತಾವರಣ ಕಲ್ಪಿತವಾಗಿದೆ.

೧೯೮೪-೮೫ ನೇ ಸಾಲಿಗಾಗಿ ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಅನೇಕ ಆಶಾದಾಯಕವಾದ ಹೊಸ ಯೋಜನೆಗಳನ್ನು ರೂಪಿಸಲಾಗಿದೆ.

ಈ ಯೋಜನೆಗಳು, ಆಸಕ್ತ ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ಸಹಾಯ ಮತ್ತು ತಾಂತ್ರಿಕ ಜ್ಞಾನವನ್ನು ಸಹ ಒದಗಿಸುತ್ತವೆ.

ಈ ಯೋಜನೆಗಳು :

೧ ೧೯೮೫ ನೇ ಡಿಸೆಂಬರ್ ತಿಂಗಳ ವೇಳೆಗೆ ೩೬ ಕೋಟಿ ರೂ. ವೆಚ್ಚದಲ್ಲಿ ೧೫೧೦ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗುವುದು. ಕಳೆದ ೨೦ ವರ್ಷಗಳಲ್ಲಿ ೧೨೦ ಕೋಟಿ ರೂ. ವೆಚ್ಚದಲ್ಲಿ ೨೦೦೦ ಕೈಗಾರಿಕಾ ಷೆಡ್ಡುಗಳನ್ನು ಮಾತ್ರ ನಿರ್ಮಿಸಲಾಗಿತ್ತು,

೨ ಔಷಧಿಗಳು, ಚರ್ಮ ಮತ್ತು ಕೈಗಾರಿಕಾ ಸಲಕರಣೆಗಳು. ಮುಂತಾದವುಗಳಿಗೆ ಸಕ್ರೀಯ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.

೩ ಸಣ್ಣ ಕೈಗಾರಿಕೆಗಳ ಮಾರಾಟ ನಿಗಮದ ನಿರ್ಮಾಣ.

೪ ಕೈಮಗ್ಗ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

೫ ರಾಜ್ಯದ ನಾರು ಅಭಿವೃದ್ಧಿ ನಿಗಮದ ಸ್ಥಾಪನೆ.

೬ ಪ್ರಾಥಮಿಕ ಸಹಕಾರಿ ಕೈಮಗ್ಗ ಸಂಘಗಳ ಎಲ್ಲ ನೇಕಾರ ಸದಸ್ಯರುಗಳಿಗೂ ಈಗ ಅನ್ವಯವಾಗುತ್ತಿರುವ ಉಳಿತಾಯ ಕಾಣಿಕೆ ನಿಧಿ ಯೋಜನೆಯನ್ನು (Contributory thrift fund scheme) ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸುವುದು.

೭ ಚರ್ಮ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

೮ ವಿದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರಿಗಾಗಿಯೇ ಪ್ರತ್ಯೇಕವಾಗಿ ಕೈಗಾರಿಕಾ ವಲಯಗಳ ಅಭಿವೃದ್ಧಿ.

ಕರ್ನಾಟಕ ವಾರ್ತೆ

DIP/7617-84

# ಕಸ್ತೂರಿ

ಕನ್ನಡ ಡೈಜೆಸ್ಟ್


ವ್ಯವಸ್ಥಾಪಕ ಸಂಪಾದಕ :

ಎಸ್. ಎ. ಪಾಟೀಲ

ಸಹಸಂಪಾದಕ :

ಮಾಧವ ನಾ. ಮಹಿಷಿ

◆◆

ಕಲೆ :

ಕೆ. ಬಿ. ಕುಲಕರ್ಣಿ

◆◆

ಮುಖಪುಟ :

ಗ್ರಾಮದಲ್ಲೊಂದು ಸಂಜೆ

◆◆

ಚಿತ್ರ :

ಕೆ. ಕೆ. ಮಕಾಳಿ

(ಸರಕಾರಿ ಚಿತ್ರಕಲಾ ಶಾಲೆ, ಧಾರವಾಡ)

ಚಂದಾ ದರಗಳು :

| | | |
|---|---|---|
| ಬಿಡಿ ಸಂಚಿಕೆ | ... | ೨-೫೦ |
| ೧ ವರ್ಷಕ್ಕೆ | ಅಂಚೆ ಸೇರಿ | ೨೯-೦೦ |
| ೨ ವರ್ಷಕ್ಕೆ | ,, | ೫೫-೦೦ |
| ೩ ವರ್ಷಕ್ಕೆ | ,, | ೮೨-೦೦ |

KASTURI May 1984


## ಬೆಳಕಿಂಡಿ

ಮನುಷ್ಯನ ಬುದ್ಧಿ ಪ್ಯಾರಾಚ್ಯೂಟ್ ಇದ್ದಂತೆ: ಅದು ಕೆಲಸದಲ್ಲಿ ತೊಡಗಬೇಕೆಂದರೆ ಮೊಟ್ಟಮೊದಲು ಬಿಚ್ಚಿಕೊಳ್ಳಬೇಕಾಗುತ್ತದೆ. -ಜಿ. ಸ್ಮಿತ್

*

ಸೃಜನಶೀಲತೆ ಕೆಲಸಲ ಇದ್ದುದನ್ನೇ ಪುನರುಜ್ಜೀವಿಸುವಂಥ ಕ್ರಿಯೆಯಾಗಿರುತ್ತದೆ. ಎಡ ಮತ್ತು ಬಲ ಬೂಟುಗಳ ಉದಾಹರಣೆಯನ್ನೇ ನೋಡಿರಲ್ಲ.

-ಬರ್ನಿಸ್ ಫಿಜ್ ಗಿಬ್ಬನ್

*

ನಿಮ್ಮ ಮಿತ್ರರನ್ನು ಟೀಕಿಸುವುದು ನಿಮಗೆ ನೋವುಂಟುಮಾಡುತ್ತಿದ್ದರೆ ನೀವು ಆ ಕೆಲಸ ಮಾಡುವುದರಲ್ಲಿ ಸುರಕ್ಷಿತರು; ಆದರೆ ಅದರಿಂದ ನೀವು ಸಂತೋಷಪಡುತ್ತಿದ್ದರೆ ಮಾತ್ರ ನೀವು ನಿಮ್ಮ ನಾಲಗೆಗೊಂದು ಬೀಗ ಹಾಕುವ ಸಮಯ ಬಂದಿದೆ ಎಂದೇ ತಿಳಿದುಕೊಳ್ಳಿ.

-ಅಲಿಸ್ ಮಿಲ್ಲರ್

*

ಎದುರಿಸಲ್ಪಟ್ಟದ್ದೆಲ್ಲವೂ ಬದಲಾಯಿಸಲ್ಪಡುವಂಥದಲ್ಲ. ಆದರೆ ಎದುರಿಸಲ್ಪಟ್ಟ ಹೊರತು ಯಾವುದೂ ಬದಲಾಯಿಸಲ್ಪಡುವುದಿಲ್ಲ. -ಜೆಮ್ಸ್ ಬಾಲ್ಡ್ವಿನ್

---

### ಚಂದಾದಾರರಿಗೆ ಸೂಚನೆ

"ಕಸ್ತೂರಿ" ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

# ಈ ಸಂಚಿಕೆಯಲ್ಲಿ

# ಸಹಚಿಂತನ

**ಹಿಮಗಿರಿಯ ಹೊಕ್ಕಳ ಹುರಿ**

ನಮ್ಮ ವಾಯುಪಡೆಯು ಉತ್ತರದ ಗಡಿಯಲ್ಲಿ ನಿತ್ಯ ಮೌನವಾಗಿ ನಿರ್ವಹಿಸುತ್ತಿರುವ ಅಮೂಲ್ಯ ಕಾರ್ಯದ ಕಲ್ಪನೆಯನ್ನು ವಿಂಗ್ ಕಮಾಂಡರ್ ಮೋಟೆಯವರ ಲೇಖನ ತೃಪ್ತಿಕರವಾಗಿ ಮಾಡಿಕೊಡುತ್ತದೆ. ಇದರಿಂದ ನಮ್ಮ ಸಂರಕ್ಷಣ ಪಡೆಗಳ ಬಗ್ಗೆ ನಮಗಿದ್ದ ಗೌರವ ಖಂಡಿತ ದ್ವಿಗುಣಗೊಳ್ಳುತ್ತದೆ. ಕನ್ನಡ ಯುವಕರು ವಾಯುಪಡೆಯತ್ತ ಅಷ್ಟಾಗಿ ಆಕರ್ಷಿತರಾಗುತ್ತಿರುವುದು ಕಾಣುತ್ತಿಲ್ಲ. ಯುವಕರಿಗೆ ಇದೊಂದು ಆದರ್ಶ ಜೀವನ ಮಾರ್ಗವೂ ಹೌದು, ಸೇವಾವಕಾಶವೂ ಹೌದು. ಹೆಚ್ಚೆಚ್ಚು ಕನ್ನಡ ಯುವಕರು ವಾಯುಪಡೆಯಲ್ಲಿ ಆಸ್ಥೆವಹಿಸತೊಡಗಿದರೆ ಈ ಲೇಖನ ಸಾರ್ಥಕವೆನಿಸೀತು.

ಈ ಲೇಖನವನ್ನೇ ಸಂಕೇತಿಸುವ ಮುಖಚಿತ್ರ ಆಕರ್ಷಕವಾಗಿದೆ.

ಗದಗ — ಇಂದುಮತಿ ಕೃ.ಪಾಟೀಲ

**ಏಡ್ಸ್**

ಏಡ್ಸ್‌ಗೆ ಸಂಬಂಧಿಸಿದ ಲೇಖನ ಚೆನ್ನಾಗಿದೆ. ಆದರೆ ಯಾವ ಔಷಧಿಯೂ ಅದಕ್ಕೆ ನಾಟುವುದಿಲ್ಲವೆನ್ನುವುದನ್ನು ಒಪ್ಪಿಕೊಳ್ಳಲು ಸ್ವಲ್ಪ ಕಷ್ಟವಾಗುತ್ತದೆ. ಕೆಲವು ತಿಂಗಳ ಹಿಂದೆ 'ಇಂಡಿಯಾ ಟುಡೆ' ಪತ್ರಿಕೆಯು ಈ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿದಾಗ ಇದಕ್ಕೆ ನಾಟುವ ಒಂದೇ ಒಂದು ಪ್ರತಿಜೈವಿಕವಿದ್ದು (ಅದರ ಹೆಸರು ನೆನಪಿಗೆ ಬರುತ್ತಿಲ್ಲ) ಒಂದು ಮಾತ್ರೆಗೆ ಸುಮಾರು ಹದಿನೈದರಿಂದ ಇಪ್ಪತ್ತು ರೂಪಾಯಿಗಳಷ್ಟು ಬೆಲೆಯಾಗುತ್ತದೆಂದೂ ಅದು ಈ ದೇಶದಲ್ಲಿ ಉತ್ಪಾದಿತವಾಗುತ್ತಿಲ್ಲವಾದ್ದರಿಂದ ಪರದೇಶಗಳಿಂದ ತರಿಸಿಕೊಳ್ಳಬೇಕಾಗುತ್ತದೆಂದೂ ಬರೆದಿತ್ತು. ದಿಲ್ಲಿಯಲ್ಲಿ ಈ ರೋಗ ಇತ್ತೀಚೆ ಕಂಡುಬಂದಿದ್ದು ಕ್ರಮೇಣವಾಗಿ ಇತರ ನಗರ ಪ್ರದೇಶಗಳಿಗೆ ವಿಸ್ತರಿಸುತ್ತಿರುವ ಹಾಗೆ ತೋರುತ್ತಿದೆ.

ಈ ರೋಗ ಎಷ್ಟು ಭೀಕರವಾಗಿದೆಯೆಂದರೆ 'ಏಡ್ಸ್'ನಿಂದ ಮರಣಹೊಂದಿದವರ ದೇಹವನ್ನು ರಾಸಾಯನಿಕಗಳಿಂದ ಸಂಸ್ಕರಿಸಿ, ರಾಸಾಯನಿಕಗಳ ಲೇಪ ಬಳಿದು, ವಾಯು ಅಭೇದ್ಯವಾದ, ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿದಾಗಲೂ ಅದನ್ನು ಮುಟ್ಟಲು ಪಾಶ್ಚಾತ್ಯ ದೇಶಗಳ ಜನ ಹೆದರುತ್ತಿದ್ದಾರಂತೆ.

ಹುಬ್ಬಳ್ಳಿ — ಶ್ರೀಕಾಂತ ಮಳಗಿ

**ಧನ್ಯವಾದ**

ಅಪರಾಧವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅದನ್ನು ವಿಜ್ಞಾನವನ್ನಾಗಿ ಬೆಳೆಸಲು ದಾರಿ ಹಾಕಿ ಕೊಟ್ಟ ಅಪರಾಧಶಾಸ್ತ್ರದ ಜನಕ ಸೆಸಾರ್ ಲೋಂಬ್ರೋಸೋ ಕುರಿತು ಸಿ. ಆರ್. ಸೀತಾರಾಘವ ಅವರ ಲೇಖನ ಇನ್ನಷ್ಟು ವಿವರಗಳನ್ನು ಒಳಗೊಳ್ಳಬೇಕಿತ್ತು. ಲೋಂಬ್ರೋಸೋನ ವಿಚಾರಗಳು ಇಂದು ನಿಲ್ಲದಿದ್ದರೂ ಆತನ ಕಾಲದಲ್ಲಿ ಅವಕ್ಕೆ ಜನ ಮನ್ನಣೆ ಸಾಕಷ್ಟು ದೊರಕಿತ್ತು. ಎನ್ರಿಕೋ ಫೇರಿಯಂಥ ಪ್ರತಿಭಾಶಾಲಿ ವಿಜ್ಞಾನಿಯನ್ನು ಶಿಷ್ಯನನ್ನಾಗಿ ಪಡೆದು ಲೋಂಬ್ರೋಸೋ ಅಪರಾಧಶಾಸ್ತ್ರಕ್ಕೆ ಎರಡು ತಲೆಮಾರುಗಳ ಕೆಲಸ ಮಾಡಿದ್ದಾನೆ ಎನ್ನಬಹುದು.

ಲೋಂಬ್ರೋಸೋ ಪ್ರತಿಪಾದಿಸಿದ ಸಂಗತಿಗಳಲ್ಲಿ ಯಾವವು, ಯಾರಿಂದ, ಯಾವಾಗ ಅಲ್ಲಗಳೆಯಲ್ಪಟ್ಟವು ಎಂಬುದನ್ನು ಲೇಖನವು ಒಳಗೊಂಡಿದ್ದರೆ ಸಮಗ್ರವಾಗುತ್ತಿತ್ತು.

"ಲೋಂಬ್ರೋಸೋಗಾಗಲೀ, ಅವನ ವಿಚಾರಗಳಿಗಾಗಲೀ ಇಂದು ಸ್ಥಾನವಿಲ್ಲದಿರಬಹುದು..." ಎಂದು ಲೇಖಕರು ಹೇಳಿದ್ದಾರೆ, ಆದರೆ ಲೋಂಬ್ರೋಸೋ ಹುಟ್ಟದಿದ್ದರೆ ಅಪರಾಧ ವಿಜ್ಞಾನ ಇರುತ್ತಿತ್ತೆ?

ಮೈಸೂರು — ಶ್ರೀಧರ ದೀಕ್ಷಿತ

(ಈ ಲೇಖನವನ್ನು 'ಜನಪ್ರಿಯ ವಿಜ್ಞಾನ' ಪತ್ರಿಕೆಯಿಂದ ಸಾಭಾರವಾಗಿ ಪ್ರಕಟಿಸಲಾಗಿದ್ದು 'ಜನಪ್ರಿಯ ವಿಜ್ಞಾನ'ದ ಹೆಸರು ಕಣ್ತಪ್ಪಿನಿಂದ ಉಳಿದುಹೋಗಿದೆ. —ಸಂ.)

**ಹೆಚ್ಚು ಪರಿಚಯಿಸಿ**

ಏಪ್ರಿಲ್ ತಿಂಗಳ 'ಕಸ್ತೂರಿ'ಯಲ್ಲಿ ಡಾ. ವರದರಾಜ ಹುಯಿಲಗೋಳರ ಬಗ್ಗೆ ಸಾಕಷ್ಟು

ವಿವರವಾದ ಲೇಖನ ಓದಿ ಸಂತೋಷವಾಯಿತು. ಕೇವಲ ಹುಯಿಲಗೋಳರ ಹೆಸರನ್ನಷ್ಟೇ ಅರಿತಿದ್ದ ನನಗೆ ಇವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಅಪಾರ ಸೇವೆಯು ಪರಿಚಯವೂ ಆಯಿತು. ನಿಜಕ್ಕೂ ಇಂಥ ಶ್ರೇಷ್ಠ ವ್ಯಕ್ತಿಗಳ ಪರಿಚಯ ಪ್ರತಿಯೊಬ್ಬ ಕನ್ನಡಿಗನಿಗೂ ಇರಬೇಕಾದುದು ಅವಶ್ಯಕ. ಅಂತೆಯೇ ಇಂದಿನ ಯುವಜನಾಂಗಕ್ಕೆ ಅಷ್ಟಾಗಿ ಪರಿಚಯವಿಲ್ಲದ ಹಿಂದಿನ ಹಿರಿಯ ಸಾಹಿತಿಗಳ ಪರಿಚಯವನ್ನೂ 'ಕಸ್ತೂರಿ' ಮಾಡಿಕೊಡಲಿ.

ಬೆಂಗಳೂರು —ಗ. ವಿಜಯಕುಮಾರ ಅತ್ರಿ

ಸಾಹಿತಿ ಡಾ. ವರದರಾಜ ಹುಯಿಲಗೋಳ ಅವರ ಸಮಗ್ರ ವ್ಯಕ್ತಿ ಚಿತ್ರಣವು ತುಂಬಾ ಹಿಡಿಸಿತು. ಅವರ ವಿವಿಧ ತರಹದ ಅನುಭವಗಳು ಓದುಗರಿಗೆ ತುಂಬಾ ಪ್ರಯೋಜನಕಾರಿಯಾಗಿವೆ. 'ಕಸ್ತೂರಿ'ಯ ಕಂಪು ಈ ಪರಿಚಯಾತ್ಮಕ ಲೇಖನದಿಂದ ಪಸರಿಸಿತೆಂದು ಹೇಳಲು ತುಂಬಾ ಸಂತೋಷವಾಗುತ್ತದೆ.

ಲಕ್ಷ್ಮೇಶ್ವರ —ಕೆ. ರಮಾ

**ಬಹಳ ದಿನಗಳ ಮೇಲೆ**

ಮನ ಮಿಡಿಯುವ 'ತಂತ್ರ'! ಏಪ್ರಿಲ್ ೮೪ರ 'ಕಸ್ತೂರಿ' ಸಂಚಿಕೆಯಲ್ಲಿ ಟಿ. ಕೇಶವ ಭಟ್‌ರಿಂದ ಸಂಕ್ಷಿಪ್ತ ಸಂಗ್ರಹವಾದ ಆದ್ಯ ರಾಮಾಚಾರ್ಯರ ಅನುವಾದಿತ ಕಾದಂಬರಿ 'ರಾಧೇಯ' ತುಂಬಾ ಮೆಚ್ಚುಗೆಯಾಯಿತು.

ಮಹಾಭಾರತದಂಥ ಮಹಾನ್ ಕಥೆಯೊಂದನ್ನು ಕಾದಂಬರಿ ರೂಪದಲ್ಲಿ ಪರಿವರ್ತಿಸಿ ಮೂಲ ಐತಿಹಾಸಿಕ ಕಥೆಗೆ ಸ್ವಲ್ಪವೂ ದೋಷ ತಟ್ಟದೆ ಓದುಗರಲ್ಲಿ ಕುತೂಹಲವನ್ನು ಕೆರಳಿಸಿ—ಮನಮಿಡಿಯುವ ಕಾದಂಬರಿ ತಂತ್ರ ನಿಜಕ್ಕೂ ಅನುಕರಣೀಯ. ಇದರ ಜೊತೆಯಲ್ಲಿ ಕಾದಂಬರಿ ಪ್ರಕಾಶಕರ ಪೂರ್ಣ ವಿಳಾಸ ಹಾಗು ಬೆಲೆಯ ಮಾಹಿತಿಯನ್ನು ಪ್ರಕಟಿಸುತ್ತಿದ್ದರೆ 'ಕಸ್ತೂರಿ'ಯ ಓದುಗ ಬಳಗಕ್ಕೆ ತುಂಬಾ ಉಪಕಾರವಾಗುತ್ತಿತ್ತು.

ಬರೋಡ —ಎಸ್ಕೆ ಹಳೆಯಂಗಡಿ

**ಸ್ಫೂರ್ತಿ !**

ಏಪ್ರಿಲ್ ೮೪ರ 'ಕಸ್ತೂರಿ' ಸಂಚಿಕೆಯಲ್ಲಿ ಗೋವಾ ಅವರು ಬರೆದ 'ಪರಧನವನೊಲ್ಲೆನೆಂಬ ಛಲ, ಲೇಖನ ನನಗೆ ಪೋಲೀಸರ ಬಗ್ಗೆ ತುಂಬಾ ಗೌರವ ಭಾವನೆ ಮೂಡಿಸಿತಲ್ಲದೆ ಸ್ಫೂರ್ತಿಯನ್ನು ನೀಡಿತು. ನಾನು ದಿ. ೪-೪-೮೪ರಂದು ಅರಸೀಕೆರೆಯಿಂದ ಧಾರವಾಡಕ್ಕೆ ಬರುವಾಗ ಅರಸೀಕೆರೆಯಲ್ಲಿ ಏಪ್ರಿಲ್ ತಿಂಗಳ 'ಕಸ್ತೂರಿ'ಯನ್ನು ಕೊಂಡುಕೊಂಡೆ. ಟ್ರೇನಿನಲ್ಲಿ ಕುಳಿತು ಪೂರ್ಣ ಓದಿದೆ. ಟ್ರೇನಿನ್‌ನಲ್ಲಿ ಬರುವಾಗ ನನ್ನ ಏರ್ ಬ್ಯಾಗೊಂದು ಪ್ರಯಾಣದ ಮಧ್ಯದಲ್ಲಿ ಕಳುವಾಯಿತು. ನಾನು ಕಳುವಾದ ಆ ಬ್ಯಾಗನ್ನು ನೋಡಿಕೊಂಡದ್ದು ಹುಬ್ಬಳ್ಳಿಯಲ್ಲಿ. ನನಗೆ ಆ ಕೂಡಲೇ ಏನು ಮಾಡಬೇಕೆಂದು ತೋಚಲಿಲ್ಲ. ಸುತ್ತಮುತ್ತ ಹಾಗೆಯೇ ನೋಡುತ್ತಾ ನಿಂತಿದ್ದೆ. ಆಗ ಪೋಲೀಸ್ ಪೇದೆಗಳಿಬ್ಬರು ಕಾಣಿಸಿಕೊಂಡರು. ಆ ಕೊಡಲೇ ನನಗೆ ಗೋವಾ ಅವರ 'ಪರಧನವನೊಲ್ಲೆನೆಂಬ ಛಲ' ಲೇಖನ ನೆನಪಾಯಿತು. ಅದು ಹುಬ್ಬಳ್ಳಿಯ ಪೋಲೀಸಿನವರದೇ ಇದ್ದುದರಿಂದ ಮತ್ತಷ್ಟು ಸ್ಫೂರ್ತಿ ಬಂದು ಅವರನ್ನು ಕರೆದು ನನ್ನ ಏರ್ ಬ್ಯಾಗ್ ಕಳೆದ ವಿಷಯವನ್ನು ಅವರಿಗೆ ತಿಳಿಸಿದೆ. ಅವರು ಕೂಡಲೇ ನನ್ನಿಂದ ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ರೈಲ್ವೆ ಪೋಲೀಸ್ ಸ್ಟೇಷನ್ ಪಿ. ಎಸ್. ಐ. ನಾಯ್ಕರ ಅವರ ಹತ್ತಿರ ಕರೆದುಕೊಂಡು ಹೋಗಿ ನಡೆದ ವಿಷಯವನ್ನೆಲ್ಲ ಹೇಳಿ ದೂರು ದಾಖಲೆ ಮಾಡಿಕೊಂಡು ಕೂಡಲೇ ಕಾರ್ಯದಲ್ಲಿ ಮಗ್ನರಾದರು, ಆ ವೇಳೆಯಲ್ಲಿ ಅವರು ನನ್ನೊಡನೆ ನಡೆದುಕೊಂಡ ಬಗೆ ನನಗೆ ನಿಜಕ್ಕೂ ಸಂತಸ ನೀಡಿತು. ಆ ದಿನ ನಾನು ಗೋವಾ ಅವರ 'ಪರಧನವನೊಲ್ಲೆನೆಂಬ ಛಲ' ಲೇಖನ ಓದದಿದ್ದರೆ ಪೋಲೀಸಿನವರ ಬಗ್ಗೆ ನನಗಿದ್ದ ಭಾವನೆಯಲ್ಲಿ ದೂರು ಕೊಡಲು ಹೋಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಗೋವಾ ಅವರ ಲೇಖನ ನಿಜಕ್ಕೂ ಸ್ವಾಗತಾರ್ಹವಾಗಿದೆ.

ಧಾರವಾಡ —ಎಚ್. ಎಸ್. ಗಂಗಮ್ಮ

# ಕಸ್ತೂರಿ

ವರ್ಷ : ೨೮ ಮೇ, ೧೯೮೪ ಸಂಚಿಕೆ : ೯


# ಬಂಗಾರದ ದೊರೆ

ಪ. ರಾಮಕೃಷ್ಣಶಾಸ್ತ್ರಿ

ಎರಡೂವರೆ ಸಾವಿರ ವರ್ಷಗಳ ಹಿಂದಿನ ಕಥೆ. ಏಷ್ಯಾ ಮೈನರಿನ ಲಿಡಿಯಾ ದೇಶವನ್ನು ದೊರೆ ಕ್ರೋಸೆಸ್ ಆಳುತ್ತಿದ್ದ. ಅವನಲ್ಲಿರುವಷ್ಟು ಬಂಗಾರದ ಸಂಗ್ರಹ ಜಗತ್ತಿನಲ್ಲಿ ಯಾರ ಬಳಿಯಲ್ಲೂ ಇರಲಿಲ್ಲ. ಅವನ ದೇಶದಲ್ಲಿ ಪರ್ವತವೊಂದರಿಂದ ಧುಮುಕುತ್ತಿದ್ದ ಪ್ರವಾಹದಲ್ಲಿ ಉಸುಕಿನ ಕಣದೊಂದಿಗೆ ವಿಪುಲವಾಗಿ ಬಂಗಾರದ ಚೂರುಗಳು ಸಿಗುತ್ತಿದ್ದವು. ಅಸಂಖ್ಯಾತ ಮಂದಿ ಜೀತಬಾಳುಗಳಿಗೆ ಅದನ್ನು ಸಂಗ್ರಹಿಸುವದೊಂದೇ ಕೆಲಸ.

'ಬಂಗಾರದ ದೊರೆ' ಎಂದೇ ಖ್ಯಾತನಾದ ಕ್ರೋಸೆಸನ ರಾಜಧಾನಿ ಸಾರ್ಡಿನ್. ಒಂದು ಸಲ ಗ್ರೀಸ್ ದೇಶದ ಮಹಾವಿಜ್ಞಾನಿಯೂ ನ್ಯಾಯಾಧೀಶನೂ ಆದ ಸೋಲೋನ್ ದೇಶಸಂಚಾರ ಮಾಡುತ್ತಾ ಕ್ರೋಸೆಸನ ಅರಮನೆಗೆ ಬಂದ. ಕ್ರೋಸೆಸ್ ಸಿರಿವಂತಿಕೆಯ ಮತ್ತಿನಲ್ಲಿದ್ದ. ಹೆಮ್ಮೆಯಿಂದ ತನ್ನ ಅರಮನೆಯನ್ನು ಆತ ಸೋಲೋನ್‌ಗೆ ತೋರಿಸಿದ. ಬಂಗಾರದ ಕಂಬಗಳು, ಬಂಗಾರದ ಪಾತ್ರೆಗಳಿಂದ ತೊಡಗಿ ಸ್ನಾನದ ತೊಟ್ಟಿ ಕೂಡ ಬಂಗಾರದ್ದೇ ಆಗಿರುವುದನ್ನು ಒಂದೊಂದಾಗಿ ಜಂಭದಿಂದ ತೋರಿಸುತ್ತಾ ಬಂದ. ಶಾಂತಚಿತ್ತದಿಂದ ಸೋಲೋನ್ ಎಲ್ಲವನ್ನೂ ನೋಡಿದ.

ಆಮೇಲೆ ಕ್ರೋಸೆಸ್ ಕೇಳಿದ: "ಸೊಲೋನ್ ನೀವು ಹಲವು ದೇಶಗಳನ್ನು ಸುತ್ತಾಡಿ ಬಂದವರು. ನೀವು ನೋಡಿದ ಜನಗಳಲ್ಲಿ ಅತ್ಯಂತ ಸುಖಿಗಳು ಯಾರು?"

ಸೋಲೋನ್ ತನ್ನ ಕುರಿತು ಹೇಳುತ್ತಾನೆಂದೇ ಕ್ರೋಸೆಸ್ ಭಾವಿಸಿದ. ಆದರೆ ಆತ ಹೇಳಿದ, "ಅಥೆನ್ಸಿನ ಥಾಲಸ್ ಅತ್ಯಂತ ಸಂತೋಷದಿಂದ ಬಾಳಿ ಬದುಕಿದ," ಎಂದು.

ಕ್ರೋಸೆಸ್ ನಿರಾಸೆಯಿಂದ, "ನಾನು ಅವನ ಹೆಸರೇ ಕೇಳಿಲ್ಲವಲ್ಲ," ಎಂದ.

"ಇರಬಹುದು, ನೀನವನ ಬಗೆಗೆ ಕೇಳಿರಲಾರೆ, ಆದರೆ ಆತ ಪರೋಪಕಾರಿಯಾಗಿದ್ದ. ತನ್ನ ಮಕ್ಕಳೂ ಒಳ್ಳೆಯವರಾಗಿ ಇನ್ನೊಬ್ಬರಿಗೆ ಉಪಕಾರಿಗಳಾಗಿ ಬಾಳುವುದನ್ನು ಕಣ್ಣಾರೆ ಕಂಡ. ಆತ ಹಣ್ಣು ಮುದುಕನಾಗಿದ್ದಾಗ ತಾಯ್ನಾಡಿಗೆ ವೈರಿಗಳು ಮುತ್ತಿಗೆ ಹಾಕಿದಾಗ ತನ್ನ ಜ್ಞಾನ ಬುದ್ಧಿಶಕ್ತಿಗಳಿಂದ ವೈರಿಗಳನ್ನು ಗೆಲ್ಲಲು ಎಲ್ಲರಿಗೆ ನೆರವಾದ. ಆ ಒಳ್ಳೆಯ ಮನುಷ್ಯ ಕೊನೆಗೆ ನಾಡಿಗಾಗಿ ತಾನೇ ಹೋರಾಡುತ್ತ ಸತ್ತ. ಅವನಿಗಾಗಿ ಇಡೀ ಅಥೆನ್ಸಿನ ಜನರು ಕಣ್ಣೀರ ಹೊಳೆ ಹರಿಸಿದರು," ಎಂದು ಹೇಳಿದ ಸೋಲೋನ್.

"ಹೋಗಲಿ ನೀವು ಎರಡನೆಯದಾಗಿ ನೋಡಿದ ಸುಖಿ ಯಾರು?" ಕ್ರೋಸೆಸ್ ಕೇಳಿದ.

"ತಾಯಿ ತಂದೆಗಳನ್ನು ಭಕ್ತಿಯಿಂದ ಆರಾಧಿಸಿ ಸೇವಿಸಿದ ಜೂನೋ ಎಂಬ ತರುಣ ಬಹಳ ಸುಖಿ," ಎಂದು ಸೋಲೋನ್ ಹೇಳಿದ.

ಅರಸ ಕ್ರೋಸೆಸನಿಗೆ ಭಯಂಕರ ಕೋಪ ಬಂತು. "ಸೋಲೋನ್, ದರಿದ್ರರೂ ಅಪ್ರಸಿದ್ಧರೂ ಆದ ಇಂಥವರ ಬಗ್ಗೆ ಯಾಕೆ ಹೇಳುವಿ? ನನ್ನ ಪ್ರಭಾವ ಸಂಪತ್ತುಗಳನ್ನು ಕಣ್ಣಾರೆ ಕಂಡರೂ ಇವರಿಗಿಂತ ಹೆಚ್ಚಿನ ಸುಖಿ ನಾನೆಂಬುದನ್ನು ಒಪ್ಪಿಕೊಳ್ಳಲು ನಿನ್ನ ಸಂಕುಚಿತ ಬುದ್ಧಿಗೆ ಯಾಕೆ ಹೊಳೆಯುವುದಿಲ್ಲ?" ಎಂದು ಅಬ್ಬರಿಸಿದ.

ಸೋಲೋನ್ ನಿರ್ವಿಕಾರ ಚಿತ್ತದಿಂದ, "ದೊರೆಯೇ, ನೀನೀಗ ನಶ್ವರವಾದ ಸಂಪತ್ತಿನ ತುತ್ತ ತುದಿಯಲ್ಲಿರುವೆ ನಿಜ. ಆದರೆ ಇನ್ನೂ ಎಷ್ಟೋ ಕಾಲ ಬದುಕಿ ಬಾಳಬೇಕಾದವನು ನೀನು. ಈ ಪ್ರಭಾವ ಸಂಪತ್ತುಗಳ ಜೀವನ ಹೇಗೆ ಕೊನೆಯಾದೀತು ಎಂದು ನಿನಗಾಗಲಿ ನನಗಾಗಲಿ ಗೊತ್ತಿಲ್ಲ. ಆದ್ದರಿಂದ ಈಗಲೇ ನಿನ್ನನ್ನು ಸುಖಿಯೆಂದು ಹೇಳಲಾರೆ," ಎಂದು ಹೇಳಿ ಅಲ್ಲಿಂದ ಹೊರಟು ಹೋದ.

ಕೆಲವು ಸಮಯ ಕಳೆಯಿತು. ಪರ್ಷಿಯ ದೇಶದ ದೊರೆ ಸೈರಸ್ ದೊಡ್ಡ ಸೈನ್ಯದೊಂದಿಗೆ ಬಂದು ಕ್ರೊಸೆಸನ ಅರಮನೆಗೆ ಮುತ್ತಿಗೆ ಹಾಕಿದ. ಕ್ರೊಸೆಸ್ ಸೋತುದು ಮಾತ್ರವಲ್ಲ ಶತ್ರುಗಳಿಗೆ ಸೆರೆ ಸಿಕ್ಕಿದ. ಅವನನ್ನು ಜೀವಂತ ಸುಟ್ಟುಬಿಡಬೇಕೆಂದು ಸೈರಸ್ ತನ್ನ ಸೈನಿಕರಿಗೆ ಆಜ್ಞಾಪಿಸಿದ.


ಸೈನಿಕರು ಕಟ್ಟಿಗೆಯನ್ನು ಪೇರಿಸಿ ಹಗ್ಗಗಳಿಂದ ಬಂಧಿತನಾದ ಕ್ರೊಸೆಸನನ್ನು ಅದರ ಮೇಲೆ ಎಸೆದರು. ಕಟ್ಟಿಗೆಯ ರಾಶಿಗೆ ಬೆಂಕಿ ಹಚ್ಚಿದರು.

ಆಗ ಕ್ರೋಸೆಸನ ಕಣ್ಣುಗಳು ತುಂಬಿಬಂದವು. ಅವನು ಸೋಲೋನ್ ಸೋಲೋನ್ ಎಂದು ಕೂಗಿಕೊಂಡ. ಅಲ್ಲೇ ನಿಂತಿದ್ದ ಸೈರಸ್, "ಯಾಕೆ ಹಾಗೆ ಕೂಗುತ್ತಿ. ಏನದರ ಅರ್ಥ?" ಎಂದು ಕೇಳಿದ.

ಆಗ ಕ್ರೋಸೆಸ್ ತನ್ನ ಅರಮನೆಗೆ ಸೋಲೋನ್ ಬಂದುದನ್ನು, ತಮ್ಮೊಳಗೆ ನಡೆದ ಸಂಭಾಷಣೆಯನ್ನು ವಿವರಿಸಿ ಶ್ರೀಮಂತನಾದ ತನ್ನ ಬದುಕಿನ ಅಂತ್ಯವು ಯಾವ ರೀತಿ ಆಗುವುದೋ ತಿಳಿಯದೆಂದು ಹೇಳಿದುದನ್ನು ನೆನೆದು ತನಗವನ ನೆನಪಾಯಿತೆಂದು ಹೇಳಿದ.

ಆ ಮಾತು ಸೈರಸನ ಮೇಲೆ ಪ್ರಭಾವ ಬೀರಿತು. ನಿಜ ನಿಜ. ತಾನು ಕೂಡ ಇನ್ನೂ ಬಹುಕಾಲ ಬಾಳಿ ಬದುಕಬೇಕಾದವನು. ತನ್ನ ಜೀವನದ ಕೊನೆ ಕೂಡ ಯಾವ ರೀತಿ ಆಗುವುದೋ ಹೇಳುವಂತಿಲ್ಲ ಎಂದು ಆತ ನೆನೆದು, "ಸೈನಿಕರೆ ತಕ್ಷಣ ಬೆಂಕಿಯನ್ನು ಆರಿಸಿರಿ. ನಾವು ಉದಾರ ಹೃದಯದಿಂದ ಕ್ರೋಸೆಸನನ್ನು ಕ್ಷಮಿಸಿದ್ದೇವೆ. ಅವನನ್ನು ಮತ್ತೆ ಈ ರಾಜ್ಯದ ಅಧಿಪತಿಯನ್ನಾಗಿ ಮಾಡಿ ಪರ್ಷಿಯಕ್ಕೆ ಹಿಂತಿರುಗಿ ಹೋಗೋಣ," ಎಂದು ಆಜ್ಞೆ ಮಾಡಿದ.

ಕ್ರೋಸೆಸ್ ಮರಳಿ ರಾಜನಾದ. ಬಂಗಾರವನ್ನು ಅರಿಸುವ ಜೀತದಾಳುಗಳಿಗೆ ವಿಮೋಚನೆ ನೀಡಿದುದು ಮಾತ್ರವಲ್ಲ ತನ್ನ ಸಂಪತ್ತನ್ನು ಬಡಬಗ್ಗರಿಗೆ ಹಂಚಿ ಒಳ್ಳೆಯ ಹೆಸರು ಪಡೆದ. ★





‘ ದೀನಬಂಧು ’

# ಡಾ. ಬಾಬಾ ಪೈ

ಬಿ. ಪಿ. ಶಿವಾನಂದರಾವ್

ಕುಮಟೆಯ ಕೋರ್ಟ್ ರಸ್ತೆಯಲ್ಲಿ ಹೋಕ ಬಿಂದ ಮುಂದೆ ಹತ್ತು ಹೆಜ್ಜೆ ಇಟ್ಟರೆ ರಸ್ತೆಯ ಬಲದ ಕಡೆಗೆ ಎಡಕ್ಕೆ ಹಸಿರು ಬಣ್ಣದಿಂದ ರಸ್ತೆಗೆ ತಾಗಿ ಕಂಗೊಳಿಸುತ್ತಿರುವ ಮನೆಯೊಂದು ಕಾಣಿಸುತ್ತದೆ. ಬಾಗಿಲಿಗೆ ಎದುರಾಗಿ ಒಂದು ಅಷ್ಟ ಕರ್ಟನ್. ಅದರ ಮೇಲೆ ಇಂಗ್ಲಿಷಿನಲ್ಲಿ ಡಾ. ಬಿ. ಎಂ. ಪೈ ಎಂಬ ಕೆಂಪು ಬರೆಹ ಕಾಣುತ್ತದೆ. ವಿಶಾಲ ವರಾಂಡದಲ್ಲಿ ಒಂದು ಸಣ್ಣ ಮೇಜು ಸಮೀಪ ಹಿತ್ತಲ ಆರಾಮ ಕುರ್ಚಿಯ ಮೇಲೆ ಪ್ರತಿನಿತ್ಯ ಬೆಳಗ್ಗೆ ಎಂಟರ ಹೊತ್ತಿಗೆ ಬಿಳಿ ಪಂಚೆಯನ್ನುಟ್ಟು ದುಂಡು ಸ್ಥೂಲಕಾಯದ ಬಿಳಿಗೆಂಪು ವರ್ಣದ ವ್ಯಕ್ತಿ ಕುಳಿತುಕೊಳ್ಳುತ್ತಾರೆ. ಆ ಹೊತ್ತಿಗೆ ಅವರ ಬರವಿಗಾಗಿ ಹೊರ ಬಾಗಿಲಲ್ಲಿ ಹತ್ತೆಂಟು ಜನ ಕಾದಿರುತ್ತಾರೆ. ಕೈಯಲ್ಲಿ ಒಂದೊಂದು-ಶಿಫಾರಸು ಪ್ರಮಾಣ ಪತ್ರಗಳಿಗಾಗಿ, ಕೆಲಸಕ್ಕಾಗಿ. ಇನ್ನು ಏನೇನೋ. ಇದೇ ಕುಮಟೆಯ ಜನಪ್ರಿಯ ವ್ಯಕ್ತಿ ಡಾ. ಬಾಬಾ ಮಾಳಪ್ಪ ಪೈಯವರು. ಬಿ. ಎಂ. ಪೈ ಎಂತಲೇ ಎಲ್ಲರಿಗೂ ಸುಪರಿಚಿತರು.

ಅವರನ್ನು ಕಾಣಲು ಬರುವವರು ಹತ್ತಾರು ಮಂದಿ. ಕೆಲವರಲ್ಲಿ ಏನೋ ಕಳವಳ, ಆತಂಕ. ದೀರ್ಘನಿರೀಕ್ಷೆ. ಹರ್ಷ ಹೀಗೆ ನೂರೆಂಟು ಭಾವನೆ ಹೊತ್ತೇ ಬರುತ್ತಾರೆ. ಸಹಜವಾಗಿ ತಮ್ಮ ಕೆಲಸ ಪೂರೈಸಿಕೊಂಡು ಹೊರಡುವ ಆತುರ. ಡಾ. ಪೈಯವರು ಕಣ್ಣಿಗೆ ಕನ್ನಡಕ ಏರಿಸಿ ಕುರ್ಚಿಯಲ್ಲಿ ಕೂತವರು ಒಬ್ಬೊಬ್ಬರಿಗೇ ಸಮಯ ದಾನ ಕೊಡುತ್ತಾರೆ. ನೌಕರಿಗಾಗಿ. ಶಿಫಾರಸುಗಳಿಗಾಗಿ, ಯಾರದೋ ಸರ್ಟಿಫಿಕೇಟಿಗಾಗಿ, ಜ್ವಲಂತ ಸಮಸ್ಯೆಗಳ ಪರಿಹಾರಾರ್ಥವಾಗಿ, ದೊಡ್ಡ ಸಮಾರಂಭಕ್ಕಾಗಿ ಆಮಂತ್ರಿಸಲು ಹೀಗೆ ಈ ವ್ಯಕ್ತಿಯ ಮುಂದೆ ಮನವಿಗಳನ್ನು ಹೊತ್ತು ಬರುತ್ತಾರೆ. ಎಷ್ಟೋ ಆತುರ ಬರಲಿ, ಡಾ. ಪೈ ತಿಳಿಮನಸ್ಸಿನಿಂದ ಅವರ ಮಾತನ್ನು ಆಲಿಸುತ್ತ ತಮ್ಮ ಅಭಯವನ್ನು ನೀಡುತ್ತಾರೆ. ಎಷ್ಟು ಸಾಂತ್ವನದ ನುಡಿಗಳು, ಎಂಥ ಗಾಂಭೀರ್ಯ! ಆ ಮಾತು ನಿಜ, ಪ್ರೇಮ ಅಷ್ಟೇ ಏಕೆ. ಕೇಳುವವರ ಎದೆಯಲ್ಲಿನ ಆತಂಕ ಅಸ್ತು. ನೋವು – ದುಮ್ಮಾನಗಳೆ ಹಿಮಗಡ್ಡೆ ಡಾ. ಪೈಯವರ ಸಮ್ಮುಖದಲ್ಲಿ ಕರಗಿ ನೀರಾಗುತ್ತವಂತೂ.

ನಿತ್ಯ ನಡೆವ ವೈದ್ಯ ವೃತ್ತಿ ನಿಮಗೆ ತೃಪ್ತಿ ಕೊಟ್ಟಿತೆ? ಎಂಬ ಪ್ರಶ್ನೆಯನ್ನು ನೂರಾರು ಜನ ಪತ್ರಿಕೆಗಳು ಹಾಕಿದ್ದುಂಟು. ಸಣ್ಣ ಕಣ್ಣಿನ ದೊಡ್ಡ ಹೃದಯದ ಬಾಬಾ ಪೈಯವರು

(ಬಾಬಾ ಎಂಬುದು ನಮ್ಮ ಕೊಂಕಣಿ ಭಾಷೆಯಲ್ಲಿ ಮಕ್ಕಳಿಗೆ ಕರೆಯುವ ತುಂಬಾ ಮುದ್ದಾದ ಹೆಸರು) ನಗೆಮುಖದಲ್ಲಿ ಉತ್ತರಿಸುವ ಅವರ ವಾಗ್ವೈಖರಿಗೆ ಎಂಥವರೂ ಮಾರು ಹೋಗುತ್ತಾರೆ. ರೋಗಿಷ್ಟರ, ಬಡವರ, ದೀನದಲಿತರ ಸೇವೆ ಅವರಿಗೆ ಒಂದು ಮಹಾ ತಪಸ್ಸು ಇದ್ದಂತೆ. "ದೇವರೂಪದಲ್ಲಿ ಬರುವ ಇಂಥವರಿಗೆ ಕಿಂಚಿತ್ತು ಸೇವೆ ನೀಡುತ್ತಿದ್ದೆ. ಅವರು ಗುಣಮುಖರಾಗಿ ಮತ್ತೆ ತಮ್ಮ ದೈನಂದಿನ ಜೀವನ ರಂಗದಲ್ಲಿ ಓಡಾಡುತ್ತಾ ನಲಿಯುವುದನ್ನು ಕಂಡಾಗ ನನಗೆ ಪರಮಾನಂದ. ಇವೆಲ್ಲಾ ಬೆಲೆ ಕಟ್ಟಲು ಸಾಧ್ಯವೆ?" ಅವರು ಮರು ಪ್ರಶ್ನೆ ಹಾಕುತ್ತಾರೆ.

ಶ್ರೀ ಬಿ. ಎಂ. ಪೈಯವರ ತಂದೆಯವರು ಕುಮಟೆಯ ಪುರಸಭಾಧ್ಯಕ್ಷರೂ, ಕೆನರಾ ಎಜ್ಯುಕೇಶನ್ ಸೊಸಾಯಿಟಿಯ ಅಧ್ಯಕ್ಷರೂ ಆಗಿದ್ದರು. ೧೯೦೦ ರ ಕಾಲ. ಕುಮಟೆಯ ವಿದ್ಯಾರ್ಥಿಗಳು ಮೆಟ್ರಿಕ್ ಓದಲು ಕಾರವಾರಕ್ಕೋ ಪುಣೆಗೋ (ಆಗ ಕುಮಟೆ ಮುಂಬೈ ಪ್ರಾಂತಕ್ಕೆ ಸೇರಿತ್ತು) ಹೋಗಬೇಕಾದ ಪ್ರಸಂಗ. ಬಿ. ಎಂ. ಪೈಯವರ ಹಿರಿಯರಾದ ದಿ: ಪಾಂಡುರಂಗ ಅಣ್ಣಪ್ಪ ಪೈಯವರ ಈ ದುಃಸ್ಥಿತಿಯನ್ನು ಗಮನಿಸಿ ದಿ. ರಾಮಚಂದ್ರ ಅಣ್ಣಪ್ಪ ಪೈ, ದಿ. ಮಂಡಲೀಕರಾವ್ ಎಸ್. ಪಂಡಿತ, ದಿ. ನಾರಾಯಣ ಸುಬ್ರಾವ ಕಾಮತ ಮತ್ತು ಕುಮಟೆಯ ಇತರ ಕೆಲ ನಾಗರಿಕರೊಡನೆ ಸಮಾಲೋಚಿಸಿ ಶ್ರಮಿಸಿದ್ದು ಸತ್ಫಲಗೊಂಡು ಒಂದು ಸಣ್ಣ ಹೈಸ್ಕೂಲು ಸ್ಥಾಪನೆಯಾಯಿತು. ಅದೇ ಮುಂದೆ ಗಿಬ್ ಹಾಯಸ್ಕೂಲ್ ಎಂಬ ಹೆಸರು ಪಡೆಯಿತು. ಬಾಬಾ ಪೈಯವರೂ ಅವರ ತಂದೆಯವರೂ ಈ ಶಾಲೆಯ ವಿದ್ಯಾರ್ಥಿಗಳೇ. ೧೯೦೪ ರಲ್ಲಿ ಸ್ಥಾಪನೆಗೊಂಡ ಗಿಬ್ ಹೈಸ್ಕೂಲು ಇಂದಿಗೂ ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದು.

ಬಾಬಾ ಪೈಯವರು ಜನ್ಮ ತಾಳಿದ್ದು ೨೪–೧೧–೧೯೧೫ರಲ್ಲಿ. ಅವರ ಮನೆತನ ಆಗರ್ಭಶ್ರೀಮಂತರಾದ ಗೌಡ ಸಾರಸ್ವತರದು. ತಂದೆ ಮಾಳಪ್ಪ ಪೈ ದಿಟ್ಟ ಮನೋಭಾವದ ದೂರದೃಷ್ಟಿಯ ದಷ್ಟಪುಷ್ಟ ಶರೀರದ ವ್ಯಕ್ತಿ. ತಂದೆಯಿಂದ ಮಗನಿಗೆ ಬಂದ ಪಾರಂಪಾರಿಕ ಗುಣವೆಂದರೆ ಸಾಹಸಪ್ರಿಯತೆ, ಶ್ರಮಭರಿತ ಸೇವೆ.

ಬಾಬಾ ಪೈಯವರು ಕಾಲೇಜು ಶಿಕ್ಷಣವನ್ನು ಪುಣೆಯ ಫರ್ಗೂಸನ್ ಕಾಲೇಜಿನಲ್ಲಿ, ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮುಂದುವರೆಸಿದರು. ಆರಂಭದಿಂದಲೂ ಓದಿನಲ್ಲಷ್ಟೇ ಅಲ್ಲ, ಸಾರ್ವಜನಿಕ ರಂಗದ ಸೇವೆಗೈಯ್ಯುವ ಹಂಬಲ. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಪರ್ವಕಾಲವದು. ತಂದೆ ತಾಯಿಗಳಿಗೋ ಮಗನನ್ನು ಓದಿಸಿ ದೊಡ್ಡ ಅಧಿಕಾರಿಯನ್ನಾಗಿ ಮಾಡಬೇಕು ಎಂಬ ಇಚ್ಛೆ. ಬ್ರಿಟಿಷ್ ಅಧಿಕಾರಿಗಳ ಸಂಪರ್ಕ, ಪರಿಚಯ, ಎಲ್ಲಾ ಇದ್ದಾಗ ಮಗನಿಗೊಂದು ನೌಕರಿ ಕೊರತೆಯೇ? ದಿಕ್ಕೇ ಬೇರೆಯಾಯಿತು. ಬಾಬಾ ಪೈಯವರು ಮುಂಬೈಯ ನ್ಯಾಷನಲ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗವನ್ನು ಉನ್ನತ ದರ್ಜೆಯಲ್ಲಿ ಪೂರೈಸಿದಾಗ ಕುಮಟೆಯಲ್ಲಿದ್ದ ತಂದೆ ತಾಯಿಗಳಿಗೆ ಅಪಾರ ಹೆಮ್ಮೆ.

ಮಹಾತ್ಮಾ ಗಾಂಧೀಜೀಯವರು ನೀಡಿದ ಸ್ವಾತಂತ್ರ್ಯದ ಕರೆಯು ಬಾಬಾ ಪೈಯವರ ಕಿವಿಯಲ್ಲಿ ಝೇಂಕರಿಸಿತು. ಆ ಕಾಲದ ಕಾಂಗ್ರೆಸ್ ಪ್ರಭೃತಿಗಳಿಗೆಲ್ಲಾ ಪರಿಚಯ. ಬಡವರ ಗೋಳು ಬಾಬಾರ ಹೃದಯವನ್ನು ಸೆರೆಹಿಡಿಯಿತು. ತತ್ಪರಿಣಾಮವೇ ಕುಮಟೆಯ ಬಜಾರಿನ ಮಧ್ಯೆ ತಮ್ಮ ಖಾಸಗಿ ದವಾಖಾನೆಯನ್ನು ತೆರೆದರು (೧೯೪೫). ಔಷಧ ತೆಗೆದುಕೊಂಡವರು ಹಣ ಕೊಟ್ಟದ್ದೆಷ್ಟೋ ಬಿಟ್ಟದ್ದೆಷ್ಟೋ. ರೋಗಿಗಳ ಮುಖದಲ್ಲಿಯ ದೈನ್ಯ, ನೋವುಗಳು ವೈದ್ಯರ ಅಂತರಂಗದಲ್ಲಿ ಅನುಕಂಪವನ್ನು ಮೂಡಿಸುತ್ತಿದ್ದವು. ಹಣಗಳಿಸುವದೊಂದೇ ಮುಖ್ಯ ಗುರಿಯಾಗಿದ್ದರೆ ಡಾ. ಪೈಯವರು ಎಂದೋ ಲಕ್ಷಾಧೀಶರಾಗಬಹುದಿತ್ತು. ಆದರೆ ಇವರು ಜನರ ಹೃದಯದಲ್ಲಿ ವಾತ್ಸಲ್ಯ ಮೂರ್ತಿಯಾಗಿ ದೀನಬಂಧುವಾಗಿ ಶಾಶ್ವತ ಸ್ಥಾನ ಪಡೆದಿದ್ದಾರೆ.

೧೯೪೭ರಲ್ಲಿ ಕುಮಟಾ ತಾಲೂಕಿನಲ್ಲಿ

ಮಹಾತ್ಮಾಗಾಂಧೀ ಸ್ಮಾರಕ ನಿಧಿಗಾಗಿ ಪೈಯವರು ನಿರೀಕ್ಷೆಗೂ ಮೀರಿ ಹಣ ಸಂಗ್ರಹಿಸಿ ಕೊಟ್ಟರು. ಅದು ಅವರ ಪ್ರಥಮ ಸಾರ್ವತ್ರಿಕ ರಂಗದ ಸೇವೆ. ಕೆಲವು ವರ್ಷ ಇವರನ್ನು ಕುಮಟೆಯ ಗೌರವ ನ್ಯಾಯಾಧೀಶರನ್ನಾಗಿಯೂ ಸರಕಾರ ನೇಮಿಸಿತು. ಪುರಜನರ ಪ್ರೀತ್ಯಾದರ, ಪ್ರೋತ್ಸಾಹ ಇವರಿಗೆ ಜೀವನದಲ್ಲಿ ಅಡಿಗಡಿಗೆ ಎಟಕುವ ದೃಶ್ಯಗಳು. ಸೇವಾ ಮನೋಭಾವವೇ ಪೈ ಅವರ ಉಸಿರು.

೧೯೪೮ ರಿಂದ ೧೯೫೭ರ ವರೆಗೆ ಬಾಬಾ ಪೈಯವರು ಕುಮಟಾ ಪುರಸಭಾಧ್ಯಕ್ಷರಾಗಿದ್ದರು. ಕುಮಟೆ ಅಂದಿನಿಂದ ಒಂದು ಹೊಸ ರೂಪ ಬೆಳವಣಿಗೆಯ ಜೀವಂತಿಕೆ ಕಂಡಿತು. ಈಗಲೂ ಅದನ್ನು ಜನ ಹೆಮ್ಮೆಯಿಂದ ಹೊಗಳುವದುಂಟು. ಬಾಬಾ ಪೈಯವರ ದೂರ ದೃಷ್ಟಿ ಪರಿಶ್ರಮದ ಫಲವಾಗಿ ಕುಮಟಾದಲ್ಲಿ ಮುನಿಸಿಪಲ್ ದವಾಖಾನೆ, ಮಹಾತ್ಮಾಗಾಂಧಿ ಹರಿಜನ ಕಾಲನಿ, ಯುವಕರಿಗಾಗಿ ವ್ಯಾಯಾಮ ಶಾಲೆ, ಮಕ್ಕಳ ನಲಿದಾಟಕ್ಕಾಗಿ ಉದ್ಯಾನವನ, ಪ್ರಾಥಮಿಕ ಶಾಲೆಗಳಿಗಾಗಿ ಐದು ದೊಡ್ಡ ಕಟ್ಟಡಗಳು, ಹಲವಾರು ರಸ್ತೆಗಳು, ಬಾವಿಗಳು ಇವೆಲ್ಲ ಜೀವ ತಳೆದು ನಿಂತವು.

೧೯೫೪ ರಲ್ಲಿ ಆಗ ರಾಷ್ಟ್ರಪತಿಗಳಾಗಿದ್ದ ಡಾ. ಬಾಬು ರಾಜೇಂದ್ರ ಪ್ರಸಾದರನ್ನು ಕುಮಟೆಯ ಗಿಬ್ ಹೈಸ್ಕೂಲಿನ ಸುವರ್ಣ ಮಹೋತ್ಸವದ ಉದ್ಘಾಟನೆಗೆಂದು ಕರೆಸಿದ ಶ್ರೇಯಸ್ಸು ಡಾ. ಪೈಯವರಿಗೆ ಸಲ್ಲುತ್ತದೆ. ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಗಳು ಬಾಬಾ ಪೈಗಳ ಪ್ರೀತಿಯ ಅತಿಥಿಯಾಗಿ ಕುಮಟೆಗೆ ಬಂದಾಗ ಆಗಿನ ಪುರಸಭಾಧ್ಯಕ್ಷರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿದ್ದ ಇವರು ಶಾಸ್ತ್ರಿಯವರನ್ನು ಸನ್ಮಾನಿಸಿ ಮನವಿ ಪತ್ರ ಸಲ್ಲಿಸಿದಾಕ್ಷಣ ದಿವಗೀ ಬಳಿಯ ಅಘನಾಶಿನಿ ನದಿಗೆ ಅಡ್ಡ ಸೇತುವೆ ಕಟ್ಟಲು ಹಣ ಮಂಜೂರು ಮಾಡುವ ಭರವಸೆ ಸಿಕ್ಕಿತು. ಮುಂದೆ ಸೇತುವೆಯೂ ನಿರ್ಮಾಣವಾಯಿತು.

ಡಾ. ಬಾಬಾ ಪೈಯವರು ಅಖಿಲ ಭಾರತ ಕರಕುಶಲ ಮಂಡಳಿಯಿಂದ ಇಲ್ಲಿಯ ಕುಶಲ ಕರ್ಮಿಗಳಿಗೆ ಅತ್ಯಧಿಕ ಆರ್ಥಿಕ ಸಹಾಯ ಒದಗಿಸಿ ಕೊಟ್ಟರು. ಇದು ಹೊನ್ನಾವರ – ಸಿರ್ಸಿಯ ಗುಡಿಗಾರರಿಗೂ ಸಿಕ್ಕಿತು. ದೇಶದ ಕೆಲವೆಡೆ ಈ ಗುಡಿಗಾರರ ಕಲಾಕೃತಿಗಳ ಪ್ರದರ್ಶನಕ್ಕೆ ಏರ್ಪಾಡು ಮಾಡಿದರು. ಇದರಿಂದಾಗಿ ಕುಮಟೆಯ ಕುಸುರಿ ಕಲಾಕೃತಿಗಳು ಗಂಧ ದಂತದ ಕೆತ್ತನೆಯ ವಿಗ್ರಹಗಳು ವಿದೇಶಗಳಿಗೂ ರಫ್ತು ಆದವು. ಭಾರತ ಸೇವಾದಳ, ಹಿಂದುಳಿದ ವರ್ಗದವರ ಗೃಹ ಮಂಡಳಿ, ತಾಲೂಕಾ ಪ್ರವಾಹ ಮತ್ತು ಅಗ್ನಿ ಪರಿಹಾರ ಸಮಿತಿ, ಜಿಲ್ಲಾ ಬಂದೀ ಖಾನೆಯ ಸಲಹಾ ಸಮಿತಿ, ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕು, ಕಾರವಾರ ಜಿಲ್ಲಾ ಗ್ರಾಮಸೇವಾ ಸಮಿತಿ, ಅಂಕೋಲಾ ಉ.ಕ. ಕರ್ನಾಟಕ ಗ್ರಾಮೀಣ ಸಾರ್ವಜನಿಕ ಶಿಕ್ಷಣ ಸಮಿತಿ ಬೆಳಗಾವಿ, ಹುಬ್ಬಳ್ಳಿಯ ಕೆ. ಎಸ್. ಆರ್. ಟಿ. ಸಿ. ಯ ವಿಭಾಗೀಯ ಸಲಹಾ ಸಮಿತಿ ಸದಸ್ಯ, ರಾಷ್ಟ್ರೀಯ ಉಳಿತಾಯ ಯೋಜನೆಯ ರಾಜ್ಯ ಸಲಹಾ ಮಂಡಳಿ ರಾಜ್ಯಮಟ್ಟದ ಕೃಷಿಕ ಸಮಾಜ ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ದುಡಿದಿದ್ದಾರೆ.

ಪದ್ಮವಿಭೂಷಣ ಡಾ. ಎಂ. ಸಿ. ಮೋದಿಯವರನ್ನು ಮೂರುಸಲ ಕುಮಟೆಗೆ ಕರೆತಂದು ನೇತ್ರ ಚಿಕಿತ್ಸಾ ಶಿಬಿರ ನಡೆಸಿ ಪ್ರತಿ ಶಿಬಿರದಲ್ಲಿ ೨೦೦ ಮಂದಿ ನೇತ್ರರೋಗಿಗಳ ಶುಶ್ರೂಷೆ ನಡೆಸಲು ಏರ್ಪಾಟು ಮಾಡಿದರು. ೧೯೫೩ರಲ್ಲಿ ಕುಮಟೆಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಗೌರವ ಖಜಾಂಚಿಗಳಾಗಿ ದುಡಿದರು. ಸಮ್ಮೇಳನ ಭವ್ಯವಾಗಿತ್ತೆಂದು ಇಲ್ಲಿನವರಿಗೆ ಹಸಿರು ನೆನಪು. ೧೯೬೦ರಲ್ಲಿ ಬೆಂಗಳೂರಿನಲ್ಲಿ ಪಂಡಿತ ಜವಾಹರಲಾಲ ನೆಹರೂರವರ ಸಮ್ಮುಖದಲ್ಲಿ ಕುಮಟೆಯ ಕಲಾವಿದರಿಂದ ಸುಗ್ಗಿ ಕುಣಿತ, ಜಾನಪದ ನೃತ್ಯ ನಡೆಸಿಕೊಟ್ಟರು. ಮತ್ತೊಮ್ಮೆ ಶ್ರೀ ಧಾರೇಶ್ವರ ಸುಬ್ಬರನ್ನು ದೆಹಲಿಗೆ ಕರೆದೊಯ್ದು ರಾಷ್ಟ್ರಪತಿಗಳೆದುರು ಸಿಂಹ ನೃತ್ಯ, ಜಾನಪದ ನೃತ್ಯ ಮಾಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕುಮಟೆಯು ಬೆಚ್ಚಿನ ಪ್ರಗತಿಕಂಡಿದ್ದು ಡಾ. ಪೈ ಅವರು ಸತತ ೧೫ ವರ್ಷಗಳ ಕಾಲ ತಾಲೂಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಮಾಡಿದ ಸೇವೆಯಿಂದಾಗಿ. ಅತ್ಯುತ್ತಮ ಸೇವೆಗಾಗಿ ೧೯೬೫ ರಲ್ಲಿ ಈ ಮಂಡಳಿಯು ರಾಜ್ಯ ಪ್ರಶಸ್ತಿಯನ್ನು ಗಳಿಸಿತು. ೧೯೬೬ರಲ್ಲಿ ಹರಿಜನರಿಗೆ ನೆಲೆಯಿಲ್ಲದೆ ಪರಿತಪಿಸುತ್ತಿರುವುದನ್ನು ಗಮನಿಸಿದ ಇವರು ಗೋಕರ್ಣದ ಸಮೀಪ ಹನೇಹಳ್ಳಿಯಲ್ಲಿ ಸ್ಥಳದ ಆಯ್ಕೆ ಮಾಡಿ ಸರಕಾರಕ್ಕೆ ನಿಲಿ ನಕ್ಷೆ ಕಳಿಸಿ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ, ಅಲ್ಲಿ ೫೦ ಮನೆಗಳನ್ನು ಹರಿಜನರಿಗಾಗಿ ನಿರ್ಮಿಸಿಕೊಟ್ಟರು. ಮತ್ತೊಮ್ಮೆ ಮರಬ್ಬಾ ಹಿರೇಗುತ್ತಿಯಲ್ಲಿ ಇಂತಹದೇ ಕಾರ್ಯ ನಡೆಯಿತು. ೧೯೬೮ ಪಟ್ಟಿಕೇರಿಯಲ್ಲಿ ೪೦ ಹಾಲಕ್ಕಿ ಒಕ್ಕಲಿಗರ ಗುಡಿಸಲುಗಳಿಗೆ ಬೆಂಕಿ ಬಿತ್ತು. ಇವರಿಗೆ ಸರ್ಕಾರದಿಂದ ಕೂಡಲೇ ಸಹಾಯ ಸಿಗುವಂತೆ ಡಾ. ಪೈ ಅವರು ಶ್ರಮಿಸಿದರು. ಶಿರಗುಂಜಿ (ಉಪ್ಪಿನಪಟ್ಟಣದ) ಹತ್ತಿರ ನೂರಾ ಐವತ್ತು ಜನರು ಇದ್ದ ಒಂದೇ ಮನೆಯಲ್ಲಿ ಬೆಂಕಿಬಿದ್ದು ಮನೆ ನಾಶವಾಯಿತು. ಅಲ್ಲಿನ ಕುಟುಂಬದ ಸದಸ್ಯರಿಗೆ ಪ್ರತ್ಯೇಕ ವಾಸಕ್ಕಾಗಿ ನೆಲೆ ಒದಗಿಸಿಕೊಟ್ಟರು. ಕಾಗಾಲದಲ್ಲಿ ಮುಸ್ಲಿಮ ಮತ್ತು ಹಿಂದೂ ಜನಾಂಗದ ಮೀನುಗಾರರಿಗೆ ವಸತಿ ಸೌಕರ್ಯ, ಶಾಲೆ, ಬಾವಿ ಇತ್ಯಾದಿಗಳನ್ನು ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ೧೯೭೨ ರಲ್ಲಿ ಭಾರತ ಸೇವಾ ದಳದಲ್ಲಿ ೧೫೦೦ ಶಿಬಿರಾರ್ಥಿಗಳನ್ನು ಕುಮಟೆಯಲ್ಲಿ ಸೇರಿಸಿ ಆಗಿನ ರಾಜ್ಯಪಾಲ ಶ್ರೀ ಧರ್ಮವೀರರನ್ನು ಕರೆತಂದು ಸೇವಾ ದಳವನ್ನು ಉದ್ದೇಶಿಸಿ ಉಪನ್ಯಾಸ ನೀಡಲು ಏರ್ಪಾಡುಮಾಡಿದರು. ೧೯೮೦ ರಲ್ಲಿ ರಾಜ್ಯ ಮಟ್ಟದ ಸ್ಕೌಟ್ ರ್ಯಾಲಿಯನ್ನು ಕುಮಟೆಯಲ್ಲಿ ಏರ್ಪಡಿಸಿದರು. ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ದುಡಿದು ಅವರ ವೇತನ, ಸೇವಾ ಭದ್ರತೆಗಾಗಿ ಸರಕಾರದೊಡನೆ ಸಮಾಲೋಚಿಸಿದ್ದು ಸ್ಮರಣೀಯ.

ಮತ್ತೊಂದು ಮಹತ್ವಪೂರ್ಣ ಸಂಗತಿ ಯೆಂದರೆ ಧಾರವಾಡದ ಆಕಾಶವಾಣಿಯಲ್ಲಿ ಕೊಂಕಣಿ ಭಾಷೆಗೆ ಪ್ರಾತಿನಿಧ್ಯ ಕಲ್ಪಿಸಿಕೊಟ್ಟು ಇಡೀ ರಾಜ್ಯದಲ್ಲೇ ಪ್ರಥಮಭಾರಿಗೆ ಕೊಂಕಣಿ ಶ್ರೋತೃಬಾಂಧವರಿಗೆ ಹರ್ಷವನ್ನುಂಟು ಮಾಡಿದ್ದು. ಇದು ಆಕಾಶವಾಣಿಯು ಅನ್ಯ ಭಾಷೆಗೆ ಕರ್ನಾಟಕದಲ್ಲಿ ಕೊಟ್ಟ ಪ್ರಥಮ ಮನ್ನಣೆಯಾಯಿತು. ಡಾ. ಬಿ. ಎಂ. ಪೈ ಅವರು ಎಷ್ಟು ಸರಳರೋ ಅಷ್ಟೇ ದೈವಭಕ್ತರು. ಕುಮಟೆಯ ಐತಿಹಾಸಿಕ ಪ್ರಸಿದ್ಧ ಶಾಂತಿಕಾ ಪರಮೇಶ್ವರಿ ದೇವಾಲಯದ ಟ್ರಸ್ಟಿಗಳಾಗಿ ಈಗ ದುಡಿಯುತ್ತಿದ್ದಾರೆ. ಪೈ ಅವರ ತಂದೆಯವರು ಈ ದೇವಳದ ಟ್ರಸ್ಟಿಗಳಾಗಿದ್ದರು. ಸದಾ ಚಿಂತನ ಶೀಲವ್ಯಕ್ತಿ. ಅಭಿವೃದ್ಧಿಶೀಲ ಕಾರ್ಯಗಳ ತಲೆ ದೃಷ್ಟಿ ತಮ್ಮನ್ನು ಅರಸಿಬಂದವರ ಕಾರ್ಪಣ್ಯ ಕಷ್ಟ ಆಲಿಸಿ ಪರಿಹಾರ ಹುಡುಕಿ ಸಾಧ್ಯವಾದಷ್ಟು ಸಹಾಯಗೈಯುವದೇ ಇವರ ಮಹತ್ತರ ಗುಣ. ರಾಜಕೀಯ ಸಂತ್ರಸ್ತರನ್ನು ಕರೆಸಿ ಸಮಾಲೋಚಿಸಿ ಅವರ ನಿವೃತ್ತಿ ವೇತನ, ನಿವೇಶನ. ಅವರ ಮಕ್ಕಳಿಗೆ ಮುಕ್ತ ಶಿಕ್ಷಣವನ್ನು ಏರ್ಪಡಿಸುವುದರಲ್ಲಿ ಪೈ ಅವರೇ ನೇತಾರರು. ಯಾವ ಅಧಿಕಾರ ಲಾಲಸೆ ಧನ ಕೀರ್ತಿಗೆ ಕೈಚಾಚದೆ ಶ್ರೀಗಂಧದಂತೆ ತಮ್ಮ ಜೀವನ ತೇಯ್ದ ಹಿರಿಯ ಜೀವ. ಇಂತಹ ಪ್ರತಿಭಾವಂತ ತತ್ವಜ್ಞಾನಿ. ದೈವಭಕ್ತ. ರಾಜ್ಯ ಸರಕಾರ ೧೯೮೨ ಕರ್ನಾಟಕ ರಾಜ್ಯೋತ್ಸವದ ಸವಿನೆನಪಿಗಾಗಿ ನೀಡಿದ ರಾಜ್ಯ ಪ್ರಶಸ್ತಿ ಕೇವಲ ಸಾಂಕೇತಿಕ ಗೌರವ ಅಷ್ಟೆ.

**ಇತರರಿಂದ ಆಳಲ್ಪಡುವುದೇ ಸುಲಭವೆಂಬುದನ್ನು ಜನಸಾಮಾನ್ಯರು ಕಂಡು ಕೊಂಡಿದ್ದಾರೆ. ಅವರಿಗೆ ಅತ್ಯಂತ ಕಠಿಣವಾದದ್ದೆಂದರೆ ತಮ್ಮನ್ನು ತಾವೇ ಆಳುವುದು.**

**–ಮ್ಯಾಕ್ಸ್ ಲರ್ನರ್**

ರಾಜೀವ ಅಜ್ಜಿಬಳ

# ಸಸ್ಯವಿಜ್ಞಾನಿಯ ಸನ್ನಿಧಾನದಲ್ಲಿ

ಆಚಾರ್ಯ ಜಗದೀಶಚಂದ್ರ ಬೋಸರು ರಾಷ್ಟ್ರ ಸಂಘದ ಇಂಟಲಿಜೆನ್ಸ್ ಕೊ-ಆಪರೇಶನ್ ಕಮಿಟಿಯ ಸದಸ್ಯರಾಗಿದ್ದ ಕಾಲ. ವರ್ಷಕ್ಕೊಮ್ಮೆ ತಮ್ಮ ಪತ್ನಿ ಅಬಾಲಾ ದೇವಿಯವರೊಂದಿಗೆ ಜಿನೇವಾಕ್ಕೆ ಭೇಟಿ ನೀಡುತ್ತಿದ್ದರು. ಯುರೋಪಿಗೆ ಹೋಗುವಾಗ ಹಾಗೂ ಅಲ್ಲಿಂದ ಬರುವಾಗ ಮುಂಬೈಯಲ್ಲಿ ವಿಠ್ಠಲ ಚಂದಾವರಕರರ ಮನೆಯಲ್ಲಿ ಅತಿಥಿಯಾಗಿ ತಂಗುತ್ತಿದ್ದರು. ಚಂದಾವರಕರರ ಮನೆಯೆಂದರೆ ಆಗ ಆತಿಥ್ಯಕ್ಕೆ ತುಂಬ ಹೆಸರಾಗಿತ್ತು.

ಚಂದಾವರಕರ ಕುಟುಂಬದ ಜಿ. ಎಲ್. ಚಂದಾವರಕರ ಆಗಿನ್ನೂ ೨೭ರ ಹರೆಯದ ಕಾಲೇಜು ಹುಡುಗ. ಎಷ್ಟೋ ವೇಳೆ ಮನೆಗೆ ಬರುವ ಇಂಥ ಪ್ರತಿಷ್ಠಿತ ವ್ಯಕ್ತಿಗಳ ಯೋಗ ಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಅವನ ಮೇಲಿರುತ್ತಿತ್ತು.

▪

೧೯೨೭ರ ಮೇ ೨೭ರಂದು ಮುಂಬೈಯಲ್ಲಿ ತಂಗಿದ್ದಾಗ ಆಚಾರ್ಯ ದಂಪತಿಗಳು ಲೋಣಾವಳದ ಸಮೀಪವಿರುವ ಕಾರ್ಲಾ ಗುಹೆಗಳನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದರು. ಅವರಿಗೆ ಮಾರ್ಗದರ್ಶಿಯಾಗಿ ಜಿ. ಎಲ್. ಚಂದಾವರಕರ ಹೊರಟಿದ್ದ. ತನ್ನ ಅಪರೂಪದ ಅತಿಥಿಗಳೊಂದಿಗೆ ಮುಂಬೈಯಿಂದ ಲೋಣಾವಳದ ವರೆಗಿನ ಈ ಪ್ರವಾಸ ಅವನಿಗೆ ಎಂದೆಂದಿಗೂ ಮರೆಯಲಾರದ ಅನುಭವವಾಗುಳಿಯಿತು. ಆ ಅನುಭವವನ್ನು ಆತನ ಮಾತಿನಲ್ಲೇ ಕೇಳಿ.

“ಖಂಡಾಳಾ ಘಾಟಿನ ಸುರಂಗವನ್ನು ದಾಟಿ ಗಾಡಿ ನಿಲ್ದಾಣಕ್ಕೆ ಬಂದಾಗ ಪ್ರಯಾಣಿಕರ ಹಾಗೂ ಚಿಕ್ಕ ಪುಟ್ಟ ವ್ಯಾಪಾರಿಗಳ ನೂಕು ನುಗ್ಗಲು ಆರಂಭವಾಯಿತು. ಒಂದಿಷ್ಟು ಆದಿವಾಸಿ ಮಹಿಳೆಯರು ಬುಟ್ಟಿ ತುಂಬ ಒಂದು ಜಾತಿಯ ಕಾಡು ಹಣ್ಣುಗಳನ್ನು ಎಲೆಯ ತಟ್ಟೆಯಲ್ಲಿಟ್ಟು ಮಾರುತ್ತಿದ್ದರು. ಹಾಗೇ ಒಬ್ಬಳು ಆಚಾರ್ಯರಿದ್ದ ಕಂಪಾರ್ಟ್‌ಮೆಂಟಿಗೂ ಬಂದಾಗ ಆಕೆಯ ಭಾಷೆ ತಿಳಿಯದ ಅಬಾಲಾ ದೇವಿಯವರು, ‘ಆ ಕಪ್ಪು ಹಣ್ಣುಗಳ ಹೆಸರೇನು?’ ಎಂದರು.

“‘ಅವು ಈ ಪ್ರದೇಶದಲ್ಲಿ ಹೇರಳವಾಗಿ ದೊರೆಯುವ ಕವಳೆ ಹಣ್ಣುಗಳು’ ಎಂದೆ.

'ರುಚಿ ಹೇಗಿರುತ್ತೆ ?'

'ಸಾಕಷ್ಟು ಮಾಗಿದ ಹಣ್ಣು ಸಿಹಿಯಾಗಿರುತ್ತದೆ.' ಎನ್ನುತ್ತ ಒಂದು ತಟ್ಟೆ ಹಣ್ಣನ್ನು ಖರೀದಿಸಿ ಅವರಿಗೆ ನೀಡಿದೆ.

ಆಚಾರ್ಯರು ಅದನ್ನು ಪಡೆದು ಹಣ್ಣೊಂದನ್ನು ಬಾಯಿಗಿಡುವ ಮೊದಲೇ ಅಬಾಲಾ ದೇವಿಯವರು ಅದನ್ನು ಕಸಿದುಕೊಂಡರು. ಅಷ್ಟೇ ಅಲ್ಲ ಪ್ರತಿ ಹಣ್ಣನ್ನು ಕಚ್ಚಿ ನೋಡಿ ಆಚೆ ಹೊರಗೆಸೆಯುತ್ತಿದ್ದರು. ನಾನು ವಿಸ್ಮಯದಿಂದ ಕೇಳಿದೆ.

'ಯಾಕೆ ಅವು ಸಿಹಿಯಿಲ್ಲವೇ ?'

'ಸಿಹಿ ಇದೆ. ಅದಕ್ಕೇ ಎಸೆಯುತ್ತಿದ್ದೇನೆ' ಎಂದಾಗ ನನ್ನ ಅಚ್ಚರಿ ಮೇರೆ ಮೀರಿತು. 'ಸಿಹಿಯಾಗಿದ್ದರೆ ಏಕೆ ಎಸೆಯುತ್ತೀರಿ?' ಎಂದೆ. ನನ್ನ ಮುಖದಲ್ಲುಂಟಾದ ಗೊಂದಲವನ್ನು ಗಮನಿಸಿ 'ಆಚಾರ್ಯರು ಸಿಹಿಯಿಂದ ದೂರವಿರುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಅವರಿಗೆ ಮರೆವು ಜಾಸ್ತಿ. ಇದನ್ನು ನಾನು ಗಮನಿಸುತ್ತಿರುತ್ತೇನೆ. ಈ ಹಣ್ಣುಗಳನ್ನು ಅವರು ತಿನ್ನಲು ಬಯಸಿದರೆ ನಾನು ಸಿಹಿಯಿಲ್ಲದ ಹಣ್ಣುಗಳನ್ನು ಮಾತ್ರ ನೀಡುತ್ತೇನೆ.' ಆದರೆ ನನ್ನ ಕುತೂಹಲ ಅಷ್ಟಕ್ಕೆ ಇಂಗಲಿಲ್ಲ. 'ನೀವಾದರೂ ಸಿಹಿ ಹಣ್ಣನ್ನು ತಿನ್ನಬಹುದಿತ್ತಲ್ಲ,' ಎಂದೆ. 'ಆಚಾರ್ಯರು ಸಿಹಿ ತಿನ್ನದೇ ನಾನು ಹೇಗೆ ತಿನ್ನಲಿ? ಅವರಿಗೆ ಸಿಹಿ ವರ್ಜಿಸಲು ವೈದ್ಯರು ಆದೇಶ ನೀಡಿದಾಗಿನಿಂದ ನಾನೂ ಸಿಹಿ ತಿನ್ನುವದನ್ನು ಬಿಟ್ಟಿದ್ದೇನೆ' ಎಂದರು. ಅಬಾಲಾ ದೇವಿಯವರಿಗೆ ಗುಲಾಬಜಾಮೂನು ರಸಗುಲ್ಲ ಅದೆಷ್ಟು ಪ್ರೀತಿ ಎಂಬುದು ನನಗೆ ಗೊತ್ತಿತ್ತು. ಆ ಕ್ಷಣ ನನಗೆ ರಾಮಾಯಣದ ಶಬರಿ ಹಾಗೂ ಮಹಾಭಾರತದ ಗಾಂಧಾರಿಯ ನೆನಪಾಯಿತು. ಅವರ ಪತಿಭಕ್ತಿ ನನ್ನ ಮನ ಕಲುಕಿತು. ಅಬಾಲಾ ದೇವಿಯವರು ಆಚಾರ್ಯರಿಗೆ ಪತ್ನಿ ಹಾಗೂ ತಾಯಿ ಎರಡೂ ಆಗಿದ್ದರು."

*

"ಮೇ" ತಿಂಗಳಿಂದು ಸುಂದರ ಮುಂಜಾವು. ಆಚಾರ್ಯರು ವಿಶ್ರಾಂತಿ ಪಡೆಯುತ್ತಿದ್ದ ರೂಮಿನೆದುರು ಅವರು ಎದ್ದು ಬರುವುದನ್ನೇ ಕಾಯುತ್ತ ನಿಂತಿದ್ದೆ. ಅದೇಕೋ ಅವರ ಸೇವೆ ಮಾಡುವ ಕಾತರ ನನಗೆ. ಆಚಾರ್ಯರು ಎದ್ದಾಗ ಎಂಟು ಗಂಟೆಯಾಗಿತ್ತು. ನನ್ನನ್ನು ಕಂಡೊಡನೇ, 'ನಿಮಗೆ ಕೆಲವು ವಸ್ತುಗಳನ್ನು ತೋರಿಸುತ್ತೇನೆ. ಅದಕ್ಕೂ ಮೊದಲು ಜಿನೇವಾ ಭೇಟಿಯ ಕಾಲಕ್ಕೆ ನಡೆದ ಸಂಗತಿಯೊಂದನ್ನು ಹೇಳುತ್ತೇನೆ. ಲಂಡನ್ನಿಗೆ ಹೋದಾಗ ಸ್ಲೈಡುಗಳ ಮೂಲಕ ನನ್ನ ವಿಷಯವಾದ ಸಸ್ಯಗಳಲ್ಲಿಯ ಜೀವನ ಕ್ರಮವನ್ನು ವಿವರಿಸಬೇಕೆಂದು ಹಾಗೂ ಆ ಬಗ್ಗೆ ಉಪನ್ಯಾಸ ನೀಡಬೇಕೆಂದು ಕೇಳಿಕೊಳ್ಳಲಾಯಿತು. ನನ್ನೆದುರು ಸೇರಿದ್ದ ಅಸಂಖ್ಯಾತ ಸಭಿಕರಲ್ಲಿ ಪ್ರಸಿದ್ಧ ನಾಟಕಕಾರ ಜಾರ್ಜ್ ಬರ್ನಾರ್ಡ್ ಶಾ ಸಹ ಇದ್ದರು. ಕಾರ್ಯಕ್ರಮದ ಮೊದಲೇ ಅವರ ಪರಿಚಯವಾಗಿತ್ತು. ಕಾರ್ಯಕ್ರಮ ಮುಗಿದ ಕೂಡಲೇ ಶಾ ತುರ್ತಾಗಿ ಸಭೆಯಿಂದ ನಿರ್ಗಮಿಸಿದ್ದರು. ಮರುದಿನ ನಾನಿದ್ದ ಹೋಟೆಲ್ ಅಡ್ರೆಸ್ಸಿಗೆ ನನಗೊಂದು ಪತ್ರ ಬಂತು. ಅದರಲ್ಲಿ ಶಾ ಬರೆದಿದ್ದರು: 'ನಿನ್ನೆ ಸಂಜೆವರೆಗೆ ನಾನು ಶುದ್ಧ ಶಾಕಾಹಾರಿಯಾಗಿದ್ದೆ. ಯಾವುದೇ ಜೀವಹಾನಿ ಮಾಡುತ್ತಿಲ್ಲವೆಂಬ ನಂಬಿಗೆಯಲ್ಲಿ ಸುಖವಾಗಿದ್ದೆ. ಆದರೆ ನಿನ್ನೆ ನಿಮ್ಮ ಉಪನ್ಯಾಸ ಕೇಳಿದ ನಂತರ ನಾನು ಉಪಯೋಗಿಸುವ ತರಕಾರಿಗಳಿಗೂ ಜೀವವಿದೆಯೆಂದು ತಿಳಿದು ಈಗ ಚಿಂತಿತನಾಗಿದ್ದೇನೆ.' – ಲಂಡನ್ನಿನಿಂದ ಹೊರಡುವದಕ್ಕಿಂತ ಒಂದು ದಿನ ಮೊದಲು ಶಾ ಅವರು ತಮ್ಮ ಪುಸ್ತಕಗಳ ಪಾರ್ಸಲ್ ಒಂದನ್ನು ನನಗೆ ಕಳಿಸಿಕೊಟ್ಟರು. ಅದರೊಂದಿಗೆ ಒಂದು ಪತ್ರವಿತ್ತು. 'ಈ ಪುಸ್ತಕಗಳನ್ನು ನಿಮ್ಮೊಂದಿಗೆ ಒಯ್ಯಲು ಭಾರವೆನಿಸಿದರೆ 'ಸೇಂಟ್ ಜೋನ್' ಹಾಗೂ 'ಬ್ಯಾಕ ಟು ಮ್ಯಾಥೆಸುಲಾ ಎಂಬ ಕೃತಿಗಳನ್ನು ನಿಮ್ಮೊಂದಿಗೆ ಇರಿಸಿಕೊಂಡು ಉಳಿದವುಗಳನ್ನು ಸಮುದ್ರಕ್ಕೆಸೆದು ಬಿಡಿ.]

'ನೋಡು. ಈ ಪುಸ್ತಕವೇ "ಸೇಂಟ್ ಜೋನ್" ನಿನಗೆ ತೋರಿಸಬೇಕೆನಿಸಿತು. ಇದರಲ್ಲಿ ಶಾ ಅವರ ಹಸ್ತಾಕ್ಷರವನ್ನೂ ನೋಡ

ಓದು ಎಂದರು. ನೋಡಿದೆ. 'ತಾ ತಮ್ಮ ಹಸ್ತಾಕ್ಷರದೊಂದಿಗೆ ಈ ರೀತಿ ಬರೆದಿದ್ದರು: From the least to the greatest student of life. ('ಅತ್ಯಂತ ಕಿರಿಯನೊಬ್ಬನಿಂದ ಜೀವನದ ಅತ್ಯಂತ ಶ್ರೇಷ್ಠ ವಿದ್ಯಾರ್ಥಿಗೆ.)'

"ಅವರ ಆತ್ಮೀಯತೆಯಿಂದ ಧೈರ್ಯಗೊಂಡು ನಾನು ನಮ್ರನಾಗಿ ಕೇಳಿದೆ. 'ನನಗಾಗಿ ಕೃಪೆ ಮಾಡಿ ನಿಮ್ಮ ಹಸ್ತಾಕ್ಷರ ನೀಡುವಿರಾ?'


'ಎಲ್ಲಿ ನಿನ್ನ ಹಸ್ತಾಕ್ಷರ ಪುಸ್ತಕ?' ಎಂದರು ಆಚಾರ್ಯರು, ತಟ್ಟನೇ. ಗಾಬರಿಯಿಂದ ನಾನು, ತುಣುಕೊಂದನ್ನು ಹಿಡಿದು, 'ಹಸ್ತಾಕ್ಷರ ಪುಸ್ತಕ ನನ್ನ ಇಲ್ಲ. ಕಾಗದವಿದೆ. ಇದರಲ್ಲಿ ನಿಮ್ಮ ಹಸ್ತಾಕ್ಷರ ಬರೆದರೆ ಅದನ್ನು ಬೈಂಡು ಮಾಡಿಸಿ ಆ ಮೇಲೆ ಅದರಲ್ಲಿ ಅಂಟಿಸುವೆ' ಎಂದೆ. ಅದನ್ನು ಹಿಡಿದು ಅವರು ತ್ವರಿತವಾಗಿ ರೂಮಿಗೆ ಹೋದರು. ಅವರು ಹೋದ ದಿಕ್ಕನ್ನೇ ನೋಡುತ್ತ ಕ್ಷಣಕಾಲ ದಂಗಾಗಿ ನಿಂತಿದ್ದೆ. ಆಚಾರ್ಯರು ಬಲಗೈಯನ್ನು ಬೆನ್ನ ಹಿಂದೆ ಅಡಗಿಸಿಕೊಂಡು ಬಂದರು. ಎಡಗೈಯನ್ನು ನನ್ನ ಭುಜದ ಮೇಲಿಟ್ಟು, 'ಯುರೋಪಿನಲ್ಲಿ ನನ್ನನ್ನು ಪೂರ್ವದ ಮಾಂತ್ರಿಕನೆನ್ನುತ್ತಾರೆ ಗೊತ್ತಾ? 'ನಾನು ಮಾಂತ್ರಿಕನಾದರೆ, ನಿನ್ನ ಕಾಗದದ ತುಂಡನ್ನು ಏನು ಮಾಡಿದ್ದೇನೆ ನೋಡು' ಎನ್ನುತ್ತ ತಮ್ಮ ಬಲಗೈಯನ್ನು ಮುಂದು ಮಾಡಿದರು. ಅದರಲ್ಲಿ ಸುಂದರವಾದ ಹಸ್ತಾಕ್ಷರ ಪುಸ್ತಿಕೆ ಇತ್ತು. ಅವರು ನೀಡಿದ ಪುಸ್ತಕವನ್ನು ನಡುಗುವ ಕೈಯಿಂದ ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದೆ. ಮೊದಲ ಪುಟದಲ್ಲಿ ದಿಟ್ಟವಾದ ಸುಂದರ ಅಕ್ಷರಗಳ ಸಂದೇಶ. The lights which we can see are few, but the invisible lights are many. We stand in the luminous ocean perfectly blind. 'ದೃಷ್ಟಿಗೆ ಗೋಚರಿಸುವ ಬೆಳಕು ಕೆಲವು. ಅಗೋಚರವಾದವುಗಳು ಹಲವು. ನಾವು ಬೆಳಕಿನ ಮಹಾಸಾಗರದಲ್ಲಿ ಪೂರ್ಣ ಕುರುಡರಾಗಿ ನಿಂತಿದ್ದೇವೆ.'

*

"ಆಚಾರ್ಯರು ಬಲ್ಲಾರ್ಡ್‌ನ ಹಡಗು ಕಟ್ಟೆಯಲ್ಲಿ ಕೈಯಲ್ಲೊಂದು ಚರ್ಮದ ಹ್ಯಾಂಡ್ ಬ್ಯಾಗ್ ಹಿಡಿದು ಇಳಿದರು. ಅದರಲ್ಲಿ ಅತ್ಯಂತ ನಾಜೂಕಾದ ಕ್ರೆಸ್ಕೋಗ್ರಾಫ್ ಉಪಕರಣಗಳಿದ್ದುವೆಂದು ಆ ಮೇಲೆ ನನಗೆ ಗೊತ್ತಾಯಿತು. ವಿದ್ಯುತ್ ಕಾಂತೀಯ ಅಲೆಗಳ ಮುಖಾಂತರ ವೈರ್‌ಲೆಸ್ ಸಂಕೇತಗಳನ್ನು ಕಳಿಸುವ ಉಪಕರಣವನ್ನು ಮಾರ್ಕೋನಿಗಿಂತ ಒಂದು ವರ್ಷ ಮೊದಲೇ ಅಂದರೆ ೧೮೯೫ರಲ್ಲಿಯೇ ಕಂಡುಹಿಡಿದಿದ್ದರು. ಆ ಬಗ್ಗೆ ನಾನೊಮ್ಮೆ, 'ಅದನ್ನೇಕೆ ಪ್ರಕಟಿಸಿ ಪೇಟೆಂಟನ್ನು ಪಡೆದುಕೊಳ್ಳಲಿಲ್ಲ'ವೆಂದು ಕೇಳಿದೆ. ಆಚಾರ್ಯರು ಸ್ವಲ್ಪ ಬೇಸರದ ಧ್ವನಿಯಲ್ಲಿ, 'ಅವ ಸ್ವತಂತ್ರ ರಾಷ್ಟ್ರದಲ್ಲಿ ಹುಟ್ಟಿದ್ದಾನೆ. ನನ್ನಂತಲ್ಲ!' ಎಂದುಬಿಟ್ಟರು.

*

"ಆಚಾರ್ಯರನ್ನು ಆಗಾಗ ಭೇಟಿಮಾಡಲು ಬರುವವರಲ್ಲಿ 'ಮುಂಬಯಿ ವ್ಯಾಪಾರಿ ಮಲಯ



"ದಪ್ಪಗಾಗಲು ಏನ್ಮಾಡ್ಬೇಕು ಅನ್ನೋದನ್ನ ಮೊದಲು ನನಗೆ ತಿಳಿಸಿ, ತೆಳ್ಳಗಾಗಲು ಏನ್ಮಾಡ್ಬೇಕು ಅನ್ನೋದನ್ನ ನಾನು ಹೇಳ್ತೀನೆ."

ನಲ್ಲಿ ಪ್ರಸಿದ್ಧರಾದ ಮುಲ್‌ರಾಜ ಖಟಾವರೂ ಒಬ್ಬರು. ಒಂದು ಸಂಜೆ ಆಚಾರ್ಯರ ಭೇಟಿಗೆ ಖಟಾವರು ಬಂದಾಗ ಆಚಾರ್ಯರು ಮಹಡಿಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದರು. ಆಚಾರ್ಯರಿಗೆ ಸುದ್ದಿ ತಿಳಿಸಲು ಮೇಲೆ ಹೋದಾಗ ಅವರು ಪುಸ್ತಕವೊಂದನ್ನು ಓದುವುದರಲ್ಲಿ ಮಗ್ನರಾಗಿದ್ದರು. ಖಟಾವರನ್ನು ಭೇಟಿ ಮಾಡಲು ಓದುತ್ತಿದ್ದ ಪುಸ್ತಕವನ್ನು ಹಾಗೇ ಕವುಚಿಟ್ಟು, ಕೆಳಗಿಳಿದು ಹೋದರು. ಕುತೂಹಲದಿಂದ ಪುಸ್ತಕವನ್ನು ತೆರೆದು ನೋಡಿದೆ. ಅದು 'ಅಲಿಸ್ ಇನ್ ವಂಡರ್ ಲ್ಯಾಂಡ್' ಆಗಿತ್ತು.

ಆಚಾರ್ಯರನ್ನು ಭೇಟಿ ಮಾಡಲು ಅನೇಕ ಮಂದಿ ಬರುತ್ತಿದ್ದರು. ತಮ್ಮನ್ನು ಕಾಣಲು ಬಂದವರೊಂದಿಗೆ ಕುಶಲವಾಗಿ ಸಂಭಾಷಿಸುತ್ತಿದ್ದರು. ಒಮ್ಮೆ ಇಂಥ ವೇಳೆಯಲ್ಲಿಯೇ ಹಸ್ತಸಾಮುದ್ರಿಕ ಪರಿಣತನೊಬ್ಬ ಅವರಿದ್ದಲ್ಲಿಗೆ ಬಂದು ಅವರ ಹಸ್ತ ನೋಡುವ ಅಭಿಲಾಷೆಯನ್ನು ವ್ಯಕ್ತಪಡಿಸಿದ. ಆಚಾರ್ಯರು ಅವನ್ನು ಖಡಾಖಂಡಿತವಾಗಿ ವಿರೋಧಿಸಿ 'ಆತನಿಗೆ ಹೋಗಲು ಹೇಳು' ಎಂದುಬಿಟ್ಟರು.

"ಅವರ ಹತ್ತಿರದಲ್ಲಿಯೇ ಕುಳಿತ ಅಬಾಲಾ ದೇವಿಯವರಿಗೆ ಏನೋ ಕುತೂಹಲ. ಆತನನ್ನು ಕರೆದು ಆಕೆ ತಮ್ಮ ಹಸ್ತವನ್ನು ಆತನೆದುರು ಹಿಡಿದರು. ಆಚಾರ್ಯರು ತಮ್ಮ ಮಾತುಕತೆಯಲ್ಲಿ ಮುಳುಗಿದ್ದರು. ಆತನೂ 'ನೀವು ಸೌಭಾಗ್ಯವತಿಯಾಗಿಯೇ ಮರಣ ಹೊಂದುವಿರಿ' ಎಂದಾತ ಹೇಳಿದ್ದು ಆಚಾರ್ಯರ ಕಿವಿಗೆ ಬಿತ್ತು.

'ಅರ್ಥವಿಲ್ಲದ್ದು. ನನ್ನೆದುರೇ ಈಕೆ ಸಾಯುವುದೆಂದರೇನು? ಆಕೆ ಹೋದ ಮೇಲೆ ಒಂಟಿಯಾಗಿ, ಪರದೇಶಿಯಾಗಿ ಇರುವುದಾದರೂ ಹೇಗೆ?'

ಆಚಾರ್ಯರು ೧೯೩೭ರಲ್ಲಿ ಮರಣ ಹೊಂದಿದರು. ಹದಿನಾಲ್ಕು ವರ್ಷಗಳ ನಂತರ ಅಂದರೆ ೧೯೫೧ರಲ್ಲಿ ಅಬಾಲಾ ದೇವಿಯವರು ದೈವಾಧೀನರಾದರು. ಆ ಹಸ್ತಸಾಮುದ್ರಿಕ ಭವಿಷ್ಯ ಮಾತ್ರ ಪೂರ್ತಿ ಸುಳ್ಳಾಯಿತು."

(ಆಧಾರಿತ)



ಪಶ್ಚಿಮ ಭಾರತದಲ್ಲಿ ಜಾತೀಯ ದಂಗೆಗಳು ನಡೆದ ಭಾಗದಲ್ಲಿ ಜವಾಹರಲಾಲ ನೆಹರೂ ೧೯೪೭ರಲ್ಲಿ ಸಂಚರಿಸುತ್ತಿದ್ದರು. ಆಗ ಅವರಿಗೆ ಜಂಗಲಿ ಎಂಬ ಹೆಸರಿನ ಓರ್ವ ಮುಹಮ್ಮದೀಯ ನಿರಾಶ್ರಿತನ ಭೆಟ್ಟಿಯಾಯಿತು. ಅವರು ಅವನ ಮೇಲೆ ಕರುಣೆಗೊಂಡು ಅವನಿಗೆ ಒಂದು ಉದ್ಯೋಗ ದೊರಕಿಸಿಕೊಟ್ಟರು. ಆಗಾಗ ಆತ ನೆಹರೂರನ್ನು ಭೆಟ್ಟಿಯಾಗಲು ಬರುತ್ತಿದ್ದ. ಬರುವಾಗ ಆತ ನೆಹರೂರಿಗೆಂದು ಖಾದ್ಯ ಪದಾರ್ಥಗಳನ್ನು ತರುತ್ತಿದ್ದ. ಒಮ್ಮೆ ಜಂಗಲಿ ತಂದಿದ್ದ ಬೋರೆ ಹಣ್ಣುಗಳನ್ನು ಸವಿಯುತ್ತ ನೆಹರು "ನಿನಗೆ ಮಕ್ಕಳೆಷ್ಟು ಜಂಗಲಿ?" ಎಂದು ಕೇಳಿದರು.

"ಹನ್ನೊಂದು," ಎಂದಾತ ತಡಮಾಡದೆ ಹೇಳಿದಾಗ ನೆಹರೂ ಬಿದ್ದು ಬಿದ್ದು ನಗಲಾರಂಭಿಸಿದರು. ಜಂಗಲಿ ತಬ್ಬಿಬ್ಬಾದ. ಕಾರಣ ಅರಿಯುವ ಕುತೂಹಲದಿಂದ ಆತ ಜವಾಹರರತ್ತ ನೋಡಿದಾಗ. "ಹಾಗಾದರೆ ನಿನ್ನ ಮನೆಯಲ್ಲಿ ಒಂದು ಕ್ರಿಕೆಟ್ ಟೀಮೇ ಇದೆಯೆನ್ನು !" ಎಂದು ನೆಹರೂ ಮತ್ತೆ ನಗಲಾರಂಭಿಸಿದಾಗ ಜಂಗಲಿ ನಾಚಿ ನೀರಾದ.

–ಚಂದ್ರಶೇಖರ ಪ್ರಾತಃಕಾಲ

# ಅಭ್ಯಾಸ ಬಲ

ಡಾ. ಎ. ಚಂದ್ರಶೇಖರ ಉಡುಪ

ಈ ಇಪ್ಪತ್ತನೆಯ ಶತಮಾನದಲ್ಲಿ ಮನುಷ್ಯನಿಗೆ ಅವನ ಮನಸ್ಸೇ ಜಗತ್ತಾಗಿದೆ. ಹೊರ ಜಗತ್ತಿನ ಹೊಸ ಹೊಸ ಶೋಧನೆಗಳನ್ನು ಮಾಡಿ ತನ್ಮೂಲಕ ತನ್ನ ಸುಖ ಸಂತೋಷಗಳನ್ನು ಹೆಚ್ಚಿಸಿಕೊಂಡು ನಲಿಯಬೇಕಾದ ಮಾನವನಿಗೆ ಕೆಲವೊಮ್ಮೆ ತನ್ನ ಮನಸ್ಸನ್ನು ನಿಯಂತ್ರಿಸುವುದೇ ಕಷ್ಟವಾಗುತ್ತದೆ. ತನ್ನ ಮನಸ್ಸಿನ ಆಳ, ಇತಿ–ಮಿತಿಯನ್ನರಿಯುವುದೇ ಅಸಾಧ್ಯವಾಗುತ್ತದೆ. ಎಷ್ಟೋ ವೇಳೆ ಹಗಲಿನ ಹೊತ್ತು ಯಾವುದಾದರೂ ಕೆಲಸದಲ್ಲಿ ಅವನ ಗಮನ ಹರಿದು ಸಮಯ ಕಳೆಯುತ್ತದೆ. ಆದರೆ ರಾತ್ರಿ ಮಲಗಿದರೆ ಸರಿ, ಮನೆಯ ಯೋಚನೆ, ಕೆಲಸದ ಯೋಚನೆ, ಸಂಸಾರದ ತಾಪತ್ರಯಗಳ ಯೋಚನೆ, ನೆರೆಹೊರೆಯ ಯೋಚನೆ... ಹೀಗೆ ಒಂದೇ – ಎರಡೇ ಹತ್ತು ಹಲವು ಯೋಚನೆಗಳು ಬಂದು ಕಾಡತೊಡಗುತ್ತವೆ. ಮಾಮೂಲಿನ ನಿದ್ರಾ ಮಾತ್ರೆಗಳ ಉಪಯೋಗದಿಂದಲೂ ಹಲವು ಬಾರಿ ನಿದ್ರೆ ಬರುವುದಿಲ್ಲ. ಬಾಯಿ ರುಚಿ ಕೆಡುತ್ತ ಹೋಗಿ ದೇಹ ಸೊರಗಿ, ಬೆಂಡಾಗುತ್ತದೆ. ಆಗ ಇತರ ಸುಖ ಸಂಪತ್ತುಗಳಿದ್ದರೂ ದೇಹದ ಅತ್ಯವಶ್ಯಕ ಮೂಲಭೂತ ಅನುಭವಗಳಿಗೆ ಕೊರತೆಯುಂಟಾದಾಗ ಮನೋವೇದನೆಯು ಉಗ್ರವಾಗುತ್ತದೆ. ಒಂದಲ್ಲ ಒಂದು ದಿನ ಭೂತಾಕಾರವಾಗಿ ಬೆಳೆದು ಅದು ಅವನನ್ನು ಪೀಡಿಸತೊಡಗುತ್ತದೆ. ಆಗ 'ತಾನಿನ್ನು ಕೆಲಸಕ್ಕೆ ಬಾರದವನು, 'ಸಾವಾದರೂ ತನಗೆ ಬರಬಾರದೇಕೆ? ತನ್ನ ಸಮಸ್ಯೆಗೆ ನಿವಾರಣೆಯೇ ಇಲ್ಲವಲ್ಲ... ದೇವರೆ' ಎಂಬಿತ್ಯಾದಿ ಅರಣ್ಯರೋದನದಲ್ಲೇ ಆತ ತೃಪ್ತನಾಗುತ್ತಾನೆ. ಕ್ರಮೇಣ ಈ ರೀತಿ ಗೋಗರೆಯುವುದು ಅವನಿಗೆ ಅಭ್ಯಾಸವಾಗಿ ಬಿಡುತ್ತದೆ.

## ಅಭ್ಯಾಸದ ವಿವಿಧ ಮುಖಗಳು

ಮನುಷ್ಯನು ಏಕಾಗ್ರತೆಯಿಂದ ಒಮ್ಮೆ ಮಾಡಿದ ಕೆಲಸವನ್ನೋ ಅಥವಾ ಯಾಂತ್ರಿಕವಾಗಿ ಪದೇ ಪದೇ ಮಾಡುತ್ತಿರುವ ಕೆಲಸವನ್ನೋ ಅವನ ಮಿದುಳು ಚೆನ್ನಾಗಿ ಗ್ರಹಿಸುತ್ತದೆ. ಕೆಲವೊಮ್ಮೆ ಆ ವರ್ತನೆಯಿಂದಾಗಿ ಅಭ್ಯಾಸಗೊಂಡ ಆ ಮಿದುಳು ಅದಿಲ್ಲದಾಗ ವ್ಯಕ್ತಿಯನ್ನು ಪ್ರಚೋದಿಸುತ್ತದೆ. ದಿನಂಪ್ರತಿ ಬೆಡ್‌ಕಾಫಿ ಕುಡಿಯುವವರಿಗೆ ಒಂದು ದಿನ ಅದಿಲ್ಲದಾಗ ಏನೋ ಒಂದು ರೀತಿಯ ಕಸಿವಿಸಿ ಉಂಟಾಗುತ್ತದಂತೆ ! ಇನ್ನೂ ಕೆಲವೊಮ್ಮೆ ರೂಢಿಗೊಂಡ ವರ್ತನೆ ಸಮಾನ ಪರಿಸರದಲ್ಲಿ ಥಟ್ಟನೆ ಪುಟಿದೇಳುತ್ತದೆ. ಉದಾಹರಣೆಗೆ ಈ ಘಟನೆ ನೋಡಿ: ಒಬ್ಬಾಕೆ ತನ್ನ ಪತಿ ಬಸ್ ಕಂಡಕ್ಟರನನ್ನು

ಮುಂಜಾನೆ ಬೇಗನೆ ಎಬ್ಬಿಸಿ ಮಾರ್ಕೆಟ್ಟಿಗೆ ತರಕಾರಿ ತರಲೆಂದು ಕಳಿಸಿದಳು. ಆತ ನಿದ್ರೆಯ ಮಂಪರಿನಲ್ಲೆ ವ್ಯಾಪಾರ ಮಾಡಿ ೧೦ ರೂಪಾಯಿ ನೋಟನ್ನು ಕೊಟ್ಟಾಗ, ತರಕಾರಿ ಮಾರುವಾಕೆ, "ಚಿಲ್ಲರೆ ಇಲ್ಲ ಸಾರ್," ಎಂದಳಂತೆ. ಕೂಡಲೇ ರೇಗಿದ ಈತ, "ಚಿಲ್ರೆ ಇಲ್ದಿದ್ರೆ ಬಸ್ಸಿನಿಂದ ಇಳ್ದುಬಿಡ್ರಿ. ನನ್ನಲ್ಲಿಯೂ ಚಿಲ್ರೆ ಇಲ್ಲ ಕಣಮ್ಮಾ," ಎಂದೇ ಬಿಟ್ಟನಂತೆ!

## ವಯಸ್ಸಿನ ಅಂತರವಿಲ್ಲ

ರಾಮುವಿಗೆ ೪೦ ವರ್ಷ ಪ್ರಾಯ. ವೃತ್ತಿಯಲ್ಲಿ ಇಂಜಿನಿಯರ್. ಆತನಿಗೆ ವಿದ್ಯುತ್ ಶಕ್ತಿಯ ಹಂಡೆಯಲ್ಲಿ ಕಾಯಿಸಿದ ನೀರನ್ನು ಸ್ನಾನ ಮಾಡಿದಾಗ ಮೈಯೆಲ್ಲ ಭಾರವಾಗಿ, ವಾಕರಿಕೆ, ತಲೆಸುತ್ತು, ಜಡತ್ವ ಇವೆಲ್ಲ ಸರ್ವೇ ಸಾಮಾನ್ಯವಂತೆ. ಆದರೆ ಕಟ್ಟಿಗೆ ಉರಿಸಿ ಕಾಯಿಸಿದ ನೀರಿನ ಸ್ನಾನದಿಂದ ಈ ಯಾವ ತೊಂದರೆಯೂ ಆಗುವುದಿಲ್ಲವಂತೆ! ನಿಜಕ್ಕೂ ವೈಜ್ಞಾನಿಕ ನೆಲೆಯಲ್ಲಿ ಇದು ಒಂದು ಅಸಂಬದ್ಧ ಮಾತು. ಅಭ್ಯಾಸದಿಂದಾದ ಮನಸ್ಸಿನ ಚಪಲ ಎಂದಷ್ಟೇ ಹೇಳಬಹುದು!

ಮಹೇಶ ನಾಲ್ಕು ತಿಂಗಳ ಹಸುಗೂಸು. ಕಂದನನ್ನು ಮಲಗಿಸುವ ತೊಟ್ಟಿಲಿಗೆ ಚಿಕ್ಕ ಗೆಜ್ಜೆಯೊಂದನ್ನು ಕಟ್ಟಿದ ಕಾರಣ, ತೊಟ್ಟಿಲು ತೂಗುವಾಗ ಆ ಗೆಜ್ಜೆ 'ಗಿಲ್... ಗಿಲ್...' ಎಂದು ಶಬ್ದ ಮಾಡುತ್ತದೆ. ಆ ಶಬ್ದ ಕೇಳಿದೊಡನೆಯೇ ಮಗು ಆರಾಮಾಗಿ ನಿದ್ರೆ ಹೋಗುತ್ತೆ. ಕೆಲವೊಮ್ಮೆ ತುಂಬಾ ಅಳುವಾಗ, ಮಗುವೇ 'ಗಿಲ್ ಗಿಲ್' ಎಂದು ತನ್ನನ್ನು ಮಲಗಿಸುವ ಬಗ್ಗೆ ಸೂಚನೆ ಕೊಡುತ್ತದೆ. ನೆಂಟರಿಷ್ಟರ ಮನೆಗೆ ಹೋಗುವಾಗ ಆ ಗೆಜ್ಜೆಯನ್ನು ಹಿಡಿದುಕೊಂಡು ಹೋಗಿ ಅಲ್ಲಿನ ತೊಟ್ಟಿಲಿಗೆ ಕಟ್ಟಿದರೇನೇ ಆತ ಮಲಗುವುದು!

ವಿವೇಕ ಎರಡು ವರ್ಷದ ತುಂಟ ಹುಡುಗ. ಹಾಲಿನ ಜತೆಗೆ ರುಚಿಗೆಂದು ಒಮ್ಮೆ ಪ್ರೊವೊಲಾನ್ ಪುಡಿಯನ್ನು ಸೇರಿಸಿದಾಗ ಖುಷಿಯಿಂದ ಕುಡಿದನಂತೆ. ಅನಂತರ ಅಭ್ಯಾಸದಿಂದಾಗಿ ಆ ಪುಡಿ ಇದ್ದರೇನೇ ಹಾಲು ಕುಡಿಯುವುದು, ಇಲ್ಲವಾದರೆ 'ಹಾಲೇ ಬೇಡ' ಎಂಬ ಹಟ ತೋರಿಸುವನಂತೆ. ಆ ಡಬ್ಬದೊಳಗೆ ಹಾರ್ಲಿಕ್ಸ್, ಬೋರ್ನವಿಟಾ ಮುಂತಾದ ಬೇರೊಂದು ಪುಡಿಯ ಪೊಟ್ಟಣವನ್ನಿಟ್ಟು, ಆ ಪುಡಿಯನ್ನು ಸೇರಿಸಿದ ಹಾಲನ್ನು ಕೊಟ್ಟಾಗ, ಈತನಿಗೆ ಅದರ ವ್ಯತ್ಯಾಸದ ಅರಿವಾಗಿ, 'ಒಲ್ಲೆ' ಎಂಬ ಸೊಲ್ಲನ್ನಲ್ಲದೆ ಬೇರೇನೂ ಮಾಡಲಾರನಂತೆ! ಅಭ್ಯಾಸದಿಂದಾಗಿ, ಮಿದುಳಿನಲ್ಲಿ ಆ ಪುಡಿಯ ರುಚಿ ಅಚ್ಚೊತ್ತಿ ನಿಂತಿದ್ದು, ತನ್ಮೂಲಕ ಹಟ ಮಾರಿತನ ಬೆಳೆದು, ಅದಿದ್ದರೇನೇ ಹಾಲು ಕುಡಿಯುವುದು ಎಂಬ ಒಣ ತತ್ವಕ್ಕೆ ಮನಸ್ಸು ಬದ್ಧವಾಗುತ್ತದೆ. ಚಿಕ್ಕ ಪ್ರಾಯದಲ್ಲಿ ಈ ರೀತಿಯ ವಿಶಿಷ್ಟ ಅನುಭವಕ್ಕೆ ಮಕ್ಕಳು ಅಂಟಿಬಿಟ್ಟವಾದರೆ ಅವನ್ನು ಬೆಳೆಸುವದು ಬಹಳ ಕಷ್ಟ!

ಬೀಡಿ – ಸಿಗರೇಟು, ಗಾಂಜಾ ಸೇವನೆ, ಹೊಗೆಸೊಪ್ಪು, ಎಲೆ ಅಡಿಕೆಯ ಅಭ್ಯಾಸ, ಮದ್ಯಪಾನ ಮುಂತಾದ ಅಭ್ಯಾಸಗಳ ಫಲವೂ ಇಷ್ಟೇನೆ. ಹೊಗೆಸೊಪ್ಪು ತಿನ್ನದಿದ್ದಲ್ಲಿ ಹಲ್ಲು ಸೆಳೆತ, ದವಡೆ ನೋವು ಬರುವುದು, ಧೂಮಪಾನ ಬಿಟ್ಟಲ್ಲಿ ಬಾಯಿ ಕಹಿ ಆಗುವುದು ಮಲ ವಿಸರ್ಜನೆ ಸರಿಯಾಗದಿರುವುದು... ಎಂಬಿತ್ಯಾದಿ ವಾದಗಳಲ್ಲಿ ಹುರುಳಿಲ್ಲ! ಈ ದುರಭ್ಯಾಸಗಳಿಂದಾಗಿ ಘೋರ ರೋಗಕ್ಕೆ ಬಲಿ ಬಿದ್ದಾಗ ಅವನ್ನು ತ್ಯಜಿಸಲು ಈತ ಶತ ಪ್ರಯತ್ನವನ್ನು ಮಾಡುತ್ತಿದ್ದರೂ, ಅವಕ್ಕೆ ಇವನನ್ನು ಬಿಡಲು ಸರ್ವಥಾ ಸಾಧ್ಯವಾಗುವುದಿಲ್ಲ! ಅಭ್ಯಾಸದಿಂದಾಗಿ ಅಷ್ಟೊಂದು ಅಚ್ಚುಮೆಚ್ಚು ಉಂಟಾಗುವುದು ವಿಚಿತ್ರ, ಆದರೂ ನಿಜ.

## ಎಂಥ ಆಶ್ಚರ್ಯ!

ವೈದ್ಯರ ಮನೆಯಲ್ಲಿ ರೋಗಗಳ ಸಂಖ್ಯೆ ಜಾಸ್ತಿ ಎಂಬ ಮಾತಿದೆ. ವೈದ್ಯ ಮನೆಯಲ್ಲಿದ್ದರೆ, ಮನೆಮಂದಿಗೆಲ್ಲ ಚಿಕ್ಕಪುಟ್ಟ ತೊಂದರೆಗೂ ಗುಳಿಗೆಯೂ, ಇಂಜೆಕ್ಷನ್ನು ಬೇಕಾಗುತ್ತದೆ. ಸಣ್ಣ ತೊಂದರೆಯೂ ದೊಡ್ಡ ಕಾಯಿಲೆ(ಕ್ಯಾನ್ಸರ್ ಇತ್ಯಾದಿ)ಯಾಗಿ ಮುಂದೆ ಪರಿವರ್ತನೆಗೊಂ

ಡೀತು ಎಂಬ ಹೆದರಿಕೆಯಿಂದ ಮುಂಜಾಗರೂಕತೆಯ ನೆಪದಿಂದ ಔಷಧಿ ಪಡೆಯುವುದು ಒಂದು ಕಾರಣವಾದರೆ, ಸುಲಭದಲ್ಲಿ ಮದ್ದು ಸಿಗುತ್ತದಲ್ಲ, ಉಪಯೋಗಿಸೋಣ ಎಂಬುದು ಇನ್ನೊಂದು ಕಾರಣ. ಆದರೆ ವೈದ್ಯರ ನೆರೆಮನೆಯಲ್ಲಿ ಸಾಮಾನ್ಯವಾಗಿ ತೊಂದರೆಗಳು, ಅವರಲ್ಲೂ ಪದೇ ಪದೇ ಕಾಡುವ ತೊಂದರೆಗಳು ಕಡಿಮೆ. ನಮ್ಮ ನೆರೆಮನೆಯ ಶ್ಯಾಮಭಟ್ಟರ ಮಾತಿನಲ್ಲಿ ಹೇಳುವುದಾದರೆ, "ಜ್ವರ ಬರಲಿ, ಭೇದಿ, ವಾಂತಿ ಮುಂತಾದ ಯಾವ ತೊಂದರೆಯಾದರೂ ಸರಿ, ಒಂದೆರಡು ದಿನ ನಾವು ಸುಮ್ಮನಿರುತ್ತೇವೆ. ಜೋರಾದಲ್ಲಿ ಹೇಗೂ ನೀವಿದ್ದೀರಾ ಎಂಬ ಧೈರ್ಯ ನಮಗೆ. ಎಷ್ಟೋ ಬಾರಿ ನಿಮ್ಮನ್ನು ನೆನಸಿಕೊಂಡಾಕ್ಷಣ ಜ್ವರದ ತಾಪವಾಗಲಿ, ಭೇದಿ ಹಾಗೂ ಹೊಟ್ಟೆ ನೋವಾಗಲಿ ಕಣ್ಮರೆಯಾಗಲಾರಂಭಿಸುತ್ತದೆ. "ಅಯ್ಯೋ, ಇಂಜೆಕ್ಷನ್ ಚುಚ್ಚುತ್ತಾರಲ್ಲ ಡಾಕ್ಟ್ರ ಹತ್ತಿರ ಹೋದರೆ," ಎಂಬ ಯೋಚನೆಯನ್ನು ಮನಸ್ಸಿಗೆ ಆಗಾಗ ಕೊಡುತ್ತಿರುತ್ತೇವೆ, ನಾವು. ಆಗ ಮನಸ್ಸು ತಾನಾಗಿಯೆ ಹೆದರಿ, ಕಂಗಾಲಾಗಿ, ವಿಚಿತ್ರವಾದರೂ ನಿಜವೆಂಬಂತೆ, ಭೇದಿಯಾಗಲಿ, ವಾಂತಿಯಾಗಲಿ, ಜ್ವರವೇ ಆಗಲಿ ಗಪ್‌ಚಿಪ್ ಆಗಿಬಿಡುತ್ತದೆ. ಮಕ್ಕಳಿಗೆ ಏನಾದರೂ ಕಾಯಿಲೆ ವಿಪರೀತವಾದಲ್ಲಿ, "ಡಾಕ್ಟ್ರು ಮಾವ ಚುಚ್ಚುತ್ತಾರೆ; ಆಮೇಲೆ ಕಾಲು ಬೇಗ ನಡೆಯಲಿಕ್ಕಾಗುವುದಿಲ್ಲ; ಹಟ ಮಾಡಿದರೆ ನಾಲ್ಕು ಕಡೆ ಚುಚ್ಚುತ್ತಾರೆ," ಎಂಬಿತ್ಯಾದಿ ಭಯದ ನುಡಿಗಳನ್ನಾಡಿ ಅವರ ಚಲನವಲನವನ್ನೇ ಬೇಕಾಬಿಟ್ಟಿಯಾಗಿ ತಿನ್ನುವ ದುಶ್ಚಟವನ್ನೇ ನಿಯಂತ್ರಿಸುವಲ್ಲಿ ನಾವು ಸಫಲರಾಗುತ್ತೇವೆ. ೨-೩ ದಿನಗಳಲ್ಲಿಯೂ ಕಾಹಿಲೆ ಉಪಶಮನಗೊಳ್ಳದಿದ್ದಾಗ ನಿಮ್ಮ ಬಳಿ ಬಂದೇ ಬರುತ್ತೇವಲ್ಲ; ಆಗ ಒಂದೇ ಹೊತ್ತಿನ ಮದ್ದು ಸೇವಿಸಿದರೂ ಸಾಕು, ನಮಗೆಲ್ಲ ವಾಸಿಯಾಗುತ್ತೆ ಕಾಯಿಲೆ. ಆ ಧೈರ್ಯ ನಮಗಿದೆ ಸಾರ್..." ಎಂಬುದಾಗಿ. ಇಲ್ಲಿ ಮನಸ್ಸಿಗೆ ಕೊಡುವ ಆಲೋಚನೆಯ ವೈಪರಿಯ ವ್ಯತ್ಯಾಸದಿಂದಾಗಿ ವೈದ್ಯನ ಮನೆಯಲ್ಲಿ ಚಿಕಿತ್ಸೆಗಾಗಿ ಖರ್ಚು ಹೆಚ್ಚಾಗುತ್ತದೆ. ನೆರೆಮನೆಯಲ್ಲಿ ಅತಿ ಕಡಿಮೆಯಾಗುತ್ತದೆ. ಮನಸ್ಸು ತಾನು ಪಡೆಯುವ ಅನುಭವಕ್ಕೆ ಕ್ಕನುಗುಣವಾಗಿ ದೇಹದ ಆಂತರಿಕ ನ್ಯೂನತೆಯನ್ನು ಬದಲಿಸಬಲ್ಲುದು 'ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ವೈದ್ಯನ ಮನೆಯವರು ಸಾಮಾನ್ಯ ರೋಗವು ಘೋರ ರೋಗವಾಗಿ ಪರಿವರ್ತನೆಗೊಂಡೀತೆಂಬ ಭೀತಿಯನ್ನೇ ಮನಸ್ಸಿಗೇ ಪದೇ ಪದೇ ತಂದುಕೊಂಡು ಚಿಕಿತ್ಸೆಗೆ ಮುಂದಾದರೆ, ನೆರೆಮನೆಯವರು ವೈದ್ಯರ ಬಳಿ ಹೋದರೆ ಅವರು ಚುಚ್ಚುತ್ತಾರೆ ಎಂಬ ಕೇವಲ ಇಂಜೆಕ್ಷನ್ ಭೀತಿಯನ್ನೇ ಮನಸ್ಸಿಗೆ ಪದೇ ಪದೇ ತಂದುಕೊಂಡು ಚಿಕಿತ್ಸೆಯಿಲ್ಲದೇ ರೋಗವನ್ನು ವಾಸಿಮಾಡಿಕೊಳ್ಳುತ್ತಾರೆ. ರೋಗಿಯು ರೋಗವನ್ನು ದಮಿಸುವಲ್ಲಿ ಹೊರಗಿನ ಧೈರ್ಯಕ್ಕಿಂತಲೂ ಆಂತರಿಕ ಧೈರ್ಯದ ಬೆಳವಣಿಗೆ ಬಹುಮುಖ್ಯವೆಂದು ಇದರಿಂದ ತಿಳಿದುಬರುತ್ತದೆ. ಮನಸ್ಸನ್ನು ಪ್ರೇರೇಪಿಸುವಂಥ ಉತ್ತಮ ಸೂಚನೆಗಳ ಅಭ್ಯಾಸದಿಂದ ಎಣಿಕೆಗೂ ಮಿಗಿಲಾದ ಫಲಿತಾಂಶ ಸುಲಭ ಸಾಧ್ಯ !

## ಮೊದಲ ನುಡಿ

ಸುಧಾಕರ ನನ್ನ ಬಾಲ್ಯ ಸ್ನೇಹಿತ. ಮಹಾ ಮುಂಗೋಪಿ. ಅಹಂಕಾರ, ಮಮಕಾರಗಳ ತವರು. ಕಲಿಯುವುದರಲ್ಲಿ ಶತಮಂದ. ಅಧ್ಯಾಪಕರಿಗೇ ಗದರಿಸುವವನು. ತನಗೆ ಶಿಕ್ಷೆ ಕೊಟ್ಟ ಅಧ್ಯಾಪಕರಿಗೆ ತರಗತಿಯಲ್ಲೇ ಧಿಕ್ಕಾರ ಹಾಕುತ್ತಿದ್ದ. ಕೇವಲ ೧೫ ವರ್ಷದಲ್ಲಿ ತಂದೆಯೊಡನೆ ಜಗಳವಾಡಿಕೊಂಡು ತನ್ನದಾದ ಪಾಲನ್ನು ಕಿತ್ತುಕೊಂಡು ಮನೆಯ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ವಾಸಿಸತೊಡಗಿದ. ಶುದ್ಧ ನಾಸ್ತಿಕನಾದ ಆತ ಸಮಾಜದ ಸುಧಾರಣೆಯ ಸೂತ್ರಧಾರ ತಾನೆಂಬ ಒಣಜಂಭದಿಂದ 'ಸುಧಾರಕ' ಎಂದೇ ಹೆಸರನ್ನು ಬದಲಿಸಿಕೊಂಡನು. ಕಷ್ಟಪಟ್ಟು ಪದವೀ ಪರೀಕ್ಷೆ ಪಾಸಾದ ಮೇಲೆ ಹೈಸ್ಕೂಲು ಅಧ್ಯಾಪಕನಾಗಿ ತನ್ನ ಶಿಷ್ಯೆಯನ್ನೇ ಪ್ರೇಮಿಸಿ ಮದುವೆಯಾದ. ಅದು ಅತಿ ಸರಳ ವಿವಾಹ. ಅದಕ್ಕೆ ಅಡ್ಡ ಬಂದವರಿಗೆಲ್ಲ

ಧಿಕ್ಕಾರದ ಸುರಿಮಳೆಯನ್ನೇ ಹಾಕಿದ. ಒಂದೇ ವರ್ಷದಲ್ಲಿ ಹುಟ್ಟಿದ ಹೆಣ್ಣು ಶಿಶುವಿಗೆ ಅಶ್ವಿನಿ ಎಂದು ಹೆಸರಿಟ್ಟ. ಮನೆಯಲ್ಲಿ ತಂದೆ ತಾಯಿ ಯಾವಾಗಲೂ ಹೇಳುವ ಧಿಕ್ಕಾರ, ಧಿಕ್ಕಾರ ಎಂಬ ಅರ್ಭಟ ಕೇಳಿ ಅಭ್ಯಾಸವಾಗಿ ಹೋದ ಆ ಮಗು ತನ್ನ ತೊದಲು ನುಡಿಯಲ್ಲಿ ಹೇಳಿದ ಮೊದಲ ಶಬ್ದವೇ "ಧಿಕ್ಕಾರ" ಎಂದು ! ಮಗುವಿಗೆ ಒಂದು ವರ್ಷ ದಾಟಿದ ಮೇಲೆ ಅದು "ಅಮ್ಮನಿಗೆ ಧಿಕ್ಕಾರ," "ಅಪ್ಪನಿಗೆ ಧಿಕ್ಕಾರ" ಎಂದು ಹೇಳಿಕೊಂಡು ಕೇಕೇ ಹಾಕಿ ಕುಣಿಯುತ್ತಿತ್ತು. "ನಿನ್ನ ಹೆಸರೇನೇ?" ಎಂದು ಯಾರಾದರೂ ಕೇಳಿದರೆ ಆಕೆ, "ನಿನಗೆ ಧಿಕ್ಕಾರ" ಎನ್ನುತ್ತಿದ್ದಳು ಥಟ್ಟನೆ! ಒಮ್ಮೆ ಬಿಸಿ ಕಾಫಿ ಮೈಮೇಲೆ ಬಿದ್ದು ಕೈ ಸುಟ್ಟುಕೊಂಡಾಗ, "ಕಾಫಿಗೆ ಧಿಕ್ಕಾರ" ಎಂದು ಕೂಗತೊಡಗಿದಳು. ಅಪ್ಪನ ಚಪ್ಪಲಿಯನ್ನು ತನ್ನ ಕಾಲಿಗೆ ಹಾಕಿಕೊಂಡು ನಡೆಯಲೆತ್ನಿಸಿ ಎಡವಿ ಬಿದ್ದಾಗ, "ಚಪ್ಪಲಿಗೆ ಧಿಕ್ಕಾರ" ಎನ್ನುತ್ತಿದ್ದಳು. ಬಾಲವಾಡಿಗೆ ಹೋದಾಗ ತುಂಬ ಚೇಷ್ಟೆ ಮಾಡಿದಾಗ ಬಾಲವಾಡಿಯ ಮಿಸ್ ಹೊಡೆದಾಗ, "ಮಿಸ್‌ಗೆ ಧಿಕ್ಕಾರ", "ಶಾಲೆಗೆ ಧಿಕ್ಕಾರ" ಎಂದೂ ಕೂಗಾಡಿದಳು. ಎಲ್ಲ ಮಕ್ಕಳಿಗೆ ಕನ್ನಡ ವರ್ಣಮಾಲೆಯ ಅ, ಆ, ಅಕ್ಷರಗಳಿಂದ ಕಲಿಸತೊಡಗಿದರೆ, ಈಕೆ ಎಲ್ಲರಿಗೂ ಧಿಕ್ಕಾರದ ಶಬ್ದವನ್ನೇ ಹೇಳಿಕೊಡಬೇಕೆಂದು ಹಟ ಮಾಡುತ್ತಿದ್ದಳು. ಕೇವಲ ನಾಲ್ಕು ವರ್ಷ ಪ್ರಾಯದ ಮಗಳನ್ನು ಹತೋಟಿಯಲ್ಲಿಡುವದು ಅಧ್ಯಾಪಕನಾದ ತಂದೆಗೆ ಸಾಧ್ಯವಾಗುತ್ತಿರಲಿಲ್ಲ! ತಂದೆಯ ಒರಟು ಸ್ವಭಾವ ನೋಡಿ, ಮಗುವಿನ ಮುಗ್ಧ ಮನಸ್ಸು ಪಡೆದ ಅಭ್ಯಾಸವೇ ಈ ರೀತಿಯಲ್ಲಿ ಆಭಾಸವನ್ನುಂಟುಮಾಡಿತ್ತು.

## ಅನುಕರಣೆ

ಮೈಸೂರು, ಬೆಂಗಳೂರು ನಗರಗಳಲ್ಲಿ ಹಸು ಕರೆಯುವಾತ ಕರುವಿನ ಡಮ್ಮಿ (ಕರುವಿನ ಚರ್ಮದ ಒಳಗೆ ಹುಲ್ಲು ತುಂಬಿ ಮಾಡಿದ ಕರುವಿನ ಪ್ರತಿರೂಪ) ಯನ್ನು ಎದುರಿಗೆ ಇಟ್ಟುಕೊಂಡು ಹಾಲನ್ನು ಕರೆಯುವ ರೂಢಿಯಿದೆ. ಆ ಹಸು ತನ್ನ ಕಂದ ಜೀವಂತವಾಗಿದೆ ಎಂಬ ಭ್ರಮೆಯಿಂದ ಅದನ್ನು ನೆಕ್ಕಿ, ಮುದ್ದಿಸುತ್ತ ಹಾಲನ್ನಿಳಿಸುತ್ತಿರುತ್ತದೆ. ಅಲ್ಲಿ ಹಸುವಿಗೆ ಕರು ಎದುರಿಗಿದ್ದ ಅನುಭವವಾಗಿ, ಆ ಅಭ್ಯಾಸದಿಂದ ಅದು ಹಾಲನ್ನಿಳಿಸುತ್ತದೆ. ಆದರೆ ವಾಸ್ತವವಾಗಿ ಅದು ಜೀವಂತ ಕರು ಅಲ್ಲ; ಮುಗ್ಧ ಹಸುವಿಗೆ ಈ ಸತ್ಯವೇನು ಗೊತ್ತು ಪಾಪ? ಪ್ರಾಣಿಗಳಲ್ಲಿ ಮಾತ್ರವೇ ಅಲ್ಲ ಇಂಥ ಉದಾಹರಣೆಗಳು. ಸ್ತನ್ಯಪಾನ ನಿಲ್ಲಿಸಿದ ತಾಯಿ ಮೊದಮೊದಲಿಗೆ ದನದ ಹಾಲನ್ನು ಬಾಟ್ಲಿಗೆ ಹಾಕಿ ನಿಪ್ಪಲಿನ ಮೂಲಕ ಮಗುವಿಗೆ ಕೊಟ್ಟಾಗ ಶೇಕಡಾ ೭೫ರಷ್ಟು ಮಕ್ಕಳು ಅದನ್ನು ಸಲೀಸಾಗಿ ಕುಡಿದರೆ, ಉಳಿದವಕ್ಕೆ 'ನಿಪ್ಪಲ್' ತುಟಿಗೆ ತಗುಲಿದಾಗ ಅದು ಕೃತಕ ಎಂಬ ಅನುಭವ ಬಂದು ಬಿಕ್ಕಿ ಬಿಕ್ಕಿ ಅಳುತ್ತವೆ. ಆಗ ಮಗುವನ್ನು ಎತ್ತಿಕೊಂಡು ಬಾಟ್ಲಿಯನ್ನು ಎದೆಯಲ್ಲಿರಿಸಿಕೊಂಡು ಕೊಡಲಾರಂಭಿಸಿದರೆ, ಸಲೀಸಾಗಿ ಕುಡಿಯುತ್ತವೆ. ನಿಪ್ಪಲ್ ಕೃತಕ ಎಂಬ ಅನುಭವದಿಂದ ಅಳುವ ಮಗುವಿಗೆ, ಮೊಲೆಯ ಸ್ಥಾನದಲ್ಲಿರಿಸಿದ ಬಾಟ್ಲಿ ಅದೇ ನಿಪ್ಪಲನ್ನು ಹೊಂದಿದ್ದರೂ ಆಗ ಕೃತಕತೆಯ ಅರಿವಿರುವುದಿಲ್ಲ. ಹೀಗೆ, ಅಭ್ಯಾಸದ ಹಿಡಿತ ಅದೆಷ್ಟು ಭದ್ರ ಎಂಬುದನ್ನು ನೀವೇ ಊಹಿಸಿಕೊಳ್ಳಿ.

## ಆಸಕ್ತಿಯಿಂದ ಅಭ್ಯಾಸ ಮಾಡಿಸಿ

ಯಾವೊಂದು ಕೆಲಸದಲ್ಲಿ ಆಸಕ್ತಿ ಹುಟ್ಟಿಸಿದಲ್ಲಿ ಕೆಲಸ ಮಾಡುವ ಅಭ್ಯಾಸ ತಾನಾಗಿಯೇ ಹುಟ್ಟುತ್ತದೆ. ಚಿಕ್ಕ ಮಕ್ಕಳಿಗೆ ಅಕ್ಷರ ಕಲಿಯುವುದೆಂದರೆ ಒಂದು ಮೋಜು ಎಂಬುದನ್ನು ಒಂದೆರಡು ವಾರದಲ್ಲಿ ತಾಳ್ಮೆಯಿಂದ ತೋರಿಸಿಕೊಟ್ಟಲ್ಲಿ, ಆ ಸಂತೋಷದಿಂದ ಸ್ಫೂರ್ತಿಯಿಂದಾಗಿ ಅವರಲ್ಲಿ ಅಕ್ಷರಾಭ್ಯಾಸ ಹಿತವೆನಿಸುತ್ತದೆ. ಒಮ್ಮೆ ಅ, ಆ, ತಿದ್ದಲು ಹೇಳಿ, ಏಕಾಗ್ರತೆಯಿಂದ ಮಗು ಅವನ್ನು ತಿದ್ದಿ ಬರೆಯಲೆತ್ನಿಸಿದಾಗ, ಅದರ ಬೆನ್ನು ತಟ್ಟಿ, "ನೀನು ಜಾಣಮರಿ, ಸರಿಯಾಗಿ ಬರೆದಿರುವೆ," "ಇನ್ನೂ ಸ್ವಲ್ಪ ದುಂಡವಾಗಿ ಬರೀಬೇಕು ಚಿನ್ನಾ..." ಎಂದು ಉತ್ಸಾಹ ತುಂಬುತ್ತಿದ್ದರೆ, ಸ್ಲೇಟು ಕಡ್ಡಿಯ ಸಹವಾಸ ಅವಕ್ಕೆ ಹಿತ ತರುತ್ತದೆ.

ಬರೆಯುವ ಆಸಕ್ತಿ ಮೊಮ್ಮುತ್ತದೆ. ಬರೆಯುವ ಅಭ್ಯಾಸ ಬಲವಾಗುತ್ತದೆ. ಮಕ್ಕಳಿಗೆ ಓದಿನಲ್ಲಿ ಓದುವ ವಿಚಾರದಲ್ಲಿ ಆಸಕ್ತಿ ಹುಟ್ಟಿಸುವ ಹೊಣೆ ಅಧ್ಯಾಪಕರದ್ದು.

## ಹಿರಿಯರ ಆದರ್ಶಕ್ಕೆ

ಮಕ್ಕಳಿಗೆ ಮುಂಜಾನೆ ಎದ್ದೊಡನೆ ಹಲ್ಲುಜ್ಜುವ, ಸ್ನಾನ ಮಾಡಿಸುವ, ಶಾಲೆಗೆ ಹೋಗುವಾಗ ಒಗೆದ ಬಟ್ಟೆ ತೊಡಿಸುವ ಅಭ್ಯಾಸಗಳನ್ನು ಚಿಕ್ಕಂದಿನಲ್ಲಿ ತಾಯಿ ಮಾಡಿಸುತ್ತಾಳೆ. ಹಿರಿಯರಿಗೆ ವಿಧೇಯತೆ ಹಾಗೂ ಗೌರವ ತೋರಿಸಿ ಅವರ ಮನನೋಯಿಸದಂತೆ ವರ್ತಿಸಲು ಕಲಿಸುವುದು ಹೆತ್ತವರ ಜವಾಬ್ದಾರಿಯೇ.

ಇಂದು ನಮ್ಮ ಯುವ ಜನಾಂಗದಲ್ಲಿ ಎದ್ದು ಕಾಣುವ ಅವಿಧೇಯತೆ, ಅಸಹಕಾರ ತತ್ವ, ಚಳವಳಿಯ ಮನೋಭಾವ, ಅಪ್ರಾಮಾಣಿಕತೆ, ಅಶಾಂತಿ ಇವೆಲ್ಲಕ್ಕೂ ಅವರ ಹಿರಿಯರ ಆದರ್ಶರಹಿತ ಜೀವನವೇ ಕಾರಣ. "ತಾಯಿಯಂತೆ ಮಗು, ನೂಲಿನಂತೆ ಸೀರೆ" ಎಂಬಂತೆ ತಾಯಿ ಮಾಡಿಸಿದ ಅಭ್ಯಾಸ ಮಗುವಿಗೆ ಬಾಳಬುತ್ತಿಯಾಗುತ್ತದೆ. ತಾಯಿ ಸರಿಯಾಗಿ ರೂಪಿಸಿದ ಮಗುವಿನ ಬಾಳು ಬಂಗಾರವಾಗುತ್ತದೆ. ನಾನು ಈ ಮೊದಲು ಹೇಳಿದ ಮಗು ಅಶ್ವಿನಿ ಬೆಳೆದುದು ಧಾರ್ಷ್ಟ್ಯದ, ಅಹಂಕಾರದ ವಾತಾವರಣದಲ್ಲಿ. ಆ ಮಗು ತನ್ನ ತಾಯಿ ತಂದೆಗೆ, "ನೀವೇ ನನ್ನ ತಾಯಿ ಮತ್ತು ತಂದೆ ಎಂಬುದನ್ನು ನಾನು ಹೇಗೆ ನಂಬಲಿ? ಏಕೆ ನಂಬಲಿ?" ಎಂಬೀ ವಿಚಿತ್ರ ಪ್ರಶ್ನೆಯನ್ನು ಆರನೇ ವರ್ಷದಲ್ಲೇ ಕೇಳುತ್ತಿತ್ತಂತೆ !


ಕೆಲವರಿಗೆ, ಇತರರಿಗೆ ಗೌರವ ಸೂಚಿಸಿ ಮಾತನಾಡುವ ಅಭ್ಯಾಸವೇ ಇಲ್ಲ. ತನ್ನ ಮುಂದೆ ಇತರರು ಕ್ಷುಲ್ಲಕ ಎಂಬ ಜಂಭದಿಂದ ವರ್ತಿಸುವುದರಲ್ಲಿ ಅಪಾರ ಸಂತೋಷ ಅಂಥವರಿಗೆ. ಅವರ ಬಾಯಲ್ಲಿ ಯಾವಾಗಲೂ ಇರುವ ಶಬ್ದಗಳಿವು– ಅಪಭ್ರಂಶ, ಪಕಣಿ, ರಾಸ್ಕಲ್, ಗೂಬೆ, ರೋಗ್, ಕೋತಿ, ಕೋಡಗ, ಮಂಗ, ಶನಿ, ಪಡು, ಕತ್ತೆ, ಬೇವರ್ಸಿ, ಲೋಫರ್...... ಇತ್ಯಾದಿ. ನಮ್ಮೂರಿನ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ರಜೆ ಅರ್ಜಿ ಕೊಡಲು ತೆರಳಿದ ಅಧ್ಯಾಪಕರಿಗೆ ಕೇಳುವ ಸಾಮಾನ್ಯ ಪ್ರಶ್ನೆ– "ನಿನ್ನೆ ಎಲ್ಲಿ ಸತ್ತಿದ್ದಿರಿ?" ಎಂಬುದಾಗಿ ! ಹಿರಿಯರ ಅನುಕರಣೆ ಮಾಡುವ ಸ್ವಭಾವ ತಮಗರಿವಿಲ್ಲದಂತೆಯೇ ಕಿರಿಯರಲ್ಲಿ ಬೆಳೆದು ಬರುತ್ತದೆ. ಮೋಸ, ಕಪಟ, ಸುಳ್ಳು, ದುಂಡುಗಾರಿಕೆ, ಕೊಲೆ, ಸುಲಿಗೆ ಮುಂತಾದ ವಾತಾವರಣದಲ್ಲಿ ಬೆಳೆದ ಮಕ್ಕಳ ಬುದ್ಧಿಯಲ್ಲಿ ಇವೇ ಗುಣ ಲಕ್ಷಣಗಳು ತುಂಬಿರುವುದು ವಿಚಿತ್ರವೇನಲ್ಲ.

ಸರಿತಾ ಶಾಲಾ ಅಧ್ಯಾಪಕಿ. ಬೆಳಿಗ್ಗೆ ಮನೆಯಿಂದ ಹೊರಟು ಶಾಲೆಗೆ ಹೋಗಿ ಸಂಜೆ ಮನೆಗೆ ಹಿಂದಿರುಗುವಳು. ಆಕೆಯ ಪತಿ ಬ್ಯಾಂಕಿನಲ್ಲಿ ಉದ್ಯೋಗಿ. ಗಂಡನಿಗೆ ತನಗಿಂತಲೂ ತನ್ನ ಅತ್ತೆಯ ಮೇಲೆ ಹೆಚ್ಚು ಪ್ರೀತಿಯಿದೆ ಎಂದು ಹಲವು ಬಾರಿ ಆಕೆಗೆ ಖಾತ್ರಿಯಾಗಿತ್ತು. ಇದರಿಂದ ಆಕೆ ತುಂಬಾ ನೊಂದಿದ್ದಳು. ಏನಾದರೂ ಮಾಡಿ ತನ್ನ ಗಂಡನ ಮನಸ್ಸನ್ನು ತನ್ನೆಡೆಗೆ ಹೆಚ್ಚು ಆಕರ್ಷಿಸಿಕೊಳ್ಳಬೇಕೆಂಬ ಛಲ ಆಕೆಯದು. ಬೆಳಿಗ್ಗೆ ಶಾಲೆಗೆ ಹೋಗುವಾಗ ತನ್ನ ಎರಡು ವರ್ಷದ ಮಗಳು ರಾಣಿಯನ್ನು ಬಳಿಗೆ ಕರೆದು, "ದೊಡ್ಡಮ್ಮ ಮನೆಗೆ ಬಂದವರ ಬಳಿ ನನ್ನ ಬಗ್ಗೆ ಏನಾದರೂ ದೂರು ಹೇಳಿದರೆ, ನನಗೇನಾದರೂ ಬೈದರೆ ಸಂಜೆ ನನಗೆ ತಿಳಿಸಬೇಕು ಮರೀ, ಜಾಣೆ ನೀನು, ದೊಡ್ಡಮ್ಮನ ಹಿಂದೆಯೇ ಯಾವಾಗಲೂ ಇರಬೇಕಮ್ಮಾ..." ಎಂದು ಹೇಳುತ್ತಿದ್ದಳು. ಮೊದಮೊದಲು ತನ್ನ ತಾಯಿ ಮನೆಯ ಗೇಟ್ ದಾಟಿ ಬರುವುದೇ ತಡ, ಓಡಿ ಹೋಗಿ ಪುಟ್ಟಮಗು ರಾಣಿ ತಾಯಿಯನ್ನಪ್ಪಿಕೊಂಡು, "ಅಮ್ಮಾ, ದೊಡ್ಡಮ್ಮ ನಿನ್ನ ಬಗ್ಗೆ ಹೀಗೆಂದರು, ಹಾಗೆಂದರು..." ಎಂದೆಲ್ಲ ಹೇಳಿಕೊಡುತ್ತಿತ್ತು. ಇದನ್ನು ಕೇಳಿ ಕಿವಿಗೆ ರಂಗಾಗುತ್ತಿದ್ದ ಸರಿತಾ ಒಂದು ವಾರದ ನಂತರ, ದೊಡ್ಡಮ್ಮ ತನ್ನನ್ನು ಇತರರೆದುರು ನಿಂದಿಸಿದ ಪ್ರತಿಯೊಂದು ಘಟನೆಯ ಬಗ್ಗೆ ಕೇಳಿದಾಗಲೂ ಒಂದೊಂದು ಚಾಕಲೇಟನ್ನು ಮಗುವಿಗೆ ಕೊಡಲಾರಂಭಿಸಿದಳು. ಹೆಚ್ಚು

ಚಾಕುಲೇಟು ಪಡೆಯುವ ಆಸೆಯಿಂದ ಮಗು ರಾಣಿ ಇಲ್ಲದ ಸಲ್ಲದ ಚಾಡಿಯನ್ನೇ ದೊಡ್ಡಮ್ಮನ ಬಗ್ಗೆ ಹೇಳಲಾರಂಭಿಸಿದಳು. ಹೀಗೆ, ಅವಳ ಚಾಡಿ ಹೇಳುವ ಪ್ರವೃತ್ತಿಯನ್ನೂ ಹಿರಿಯರಿಗೆ ಅಗೌರವ ತೋರಿಸುವ ಬುದ್ಧಿಯನ್ನೂ ತಾನೇ ಕೈಯಾರೆ ಸರಿತಾ ಬೆಳೆಸಿದಳು. ಈಗ ದಿನ ಬೆಳಗಾದರೆ ಆ ಮನೆಯಲ್ಲಿ ಅತ್ತೆ – ಸೊಸೆಯ ಗಂಡ – ಹೆಂಡತಿಯ ನಡುವೆ ಕಾದಾಟ ನಡೆಯುತ್ತಿರುತ್ತದೆ. ಪುಟಾಣಿ ರಾಣಿ ಕೂಡ ತನ್ನ ದೊಡ್ಡಮ್ಮನನ್ನು "ನೀನಿನ್ನೂ ಯಾತಕ್ಕೆ ಸಾಯೋಲ್ಲ ಅಜ್ಜಿ?" ಎಂದು ದಿನದಲ್ಲಿ ಹಲವು ಬಾರಿ ಪ್ರಶ್ನಿಸುತ್ತಾಳೆ!

## ಆತ್ಮವಿಶ್ವಾಸ

ಹೆಚ್ಚಿನ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಬಂತೆಂದರೆ ತಲೆನೋವು, ಕಣ್ಣುನೋವು, ಅತಿ ನಿದ್ರೆ, ವಾಕರಿಕೆ, ಅಜೀರ್ಣ, ಹೊಟ್ಟೆನೋವು ಇವೆಲ್ಲ ಸರ್ವೇ ಸಾಮಾನ್ಯ. ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ನನ್ನ ಬಳಿ ಚಿಕಿತ್ಸೆಗಾಗಿ ಬರುವವರಲ್ಲಿ ಶೇಕಡಾ ೬೦ ರಷ್ಟು ವಿದ್ಯಾರ್ಥಿಗಳೇ. ಓದಿನಲ್ಲಿ ಆಸಕ್ತಿ ಬೆಳೆಸಿಕೊಂಡವರಿಗೆ ಓದುವುದು ಸಂತೋಷದಾಯಕವೇ ಹೊರತು ತ್ರಾಸದಾಯಕವಾಗಲಾರದು. ಎಂಥ ಪ್ರಶ್ನೆಗೂ ಉತ್ತರಿಸಬಲ್ಲೆವೆಂಬ ಆತ್ಮವಿಶ್ವಾಸ ಅಂಥವರಲ್ಲಿ ಹುಟ್ಟೀತು. ಕಾಟಾಚಾರಕ್ಕಾಗಿ ಓದುವ ಅಭ್ಯಾಸವುಳ್ಳವರಿಗೆ ಮಾರ್ಚ್ ಪರೀಕ್ಷೆಯ ತಾರೀಖು ಪ್ರಕಟಗೊಂಡಾಗಲೇ ಎದೆಯೊಳಗೆ ಹಣ ಕಟ್ಟಲೂ ಅಂಜಿಕೆಯುಂಟಾಗಿ ಅಕ್ಟೋಬರ್ ಪರೀಕ್ಷೆಗೆ ಕುಳಿತುಕೊಳ್ಳುವ (ಹುಚ್ಚು) ಧೈರ್ಯ ತಾಳುತ್ತಾರೆ. ಪುನಃ ಸಪ್ಟೆಂಬರ್ ವೇಳೆಗೆ ಮತ್ತಷ್ಟು ಹೆದರಿ ಮುಂದಿನ ಮಾರ್ಚಿನಲ್ಲಿಯೋ ಚೆನ್ನಾಗಿ ಬರೆದು ಪರೀಕ್ಷೆ ಪಾಸು ಮಾಡುವ ಛಲವನ್ನು ಕೆಲವರು ತೊಡುತ್ತಾರೆ. ಇಂಥವರು ಸಾಮಾನ್ಯವಾಗಿ ಪರೀಕ್ಷೆ ಮುಂದೂಡಬೇಕೆಂಬ ಬೇಡಿಕೆಯೊಂದಿಗೆ



ಚಳವಳಿ ಹೂಡುತ್ತಾರೆ. ಪ್ರಶ್ನೆ ಪತ್ರಿಕೆ ಕದ್ದು ಪಡೆಯಲು ತಮ್ಮ ಬುದ್ಧಿವಂತಿಕೆಯನ್ನೆಲ್ಲ ಖರ್ಚು ಮಾಡುತ್ತಾರೆ.

## ಬೆಳೆದುಬಂದ ಅಭ್ಯಾಸ

"ಒಬ್ಬನ ಆಹಾರ ಇನ್ನೊಬ್ಬನಿಗೆ ವಿಷವಾಗ ಬಹುದು" ಎಂಬ ಆಂಗ್ಲ ಗಾದೆಯಿದೆ. ಅದೇ ರೀತಿ ಒಬ್ಬರ ಅಭ್ಯಾಸದ ಪ್ರವೃತ್ತಿ ಇನ್ನೊಬ್ಬರಿಗೆ ತೊಂದರೆಯುಂಟುಮಾಡೀತು. ಅದು ಕೆಲವೊಮ್ಮೆ ಅಸಹನೀಯವೂ ಆಗಬಹುದು. ಬಸ್ಸಿನ ಇಂಜಿನ್ ವಾಸನೆ ಕೆಲವರಿಗೆ ವಾಂತಿ ಬರಿಸಿದರೆ ಕೆಲವರಿಗೆ ಸರಿಯಾಗಿ ಜೀರ್ಣ ಉಂಟು ಮಾಡಲು ಅದರ ಸೇವನೆಯೇ ಮದ್ದಂತೆ!

ಇಬ್ಬರು ವೈದ್ಯರು ಮತ್ತು ಮೂರುಮಂದಿ ಇಂಜಿನೀಯರರನ್ನು ಮಕ್ಕಳಾಗಿ ಪಡೆದ ಫಣಿಯಮ್ಮ ೬೦ ವರ್ಷದ ಮುದುಕಿ. ದೊಡ್ಡ ಮನೆಯಲ್ಲೀಗ ಇರುವುದು ಆಕೆಯೊಬ್ಬಳೆ. ಮನೆಯ ಹತ್ತು ರೂಮುಗಳಲ್ಲಿಯೂ ಫ್ಯಾನ್ ಸೌಕರ್ಯವಿದೆ. ಆದರೂ ಸೆಖೆ ಜಾಸ್ತಿಯಾದಾಗ ನೆಲದ ಮೇಲೆ ಮಲಗಿಕೊಂಡು ಈಕೆ ದೊಡ್ಡ ಕೋಲಿನಿಂದ ಫ್ಯಾನಿನ ರೆಕ್ಕೆಯನ್ನು ಜೋರಾಗಿ ತಿರುಗಿಸುತ್ತಾ ಸ್ವಲ್ಪ ಸಮಯದಲ್ಲಿ ನಿದ್ರೆ ಹೋಗುವಳಂತೆ! ಮನೆಯಲ್ಲಿಯೇ ರೇಡಿಯೋ ಇದ್ದರೂ ಚಿತ್ರಗೀತೆಗಳನ್ನು ಕೇಳಬೇಕೆನಿಸಿದಾಗ ಪಕ್ಕದ ಮನೆಗೆ ಹೋಗಿ ಕೇಳುವಳಂತೆ! ಈ ರೀತಿ ಏಕೆ? ಎಂದು ಕೇಳಲು ಆಕೆ ನೀಡುವ ಉತ್ತರವಿದು:-

"ಮಕ್ಕಳು ಹಣ ಕಳಿಸುತ್ತಾರೆಂದು ದುಂದು ವೆಚ್ಚ ಮಾಡಬೇಕೆ ಸಾರ್? ಚಿಕ್ಕಂದಿನಿಂದ ಗಂಜಿ ತಿಳಿ ಕುಡಿದು ಬೆಳೆದವಳು ನಾನು. ದುಡ್ಡಿನ ಬೆಲೆ ನನಗೆ ಗೊತ್ತಿದ್ದಷ್ಟು ಯಾರಿಗೂ ತಿಳಿದಿಲ್ಲ. ಕರೆಂಟ್ ಬಿಲ್ ಹೆಚ್ಚಾಗಬಾರದು ಎಂದು ಫ್ಯಾನ್ ಹಾಗೂ ರೇಡಿಯೋ ನಾನೆಂದಿಗೂ ಉಪಯೋಗಿಸಿದ್ದಿಲ್ಲ. ಮೊದಲೆಲ್ಲ ಇವಿಲ್ಲದೆ ನಾವು ಬದುಕಲಿಲ್ಲವೆ? ಅಚ್ಚುಕಟ್ಟುತನದ ಸ್ವಭಾವ ನನ್ನ ರಕ್ತದಲ್ಲೇ ಬೆಳೆದು ಬಂದಿದೆ. ಮಕ್ಕಳಿಗೆ ಬೇಸರವಾಗಬಾರದೆಂದು ಫ್ಯಾನನ್ನು ಕೈಯಿಂದಲೇ ತಿರುಗಿಸಿಕೊಳ್ಳುತ್ತಿದ್ದೇನಷ್ಟೇ. ನನ್ನ ಮಕ್ಕಳೊಡನೆ ಮಾತ್ರ ಹೀಗೆಂದು ಹೇಳಬೇಡಿ ಸಾರ್. ಅವರಿಗೆ ಈ ಮುದಿಪ್ರಾಣಿಯನ್ನು ಬೈಯುವುದೊಂದೇ ಗೊತ್ತಿರುವದು. ಒಂಟಿ ಬಾಳಿಗೆ ನೆಮ್ಮದಿ ಬೇಕೆನ್ನುವ ಯೋಚನೆ ಅವರಿಗಿಲ್ಲ. ಅದು ಅವರ ತಪ್ಪಲ್ಲ. ಅವರ ಹೆಂಡಂದಿರು ಅವರ ಕಿವಿಯೂದಿ ನೀಡಿದ ಅಭ್ಯಾಸದ ಫಲವಿದು!..." ಎಂದು.

## ಪುನರ್ವಿಮರ್ಶೆ

ಹಸುಗೂಸು ಅಳುವಾಗ ಅದಕ್ಕೆ ತಾಯಿ ನೀಡುವ ಎದೆಹಾಲಿಗಿಂತ ಹೆಚ್ಚಿಗೆ ಸುಖ ಕೊಡುವುದು ತಾಯಿಯ ಎದೆಯಪ್ಪುಗೆ ಎಂದು ತಿಳಿದು ಬಂದಿದೆ. ಬಾಟ್ಲಿಯಲ್ಲಿ ಆಯಾಳ ಮೂಲಕ ಮಗುವಿಗೆ ಹಾಲುಣಿಸುವ ತಾಯಂದಿರು ಗಮನಿಸಬೇಕಾದ ಮುಖ್ಯ ವಿಚಾರವಿದು. ಆದರೆ ಅಳುವ ಮಗು ಕುಡಿದೊಡನೆ ಸುಮ್ಮನಿರುತ್ತದೆಂಬುದು ಈ ತನಕ ತಿಳಿದ ಸಾಮಾನ್ಯ ವಿಷಯ. ಆದರೆ ಕುಡಿಯುವ ಹಾಲಿಗಿಂತಲೂ ತಾಯಿಯ ಅಪ್ಪುಗೆ ಅದಕ್ಕೆ ಹೆಚ್ಚು ಹಿತಕಾರಿ ಎಂದು ತಿಳಿದಾಗ ಬಾಟ್ಲಿಯ ಹಾಲು ಕೊಡಿಸುವ ಅಭ್ಯಾಸಕ್ಕೆ ಅವಸರ ಸರ್ವಥಾ ಸಲ್ಲದು.

ಇದೇ ರೀತಿ ನಾವು ಮಾಡಿಕೊಂಡ ಅಭ್ಯಾಸದ ಪುನರ್ವಿಮರ್ಶೆ ಮಾಡುವ ತಾಳ್ಮೆ, ಸಮಾಧಾನ ಹಾಗೂ ಏಕಾಗ್ರತೆ ನಮ್ಮಲ್ಲಿದ್ದಲ್ಲಿ, ನಮ್ಮ ಬೇಸರ, ದುಃಖ, ನೋವು, ಕೋಪಗಳಿಗೆಲ್ಲ ನಮ್ಮ ಎಷ್ಟೋ ಅಭ್ಯಾಸಗಳೇ ಮುಖ್ಯ ಕಾರಣವೆಂಬ ಕಹಿ ಸತ್ಯದ ಅರಿವು ನಮಗಾಗದೆ ಇಲ್ಲ. ಪರರ ದೂಷಣೆ ಮಾಡಿ ತೃಪ್ತಿ ಹೊಂದುವ ಅಭ್ಯಾಸನಿರತ ಮಾನವನು ತುಸು ಅಂತರ್ಮುಖಿಯಾಗಿ ಯೋಚಿಸಿ, ಸ್ವಂತ ವಿಮರ್ಶೆಯಿಂದ ತನ್ನ ವರ್ತನೆಯನ್ನು ತಿದ್ದಿಕೊಂಡಲ್ಲಿ, ಸಂತೃಪ್ತ ಬಾಳ್ವೆಯಿಂದ ಆದರ್ಶ ಜೀವನ ನಡೆಸುವುದು ಎಂದೆಂದಿಗೂ ಕಷ್ಟವಾಗಲಾರದು.




# ಹೊಸ ಅಧಿಕ ಶಕ್ತಿಶಾಲಿ
# ಸುಪರ್ 777 ಡಿಟರ್ಜೆಂಟ್ ಬಾರ್

## ಉತ್ತಮಿಕೆಯ ಬಗ್ಗೆ ಬರಿಯ ಹೇಳಿಕೆಯಷ್ಟೇ ಅಲ್ಲ, ಹೇಳಿಕೆಯು ಸರಿಯಾಗಿರುವುದರ ವಾಗ್ದಾನವನ್ನೂ ಮಾಡುತ್ತದೆ.

ಈಗ ಹೊಸ ಸುಪರ್ 777 ಡಿಟರ್ಜೆಂಟ್ ಬಾರ್‌ನಿಂದ ನನಗೆ ಎಲ್ಲಕ್ಕಿಂತ ಅಧಿಕ ಬಿಳುಪು ಸಿಗುತ್ತದೆ. ಇದರ ಡಿಟರ್ಜೆಂಟ್ ಫಾರ್ಮುಲಾ ಮೊದಲಿಗಿಂತ ಹೆಚ್ಚು ಒಳ್ಳೆಯದಿದೆ. ಆದ್ದರಿಂದಲೇ ಇದು ಮೊದಲಿಗಿಂತ ಹೆಚ್ಚು ನೊರೆ ಕೊಡುತ್ತದೆ. ಹೆಚ್ಚು ಬಟ್ಟೆಗಳನ್ನು ಒಗೆಯುತ್ತದೆ ಮತ್ತು ಹೆಚ್ಚು ಸಮಯ ಬರುತ್ತದೆ. ಆದ್ದರಿಂದಲೇ ಇದು ಇತರ ಎಲ್ಲಾ ಡಿಟರ್ಜೆಂಟ್ ಬಾರ್ ಮತ್ತು ಸಾಬೂನುಗಳಿಗಿಂತ ಉತ್ತಮವಾಗಿದೆ!

ಉಪಯೋಗಿಸಿ ನೋಡಿರಿ....ನೀವೂ ನಿಮ್ಮ ಕಣ್ಣುಗಳನ್ನು ನಂಬಲಾರಿರಿ, ಪ್ರತಿ ಸಲವೂ ಇದನ್ನೆ ಕೊಳ್ಳುವಿರಿ.

Shilpi DM 2/83 Kan.

# ಐವತ್ತು ತುಂಬಿದ ಮನೋಹರ ಗ್ರಂಥಮಾಲೆ

ಶ್ರೀನಿವಾಸ ವಾಡಪ್ಪಿ

“ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?” – ಬೇಂದ್ರೆ, ಆರು ದಶಕಗಳ ಹಿಂದೆ ರಾಷ್ಟ್ರೀಯ ಜಾಗೃತಿ ಕರ್ನಾಟಕವನ್ನು ಅದೇ ಆವರಿಸತೊಡಗಿದ್ದಂತೆ ಬರೆದ ಈ ಸಾಲು ಆದರ್ಶದ ಕನಸುಗಳನ್ನು ಕಾಣುತ್ತಿದ್ದ ಅಂದಿನ ಯುವಕರ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿರುವಂತೆಯೆ ಆಧುನಿಕ ಕನ್ನಡದ ನವೋದಯ ಸಾಹಿತ್ಯದ ಜೀವಾಳವನ್ನೇ ಹಿಡಿದಿಟ್ಟಂತಿದೆ.

ಅದೇ ತಾಯ ಗರ್ಭದಿಂದ ಹೊರಬರಲು ಹವಣಿಸುತ್ತಿದ್ದ ಹೊಸಗನ್ನಡ ಬೇಂದ್ರೆ ಮತ್ತು ಅವರ ಹತ್ತಾರು ಗೆಳೆಯರಲ್ಲಿ ಮೂರ್ತೀಭವಿಸಿ ಮೈದಳೆಯಿತು. ಗೆಳೆಯರ ಗುಂಪು ಉತ್ತರ ಕರ್ನಾಟಕದ ಸಾಂಸ್ಕೃತಿಕ ಜೀವನದಲ್ಲಿ ಹೊಸ ಅಲೆಗಳನ್ನೆಬ್ಬಿಸಿ ‘ಸ್ವಧರ್ಮ’, ‘ಜಯ ಕರ್ನಾಟಕ’ಗಳ ಮೂಲಕ ಕನ್ನಡ ನುಡಿಯ ಆಳ ಅಗಲಗಳನ್ನೆಲ್ಲ ವ್ಯಾಪಿಸಿತು. ಹಲವು ವರ್ಷ ಕಾಲ ‘ಸ್ವಧರ್ಮ’, ‘ಜಯ ಕರ್ನಾಟಕ’, ‘ಜಯ ಕರ್ನಾಟಕ ಗ್ರಂಥಮಾಲೆ’, ‘ಜಯ ಕರ್ನಾಟಕ ಮುದ್ರಣಾಲಯ’ಗಳನ್ನು ನಡೆಸಿ, ನಾಡಹಬ್ಬವನ್ನು ಪ್ರಾರಂಭಿಸಿ ಕನ್ನಡಕ್ಕೆ ಚೈತನ್ಯದ ಉಗಮಸ್ಥಾನದಂತೆ ಕೆಲಸ ಮಾಡಿದ ಗುಂಪು ಆಕಸ್ಮಿಕವಾಗಿ ಒಡೆದುಹೋಯಿತು. ಆ ಆಘಾತದಿಂದ ಗಾಸಿಗೊಂಡಿದ್ದ ಗೆಳೆಯರಲ್ಲಿ ಗುಂಪಿನ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಬಯಕೆ ಉಳಿದಿತ್ತು. ಶಂ. ಬಾ. ಜೋಶಿಯವರ ಪ್ರೇರಣೆಯಿಂದ ಪ್ರಹ್ಲಾದ ನರೇಗಲ್, ಗೋವಿಂದ ಚುಳಕಿ, ಕೃಷ್ಣಶರ್ಮ ಬೆಟಗೇರಿ ಈ ಮೂವರು ೧೯೩೩ರ ಅಗಸ್ಟ್ ೧೫ರಂದು

ಆನಂದಕಂದರ 'ಸುದರ್ಶನ' ಎಂಬ ಕಾದಂಬರಿಯ ಪ್ರಕಟನೆಯೊಂದಿಗೆ ನೂತನ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿಬಿಟ್ಟರು. ಅದಕ್ಕೆ 'ಮನೋಹರ ಗ್ರಂಥಮಾಲೆ' ಎಂದು ಹೆಸರಿಟ್ಟವರೂ ಆನಂದಕಂದರೇ. ಜಿ. ಬಿ. ಜೋಶಿ ಇವರಿಗೆ ಸಹಾಯಕರಾಗಿ ನಿಂತರು.

ಮುರಿದು ಹೋದ ಗುಂಪನ್ನು ಬೇರೊಂದು ರೀತಿಯಲ್ಲಿ ಪುನರ್ನಿರ್ಮಿಸುವುದೇ ಗ್ರಂಥಮಾಲೆಯ ಉದ್ದೇಶವಾಗಿತ್ತು. ಅಲ್ಲದೇ ಅಖಿಲ ಕರ್ನಾಟಕದ ಸಾಹಿತಿಗಳಿಗಾಗಿ ಒಂದು ಸಾಮಾನ್ಯ ಮಾನ ವಿಶ್ರಾಮಸ್ಥಾನವನ್ನು ಕಲ್ಪಿಸುವ ಉದ್ದೇಶವೂ ಸಂಸ್ಥಾಪಕರದಾಗಿತ್ತು. ಆದರೆ ವರ್ಷ ಪೂರ್ತಿ ಮುಗಿಯುವ ಮುನ್ನವೇ ಸಂಸ್ಥಾಪಕರಲ್ಲೊಬ್ಬರಾಗಿದ್ದ ಪ್ರಹ್ಲಾದ ನರೇಗಲ್ ಬೇರೆ ಕೆಲಸಕ್ಕೆ ಸೇರಿಕೊಂಡರು. ಶಂ. ಬಾ. ಜೋಶಿಯವರು ಎಂದಿನಂತೆ ಸಲಹೆಗಾರರಾಗಿಯೇ ಉಳಿದರು. ಅದರಿಂದಾಗಿ ಮಾಲೆಯ ಹೊಣೆ ಬೆಟಗೇರಿ ಕೃಷ್ಣಶರ್ಮ, ಚುಳಕಿ ಗೋವಿಂದರಾಯರು ಹಾಗೂ ಜಿ. ಬಿ. ಜೋಶಿಯವರ ಮೇಲೆಯೇ ಬಿತ್ತು. ವರ್ಷದ ಆರು ಪುಸ್ತಕಗಳು ಹೊರ ಬಂದವು. ಆದರೆ ಒಂದು ವರ್ಷದ ಅನುಭವದಲ್ಲಿ ಮೂವರ ಭಾರವನ್ನು ತೂಗಿಸಿಕೊಂಡು ಹೋಗಬಲ್ಲ ಸಾಮರ್ಥ್ಯ ಮಾಲೆಗಿಲ್ಲವೆಂಬುದನ್ನು ಮನಗಂಡು ಗೆಳೆಯರು ಚಿಂತೆಗೀಡಾದರು. ಆದರೆ ಇದೀಗ ಪ್ರಾರಂಭವಾದ ಮಾಲೆಯನ್ನು ಈ ಕಾರಣಕ್ಕಾಗಿ ಮುಚ್ಚುವುದು ವಾಚಕರ ದೃಷ್ಟಿಯಿಂದ ಅನ್ಯಾಯವೆನಿಸಿದ್ದರಿಂದ ಮೂವರೂ ಸೇರಿ ಕೂಲಂಕಷ ವಿಚಾರ ಮಾಡಿ ಜಿ. ಬಿ. ಜೋಶಿಯವರೊಬ್ಬರಿಗೇ ಅದನ್ನು ವಹಿಸಿಕೊಡುವ ನಿರ್ಣಯ ಕೈಕೊಂಡರು. ಅದು ಕೆಲಕಾಲ ಚುಳಕಿಯವರ ಸಹಾಯ ದೊರೆಯುತ್ತಲೇ ನಡೆದರೂ ಮುಂದೆ ಜಿ. ಬಿ. ಒಬ್ಬರೇ ಆದರು.

ಅಂದಿನಿಂದ ಇಂದಿನವರೆಗೂ ಮನೋಹರ ಗ್ರಂಥಮಾಲೆ ವರ್ಷಕ್ಕೆ ಆರು ಪುಸ್ತಕಗಳನ್ನು ಓದುಗರಿಗೆ ನೀಡುವ ತನ್ನ ಉದ್ದೇಶವನ್ನು ಉಳಿಸಿಕೊಂಡೇ ಬಂದಿದೆ. ಸುಮಾರು ಎರಡು ಸಾವಿರದಷ್ಟು ಚಂದಾದಾರರನ್ನು ಪಡೆದುದರಿಂದ ಆ ಮಟ್ಟಿಗೆ ತನ್ನ ಪ್ರಕಟನೆಗಳ ಪ್ರಸಾರಕ್ಕಾಗಿ



'ಮಾಲೆ'ಯ ಸೂತ್ರಧಾರ ಜಿ. ಬಿ. ಯವರು

ಬಿಡಿ ಓದುಗರ ಮೇಲೆ ಅವಲಂಬಿಸಬೇಕಾದ ಪ್ರಮೇಯ ಮಾಲೆಗಿಲ್ಲ. ಆರ್ಥಿಕ ದೃಷ್ಟಿಯಿಂ-ದಲೂ ಈ ಒಂದು ಅಂಶ ಮಾಲೆಯನ್ನು ಎತ್ತಿ ಹಿಡಿದಿದೆ.

ಆಧುನಿಕ ಕರ್ನಾಟಕದಲ್ಲಿ ಅನೇಕ ಗ್ರಂಥ ಮಾಲೆಗಳು ಹುಟ್ಟಿವೆ; ಕೆಲವೊಂದು ಅಲ್ಪಾಯು ಷಿಯಾಗಿ ಕಣ್ಮುಚ್ಚಿದರೆ ಇನ್ನು ಹಲವು ಒಂದು ಕಾಲಕ್ಕೆ ಕೀರ್ತಿಯ ತುತ್ತತುದಿಯನ್ನೇರಿ ಮತ್ತೆ ಕುಸಿದಿವೆ. ಆದರೆ ಐವತ್ತು ವರ್ಷಗಳಷ್ಟು ಕಾಲ ಬದುಕಿರುವುದು ಮಾತ್ರವಲ್ಲ, ತನ್ನ ಗ್ರಂಥ ಈ ಮಾಲೆಯಲ್ಲಿ ಬಂದರೆ ತನಗೆ ಸಾಹಿತ್ಯ ಲೋಕ ದಲ್ಲಿ ಮನ್ನಣೆ ದೊರೆತಂತೆ ಎಂದು ಇನ್ನೂ ಕನ್ನಡ ಲೇಖಕರು ಭಾವಿಸುವಷ್ಟು ಮಟ್ಟದ ಪ್ರತಿಷ್ಠೆಯನ್ನು ಮಾಲೆ ಇಂದಿಗೂ ಉಳಿಸಿ ಕೊಂಡಿದೆ. ಮಾಲೆ ಹಲವು ಪ್ರಥಮಗಳನ್ನು ಸಾಧಿಸಿದೆ. ಅದು ಪ್ರಕಟಿಸಿದ 'ನವಿಲುಗರಿ' ಕನ್ನಡದ ಪ್ರಪ್ರಥಮ ಸಣ್ಣ ಕತೆಗಳ ಸಂಗ್ರಹ, 'ಕೋಲ್ಮಿಂಚು' ಪ್ರಥಮ ಏಕಾಂತಗಳ ಸಂಗ್ರಹ 'ಸುಳುವು ಹೊಳವು' ಮೊಟ್ಟಮೊದಲ ಹರಟೆಗಳ ಸಂಕಲನ. ೧೯೪೮ರಲ್ಲಿ ಕನ್ನಡದಲ್ಲೇ ಪ್ರಪ್ರಥಮ ಕಾದಂಬರೀ ಸ್ಪರ್ಧೆಯನ್ನು ಈ ಮಾಲೆ ಏರ್ಪಡಿಸಿತು. ೧೯೫೭ರಲ್ಲಿ ಅನೇಕ ಲೇಖ-ಕರು ಸೇರಿ ಬರೆದ ಕಾದಂಬರಿ 'ಖೋ' ಒಂದು ಅಪೂರ್ವ ಪ್ರಯೋಗ. ಇದೆಲ್ಲಕ್ಕೂ ಕಳಸವಿಡು ವಂತೆ ತನ್ನ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಮಾಲೆ ಮೂರು ಸಂಪುಟಗಳಲ್ಲಿ ಹೊರತಂದ 'ನಡೆದು ಬಂದ ದಾರಿ' ಖಂಡಿತ ಇಂದಿನ ಕನ್ನಡ ಸಾಹಿತ್ಯ ಕ್ಕೊಂದು ಅದ್ವಿತೀಯ ಕೊಡುಗೆ. ಆಧುನಿಕ ಸಾಹಿತ್ಯದ ಹಲವಾರು ಪ್ರಕಾರಗಳನ್ನು ಐತಿಹಾ ಸಿಕ ದೃಷ್ಟಿಯಿಂದ ವಿಮರ್ಶಾತ್ಮಕ ದೃಷ್ಟಿಯಿಂದ ಅಭ್ಯಸಿಸಿ ಕೀರ್ತಿನಾಥ ಕುರ್ತಕೋಟಿಯವರು ಬರೆದ 'ಇತಿಹಾಸ ಮತ್ತು ಮನೋಧರ್ಮ' ಪ್ರಬಂಧಗಳು ವಿಮರ್ಶೆಗೆ ಖಚಿತ ಸ್ವರೂಪವನ್ನು ತಂದುಕೊಟ್ಟವು.

ಬೇಂದ್ರೆ, ಮುಗಳಿ, ಗೋಕಾಕರು ಪ್ರಾರಂಭದ ಹತ್ತಾರು ವರ್ಷಗಳ ಕಾಲ ಸಾಹಿತ್ಯ ವಿಷಯಕ ಸಲಹೆಗಾರರಾಗಿ ಮಾಲೆಗೆ ಬಹುಮೂಲ್ಯ ಸೇವೆ ಸಲ್ಲಿಸಿದ್ದಾರೆ. ಅವರ ಸ್ಥಾನವನ್ನು ಇಂದು ತುಂಬಿ ದವರು ಕೀರ್ತಿನಾಥರು.

ಕನ್ನಡದ ನವ್ಯೋದಯ ಲೇಖಕರಲ್ಲಿ ಹೆಸರಾದ ಪ್ರಾಯಶಃ ಎಲ್ಲ ಲೇಖಕರೂ ಈ ಮಾಲೆಯಿಂ ದಲೇ ಮುಂದೆ ಬಂದವರು. ಅನೇಕರ ಪ್ರಥಮ ಮುಖ್ಯ ಕೃತಿ ಬೆಳಕು ಕಂಡದ್ದು ಈ ಮಾಲೆ ಯಲ್ಲೇ. ಹಳೆಯ ತಲೆಮಾರಿನ ಪ್ರಮುಖರಾದ ಬೇಂದ್ರೆ, ಕಾರಂತ, ಅ.ನ.ಕೃ., ಶ್ರೀರಂಗ. ಮುಗಳಿ, ಗೋಕಾಕ, ರಾಶಿ, ಗೊರೂರು, ಕಸ್ತೂರಿ ಮುಂತಾದವರ ಕೃತಿಗಳೊಟ್ಟಿಗೇ ಹೊಸ ತಲೆಮಾರಿನ ಶಾಂತಿನಾಥ ದೇಸಾಯಿ, ಗಿರೀಶ ಕಾರ್ನಾಡ, ಎ. ಕೆ. ರಾಮಾನುಜನ್, ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದವರ ಕೃತಿಗಳೂ ಇಲ್ಲಿ ಅರಳಿವೆ.

ಮನೋಹರ ಗ್ರಂಥಮಾಲೆಯ ಪ್ರಕಟನೆಗಳು ಮುಖ್ಯವಾಗಿ ಲಲಿತ ಸಾಹಿತ್ಯವೇ. ಕಥೆ




“ನಂಗೆ ಇಷ್ಟೊಂದ್ ದುಡ್ಡು ಎಲ್ಲಿಂದ್ ಬರತ್ತೆ... ಅಂತ ಕೇಳಿದ್ಯಾ...?!”

ಕಾದಂಬರಿ, ನಾಟಕಗಳಲ್ಲದೆ ಹರಟೆ, ಆತ್ಮಚರಿತ್ರೆ, ನಗೆಬರಹಗಳಂತಹ ಪ್ರಕಾರಗಳೂ ಬಂದಿವೆ. ರಾಜರತ್ನಂ ಅವರ 'ಹತ್ತುವರುಷ', ಪಡುಕೋಣೆ [illegible]ರಾಯರ 'ಹುಚ್ಚು ಬೆಳದಿಂಗಳಿನ [illegible]ಗಳು', ಜಲಧರರ 'ಕುರಿಹಿಂಡು' ಇಂಥ ಅಪರೂಪದ ಕೃತಿಗಳು. ಬಿ. ಜಿ. ಎಲ್. ಸ್ವಾಮಿಯವರ 'ಕಾಲೇಜುರಂಗದಲ್ಲಿ' ಒಂದು ಅದ್ಭುತ ಗ್ರಂಥ. ಆದರೆ ಗ್ರಂಥಮಾಲೆಯು ಬರಿ ಲಲಿತ ಸಾಹಿತ್ಯಕ್ಕೆ ಮಾತ್ರ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಲಿಲ್ಲ. ಬೇಂದ್ರೆಯವರ ಗ್ರಂಥಕಾರ ಈ ಮಾಲೆಯಲ್ಲಿ ಪ್ರಕಟವಾದದ್ದು ಬಿಡಿಮುತ್ತುಗಳ ರೂಪದಲ್ಲಿ ಮಾತ್ರ. ಅದರಂತೆಯೆ ಮಾಸ್ತಿಯವರ ನಾಟಕ 'ತಿರುಪಾಣಿ' ಮತ್ತು ಶಂ. ಬಾ. ಜೋಶಿಯವರ ಪ್ರಾರಂಭದ ಕೆಲ ಕೃತಿಗಳು ಬಿಡಿಮುತ್ತುಗಳಾಗಿಯೇ ಬಂದವು.

ಬೆಳ್ಳಿ ಹಬ್ಬದ ನಂತರ 'ಮನ್ವಂತರ'ದಂತಹ ಸಾಹಿತ್ಯ ವಿಷಯದಲ್ಲಿ ಗಂಭೀರ ಚರ್ಚೆಗೆ ಮೀಸಲಾದ ಪತ್ರಿಕೆಯನ್ನು ಮಾಲೆ ನಡೆಸಿತು. 'ಜೀವನ' ಪ್ರಾರಂಭದಲ್ಲಿ ಮಾಲೆಯ ಪ್ರಕಟನೆಯಾಗಿಯೇ ಕೆಲ ವರ್ಷ ನಡೆಯಿತು.

ಜಿ.ಬಿ.ಯವರು ಸ್ವತಃ ಸಾಹಿತ್ಯ ಕ್ಷೇತ್ರದಲ್ಲಿ [illegible] ಬರಹಗಾರರು. ಅದಕ್ಕಿಂತ ಹೆಚ್ಚಾಗಿ ಅವರು ಕನಸುಗಾರರೂ ಹೌದು. 'ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು ?' ಎಂಬ ಬೇಂದ್ರೆ ಪ್ರಶ್ನೆಗೆ ಒಂದರ್ಥದಲ್ಲಿ ಜಿ. ಬಿ. ಉತ್ತರವೇ ಆಗಿದ್ದಾರೆ. ಅವರು ತಮ್ಮನ್ನೇ ಮಾಲೆಗೆ ಅರ್ಪಿಸಿಕೊಂಡಿರದಿದ್ದರೆ ಪ್ರಾಯಶಃ ಮನೋಹರ ಗ್ರಂಥಮಾಲೆ ಕೂಡ ಇತಿಹಾಸದ ಮರೆತು ಹೋದ ಭಾಗವಾಗಿಬಿಡಬಹುದಾಗಿತ್ತೇನೊ. ಆದರೆ ಮಾಲೆಯ ಸುಖ-ದುಃಖ, ಸೋಲು-ಗೆಲವುಗಳೆಲ್ಲವುಗಳಲ್ಲೂ ಜಿ. ಬಿ. ತಮ್ಮನ್ನೇ ನಿಲ್ಲಿಸಿಕೊಂಡಿರುವುದರಿಂದ ಮಾಲೆಗೆ ಆಧಾರಸ್ತಂಭವೊಂದು ದೊರೆತಂತಾಗಿದೆ.

ಸಾಹಿತ್ಯದ ದೃಷ್ಟಿಯಿಂದ ಕನ್ನಡ ನವೋದಯದ ಉಚ್ಛ್ರಾಯ ಕಾಲದಲ್ಲಿ ಮನೋಹರ ಗ್ರಂಥಮಾಲೆ ಹೊರತಂದಷ್ಟು ಉತ್ತಮ ಗುಣಮಟ್ಟದ ಕೃತಿಗಳು ಅನಂತರದಲ್ಲಿ ಬರಲಿಲ್ಲವೆಂಬ ಕೊರಗು ಓದುಗರಿಗಿದೆ. ಇತ್ತೀಚಿನ ವರ್ಷಗಳಲ್ಲಂತೂ ಒಮ್ಮೊಮ್ಮೆ ಪುಸ್ತಕಗಳು ಗುಣವಿಮರ್ಶೆಯಿಲ್ಲದೆ ಅಚ್ಚಿಗೆ ಹೋಗಿಬಿಡುತ್ತವೇನೋ ಎಂಬಂಥ ಸಂದೇಹ ಕೂಡ ಬಂದದ್ದಿದೆ.

ಅರ್ಧ ಶತಮಾನ ಪೂರೈಸಿ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಮನೋಹರ ಗ್ರಂಥಮಾಲೆ ಕನ್ನಡ ಪ್ರಕಾಶನ ಕ್ಷೇತ್ರದಲ್ಲಿ ಪ್ರತಿಷ್ಠೆಯ ದೃಷ್ಟಿಯಿಂದ ಅತ್ಯುನ್ನತ ಸ್ಥಾನದಲ್ಲಿದ್ದರೂ ಭವಿಷ್ಯದ ದೃಷ್ಟಿಯಿಂದ ನೋಡಿದಾಗ ಪೂರ್ತಿ ಸಮಾಧಾನ ನೀಡುವುದಿಲ್ಲ. ಅನುಭವವೃದ್ಧ, ಜ್ಞಾನವೃದ್ಧ ಜಿ. ಬಿ. ತಮ್ಮ ಸಾರಸ್ವತ ನಿಧಿಯ ಪ್ರಯೋಜನ ಕನ್ನಡ ಓದುಗರಿಗೆ ನಿರಂತರವಾಗಿ ದೊರೆಯುವಂತಾಗಬೇಕು. ಕನ್ನಡ ಲೇಖಕನ ಬದುಕೂ ಅರ್ಥವತ್ತಾಗಬೇಕು ಎಂಬುದಕ್ಕೇನಾದರೂ ಯೋಜನೆಗಳನ್ನು ಮಾಡಬೇಕು. ಅವರಿಂದ ಅವರ ಅಭಿಮಾನಿಗಳು ಕಾಣುತ್ತಿರುವ ಕನಸುಗಳು ನನಸಾಗಲೆಂದು ಹಾರೈಸುವುದು ಉಚಿತವಾದೀತಲ್ಲವೆ?

---

ಪ್ರಸಿದ್ಧ ಅಭಿನೇತ್ರಿ ನರ್ಗೀಸ್ ಅವರ ಮನೆಯಲ್ಲಿ ಹಿಂದೊಮ್ಮೆ ಕವಿಗಳ (ಶಾಯರ್) ಸಭೆ (ಮಹಫಿಲ್) ಸೇರಿತ್ತು.

ಆಗ ಕವಿ ಇಕ್‌ಬಾಲ್ ಜೋಶ್ ಮಲೀಹಾಬಾದಿರವರಿಗೆ ಆಟೋಗ್ರಾಫ್ ಪುಸ್ತಕವೊಂದನ್ನು ಕೊಡಲಾಯಿತು; ಅದರಲ್ಲಿ ಏನಾದರೂ ಅವರು ಬರೆಯಲಿ ಎಂಬುದು ಅದನ್ನು ಕೊಟ್ಟವರ ಉದ್ದೇಶ. ಮಲೀಹಾಬಾದಿಯವರು ಆ ಆಟೋಗ್ರಾಫ್ ಪುಸ್ತಕದ ಕೆಲ ಪುಟಗಳನ್ನು ತಿರುಗಿಸಿ ನೋಡಿ, ಅದರ ಒಂದು ಪುಟದಲ್ಲಿ,

"ಆಟೋಗ್ರಾಫ್ ಪುಸ್ತಕ ಒಂದು ಕುದುರೆಲಾಯ ಇದ್ದ ಹಾಗೆ. ಇದರಲ್ಲಿ ಕತ್ತೆ ಮತ್ತು ಕುದುರೆ ಎರಡನ್ನೂ ಒಂದೇ ಜಾಗದಲ್ಲಿ ಕಟ್ಟಹಾಕಬಹುದು," ಎಂದು ಬರೆದುಕೊಟ್ಟರು.

—ಎಸ್. ವಿಶ್ವನಾಥ

# ಕೇಂದ್ರ-ರಾಜ್ಯ ಸಂಬಂಧ

**ಪುರುಷೋತ್ತಮ ಜಾಲಿಸತ್ತಿಗಿ**

ಕಸ್ತೂರಿ ಮಾರ್ಚ್ ಸಂಚಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ಸೀತಾರಾಮ ಪಾಟೀಲರು ಬರೆದ "ಕೇಂದ್ರ ರಾಜ್ಯ ಸಂಬಂಧ" ಲೇಖನ ಸಂವಿಧಾನದ ಸೂಕ್ಷ್ಮ ಕಲ್ಪನೆ ಕೊಡುತ್ತದೆ. ಆದರೆ ಸಂವಿಧಾನದಂಥ ಮೂಲಭೂತ ಕಾನೂನಿನ ಅಂಶಗಳನ್ನು ಓದುಗರಿಗೆ ಕೊಡುವಾಗ ಸಾಕಷ್ಟು ಜಾಗ್ರತೆ ವಹಿಸಬೇಕು– ಜಾಗ್ರತೆಯೆಂದರೆ ಓದುಗರಿಗೆ ಸಾಮಾನ್ಯವಾಗಿ ಅರ್ಥವಾಗಬೇಕು. ನ್ಯಾಯವಾದಿಗಳಲ್ಲದವರಿಗೆ ಲೇಖನ ಉಪಯುಕ್ತವಾಗಿದೆ. ಹಾಗೆಂದು ಸಂಪಾದಕರಿಗೆ ಉಪನಾಳದ ಶ್ರೀ ಸಾಸನೂರರು ಬರೆದು ತಿಳಿಸಿದ್ದಾರೆ. ಆದರೆ ನ್ಯಾಯವಾದಿಗಳಿಗಾಗಲಿ ಕಾಯ್ದೆ ತಜ್ಞರಿಗಾಗಲಿ ಕನ್ನಡದಲ್ಲಿ ಸಾಕಷ್ಟು ಜ್ಞಾನವಿದ್ದರೂ ಪೂರ್ಣ ಅರ್ಥವಾಗುವುದು ಸಂಶಯಾಸ್ಪದ. ಕಾರಣ ಇಷ್ಟೆ– ಬಳಸಿದ ಪದಗಳಿಗಾಗಲಿ, ಶಬ್ದಗಳಿಗಾಗಲಿ ಅಥವಾ ಪದಪುಂಜಗಳಿಗೆ ತತ್ಸಮಾನ ಇಂಗ್ಲೀಷು ಪದಗಳನ್ನೂ ಕೊಟ್ಟಿಲ್ಲ. ಇದರಿಂದ ಸಾಕಷ್ಟು ಅಪಾರ್ಥವೂ ಆಗಬಹುದು. ಸಂಚಿಕೆಯ ೨೮ನೆಯ ಪುಟವನ್ನು ಉದಾಹರಣೆಗಾಗಿ ತೆಗೆದುಕೊಳ್ಳೋಣ– "ಯೋಜನಾ ಆಯೋಗದಂಥ ಸಂವಿಧಾನಬಾಹಿರವಾದ" ಅಧಿಕರಣ ಕುರಿತು ಪಾಟೀಲರು ಪ್ರಸ್ತಾಪಿಸಿದ್ದಾರೆ. Ultra vires of the Constitution ಸಂಧಾನ ಬಾಹಿರವೆಂದರೆ ಎಂತಲೋ, ಅಥವಾ ಸಂವಿಧಾನದಲ್ಲಿ ನಮೂದ ಇಲ್ಲದ್ದು ಎನ್ನುವ ಅರ್ಥದಲ್ಲಿ ಬಳಸಿದ್ದೋ ಎಂದು ಸ್ಪಷ್ಟವಾಗುವುದಿಲ್ಲ. ರಾಜ್ಯಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಕೇಂದ್ರಕ್ಕೆ ಬಹು ವಿಸ್ತೃತ ಸಂವಿಧಾನದತ್ತ ಅಧಿಕಾರಗಳಿವೆ ಎನ್ನುವ ಮಾತು ಒಪ್ಪತಕ್ಕದ್ದೆ. ಆದರೆ ಅವುಗಳನ್ನು ಎಂಟು ವಿಧದಲ್ಲಿ ಕೇಂದ್ರ ನಿರ್ವಹಿಸುತ್ತದೆಯೆನ್ನುವದು ಸರಿ ಕಾಣಲಿಕ್ಕಿಲ್ಲವೇನೋ. ನನ್ನ ಮಟ್ಟಿಗೆ ಹೇಳುವದಾದರೆ, ನೂರೆಂಟು ವಿಧದಲ್ಲಿ ದಿನೇ ದಿನೇ ರಾಜ್ಯಗಳಿಗಾಗಿ ಕೇಂದ್ರ ಅಧಿಕಾರ ಚಲಾಯಿಸುತ್ತಿದೆ. ಆರ್ಥಿಕ ಆಯೋಗದಂಥ ಮಹತ್ವಪೂರ್ಣ ಅಧಿಕರಣ ಪಾಟೀಲರ ನಜರಿನಿಂದ ತಪ್ಪಿಹೋಗಿದೆ. ಅನುಚ್ಛೇದ ೨೮೦ ರಂತೆ ಪ್ರತಿ ಐದು ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರ ಈ ಆಯೋಗ ನೇಮಿಸಬೇಕಾಗುತ್ತದೆ. ಅವಶ್ಯವಿದ್ದರೆ ಅದಕ್ಕೂ ಮುಂಚೆಯೇ ಮಾಡಬಹುದು. ಅದೂ ಅಲ್ಲದೇ ಕಾಯ್ದೆ ಆಯೋಗವನ್ನು ಕಾಲಕಾಲಕ್ಕೆ ಕೇಂದ್ರವೇ ನೇಮಿಸಬೇಕಾಗುತ್ತಿದೆ. ಇದರ ಪ್ರಸ್ತಾಪವನ್ನು ಕೂಡ ಪಾಟೀಲರು ಮಾಡಿಲ್ಲ. ಸಂವಿಧಾನ ಜಾರಿಗೆ ಬಂದಂದಿನಿಂದ ಕೇಂದ್ರ ಸರಕಾರ ಹಲವಾರು ಆಯೋಗಗಳನ್ನು ನೇಮಿಸಿದೆ. ಅನುಚ್ಛೇದ ೨ ಹಾಗೂ ೩ರ ಪ್ರಕಾರ ರಾಜ್ಯ ಪುನರ್ವಿಂಗಡನೆಯನ್ನು ಸಂಸತ್ತು ಮಾಡಬಹುದು. ಅದಕ್ಕೆ ಕಾರ್ಯಾಂಗವಾದ ಕೇಂದ್ರ ಸರಕಾರವೇ ಮುಂದೆ ಬರಬೇಕು. ಇಂಥ ಅಧಿಕಾರವನು ಕೇಂದ್ರ ಸರಕಾರ ಹಿಂದೆ ಚಲಾಯಿಸಿದೆ. ರಾಜ್ಯ ಪುನರ್ವಿಂಗಡನಾ ಆಯೋಗ, ಮಹಾಜನ ಆಯೋಗದಂತಹ ಹತ್ತಾರು ಆಯೋಗಗಳನ್ನು ಸಂವಿಧಾನದತ್ತ ಅಧಿಕಾರದಂತೆ ಕೇಂದ್ರ ನೇಮಿಸಿದೆ. ಕೆಲವೊಂದು ಸಲ ಆಯೋಗದ ಸಲಹೆಗಳನ್ನು ಜಾರಿ ಕೂಡ ಮಾಡಿದೆ. ಇಂಥ ಆಯೋಗಗಳು ಸಂವಿಧಾನಬಾಹಿರವಾದದ್ದೇನೂ ಅಲ್ಲ. ಇವೆಲ್ಲ ಆಯೋಗಗಳ ಮೂಲಕ ಕೇಂದ್ರ ಸರಕಾರ ಹಸ್ತಕ್ಷೇಪ ಮಾಡುತ್ತಿದೆಯೆನ್ನುವದು ಚರ್ಚಾಸ್ಪದ. ಏಕೆಂದರೆ ಯೋಜನಾ ಆಯೋಗವನ್ನೊಳಗೊಂಡು ಎಲ್ಲ ಆಯೋಗ

ಗಳು ಸಲಹಾ ಸ್ವರೂಪದವೆ ವಿನಾ ಬೇರೇನೂ ಅಲ್ಲ. ಕೇಂದ್ರ ಸರಕಾರ ಈ ಆಯೋಗಗಳ ಸಲಹೆಗಳನ್ನು ಅಮಾನ್ಯ ಮಾಡಿದರೆ ಸಂವಿಧಾನವನ್ನು ಬಹಿಷ್ಕರಿಸಿದಂತೇನೂ ಆಗುವದಿಲ್ಲ. ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಒಲವಿನ ಪ್ರಕಾರ ಸಂವಿಧಾನಬಾಹಿರವಾದದ್ದು ಯಾವುದೂ ಇಲ್ಲವೆನ್ನುವ ಆಶಯದ ಕೆಲವು ನಿರ್ಣಯಗಳು ಬಂದಿವೆ. ಈ ನಿರ್ಣಯಗಳಿಗೆ ಸಂವಿಧಾನದ ನಾಲ್ಕನೇ ಭಾಗವನ್ನು ಉದ್ಧರಿಸಲಾಗುತ್ತಿದೆ. ಭಾಗ ೪ರಲ್ಲಿ ಕೆಲವು ನಿರ್ದೇಶಕ ತತ್ವಗಳನ್ನು ಕೊಡಲಾಗಿದೆ. ಈ ನಿರ್ದೇಶಕ ತತ್ವಗಳ ಪ್ರಕಾರ ನ್ಯಾಯಾಲಯಗಳಲ್ಲಿ ಹಕ್ಕು ಸಾಧಿಸುವ ಅಧಿಕಾರ ಪ್ರಜೆಗಳಿಗೆ ಇಲ್ಲದಿದ್ದರೂ ಅವು ಮೂಲಭೂತ ತತ್ವಗಳೇ ಎನ್ನುವದನ್ನು ಅನುಚ್ಛೇದ ೩೭ರಲ್ಲಿ ಸ್ಪಷ್ಟಗೊಳಿಸಲಾಗಿದೆ. ಕಂಪನಿ ವ್ಯವಹಾರಕ್ಕೆ ಸಂಬಂಧಿಸಿದ ಅರ್ಜಿಯೊಂದರಲ್ಲಿ ಕಾರ್ಮಿಕರಿಗೆ ಸ್ಥಾನಮಾನ (Locus standi) ಇದೆಯೊ ಎನ್ನುವ ಪ್ರಶ್ನೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಉದ್ಭವಿಸಿತು. ಕಂಪನಿಯ ಶೇರುಧಾರಕರಿಗೆ ಮಾತ್ರ ಕಂಪನಿಯನ್ನು ವಿಸರ್ಜಿಸುವ ಕುರಿತು ನಿರ್ಧರಿಸುವ ಅಧಿಕಾರವಿದೆ. ಆದರೆ ಆ ಅಧಿಕಾರ – ಅಂದರೆ ಕಂಪನಿಯನ್ನು ವಿಸರ್ಜಿಸಬಾರದು ಎಂದು ವಾದಿಸುವ ಅಧಿಕಾರ ಅಥವಾ ಹಕ್ಕು – ಕಾರ್ಮಿಕರಿಗಿಲ್ಲ ಎನ್ನುವ ವಾದವನ್ನು ನ್ಯಾಯಮೂರ್ತಿ ಇ, ಎಸ್. ವೆಂಕಟರಾಮಯ್ಯನವರು ತಮ್ಮ ವಿದ್ವತ್ಪೂರ್ಣ ನಿರ್ಣಯದಲ್ಲಿ ಎತ್ತಿ ಹಿಡಿದಾದರೂ, ಬಹರುಲ್ ಇಸ್ಲಾಂ ಹಾಗೂ ಮತ್ತೊಬ್ಬ ನ್ಯಾಯಾಧೀಶರು ಸಂವಿಧಾನದ ೪೩ ಹಾಗೂ ೪೩ಎ ಅನುಚ್ಛೇದಗಳ ಪ್ರಕಾರ ಅವರಿಗೆ (ಕಾರ್ಮಿಕರಿಗೆ) ಸ್ಥಾನಮಾನವಿದೆ ಎಂದು ಬಹುಮತದ ನಿರ್ಣಯ ಕೊಟ್ಟರು.

ಇತ್ತಿತ್ತಲಾಗಿ "ಸಾರ್ವಜನಿಕ ಆಸಕ್ತಿ"ಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಯಾವದೇ ನ್ಯಾಯವಾದಿ ತನಗೆ ಸಂಬಂಧವಿಲ್ಲದಿದ್ದರೂ ಭಾಗವಹಿಸಬಹುದು ಎಂಬ ಆಶಯದ ಕೆಲವು ನಿರ್ಣಯಗಳು ಬಂದಿವೆ. ಇದರ ಕೂಲಂಕಷ ವಿವರಗಳನ್ನು ಧಾರವಾಡ ನ್ಯಾಯವಾದಿಗಳ ಮೂರನೇ ಅಖಿಲ ಕರ್ನಾಟಕ ಪರಿಷತ್ತಿನ ಸಂಸ್ಮರಣ ಸಂಚಿಕೆಯಲ್ಲಿ ನ್ಯಾಯಮೂರ್ತಿ ಸಭಾಹಿತರು ಚರ್ಚಿಸಿದ್ದಾರೆ.

ಸಂವಿದಾನ ಮೂಲಭೂತವಾದ ಕಾರಣ ಅದರಲ್ಲಿ ಎಲ್ಲವೂ ಇದೆ, ಇಲ್ಲದಿದ್ದರೆ ಏನೂ ಇಲ್ಲ ಎನ್ನುವ ವಾದವಿವಾದ ಸಂವಿಧಾನ ಜಾರಿಗೆ ಬಂದಂದಿನಿಂದ ನಡೆಯುತ್ತಿದೆ.

ಸಂಕ್ಷಿಪ್ತದಲ್ಲಿ ಹೇಳುವದಾದರೆ ಕಾರ್ಯಾಂಗ ನ್ಯಾಯಾಂಗ ಹಾಗೂ ಶಾಸಕಾಂಗದ ತಾವೇ ಮೇಲೆನ್ನುವ ಎಳೆದಾಟ ಕಾಲಕಾಲಕ್ಕೆ ಉದ್ಭವಿಸಿದೆ. ಇತ್ತೀಚಿನ ಆಂಧ್ರ ಪ್ರದೇಶದ ವಿದ್ಯಮಾನಗಳನ್ನು ನೋಡಿದರೆ ಪರಿಸ್ಥಿತಿಯ ಉಲ್ಬಣಾವಸ್ಥೆ ಜನಸಾಮಾನ್ಯಕ್ಕೂ ಅರ್ಥವಾಗಬಹುದು.

ನ್ಯಾಯಮೂರ್ತಿ ಗಜೇಂದ್ರಗಡಕರರು ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭಕ್ಕೆ ಬಂದಾಗ, ಧಾರವಾಡದ ನ್ಯಾಯವಾದಿಗಳು ಅವರನ್ನು ಸತ್ಕರಿಸಿದ್ದರು. "ಸರ್ವೋಚ್ಚ ನ್ಯಾಯಾಲಯದ" ಮೇಲೊಂದು ನ್ಯಾಯಾಲಯವಿದ್ದಲ್ಲಿ ತಮ್ಮ (ಸರ್ವೋಚ್ಚ ನ್ಯಾಯಾಲಯದ) ಶೇಕಡಾ ೮೦ ರಷ್ಟು ನಿರ್ಣಯಗಳು ಬುಡಮೇಲಾಗುತ್ತಿದ್ದವು ಎಂದು ಅವರು ಉದ್ಗರಿಸಿದ್ದರು.

ಈ ಕಾರಣಕ್ಕಾಗಿಯೇ ಏನೋ, ಬ್ರಿಟಿಷರು ನಮ್ಮಂತೆ ಇಲ್ಲವೆ ಅಮೇರಿಕದ ಸಂಯುಕ್ತ ಸಂಸ್ಥಾನಗಳಂತೆ ತಮ್ಮ ಸಂವಿಧಾನವನ್ನು ಲಿಖಿತ ರೂಪದಲ್ಲಿಡದೆ ಜಾಣತನವನ್ನೆ ಪ್ರದರ್ಶಿಸಿದ್ದಾರೆ, ಎನ್ನಬಹುದೇನೋ.

ಇಷ್ಟೊಂದು ದೊಡ್ಡ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕಾಯ್ದುಕೊಂಡ ಹೋಗುವಾಗ ಯಾರು ಯಾವ ರೀತಿಯಿಂದ ಎಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎನ್ನುವುದನ್ನು ಹೇಳುವ ಗೋಜಿಗೆ ಹೋಗದೇ ಕೇಂದ್ರವೇ ಅಧಿಕಾರ ಕೇಂದ್ರ ಎಂದು ಹೇಳುವುದೇ ಉಚಿತವೇನೋ!



ಉಚಿತ ಕೊಡುಗೆ!
ಗ್ಲುಕೋನ್-ಡಿ ಯ
ತಕ್ಷಣ ಶಕ್ತಿಯ ಜೊತೆಗೆ
ಆಕರ್ಷಕ ಸ್ಟೇನ್‌ಲೆಸ್ ಸ್ಟೀಲ್ ಚಮಚ!
ಪ್ರತಿ ದಿನ ತಕ್ಷಣ ಶಕ್ತಿ ನೀಡುವ ನಿಮ್ಮ ಮೆಚ್ಚಿನ ಪೇಯವನ್ನು ಕದಡಿ ಸಿದ್ಧಗೊಳಿಸುವುದಕ್ಕಾಗಿ ಇದೆ ಈ ಚಮಚಮಕಿಸುವ ಸ್ಟೇನ್‌ಲೆಸ್ ಸ್ಟೀಲ್ ಚಮಚ, ಗ್ಲುಕೋನ್-ಡಿ.ಯ 400 ಗ್ರಾಮ್ ಪ್ಯಾಕ್ ಕೊಂಡಾಗ ಉಚಿತ
ಉಲ್ಲಾಸ, ತಂಪು ಹಾಗೂ ಶಕ್ತಿ ನೀಡುವ ಗ್ಲುಕೋನ್-ಡಿ ವಿಟಮಿನ್ ಡಿ, ಕ್ಯಾಲ್ಸಿಯಮ್ ಹಾಗೂ ಫಾಸ್ಫರಸ್‌ಗಳಿಂದ ಸಮೃದ್ಧ.
ಹಣ್ಣುಗಳ ರಸ, ಹಾಲು, ಚಹಾ, ಕಾಫಿ, ನೀರು- ಯಾವುದೇ ಪೇಯಕ್ಕೆ ಸೇರಿಸಿರಿ. ಅಥವಾ ಅದೊಂದನ್ನೆ ತೆಗೆದುಕೊಳ್ಳಿರಿ, ಆದರೆ ಕದಡಲು ಗ್ಲುಕೋನ್-ಡಿ.ಯ ವಿಶೇಷ ಕಾಣಿಕೆಯ ಚಮಚ ಉಪಯೋಗಿಸಿರಿ.
Glucon-D
Glucose D
FREE
Glucon-D
400 ಗ್ರಾಮ್‌ನ ಪ್ಯಾಕ್‌ನ ಮೇಲೆ ಈ ಕೊಡುಗೆಯನ್ನು ನೋಡಿಕೊಳ್ಳಿರಿ.
ಸ್ಟಾಕು ಸೀಮಿತವಾಗಿದೆ-
ಆಯ್ದ ಮಾರುಕಟ್ಟೆಗಳಲ್ಲಿ ಮಾತ್ರ ಲಭ್ಯ
ತಕ್ಷಣ ಶಕ್ತಿಗಾಗಿ–ಗ್ಲುಕೋನ್-ಡಿ
ಉತ್ತಮ ಆರೋಗ್ಯದ ಮೂಲ ಗ್ಲಾಕ್ಸೋ

## ಮನೆಯಲ್ಲೇ ಬೆಳೆಯಬಹುದಾದ ಪೌಷ್ಟಿಕ ಆಹಾರ

# ಅಣಬೆ

**ಎಸ್. ಶ್ರೀನಿವಾಸ**

ಅಣಬೆಯ ಬೇಸಾಯ ಆರಂಭವಾಗಿದ್ದು ಫ್ರಾನ್ಸ್ ದೇಶದಲ್ಲಿ– ಸುಮಾರು ಕ್ರಿಸ್ತಶಕ ೧೬೫೦ ರಲ್ಲಿ. ಕಲ್ಲಂಗಡಿ, ಕರಬೂಜ ಬೇಸಾಯಗಾರರು, ಬೆಳೆ ತೆಗೆದ ನಂತರ ತಮ್ಮ ತೋಟಗಳಲ್ಲಿ ಹಳೆಯ ಗೊಬ್ಬರದ ಮೇಲೆ, ಅಣಬೆಯನ್ನು ತೊಳೆದ ನೀರನ್ನು ಚೆಲ್ಲಿದಾಗ ಕಾಲಾಂತರದಲ್ಲಿ ಅಲ್ಲಿ ಸಮೃದ್ಧಿಯಾಗಿ ಅಣಬೆಯು ಬೆಳೆಯುವುದೆಂಬ ಅಂಶವು ಬೆಳಕಿಗೆ ಬಂದಿತು. ಈ ಅಂಶದ ಲಾಭವನ್ನು ಪಡೆದ ಕಲ್ಲಂಗಡಿ ಬೆಳೆಗಾರರು ಅಣಬೆಯನ್ನು ಲಾಭದಾಯಕ ಬೆಳೆಯಾಗಿ ಬೆಳೆಯಲಾರಂಭಿಸಿದರು.

ಕಾಲಾಂತರದಲ್ಲಿ ಅಣಬೆಯ ಬೇಸಾಯವು ಯೂರೋಪಿನಲ್ಲೆಲ್ಲಾ ವ್ಯಾಪಿಸಿ ಕ್ರಿಸ್ತಶಕ ೧೮೨೫ ರಲ್ಲಿ ಹಾಲೆಂಡಿಗೆ ಕಾಲಿಟ್ಟಿತು. ಆರಂಭದಲ್ಲಿ ಇದನ್ನು ಬೆಳೆಯುವುದು ಅಷ್ಟು ಸುಲಭವಾಗಿರಲಿಲ್ಲ.

ಎರಡನೆಯ ಮಹಾಯುದ್ಧದ ನಂತರವೇ ಹಾಲೆಂಡ್ ಇದನ್ನು ಲಾಭದಾಯಕ ಕೃಷಿಯಾಗಿ ಪರಿಗಣಿಸಿತು. ಕ್ರಿಸ್ತಶಕ ೧೯೫೦ರ ಸುಮಾರಿನಲ್ಲಿ ಅಣಬೆಗಾಗಿ ಹವಾ ನಿಯಂತ್ರಿತ ಮತ್ತು ಉಷ್ಣ ನಿಯಂತ್ರಿತ–ಸಸ್ಯಾಗಾರಗಳನ್ನು ಕಟ್ಟಿತು. ೧೯೫೩ರಲ್ಲಿ ಅಣಬೆ ಬೇಸಾಯಗಾರರ ಸಹಕಾರ ಸಂಘ ಹಾಗೂ ೧೯೫೭ ರಲ್ಲಿ ಅಣಬೆ ಸಂಶೋಧನಾಲಯಗಳ ಸ್ಥಾಪನೆಯಾಯಿತು. ಆದಿನಿಂದಲೂ ಆ ಸಂಸ್ಥೆ ಡಚ್ ಅಣಬೆ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಬಹಳಷ್ಟು ಯಶಸ್ವಿಯಾಗಿದೆ. ಆ ಬೆಳೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕ ಬೆಳೆಯಾಗಿದೆ. ಅಣಬೆ ವ್ಯವಸಾಯಗಾರರು ಬಹಳ ಸಂಖ್ಯೆಯಲ್ಲಿ ಅಭಿವೃದ್ಧಿ ಹೊಂದಿ ಇದನ್ನು ಲಾಭದಾಯಕವಾದ ಕೃಷಿಯನ್ನಾಗಿಸಿ ಕೊಂಡಿದ್ದಾರೆ. ೧೯೬೩ರಲ್ಲಿ ಅಣಬೆ ಪ್ರಯೋಗ ಶಾಲೆಯಲ್ಲಿ ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರ ಎಷ್ಟು ಜನಪ್ರಿಯವಾಯಿತೆಂದರೆ ೧೯೬೮ ರಲ್ಲಿ ಇದಕ್ಕೆ ತನ್ನದೇ ಆದ ಒಂದು ಸ್ಥಾನವನ್ನು ನೀಡಲಾಯಿತು. ಇಂದು ಈ ಕೇಂದ್ರದಲ್ಲಿ ಅತ್ಯಾಧುನಿಕವಾದ ಫಾರಂ ಒಂದರಲ್ಲಿ ಐವರು ಶಿಕ್ಷಕರೂ ಸೇರಿದಂತೆ ೨೦ ನೌಕರ ವರ್ಗದವರು, ಪ್ರಪಂಚದ ನಾನಾ ಭಾಗದಿಂದ ಬರುವ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಾರೆ.

ತನ್ನ ೨೫ ವರ್ಷಗಳ ಕಾರ್ಯದ ಅನುಭವದ ಪ್ರತಿಫಲವಾಗಿ, ಈ ಪ್ರಯೋಗಶಾಲೆಯು, ವೈಜ್ಞಾನಿಕ ಸಲಹೆಯನ್ನು ಪ್ರಪಂಚದಾದ್ಯಂತ

ಅಣಬೆ ಬೆಳೆಗಾರರಿಗೆ ನೀಡುತ್ತಿದೆ. ತನ್ನ ಪ್ರಯೋಗದ ಪ್ರತಿಫಲ ಮತ್ತು ಸೇವಾ ಸೌಲಭ್ಯವನ್ನು ಎಲ್ಲಾ ಅಣಬೆ ವ್ಯವಸಾಯ ಗಾರರಿಗೆ ದೊರೆಯುವಂತೆ ಮಾಡುತ್ತಿದೆ.

ಅಣಬೆಯನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿದ್ದು ಹಾಲೆಂಡು ಇಂದು ಪ್ರಪಂಚದಲ್ಲೇ ನಾಲ್ಕನೆಯ ಸ್ಥಾನವನ್ನು ಪಡೆದಿದೆ. (ಕೋಷ್ಟಕ ನೋಡಿ.)

ಪ್ರಪಂಚದ ಅಣಬೆ ಉತ್ಪಾದನೆ ಇಂದು ೧೫೦ ಕೋಟಿ ಕಿಲೋಗ್ರಾಂಗಳಷ್ಟು. ಉತ್ಪಾದಿಸುವ ದೇಶಗಳು ಇಂತಿವೆ.

| | | | |
|---|---|---|---|
| ೧ | ಅಮೆರಿಕ | ೨,೩೫,೦೦೦ | ಕಿಲೋಗ್ರಾಂ |
| ೨ | ಫ್ರಾನ್ಸ್ | ೧,೪೦,೦೦೦ | " |
| ೩ | ಚೈನಾ | ೧,೨೦,೦೦೦ | " |
| ೪ | ಹಾಲೆಂಡ್ | ೭೫,೦೦೦ | " |
| ೫ | ಇಂಗ್ಲೆಂಡ್ | ೬೫,೦೦೦ | " |

**ಹಾಲೆಂಡಿನಲ್ಲಿ ಇಂದು**

| ವರ್ಷ | ಬೆಳೆಗಾರರ ಸಂಖ್ಯೆ | ವಾರ್ಷಿಕ ಉತ್ಪಾದನೆ ಟನ್ನುಗಳಲ್ಲಿ |
|---|---|---|
| ೧೯೬೦ | ೫೨೦ | ೩,೦೦೦ |
| ೧೯೬೫ | ೯೦೦ | ೧೩,೦೦೦ |
| ೧೯೭೦ | ೧,೦೫೦ | ೩೦,೦೦೦ |
| ೧೯೭೫ | ೧,೦೦೫ | ೩೮,೦೦೦ |
| ೧೯೮೦ | ೮೨೩ | ೬೦,೦೦೦ |
| ೧೯೮೧ | ೮೦೩ | ೭೦,೦೦೦ |
| ೧೯೮೨ | ೮೧೧ | ೭೮,೦೦೦ |

## ಬೇಕಾದ ಪೌಷ್ಟಿಕ ಮಾಧ್ಯಮ

ಅಣಬೆ ಶಿಲೀಂಧ್ರ, ಎಂದರೆ ಬೂಷ್ಟು ಜಾತಿಗೆ ಸೇರಿದ ಸಸ್ಯವರ್ಗ. ಇದರಲ್ಲಿ ಹರಿತ್‌ರಂಜಕ ಇರುವುದಿಲ್ಲ. ಆದ್ದರಿಂದ ಸೂರ್ಯನ ಬೆಳಕನ್ನು ಉಪಯೋಗಿಸಿ ಸ್ವಂತ ಆಹಾರವನ್ನು ಸೃಷ್ಟಿಸಿಕೊಳ್ಳಲಾರದು. ಇದು ಕೊಳೆತ ಜೈವಿಕ (ಆರ್ಗನಿಕ್) ಪದಾರ್ಥದಿಂದ ಬೆಳೆಯುವ ಸಸ್ಯ. ಆದ್ದರಿಂದ ಇದು ತನ್ನ ಪೌಷ್ಟಿಕಾಂಶವನ್ನು ಕೊಳೆತ ಸಸ್ಯ ಜೀವಿಗಳಿಂದ ಪಡೆಯುತ್ತದೆ. ಅಣಬೆಯು ಬೇರಾವುದೇ ಸೂಕ್ಷ್ಮ ಜೀವಿಗಳು ಉಪಯೋಗಿಸಲು ಶಕ್ಯವಾಗದಂಥ ಕೋಶಾತ್ಮಕ (ಸರಂಧ್ರ) ಜೀವಕೋಶಗಳಿಂದ ಕೂಡಿದ ಮತ್ತು ಮರದಂಥ ಪದಾರ್ಥಗಳನ್ನು ಜೀರ್ಣಿಸಿಕೊಳ್ಳಬಲ್ಲದು. ಈ ರೀತಿಯ ಪದಾರ್ಥಗಳನ್ನು ಒಳಗೊಂಡ ಒಂದು ಸಂಯುಕ್ತ (ಕಾಂಪೋಸ್ಟ್) ಗೊಬ್ಬರವನ್ನು ಅಣಬೆ ಬೆಳೆಯುವುದಕ್ಕಾಗಿ ತಯಾರಿಸಬಹುದು.

ಶರ್ಕರಾಂಶಗಳಲ್ಲದೇ ಅಣಬೆಯ ಬೆಳೆಗೆ ಸಾರಜನಕದ ಅವಶ್ಯಕತೆ ಇದೆ. ಆದರೆ ಅದು ಸಾರಜನಕವನ್ನು ಸಸಾರಜನಕ ಮತ್ತು ಲಿಗ್ನಿನ್ ರೂಪದಲ್ಲಿ ಮಾತ್ರ ಬಳಸಿಕೊಳ್ಳಬಲ್ಲದು. ಕೊನೆಯದಾಗಿ, ಬೂಷ್ಟು ಶೇಕಡಾ ೮೦ ರಿಂದ ಶೇಕಡಾ ೯೦ ರಷ್ಟು ನೀರಿನ ಅಂಶವನ್ನು ಹೊಂದಿರುವುದರಿಂದ ನೀರೂ ಅವಶ್ಯಕವಾಗಿ ಇದಕ್ಕೆ ಬೇಕಾದ ಅಂಶವೇ ಆಗಿದೆ.

ಅಣಬೆಗೆ ಬೇಕಾದ ಸಂಯುಕ್ತ ಗೊಬ್ಬರವು ಭಾಗಶಃ ಕೊಳೆತಂಥ ಜೈವಿಕ ಗೊಬ್ಬರ. ಈ ಗೊಬ್ಬರ ಅಣಬೆಯ ಹುಟ್ಟಿಗೆ ಕಾರಣವಾದ ಬಿಳಿಯ ಸೂಕ್ಷ್ಮನಾಳಗಳ ತಂತುಜಾಲಗಳ ಬೆಳವಣಿಗೆ ನೀರು, ಜೈವಿಕ ಮತ್ತು ಅಜೈವಿಕ ಪೋಷಕಾಂಶಗಳನ್ನು ಒದಗಿಸುವುದರಲ್ಲಿಯೂ ಸಹಾಯಕವಾಗಿದೆ.

## ಅಣಬೆಯ ಬೆಳೆ

ಅಣಬೆ ಒಂದು ಅತ್ಯುತ್ತಮವಾದ ಶಾಕಾಹಾರ ಮತ್ತು ಇತರ ಎಲ್ಲ ಆಹಾರಗಳಿಗಿಂತ ಆಕಾರದಲ್ಲಿಯೂ ಗುಣದಲ್ಲಿಯೂ ವಿಭಿನ್ನವಾದುದು. ಈ ಬೆಳೆ ಮಾರುಕಟ್ಟೆಯಲ್ಲಿ ದುಬಾರಿಯಾದದ್ದು. ಮನೆಯಲ್ಲಿಯೇ ಬೆಳೆಯಬಹುದಾದ ಇದನ್ನು ಆಗಿಂದಾಗ್ಗೆ ಕಿತ್ತು ಉಪಯೋಗಿಸಬೇಕು. ಶೈತ್ಯೋಪಕರಣ ಯಂತ್ರದಲ್ಲಿಟ್ಟರೆ ಸುಮಾರು ೨–೩ ದಿವಸಗಳ ಕಾಲ ಕೆಡದಂತೆ ಕಾಪಾಡಬಹುದು.

ಅಣಬೆಯಲ್ಲಿ ವಿಷಯುಕ್ತವಾದದ್ದೂ ತಿನ್ನಲು ಯೋಗ್ಯವಾದದ್ದೂ ಇವೆ. ತಿನ್ನಬಹುದಾದ ಅಣಬೆಯಲ್ಲಿ ಹಲವಾರು ಜಾತಿಗಳಿವೆ. ಸಾಕಷ್ಟು ಜಾತಿಗಳನ್ನು ಹವಾನಿಯಂತ್ರಿತ ಕೊಠಡಿಗಳಲ್ಲಿ ಬೆಳೆಯಬೇಕಾಗಿದೆ ಮತ್ತು ಇದಕ್ಕೆ ತಗಲುವ ವೆಚ್ಚ ಹೆಚ್ಚು. ಆದರೆ ಮನೆಯಲ್ಲಿಯೇ ಹೆಚ್ಚು ವೆಚ್ಚವಿಲ್ಲದೆ ಲಾಭದಾಯಕವಾಗಿ ಬೆಳೆಯಬಲ್ಲ ಅಣಬೆಯ ಒಂದು ಜಾತಿಯೆಂದರೆ "ಮೃದ್ವಂಗಿ ಅಣಬೆ." ಇದನ್ನು ಬೆಳೆಯಲು ಒಂದು ಸಣ್ಣ ಕತ್ತಲೆ ಕೋಣೆ ಬೇಕು.

ಬೀಜವನ್ನು ಉತ್ಪತ್ತಿ ಮಾಡಲು ಶೈತ್ಯಾಗಾರದ ಆವಶ್ಯಕತೆಯಿದೆ. ಇವನ್ನು ವ್ಯವಸಾಯ ಇಲಾಖೆ/ತೋಟಗಾರಿಕೆ ಇಲಾಖೆ ಉತ್ಪಾದನೆಯ ವೆಚ್ಚದಲ್ಲೇ ಬೆಳೆಗಾರರಿಗೆ ಪೂರೈಸುತ್ತದೆ.

೧೪" × ೨೪" ಅಳತೆಯ ಪ್ಲಾಸ್ಟಿಕ್ ಚೀಲ ಮತ್ತು ಬತ್ತದ ಹುಲ್ಲು ಈ ಬೆಳೆಗೆ ಬೇಕಾಗುವ ಇತರ ವಸ್ತುಗಳು.

ಬೀಜವನ್ನು ತಯಾರಿಸಲು ಜೋಳದ ಕಾಳನ್ನು ನೀರಿನಲ್ಲಿ ನೆನೆಹಾಕಿ ಇದಕ್ಕೆ ಬೂಷ್ಟಿನ ಸೂಕ್ಷ್ಮ ನಾಳಗಳನ್ನು ಬೆರೆಸಿ, ಶೀಷೆಗಳಲ್ಲಿ ತುಂಬಿ ಮೂತಿಯನ್ನು ಗಾಳಿಯಾಡದಂತೆ ಬಿಗಿಯಾಗಿ ಮುಚ್ಚಿ ೮-೧೦ ದಿನಗಳು ಹವಾನಿಯಂತ್ರಿತ ಕೋಣೆಯಲ್ಲಿಡಬೇಕು. ಶೀಷೆಯ ತುಂಬಾ ಬೂಷ್ಟು ಬೆಳೆದುಕೊಂಡಾಗ ಇದನ್ನು ಉಪಯೋಗಿಸಬೇಕು.

ಬತ್ತದ ಹುಲ್ಲನು ೨-೩ ಅಂಗುಲಗಳಷ್ಟು ತುಂಡುತುಂಡಾಗಿ ಕತ್ತರಿಸಿ, ೨೪ ಘಂಟೆಗಳ ಕಾಲ ನೀರಿನಲ್ಲಿ ನೆನೆಹಾಕಬೇಕು. ಆಗ ಅದು ಕೊಳೆತು ಅಣಬೆಗೆ ಬೇಕಾದ ನಾರು ಉತ್ಪತ್ತಿಯಾಗುತ್ತದೆ.

೨೪ ಘಂಟೆಗಳ ನಂತರ ಈ ಹುಲ್ಲನ್ನು ಕುದಿಯುವ ನೀರಿನಲ್ಲಿ ಅದ್ದಿ ಸೂಕ್ಷ್ಮ ಕ್ರಿಮಿಗಳು ನಾಶವಾಗುವಂತೆ ಸಂಸ್ಕರಿಸಬೇಕು. ಪ್ಲಾಸ್ಟಿಕ್ ಚೀಲವನ್ನು ಸಹ ಸಂಸ್ಕರಿಸಬೇಕು. ಹುಲ್ಲನ್ನು ಈ ಚೀಲದಲ್ಲಿ ಮೂರು ಅಂಗುಲ ಎತ್ತರ ತುಂಬಬೇಕು. ಅದರ ಮೇಲೆ ಒಂದು ಹಿಡಿ ಸೂಕ್ಷ್ಮ ನಾಳಗಳಿಂದ ಕೂಡಿದ ಜೋಳವನ್ನು ಹರಡಬೇಕು. ಮತ್ತೆ ಮೂರು ಅಂಗುಲ ಹುಲ್ಲನ್ನು ಬಿಗಿಯಾಗಿ ತುಂಬಬೇಕು. ಮತ್ತೆ ಮೇಲೆ ಸೂಕ್ಷ್ಮನಾಳಗಳಿಂದ ಕೂಡಿದ ಜೋಳ ಹರಡಬೇಕು. ಈ ರೀತಿ ಚೀಲ ತುಂಬುವವರೆಗೆ – ಹಂತ ಹಂತದಲ್ಲೂ ಬಲವಾಗಿ ಅದುಮಿ ತುಂಬಿ ಮಾಡಬೇಕು. ನಂತರ ಚೀಲದ ಬಾಯನ್ನು ಬಿಗಿಯಾಗಿ ಕಟ್ಟಿ ಒಂದು ಕತ್ತಲೆ ಕೋಣೆಯಲ್ಲಿ ೨೦ ದಿನಗಳ ವರೆಗೆ ಇಡಬೇಕು.

ಅನಂತರ ಚೀಲವನ್ನು ಕತ್ತರಿಸಿ ಹುಲ್ಲಿನ ಕಂತೆಯನ್ನು ಹೊರ ತೆಗೆಯಬೇಕು. ಬಿಳಿಯ ಸೂಕ್ಷ್ಮನಾಳದ ಎಳೆಗಳು ಹುಲ್ಲನ್ನೆಲ್ಲಾ ಬಿಗಿಯಾಗಿ ಬಂಧಿಸಿ ಬೆಳೆದುಕೊಂಡಿರುತ್ತವೆ. ಈ ಹುಲ್ಲಿನ ರಾಶಿಯನ್ನು ಮತ್ತೆ ಕತ್ತಲೆ ಕೋಣೆಯಲ್ಲೇ ೫ ದಿನ ಇಡಬೇಕು. ಈ ೫ ದಿನಗಳೂ–ಬೇಸಿಗೆಯಲ್ಲಿ ಪ್ರತಿದಿನ ಮೂರು ಸಲ, ಮಳೆಗಾಲದಲ್ಲಿ ದಿವಸಕ್ಕೊಮ್ಮೆ ಮಾತ್ರ–ನೀರನ್ನು ಸಿಂಪಡಿಸುತ್ತಿರಬೇಕು. ಆರನೆಯ ದಿನ ಅಣಬೆಯು ಹುಲ್ಲಿನ ರಾಶಿಯ ಸುತ್ತಲು ಬೆಳೆದಿರುತ್ತದೆ. ಇದನ್ನು ತೆಗೆದ ನಂತರ ದಿನವೂ ನೀರನ್ನು ಸಿಂಪಡಿಸುತ್ತಿದ್ದರೆ ೫–೬ ದಿನಗಳಲ್ಲಿ ಮತ್ತೆ ಎರಡನೆಯ ಬೆಳೆ ತೆಗೆಯಬಹುದು. ಒಂದು ಚೀಲದಿಂದ ಸಾಧಾರಣ ೩೦೦–೪೦೦ ಗ್ರಾಂ ಅಣಬೆ ದೊರೆಯುತ್ತದೆ.

ಪ್ರತಿಯೊಬ್ಬ ಸಸ್ಯಾಹಾರಿಯೂ ಇದನ್ನು ತನ್ನ ಮನೆಯಲ್ಲೇ ಬೆಳೆದರೆ, ತಮ್ಮ ಆಹಾರದಲ್ಲಿ ಸಸಾರಜನಕದ ಅಂಶವನ್ನು ಹೆಚ್ಚಿಸಿಕೊಳ್ಳಬಹುದು. ಅಣಬೆ ಅತಿ ಹೆಚ್ಚಿನ ಪೌಷ್ಟಿಕ ಅಂಶವಿರುವ ಶಾಕಾಹಾರವಲ್ಲದೆ ಅತ್ಯಂತ ರುಚಿಯಾದ ಪದಾರ್ಥವೂ ಹೌದು.

ಕೃಪೆ: 'ಭೂವಿಕಾಸ'

# ಇಂಥ ಸ್ನಾನವೂ ಉಂಟು!

**ಎಲ್. ಎನ್. ಪ್ರಸಾದ**

"ಕೌಸಲ್ಯಾ ಸುಪ್ರಜಾ ರಾಮ......" ಎಂದು ಬೆಳಗಾಗುತ್ತಿದ್ದಂತೆಯೇ ಹಲವರಿಗೆ ಮೊದಲ ಕೆಲಸವೆಂದರೆ ಸ್ನಾನ ಮಾಡುವುದು. ಇವರು ಊಟ, ತಿಂಡಿಯನ್ನಾದರೂ ಬಿಟ್ಟಾರು, ಆದರೆ ಸ್ನಾನವನ್ನು ಬಿಡುವುದಿಲ್ಲ. ಸ್ನಾನದ ನಂತರವೇ ಉಳಿದೆಲ್ಲ ದೈನಂದಿನ ಕೆಲಸಗಳು. ಸೌಕರ್ಯಗಳ ಅಭಾವದಿಂದ ಹಲವರು ದಿನಾ ಸ್ನಾನ ಮಾಡದಿದ್ದರೂ ವಾರಕ್ಕೆ ಒಂದೆರಡು ಸಾರಿಯಾದರೂ ಮಾಡೇಮಾಡುತ್ತಾರೆ. ಒಟ್ಟಿನಲ್ಲಿ ಭಾರತೀಯರಾದ ನಮಗೆ ಸ್ನಾನವೊಂದು ಸಂಪ್ರದಾಯ.

ನಮ್ಮ ಪೂರ್ವಜರು ಸ್ನಾನಕ್ಕೆ ವಿಶೇಷವಾದ ಆದ್ಯತೆ ನೀಡಿದ್ದಾರೆ. ಸ್ನಾನದಿಂದ ದೈಹಿಕ ಮಾಲಿನ್ಯವು ತೊಳೆಯಲ್ಪಡುವುದರ ಜೊತೆಗೆ ಮನಸ್ಸಿಗೆ ನೆಮ್ಮದಿಯೂ ಉಂಟಾಗುತ್ತದೆಂಬುದು ಕೇವಲ ನಂಬಿಕೆ ಮಾತ್ರವಲ್ಲ, ನಿಜವೂ ಹೌದು.

ಭಾರತೀಯರಲ್ಲಿ ಮೈಗೂಡಿಸಿಕೊಂಡಿರುವ ಈ ಸ್ನಾನಕ್ಕೆ ಯೂರೋಪಿನಲ್ಲಿ ವಿಚಿತ್ರವಾದ ಇತಿಹಾಸವಿದೆ. ಯೂರೋಪ್ ಖಂಡದಲ್ಲಿ ಸುಮಾರು ಐದನೇ ಶತಮಾನದ ಅಂತ್ಯದವರೆಗೂ ಸ್ನಾನದ ಪದ್ಧತಿಯೇ ಬಳಕೆಗೆ ಬಂದಿರಲಿಲ್ಲವೆಂಬುದು ವಿಚಿತ್ರವಾದರೂ ಸತ್ಯವಾದ ಸಂಗತಿ. ಅಲ್ಲಿನ ಜನ ಸ್ನಾನಮಾಡುವುದು ಹುಚ್ಚರ, ಮೂರ್ಖರ, ಬುದ್ಧಿ ಇಲ್ಲದವರ ಕೆಲಸ ಎಂದು ಭಾವಿಸಿ ಅವರನ್ನು ಬಹಿರಂಗವಾಗಿಯೇ ಬಹಿಷ್ಕರಿಸುತ್ತಿದ್ದರು. ಯಾರಿಗಾದರೂ ಸ್ನಾನ ಮಾಡುವ ಆಸೆಯಾದಲ್ಲಿ ಯಾರಿಗೂ ಕಾಣದಂತೆ ಗುಟ್ಟಾಗಿ ನೀರಿನಲ್ಲಿ ಮುಳುಗಿ ಬಂದುಬಿಡುತ್ತಿದ್ದರು. ಹೀಗಾಗಿ ಎಷ್ಟೋ ಜನ ಪ್ರಸಿದ್ಧ ವ್ಯಕ್ತಿಗಳು ಕೂಡ ತಮ್ಮ ಜೀವಿತದಲ್ಲಿ ಒಮ್ಮೆಯೋ ಎರಡು ಬಾರಿಯೋ ಮಾತ್ರ ಸ್ನಾನ ಮಾಡಿದ್ದಾರೆ. ಕೆಲವರು ತಮ್ಮ ಬಾಳಿನಲ್ಲಿ ಒಮ್ಮೆಯೂ ಸ್ನಾನ ಮಾಡಿರಲಿಲ್ಲವೆಂಬುದು ಸುಳ್ಳಿನ ಸಂಗತಿಯಲ್ಲ.

ಇಂಗ್ಲಂಡಿನ ಸಮ್ರಾಟನಾಗಿದ್ದ ಆರನೆಯ ಹೆನ್ರಿ ಬಾಳಿನಲ್ಲಿ ಒಮ್ಮೆಯೂ ಸ್ನಾನ ಮಾಡಿರಲಿಲ್ಲ. ಹಾಗೆಯೇ ಯೂರೋಪಿನ ಅಪ್ರತಿಮ ಸುಂದರಿ ಮಾರ್ಗರೆಟ್ ಕೂಡ ತನ್ನ ಜೀವಿತದಲ್ಲಿ ಒಮ್ಮೆಯೂ ಸ್ನಾನ ಮಾಡಿರಲಿಲ್ಲ.

ಫ್ರಾನ್ಸಿನ ದೊರೆ ಲೂಯಿ ತನ್ನ ಜೀವಿತದಲ್ಲಿ ಒಮ್ಮೆ ಮಾತ್ರ ಸ್ನಾನ ಮಾಡಿದ್ದ. ಇದೇ ರೀತಿ ಯೂರೋಪಿನ ಸಂತ ಶ್ರೇಷ್ಠ ಪೀಟರ್ ಸಹ ತನ್ನ ಜೀಮಾನದಲ್ಲಿ ಒಮ್ಮೆ ಮಾತ್ರ ಸ್ನಾನ ಮಾಡಿದ್ದ. ಅವನಿಗೆ ಸ್ನಾನದ ಬಗ್ಗೆ ಬಹಳ ತಿರಸ್ಕಾರವಿತ್ತು.

ಸ್ನಾನದ ಇತಿಹಾಸದಲ್ಲಿ ಅರ್ಧ ಸ್ನಾನ ಮಾಡಿದ ಮಹಾನ್ ವಿಜ್ಞಾನಿಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಅವನೇ ಆರ್ಕಿಮಿಡಿಸ್. ಆತ ಸ್ನಾನದ ತೊಟ್ಟಿಗೆ ಇಳಿದ. ಆದರೆ ಅದೃಷ್ಟವಶಾತ್ ಅವನ ಅನೇಕ ವರ್ಷಗಳ ಸತತ ಪರಿಶ್ರಮದ ಫಲ ಅಂದು ಕೈಗೂಡಲು 'ಯುರೇಕಾ! ಯುರೇಕಾ' ಎಂದು ನೀರಿನಿಂದ ಹೊರ ಬಂದು ಬಿಟ್ಟ.

ಸ್ಪೇನಿನ ಇತಿಹಾಸ ಪ್ರಸಿದ್ಧ ಮಹಾರಾಣಿ ಇಸಾಬೇಲಾ ತನ್ನ ಜೀವಿತದಲ್ಲಿ ಎರಡು ಬಾರಿ ಮಾತ್ರ ಸ್ನಾನ ಮಾಡಿದ್ದಳು. ಮೊದಲ ಸ್ನಾನ ಹುಟ್ಟಿದಾಗ, ಎರಡನೆಯ ಸ್ನಾನ ಮದುವೆಯ ಸಂದರ್ಭದಲ್ಲಿ.

ಯುರೋಪಿನಲ್ಲಿ ಸ್ನಾನದ ಪದ್ಧತಿ ಎಂಟನೇ ಶತಮಾನದಲ್ಲಿ ರೂಢಿಗೆ ಬಂದಿತು. ಇದನ್ನು ಪ್ರಚಾರಕ್ಕೆ ತಂದ ಕೀರ್ತಿ ರೋಮನ್ ಚಕ್ರವರ್ತಿ ಶಾರ್ಲ್‌ಮೆನ್ನನಿಗೆ ಸೇರುತ್ತದೆ. ಈತ ಸ್ವತಃ ಸ್ನಾನಪ್ರಿಯನಾಗಿದ್ದ. ಅರಮನೆಯ ಆವರಣದಲ್ಲಿ ಅಧಿಕ ವೆಚ್ಚದಿಂದ ಸ್ನಾನದ ತೊಟ್ಟಿಗಳನ್ನು ಕಟ್ಟಿಸಿ ಅದರಲ್ಲಿ ತನ್ನ ದರಬಾರಿನವರೊಂದಿಗೆ ಗಂಟೆಗಟ್ಟಲೆ ಮೀಯುತ್ತಿದ್ದ. ರೋಂ ನಗರದಲ್ಲೆಲ್ಲ ಸಾರ್ವಜನಿಕ ಸ್ನಾನದ ತೊಟ್ಟಿಗಳನ್ನು ನಿರ್ಮಿಸಿ ಪ್ರಜೆಗಳನ್ನು ಸ್ನಾನಮಾಡುವಂತೆ ಪ್ರೋತ್ಸಾಹಿಸಿದ. ಹೀಗೆ ಪ್ರಾರಂಭವಾದ ಸ್ನಾನ ಮುಂದೆ ಯುರೋಪಿನಲ್ಲೆಲ್ಲ ಹರಡಿತು. ಮುಂದೆ ಹಲವರು ಹಲವು ವಿಧದಲ್ಲಿ ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಸ್ನಾನ ಮಾಡಲಾರಂಭಿಸಿದರು.

ಇಜಿಪ್ಟಿನ ಅದ್ವಿತೀಯ ಸುಂದರಿ ಕ್ಲಿಯೋಪಾತ್ರಳು ತನ್ನ ಸೌಂದರ್ಯ ವೃದ್ಧಿಗಾಗಿ ದಿನವೂ ಕತ್ತೆಯ ಹಾಲಿನಲ್ಲಿ ಮೀಯುತ್ತಿದ್ದಳು. ಈ ವಿಧಾನವನ್ನು ಚಕ್ರವರ್ತಿ ನೀರೋನ ಮಹಾರಾಣಿ ಪಾಂಪಿಯಾಳೂ ಪ್ಲೇಜಿಂಗ್ ಫೀಲ್ಡ್ಸ್‌ನ ಪ್ರಿಯತಮೆಯೂ ಅನುಸರಿಸುತ್ತಿದ್ದರು. ಪಾಂಪಿಯಾಳು ಸ್ನಾನಮಾಡಲು ದಿನವೂ ಐನೂರು ಕತ್ತೆಗಳು ಕರೆದ ಹಾಲನ್ನು ತೊಟ್ಟಿಗೆ ತುಂಬುತ್ತಿದ್ದರು. ಈ ವಿಧಾನವನ್ನು ಯುರೋಪಿನ ಸುಂದರಿಯರನೇಕರು ಅನುಸರಿಸುತ್ತಿದ್ದರಂತೆ.

ಸರ್ವಾಧಿಕಾರಿ ಸ್ಟಾಲಿನ್ ಸ್ನಾನದ ತೊಟ್ಟಿಗೆ ಸೋಡ ಹಾಕಿ ಗಂಟೆಗಟ್ಟಲೆ ಮೀಯುತ್ತಿದ್ದನಂತೆ.

ಕ್ರಮೇಣ ಯುರೋಪಿನ ಸುಂದರಿಯರನೇಕರಲ್ಲಿ ಸ್ನಾನದ ಬಗ್ಗೆ ಸ್ಪರ್ಧೆ ಪ್ರಾರಂಭವಾಯಿತು. ಒಬ್ಬರಿಗಿಂತ ಒಬ್ಬರು ಸುಂದರಿಯರಾಗಬೇಕೆಂಬ ಉದ್ದೇಶದಿಂದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಸ್ನಾನ ಮಾಡಲಾರಂಭಿಸಿದರು.

ಮಹಾಶೂರ ನೆಪೋಲಿಯನ್ನನ ನೆಚ್ಚಿನ ಮಡದಿ ಜೋಸೆಫಿನ್ ತನ್ನ ಸೌಂದರ್ಯ ರಕ್ಷಣೆಗಾಗಿ ದಿನವೂ ಸ್ಟ್ರಾಬೆರಿ ಹಣ್ಣನ್ನು ಮೈಗೆಲ್ಲಾ ಬಳಿದುಕೊಂಡು ತಿಕ್ಕಿ ಸ್ನಾನ ಮಾಡುತ್ತಿದ್ದಳು. ಇವಳ ಪ್ರತಿಸ್ಪರ್ಧಿ ಸ್ಪೇನಿನ ಸುಂದರಿ ಮೇರಿಯಾಡಿ ಪಾಡಿಲ ದಿನಾಲೂ ಅಧಿಕ ಬೆಲೆಯ ಮದ್ಯ ತುಂಬಿದ ತೊಟ್ಟಿಗಳಲ್ಲಿ ಸ್ನಾನ ಮಾಡುತ್ತಿದ್ದಳು. ಇವರಿಬ್ಬರಿಗಿಂತ ತಾನೇನೂ ಕಮ್ಮಿಯಲ್ಲವೆಂಬುದನ್ನು ತೋರಿಸಲು ಫ್ರಾನ್ಸಿನ ಮಹಾ ಸುಂದರಿ ಮದಾಮ್ ದ ವೈಸೆನಾಳು ಎರಡು ಹೊತ್ತು ಪನ್ನೀರು ತುಂಬಿದ ತೊಟ್ಟಿಗಳಲ್ಲಿ ಸ್ನಾನ ಮಾಡುತ್ತಿದ್ದಳು.

ಅಮೇರಿಕದ ಓರ್ವ ಚಲನಚಿತ್ರ ತಾರೆ ತನ್ನ ಚರ್ಮದ ರಕ್ಷಣೆಗಾಗಿ ದಿನವೂ ಕಾಫಿಯಲ್ಲಿ ಸ್ನಾನ ಮಾಡುತ್ತಿದ್ದಳು.

ಮಜ್ಜಿಗೆ ಸ್ನಾನವೆಂದರೆ ಐರ್ಲೆಂಡಿನ ಜನರಿಗೆ ಬಹಳ ಪ್ರೀತಿ. ಮಜ್ಜಿಗೆ ಸ್ನಾನದಿಂದ ಚರ್ಮಕ್ಕೆ ಹೊಳಪು ಬರುತ್ತದೆಂದು ಅವರ ನಂಬಿಕೆ.

ಅಮೇರಿಕದ ಲಕ್ಷಾಂತರ ಗಂಡು ಹೆಣ್ಣುಗಳು ಅರೆ ನಗ್ನರಾಗಿ ಸಮುದ್ರ ತೀರದಲ್ಲಿ 'ಸೂರ್ಯ ಸ್ನಾನ' ಮಾಡುವುದು ಹೊಸ ಸಂಗತಿಯೇನಲ್ಲ.



# ಗಣಿತ ಮತ್ತು ಅನಂತ

**ಅರವಿಂದ**

ತತ್ವಶಾಸ್ತ್ರದಂತೆ ಗಣಿತದಲ್ಲಿ ಕೂಡ ಅನಂತದ ಕಲ್ಪನೆಯು ಬಹುಕಾಲದಿಂದ ಬಳಸಲ್ಪಡುತ್ತಿದ್ದರೂ 'ಅನಂತ' ಎಂಬ ಪದದ ಸರಿಯಾದ ಅರ್ಥ ಯಾರಿಗೂ ತಿಳಿದಿರಲಿಲ್ಲ. ಆದರೆ ಇಂದಿನ ಆಧುನಿಕ ಗಣಿತವು ಅನಂತದ ಬಗೆಗೆ ಸ್ಪಷ್ಟವಾದ ವ್ಯಾಖ್ಯೆಯನ್ನು ಹೊಂದಿದೆ. ಇದನ್ನು ವಿವರಿಸುವದಕ್ಕೆ ಮೊದಲು ಅನಂತಕ್ಕೆ ಸಂಬಂಧಿಸಿದ ಹಾಗೆ ಗಣಿತದ ಚರಿತ್ರೆಯಿಂದ ಆರಿಸಿದ ಒಂದು ಸ್ವಾರಸ್ಯಕರ ಸಮಸ್ಯೆಯನ್ನು ತಿಳಿದುಕೊಳ್ಳೋಣ.

ಪ್ರಾಚೀನ ಗ್ರೀಸ್ ದೇಶದಲ್ಲಿ ಸೀನೋ ಎಂಬ ಹೆಸರಿನ ಗಣಿತಜ್ಞನೊಬ್ಬ ಇದ್ದ. ಖ್ಯಾತ ದಾರ್ಶನಿಕರಾದ ಬರ್ಟ್ರಂಡ್ ರಸ್ಸೆಲ್ಲರ ಪ್ರಕಾರ ಈತನೇ ಅನಂತದ ಬಗೆಗೆ ಚರ್ಚಿಸುವ ತತ್ವಶಾಸ್ತ್ರದ ಶಾಖೆಯ ಸ್ಥಾಪಕ. ಇವನು ಸೃಷ್ಟಿಸಿದ ವಿರೋಧಾಭಾಸವನ್ನು ಉಂಟುಮಾಡುವ ಸಮಸ್ಯೆಯೊಂದು ಹಲವು ವರುಷಗಳ ತನಕ ಬುದ್ಧಿವಂತರ ತಲೆತಿನ್ನುತ್ತಿತ್ತು. ಆ ಸಮಸ್ಯೆ ಹೀಗಿದೆ:

ಅಖಿಲಿಸ(ಗ್ರೀಕ್ ಪುರಾಣಗಳಲ್ಲಿ ಬರುವ ಒಬ್ಬ ಶೂರ)ನಿಗೂ ಆಮೆಗೂ ಓಟ ಸ್ಪರ್ಧೆ ಏರ್ಪಡುತ್ತದೆ. ಆರಂಭದಲ್ಲಿ ಆಮೆಯು ಕೊಂಚ ದೂರ ಇರುತ್ತದೆ ಎಂದು ಭಾವಿಸಿ. ಈಗ ಸೀನೋನ ವಾದದ ಪ್ರಕಾರ ಅಖಿಲಿಸನು ಎಷ್ಟೇ ವೇಗವಾಗಿ ಓಡಲಿ, ಅವನೆಂದಿಗೂ ಆಮೆಯನ್ನು ಹಿಂದೆ ಹಾಕಲಾರ. ಇದಕ್ಕೆ ಸೀನೋ ಕೊಡುವ ಕಾರಣ ಹೀಗೆ- ಆಮೆಯನ್ನು ಹಿಂದೆ ಹಾಕಬೇಕಾದರೆ ಮೊದಲಿಗೆ ಅಖಿಲಿಸನು ಆಮೆ ಇದ್ದಲ್ಲಿಗೆ ತಲುಪಬೇಕು. ಆದರೆ ಅಷ್ಟರಲ್ಲಿ ಆಮೆಯು ಸ್ವಲ್ಪ ಮುಂದೆ ಸರಿದಿರುತ್ತದೆ. ಇದೇ ವಾದವನ್ನು ಮುಂದುವರಿಸಿದರೆ ಅಖಿಲಿಸ್ ಎಂದಿಗೂ ಆಮೆಯನ್ನು ತಲುಪಲಾರ. ಎಂದ ಮೇಲೆ ಅದನ್ನು ಹಿಂದೆ ಹಾಕುವುದಂತೂ ಸಾಧ್ಯವೇ ಇಲ್ಲ! ಆದರೆ ವಾಸ್ತವದಲ್ಲಿ ಇದು ನಿಜವಲ್ಲ ಎಂದು ನಮಗೆ ಗೊತ್ತಿದೆ. ಇದರರ್ಥ ಸೀನೋನ ವಾದದಲ್ಲೇ ಎಲ್ಲೋ ದೋಷ ನುಸುಳಿಕೊಂಡಿದೆ. ಅನಂತವನ್ನು ನಾವು ಸರಿಯಾಗಿ ತಿಳಿದುಕೊಳ್ಳದಿದ್ದರೆ ಈ ದ್ವಂದ್ವವನ್ನು ಅರ್ಥಮಾಡಿಕೊಳ್ಳಲಾರೆವು. ಅನಂತಕ್ಕೆ ಗಣಿತದ ರೀತಿಯಲ್ಲಿ ಸರಿಯಾದ ಅರ್ಥ ನೀಡಿ ನಿರ್ವಚಿಸಿದ ಖ್ಯಾತಿಯು ಜರ್ಮನ್ ಗಣಿತಜ್ಞ ಜಾರ್ಜ್ ಕ್ಯಾಂಟರ್ (೧೮೪೫–೧೯೧೮) ನಿಗೆ ಸಲ್ಲುತ್ತದೆ.

ಕ್ಯಾಂಟರನು ಗಣಿತದಲ್ಲಿ ಗಣ ಸಿದ್ಧಾಂತ (Set theory) ಎಂಬ ಹೊಸ ಶಾಖೆಯು

ಸ್ಥಾಪಕ. ಕ್ರಾಂತಿಕಾರಕವಾದ ಈ ಸಿದ್ಧಾಂತದ ಆಧಾರದಲ್ಲಿ ಅವನು ಅನಂತಕ್ಕೆ ಸಮರ್ಪಕ ವ್ಯಾಖ್ಯೆ ನೀಡುವುದರಲ್ಲಿ ಯಶಸ್ವಿಯಾದನು. ಇಂದು ಶಾಲಾ ಮಟ್ಟದಲ್ಲೇ ಗಣಸಿದ್ಧಾಂತದ ಮೂಲ ಕಲ್ಪನೆಗಳನ್ನು ಕಲಿಸಲಾಗುತ್ತದೆ. ಮನುಷ್ಯನ ಅತ್ಯುನ್ನತ ಬೌದ್ಧಿಕ ವಿಜಯಗಳಲ್ಲಿ ಒಂದು ಎಂಬುದಾಗಿ ಡೇವಿಡ್ ಹಿಲ್ಬರ್ಟನು ಶ್ಲಾಘಿಸಿದ ಈ ಸಿದ್ಧಾಂತದ ಆಧಾರ ಭಾವನೆಗಳನ್ನು ಅರಿತುಕೊಳ್ಳುವುದು ಅನಂತದ ಅಧ್ಯಯನಕ್ಕೆ ಅವಶ್ಯವಾಗಿದೆ.

ವ್ಯಕ್ತವಾಗಿ ನಿರ್ವಚಿಸಲ್ಪಟ್ಟ ವಸ್ತುಗಳ ಯಾವುದೇ ಸಂಗ್ರಹವನ್ನು ಗಣ ಎನ್ನಬಹುದು. ಗಣದಲ್ಲಿ ಸೇರುವ ಈ ವಸ್ತುಗಳು ಕಾಲ್ಪನಿಕವಾಗಿರಬಹುದು ಅಥವಾ ವಾಸ್ತವಿಕವಾಗಿರಬಹುದು. ಅಲ್ಲದೆ ಅವುಗಳಿಗೆ ಸಮಾನವಾದ ಯಾವುದೇ ಗುಣ ಇರಬೇಕೆಂದಿಲ್ಲ ಇಂತಹ ವಸ್ತುಗಳನ್ನು ಗಣದ ಅಂಗ (elements)ಗಳು ಎನ್ನುತ್ತೇವೆ. ಮುಖ್ಯವಾದ ವಿಷಯವೇನೆಂದರೆ, ಒಂದು ಗಣದ ಅಂಗಗಳನ್ನೆಲ್ಲ ಗುರುತಿಸಲು ನಮಗೆ ಸಾಧ್ಯವಾಗಬೇಕು. ಉಪಗಣ (sub set) ಎಂದರೆ ಗಣದ ಒಂದು ಭಾಗ. ಉಪಗಣದ ಪ್ರತಿಯೊಂದು ಅಂಗವು ಗಣದ ಅಂಗವಾಗಿರುತ್ತದೆ.

ಗಣ ಸಿದ್ಧಾಂತದ ಇನ್ನೊಂದು ಮುಖ್ಯವಾದ ಆಶಯ ಸಮಾನಾರ್ಥಕ ಗಣಗಳದ್ದು (equivalent set). ಎರಡು ಅಥವಾ ಹೆಚ್ಚು ಗಣಗಳ ಅಂಗಗಳ ನಡುವೆ ಒಂದಕ್ಕೊಂದು ಸಂಬಂಧವನ್ನು ಸ್ಥಾಪಿಸುವುದು ಸಾಧ್ಯವಿದ್ದರೆ ಆ ಗಣಗಳು ಸಮಾನಾರ್ಥಕ ಎನಿಸುತ್ತವೆ. ಇಂತಹ ಸಮಾನಾರ್ಥಕ ಗಣಗಳ ಪ್ರತಿ ಗುಂಪಿನ ಗಣಗಳಿಗೂ ಸಮಾನವಾದ ಲಕ್ಷಣವೊಂದು ಇರಬೇಕು ಎಂದು ನಾವು ಮನಗಾಣುತ್ತೇವೆ. ಈ ಲಕ್ಷಣವೇ ಗಣಗಳ ಮೂಲಾಂಕ (cardinal number) ವನ್ನು ನಿರ್ಧರಿಸುವುದು. 'ಅ' ಎಂಬ ಗಣದ ಮೂಲಾಂಕವು 'ಆ' ಎಂಬ ಗಣದ ಮೂಲಾಂಕಕ್ಕಿಂತ ಅಧಿಕವಾಗಿರಬೇಕಾದರೆ 'ಅ' ದ ಉಪಗಣವೊಂದು 'ಆ' ಗೆ ಸಮಾನಾರ್ಥಕವಾಗಿರಬೇಕು. ಈಗ 'ಅ' ವು 'ಆ' ಗಿಂತ ದೊಡ್ಡದು ಅಥವಾ 'ಆ' ವು 'ಅ' ಗಿಂತ ಸಣ್ಣದು ಎನ್ನಬಹುದು. ಸಮಾನಾರ್ಥಕ ಗಣಗಳಿಗೆ ಒಂದು ಉದಾಹರಣೆ ಒಬ್ಬ ವ್ಯಕ್ತಿಯ ಕಾಲುಗಳ ಮತ್ತು ಕೈಗಳ ಗಣಗಳು.

ಸಮಾನಾರ್ಥಕ ಗಣಗಳ ಬಗೆಗಿನ ಸ್ವಾರಸ್ಯಕರ ಸಂಗತಿಯೇನೆಂದರೆ ಎಣಿಕೆಯ ಸಹಾಯವಿಲ್ಲದೆ ಸಂಖ್ಯೆಗಳನ್ನು ವಿವರಿಸಲು ನಮಗೆ ಸಾಧ್ಯವಾಗುವುದು. ಒಂದು ಗಣಕ್ಕೆ ಸಂಬಂಧಿಸಿದ ಸಂಖ್ಯೆ ಎಂದರೆ ಆ ಗಣಕ್ಕೆ ಸಮಾನಾರ್ಥಕವಾದ ಗಣಗಳೆಲ್ಲ ಸೇರಿದ ಗಣವೆನ್ನಬಹುದು. ಇಲ್ಲಿ ಪ್ರಾಮುಖ್ಯವಾದದ್ದೆಂದರೆ ಒಂದಕ್ಕೊಂದು ಸಂಬಂಧದ ಕಲ್ಪನೆ. ಹಿಂದೆ ಕೆಲವೆಡೆ ಕುರುಬರು ಗಣನೆಗೆ ಇದೇ ಕಲ್ಪನೆಯನ್ನು ಬಳಸುತ್ತಿದ್ದರು ಎಂದರೆ ಆಶ್ಚರ್ಯವಾಗಬಹುದು. ಕುರುಬರ ಬಳಿ ಎರಡು ಕೈಚೀಲಗಳಿರುತ್ತಿದ್ದವು. ಒಂದರಲ್ಲಿ ಕೆಲವು ಕಲ್ಲುಗಳಿರುತ್ತಿದ್ದವು. ಕುರಿಗಳನ್ನು ಒಂದೊಂದಾಗಿ ಮೇವಿಗೆ ಬಿಡುತ್ತಿದ್ದಂತೆಯೇ ಒಂದೊಂದೇ ಕಲ್ಲನ್ನು ಮತ್ತೊಂದು ಚೀಲಕ್ಕೆ ಸ್ಥಳಾಂತರಿಸುತ್ತಿದ್ದರು. ಮೇವು ಮುಗಿಸಿ ಕುರಿಗಳು ಒಂದಕ್ಕೆ ಬರುತ್ತಿದ್ದಂತೆ ಒಂದೊಂದಾಗಿ ಕಲ್ಲನ್ನು ಮೊದಲಿನ ಚೀಲಕ್ಕೆ ವಾಪಸು ಹಾಕುತ್ತಿದ್ದರು. ಕೆಲವು ಕಲ್ಲುಗಳು ಬಾಕಿಯಾದರೆ ಅಷ್ಟು ಕುರಿಗಳು ಕಾಣದಾಗಿವೆ ಎಂಬುದಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು!

ಇನ್ನು ನಾವು ಅನಂತದ ವಿವರಣೆಗೆ ಬರಬಹುದು. ಅನಂತ ಎಂಬುದು ಒಂದು ಮೂಲಾಂಕವೇ ಆಗಿದೆ. ಈ ಮೂಲಾಂಕವನ್ನು ಪ್ರತಿನಿಧಿಸುವ ಸಮಾನಾರ್ಥಕ ಗಣಗಳ ಗುಂಪುಗಳಿಗೆಲ್ಲ ಒಂದು ವೈಶಿಷ್ಟ್ಯ ಉಂಟು. ಒಂದು ಅನಂತ ಗಣಕ್ಕೆ ಸಮಾನಾರ್ಥಕವಾದ ಅದರ ಉಪಗಣವೊಂದು ಇದ್ದೇ ಇರುತ್ತದೆ. ಎಂದರೆ ಪರಿಮಿತ ರಾಶಿಗಳ ಬಗೆಗೆ ನಾವು ಸಾಮಾನ್ಯವಾಗಿ ಸ್ವೀಕರಿಸುವ ಪೂರ್ಣವು ಅದರ ಭಾಗಕ್ಕಿಂತ ದೊಡ್ಡದು ಎಂಬ ತತ್ವವು ಅನಂತ ರಾಶಿಗೆ ಹೊಂದುವುದಿಲ್ಲ. ಉದಾಹರಣೆಯಾಗಿ

ಕೆಳಗೆ ನೀಡಿದ ಎರಡು ಗಣಗಳನ್ನು ಗಮನಿಸಿ,

ಅ (೧ ೨ ೩ ೪ ...)

ಆ (೨ ೪ ೬ ೮ ...)

'ಅ'ವು ಪ್ರಾಕೃತಿಕ ಸಂಖ್ಯೆಗಳ ಗಣವಾಗಿದ್ದರೆ 'ಆ' ವು ಆ ಸಂಖ್ಯೆಗಳ ಇಮ್ಮಡಿಗಳ ಗಣವಾಗಿದೆ. 'ಆ'ವು 'ಅ' ದ ಉಪಗಣವೆಂಬುದು ಸ್ಪಷ್ಟವಿದೆ 'ಅ' ದ ಅಂಗಗಳನ್ನು 'ಆ' ದ ಅಂಗಗಳೊಂದಿಗೆ ಒಂದಕ್ಕೊಂದು ಸಂಬಂಧಿಸುವಂತೆ ಏರ್ಪಡಿಸಬಹುದು (೧ನ್ನು ೨ರೊಂದಿಗೆ ೨ನ್ನು ೪ರೊಂದಿಗೆ ಇತ್ಯಾದಿಯಾಗಿ) ಆದ್ದರಿಂದಲೇ ಪ್ರಾಕೃತಿಕ ಸಂಖ್ಯೆಗಳ ಗಣವೊಂದು ಅನಂತ ಗಣವಾಗಿದೆ ಎನ್ನಬಹುದು.

ಒಟ್ಟಿನಲ್ಲಿ ತನ್ನ ಉಪಗಣವೊಂದಕ್ಕೆ ಸಮಾನಾರ್ಥಕವಾಗಿರುವ ಗಣವೇ ಅನಂತ ಗಣ ಎಂಬುದಾಗಿ ನಾವು ನಿರ್ವಚಿಸಬಹುದು. ಆದರೆ ಇಲ್ಲಿ ಒಂದು ಪ್ರಮುಖ ವಿಚಾರವನ್ನು ನೆನಪಿಡಬೇಕು. ಅನಂತ ಗಣಗಳೆಲ್ಲ ಪರಸ್ಪರ ಸಮಾನಾರ್ಥಕ ಆಗಿರಲೇಬೇಕು ಎಂದಿಲ್ಲ. ಎಂದರೆ ಒಂದು ಅನಂತವು ಇನ್ನೊಂದಕ್ಕಿಂತ ಹೆಚ್ಚಾಗಿರುವುದು ಸಾಧ್ಯ.

ಈಗ ನಾವು ಲೇಖನದ ಆರಂಭದಲ್ಲಿ ನಿರೂಪಿಸಿದ ದ್ವಂದ್ವಕ್ಕೆ ಮರಳೋಣ. ಮೇಲಿನ ಚರ್ಚೆಯ ಆಧಾರದಲ್ಲಿ ಸೀನೋ ತಪ್ಪಿದ್ದೆಲ್ಲಿ ಎಂದು ನಾವೀಗ ತಿಳಿಯಬಹುದು. ಸೀನೋನ ವಾದವನ್ನು ನಾವು ಮುಂದೆ ಕೊಟ್ಟಂತೆ ಪುನರ್ರೂಪಿಸಿ ಕ್ರಮೀಕರಿಸಬಹುದು:

(೧) ಓಟದ ಪ್ರತಿಕ್ಷಣದಲ್ಲೂ ಅಖಿಲಿಸ್ ಮತ್ತು ಆಮೆಯ ಸ್ಥಾನಗಳ ನಡುವೆ ಒಂದಕ್ಕೊಂದು ಸಂಬಂಧ ಕಲ್ಪಿಸುವುದು ಸಾಧ್ಯವಿದೆ. ಅವು ಸಾಗಿದ ದೂರವೆಂದರೆ ಇಂತಹ ವಿವಿಧ ಸ್ಥಾನಗಳು ಸೇರಿ ಉಂಟಾಗುವಂಥ ಗಣವೇ ಆಗಿದೆ.

(೨) ಅಖಿಲಿಸನು ಆಮೆಯನ್ನು ಹಿಂದೆ ಹಾಕಬೇಕಿದ್ದರೆ ಯಾವಾಗಲಾದರೂ ಅವನು ಸಾಗಿದ ದೂರದ ಒಂದು ಭಾಗವಾಗಿ ಆಮೆ ಸಾಗಿದ ದೂರವು ಮೂಡಿಬರಬೇಕು.

(೩) ಪೂರ್ಣವು ತನ್ನ ಭಾಗಕ್ಕಿಂತ ದೊಡ್ಡದು ಎಂದರೆ ಪೂರ್ಣವು ತನ್ನ ಭಾಗದೊಂದಿಗೆ ಒಂದಕ್ಕೊಂದು ಸಂಬಂಧ ಹೊಂದಿರುವುದು ಅಸಾಧ್ಯವಾದುದರಿಂದ ಎರಡನೇಯ ಸಾಧ್ಯತೆಯು ನಿಜವಾಗುವಂತಿಲ್ಲ. ಎಂದರೆ ಅಖಿಲಿಸನು ಎಂದಿಗೂ ಆಮೆಯನ್ನು ಹಿಂದೆ ಹಾಕಲಾರನು.

ಸೀನೋ ತಪ್ಪಿದ್ದು ವಾದದ ಮೂರನೇ ಘಟ್ಟದಲ್ಲಿ. ಪೂರ್ಣವು ತನ್ನ ಭಾಗದೊಂದಿಗೆ ಒಂದಕ್ಕೊಂದು ಸಂಬಂಧ ಹೊಂದಿರುವುದು ಅಸಾಧ್ಯ ಎಂಬ ತತ್ವವು ಪರಿಮಿತ ರಾಶಿಗಳಿಗೆ ಸಂಬಂಧಿಸಿ ಮಾತ್ರ ನಿಜ ಮತ್ತು ಅಪರಿಮಿತ ಅಥವಾ ಅನಂತ ರಾಶಿಗಳಿಗಲ್ಲ ಎನ್ನುವ ಸತ್ಯ ಸೀನೋವಿಗೆ ಗೋಚರಿಸದಿದ್ದುದೇ ಅವನು ಎಡವಲು ಕಾರಣ.

ಕ್ಯಾಂಟರನು ಅನಂತವನ್ನು ನಿರ್ವಚಿಸುವ ತನಕ ಇದನ್ನು ಯಾರೂ ಗುರುತಿಸಲಿಲ್ಲ.

ಕ್ಯಾಂಟರನ ಸಿದ್ಧಾಂತವು ಸೀನೋನ ಸಮಸ್ಯೆಯದ್ದೆ ಸ್ವರೂಪದ ಅನೇಕ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಬಲ್ಲದಾಗಿದೆ. ಕ್ಯಾಂಟರನು ಅನಂತಕ್ಕೆ ಸಂಬಂಧಿಸಿದ ಹಾಗೆ ಇನ್ನೂ ಅನೇಕ ಅದ್ಭುತ ಶೋಧಗಳನ್ನು ಮಾಡಿದ್ದಾನೆ. ಆದರೆ ಅಂಥ ಧೀಮಂತನ ಬದುಕು ಕೊನೆಗೊಂಡದ್ದು ಮಾನಸಿಕ ಆಸ್ಪತ್ರೆಯಲ್ಲಿ! ಗಣಸಿದ್ಧಾಂತದ ಸುರುವಿಗೆ ಅದರಲ್ಲಿ ಕೆಲವು ವಿಸಂಗತಿಗಳನ್ನು ಇತರರು ಎತ್ತಿ ತೋರಿಸಿದ್ದು ತನ್ನ ಸೃಷ್ಟಿಯ ಬಗೆಗೆ ಅತೀವ ಮೋಹ ಹೊಂದಿದ್ದ ಕ್ಯಾಂಟರನಿಗೆ ಆಘಾತಕರವಾಯಿತು. ಆದರೆ ಅದರಿಂದ ಗಣಸಿದ್ಧಾಂತವು ಭದ್ರ ಬುನಾದಿಯ ಮೇಲೆ ನಿಂತು ತನ್ನ ಸೃಷ್ಟಿಕರ್ತನ ಹೆಸರನ್ನು ಗಣಿತ ಲೋಕದಲ್ಲಿ ಅಮರವಾಗಿಸಿದೆ. ✦


ನಿಮಗೆ ಗೆಲುವಿನ ಆಹ್ಲಾದ
Liril
Liril
ಪೂರ್ತಿಯಾಗಿ ಹೊಸತು ಲಿರಿಲ್. ಹಸಿರಿನ ತರಂಗವಿದೆ. ನಿಂಬೆಯ
ಲವಲವಿಕೆಯ ಆಹ್ಲಾದವಿದೆ. ಪುಳಕಿತಗೊಳಿಸುವ ಲಿರಿಲ್
ನಿಮ್ಮನ್ನು ಆಹ್ಲಾದಕರ ನವಚೈತನ್ಯಯುಕ್ತರನ್ನಾಗಿ ಇರಿಸುತ್ತದೆ.
ಲಿರಿಲ್
ನಿಂಬೆಯ ಲವಲವಿಕೆಯ ಉಲ್ಲಾಸಯುಕ್ತ
ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ

# ಬೇಟೆ

ಇಂದಿರಾ ಹೆಗಡೆ

ರಾಕ್ಕರುಗಾಲಿನಲ್ಲಿ ಕುಳಿತು ಮರದ ಕಟ್ಟೆಗೆ ಕೆಂಪು ಮಣ್ಣು ಮೆತ್ತುತ್ತಿದ್ದ ರವಿ ತಲೆ ಎತ್ತಿ ನೋಡಿದ. ಎದುರುಗಡೆಯಿಂದ ವಿಜಯನ್ ಕೈಯಲ್ಲಿ ಸುಣ್ಣದ ಬಾಡ್ಡಿಯನ್ನು ಹಿಡಿದು ಬರುತ್ತಿದ್ದ.

"ರವಿ, ಇವತ್ತು ಆಫೀಸರ್ಸ್ ಮೆಸ್ಸಿನಲ್ಲಿ ಪಾರ್ಟಿಯಂತೆ," ಅಂದ ವಿಜಯನ್.

ಒಮ್ಮೆಲೇ ರವಿಯ ಮುಖ ಅರಳಿತು.

"ಹೌದಾ,...!"

"ಏನೋ ಬಹಳ ಸಂತೋಷವಾಯಿತಲ್ಲ ಪಾರ್ಟಿ ಸುದ್ದಿ ಕೇಳಿ. ಅಳಿದುಳಿದ ತಿಂಡಿಯನ್ನು ತಿನ್ನುವ ಅವಕಾಶ ಸಿಗಬಹುದೇನೋ...!"

"ಥತ್! ಯಾರಿಗೆ ಬೇಕು ಅದೆಲ್ಲ?" ಎಂದ ರವಿ ಮನಸ್ಸಿಗಾದ ಸಂತಸದ ಕಾರಣವನ್ನು ಹೊರಗೆಡಹಲಿಲ್ಲ,

ಕೈಯಲ್ಲಿದ್ದ ಬಕೇಟನ್ನು ನೆಲದ ಮೇಲಿಟ್ಟು ಚಕ್ಕಂತ ಕುಳಿತ ವಿಜಯನ್,

"ನಿನಗೊಂದು ಸುದ್ದಿ ಗೊತ್ತಾ?" ಅಂದ.

ರವಿಯ ಕಣ್ಣುಗಳೇ ಏನು? ಎಂದು ಕೇಳಿದುವು.

"ಪ್ಲೆಟೂನ್ ನಂ. ೨ರಲ್ಲಿ ಒಬ್ಬಾತ ಒಬ್ಬ ಮುದುಗನ ಕೈತಿರುಚಿದನಂತೆ." ಯಾರು ಎಂದು ರವಿ ಕೇಳಲಿಲ್ಲ. ಇನ್ಯಾರು ಸಾಧ್ಯ? ಟ್ರೈನಿಂಗ್ ಕಮಾಂಡರೇ ಇರಬೇಕೆನಿಸಿತು ಆತನಿಗೆ.

ಬ್ರಿಟಿಷರ ಕಾಲದಲ್ಲಿದ್ದ ಅಧಿಕಾರಶಾಹಿ ಪ್ರವೃತ್ತಿ ಹೋಗಲು ಇನ್ನೆಷ್ಟು ಕಾಲ ಬೇಕೋ ಎನಿಸಿತಾತನಿಗೆ. ಆ ಕ್ಷಣದಲ್ಲಿ ಕೆಲವು ದಿನಗಳ ಹಿಂದೆ ನಡೆದ ಕಾರ್ಯಕ್ರಮದಲ್ಲಿ ಹಾಡಿದ ಕವ್ವಾಲಿಯ ನೆನಪೂ ಆಯಿತು.

"ಹಮ್ ತೋ ಮಾರ್ ಡಾಲಾ
ಸಭೀ ಅಫಿಸಾರೋನೇ...
ಕಭೀ ಸುಬೇದಾರನೇ...
ನಾಯಿಕ್ ಹವಲ್‌ದಾರನೇ..."

"ಏನಪ್ಪಾ ಇದು... ಸಂತಸದ ಸುದ್ದಿ ಕೇಳಿದ ಹಾಗೆ ನಗುತ್ತಾ ಇದ್ದೀಯಲ್ಲ?" ರವಿ ಒಮ್ಮೆಲೇ ಮುಖದ ಭಾವ ಬದಲಿಸಿದ.

"ಏನೋ ನೆನಸಿಕೊಂಡು ನಗು ಬಂತು. ಇವತ್ತು ಅವನಿಗೆ ಬಂದ ಕಷ್ಟ ನಮಗೂ ನಾಳೆ ಬರಬಹುದು. ನಾವೆಲ್ಲ ಒಂದೇ ದೋಣಿಯ ಪಯಣಿಗರು ತಾನೆ?"

ರವಿಯ ಮಾತು ಮುಗಿಯುವ ಮುನ್ನವೇ

ಸಿಳ್ಳಿನ ಧ್ವನಿ ಕೇಳಿಸಲು ವಿಜಯನ್ ಎದ್ದು ಅತ್ತ ಹೋದ.

× × × ×

ರವಿ ಡೈರಿಗೆ ಹೋಗಿ ಹಾಲು ಪಡೆದು ತರಕಾರಿಯವನ ಬಳಿಗೆ ಹೋಗಿ ತರಕಾರಿ ಪಡೆದು ಸೈಕಲೇರಿ ಮೇಜರ್ ಸಿಂಗ್‌ನ ಮನೆಯತ್ತ ತುಳಿದ. ಇಂದು ಮೇಜರ್‌ನ ಪತ್ನಿ ಪಾರ್ಟಿಗೆ ಹೋಗುವಳೆಂಬ ಸಂತಸದಿಂದ ಸೈಕಲನ್ನು ಜೋರಾಗಿ ತುಳಿಯಲು ಹುರುಪು ಬಂದಿತ್ತು.

'ಬ್ಯೂಟೀ ಕ್ವೀನ್' ಎಂದು ಹೆಸರು ಗಳಿಸಿದ್ದ ಸಾಯಿರಾ ಪಾಶ್ಚಾತ್ಯ ಸಂಸ್ಕೃತಿಯ ದಾಸಿ. ಮನೆಗೆ ಬಂದ ಅತಿಥಿಗಳನ್ನು 'ತನು ಮನ' ಗಳಿಂದ ಸತ್ಕರಿಸುವುದರಲ್ಲಿ ಎತ್ತಿದ ಕೈ.

ರಾಜವಂಶದ ರಾಜಕುಮಾರನ ದೇಹದಾರ್ಢ್ಯ ರವಿಯದು! ಅರ್ಧ ಚಡ್ಡಿಯನ್ನು ಧರಿಸುತ್ತಿದ್ದ ಅವನ ತೊಡೆಗಳು ಯೌವನವನ್ನು ಹೊರಸೂಸುತ್ತಿದ್ದವು. ಇವನೆದೆಯ ಅಂದಕ್ಕೆ ಇವನು ಧರಿಸುತ್ತಿದ್ದ ಬನಿಯನ್ ಇನ್ನೂ ಮೆರಗು ಕೊಡುತ್ತಿತ್ತು. ಕತ್ತಿನ ಜಾಗದಲ್ಲಿ ದಟ್ಟವಾಗಿ ಬೆಳೆದಿದ್ದ ಕರಿಯ ಕೂದಲು ಇವನ ಗಂಡಸುತನದ ಪ್ರತೀಕದಂತಿತ್ತು. ಹಾಲಿನ ಮೈಬಣ್ಣ. ಅಗಲವಾದ ಮುಖದಲ್ಲಿ ಮೂಡಿದ್ದ ಕಿರುಮೀಸೆ, ಹೊಳಪು ಕಣ್ಣುಗಳು, ಹೆಣ್ಣಿಗಿರಬೇಕಾದ ತುಟಿಗಳು– ಎಲ್ಲವೂ ರವಿಯ ಸೌಂದರ್ಯದ ಕುರುಹಾಗಿ ತೋರುತ್ತಿದ್ದುವು. ಈ ಸೌಂದರ್ಯವನ್ನು ಮರೆಯಲ್ಲೇ ನಿಂತು ಸಾಯಿರಾ ಸವಿಯುತ್ತಿದ್ದರೆ, ಅವಳ ನೋಟದ ಮೊನಚು ಇವನನ್ನು ತಿವಿಯುತ್ತಿತ್ತು. ಆವಾಗ ಲೆಲ್ಲ ಬೆಚ್ಚುತ್ತಿದ್ದ ರವಿ, ದೃಷ್ಟಿ ತೂರಿ ಬಂದ ಜಾಗದತ್ತ ತನ್ನ ನೋಟ ಹರಿಯುತ್ತಿದ್ದರೆ, ಹಸಿದ ವ್ಯಾಘ್ರ ಬೇಟೆಗೆ ಹೊಂಚುಹಾಕುತ್ತಿರುವಂತೆ ಭಾಸವಾಗುತ್ತಿತ್ತು.

ಅದೆಷ್ಟೋ ಬಾರಿ ಅವರ ಮನೆಗೆ ಮೈ ತುಂಬಾ ಬಟ್ಟೆ ಧರಿಸಿ ಹೋಗಬೇಕೆಂದು ಮನಸ್ಸಾಗುತ್ತಿತ್ತು. ಆದರೆ ಕಾನೂನು ಮುರಿಯಲು ಸಾಧ್ಯವೆ?

ಇಂದು ಪಾರ್ಟಿ ಇದೆಯೆಂದು ವಿಜಯನ್ ತಿಳಿಸಿದಾಗ ರವಿಗೆ ಹಕ್ಕಿಯಂತೆ ಹಾರಬೇಕೆನಿಸಿತ್ತು. ಈ ದಿನವಾದರೂ ಸಾಯಿರಾಳ ದೃಷ್ಟಿಯ ಮೊನಚು ತಿವಿಯುವುದು ತಪ್ಪಬಹುದೆಂದುಕೊಂಡ.

ಮೇಜರ್‌ನ ಮನೆಯ ಹೆಬ್ಬಾಗಿಲು ತಳ್ಳಿ ಒಳಬಂದ ರವಿ ಸೈಕಲನ್ನು ಅಲ್ಲೇ ನಿಲ್ಲಿಸಿ ಮನೆಯೊಳಗೆ ಬಂದ. ಅಲ್ಲೇ ನಿಂತಿದ್ದ ಕಾರು ಅವರಿನ್ನೂ ಪಾರ್ಟಿಗೆ ಹೋಗದಿರುವ ಸೂಚನೆ ನೀಡಿತ್ತು. ಇವನು ಬೆಲ್ ಒತ್ತಲು ಕೈಯೆತ್ತುವಾಗಲೇ ಬಾಗಿಲು ತೆರೆಯಿತು. ಹೊರ ಬಂದ ಮೇಜರ್ ಕಾರಲ್ಲಿ ಕುಳಿತು ಬುರ್ರಂತ ಹೊರಟುಹೋದ.

ರವಿ ನಿಂತಲ್ಲೇ ಕಲ್ಲಾದ.

ಗಂಡನನ್ನು ಕಳಿಸಿ ತಿರುಗಿ ಬಂದ ಸಾಯಿರಾ "ಒಳಗೆ ನಡೆ" ಎನ್ನುತ್ತಾ ಹದವಾಗಿ ನಕ್ಕಳು.

ರವಿ ಗಲಿಬಿಲಿಗೊಂಡ.

ಅವನ ಕೈಯಿಂದ ಹಾಲಿನ ಕ್ಯಾನನ್ನು ತೆಗೆದು ಒಳ ನಡೆದ ಸಾಯಿರಾಳಿಗೆ ತರಕಾರಿ ಚೀಲ ತೋರಿಸಿದ.

"ತಗೊಂಬಾ..." ಎನ್ನುತ್ತಾ ಅಡುಗೆ ಮನೆಗೆ ನಡೆದಳು. ಅಡುಗೆ ಮನೆಯ ಬಾಗಿಲಲ್ಲಿ ನಿಂತು ರವಿ ಒಳಗೆ ಚೀಲ ನೀಡಿದ.

"ಒಳಗೆ ಬಾ..." ಅವನತ್ತ ನೋಡದೇನೇ ಸಾಯಿರಾ ಕರೆದಾಗ ರವಿ ವಿಧಿಯಿಲ್ಲದೆ ಒಳಗೆ ಅಡಿಯಿಟ್ಟ. ಸಾಯಿರಾ ತರಕಾರಿ ಹಾಕುವ ಬುಟ್ಟಿಯನ್ನು ಇವನತ್ತ ಬಾಚಿದಳು. ಅದನ್ನೆತ್ತಿ ಕೆಳಗಿಟ್ಟ ರವಿ ಚೀಲದಲ್ಲಿದ್ದ ತರಕಾರಿಯನ್ನು ಅದರೊಳಗುದುರಿಸಿದ. ತರಕಾರಿ ನೋಡುವ ನೆವದಿಂದ ಸಾಯಿರಾ ಬಗ್ಗಿದಳು. ಅವಳು ಉಪಯೋಗಿಸಿದ ಸೆಂಟಿನ ವಾಸನೆ ಇವನ ಮೂಗಿಗೆ ಬಡಿಯಿತು. ಇವನ ಮೈ ಬೆವರಿನ ವಾಸನೆ ಅವಳ ಮೂಗಿಗೆ ಹಿತವಾಯಿತು.

ಅಲ್ಲಿಂದ ಹೊರ ಬಂದ ರವಿ ಪಾಲಿಶ್ ಮಾಡಲೆಂದು ಮೇಜರನ ಬೂಟ್ಸು–ಬೆಲ್ಟ್‌ಗಳನ್ನು ಎತ್ತಿಕೊಂಡ.

"ರವೀ... ಬಾ ಇಲ್ಲಿ..."

ಕರೆ ಮಲಗುವ ಕೋಣೆಯಿಂದ ಬಂದಿತ್ತು.

ಎಡಗೈಯನ್ನು ಬೂಟಿನೊಳಗೆ ತೂರಿ ಹತ್ತಿಯುಂಡೆಯಿಂದ ಬೂಟಿನ ತುದಿಯನ್ನು ಉಜ್ಜುತ್ತಿದ್ದ ರವಿಯ ಕೈ ಒಂದು ಕ್ಷಣ ತಟಸ್ಥವಾಯಿತು. ಕಿವಿ ನಿಮಿರಿತು.

"ರವೀ..."

ಈ ಬಾರಿಯ ಕರೆಗೆ, "ಪಾಲಿಷ್ ಮಾಡ್ತಾ ಇದ್ದೀನಿ," ಅಂದ.

"ಕೈ ತೊಳೆದು ಬಾ..."

ಸಾಯಿರಾಳ ನುಡಿ ಕೇಳಿ ಸಣ್ಣಗೆ ಕಂಪಿಸಿದ. ರವಿ. ಕೈ ತೊಳೆದು ಮಲಗುವ ಕೋಣೆಯ ಬಾಗಿಲಲ್ಲಿ ನಿಂತು ಸಾಯಿರಾಳನ್ನೇ ಎವೆಯಿಕ್ಕದೆ ನೋಡಿದ.

ಮುಖವಲ್ಲಿಯ ನೆರಿಗೆಯನ್ನು ಮುಚ್ಚಲು ಪೌಡರಿನ ಮೊರೆ ಹೋಗಿದ್ದಳು. ಕೆನ್ನೆಗೆ ಕೆಂಪು ಬಳಿದಿದ್ದಳು. ತಿದ್ದಿದ ಹುಬ್ಬಿಗೆ ಕಾಡಿಗೆಯನ್ನು ಹಚ್ಚಲಾಗಿತ್ತು. ಕಣ್ಣಿಗೂ ಮಿತವಾಗಿ ಕಾಡಿಗೆ ಬಳಿಸಿದ್ದಳು. ತುಟಿಯನ್ನು ಮಾತ್ರ ಬಣ್ಣದಲ್ಲಿ ಅದ್ದಿಸಾತಿತ್ತು. ಎದೆಯಲ್ಲಿ ಅರ್ಧ ಜಾರಿದ ಸೆರಗು. ತನ್ನನ್ನೇ ಎವೆಯಿಕ್ಕದೆ ನೋಡುತ್ತಿದ್ದ ರವಿಯನ್ನು ಕಂಡು ಸಾಯಿರಾಳ ಮುಖ ಊರಗಲವಾಯಿತು.

"ಏನು ನೋಡ್ತಾ ಇದ್ದೀ..." ರಾಗವಾಗಿ ಕೇಳಿದಳು.

ರವಿಗೆ ತನ್ನ ತಪ್ಪಿನ ಅರಿವಾಯಿತು. ಕೂಡಲೇ ಸಾವರಿಸಿಕೊಂಡು, "ನೀವು ಕರೆದಿರಲ್ಲ," ಎಂದ.

"ಒಳಗೆ ಬಾ..." ದನಿಯಲ್ಲಿ ಮಾರ್ದವತೆ ತುಂಬಿತ್ತು.

ಅಂಜುತ್ತಲೇ ಒಳಗಡಿಯಿಟ್ಟ.

ಎರಡು ಮಂಚಗಳನ್ನು ಸೇರಿಸಿ ಒಂದಾಗಿ ಜೋಡಿಸಿದ್ದರು. ಅದರ ಬಲ ಪಕ್ಕ ಒಂದು ವ್ಯಕ್ತಿ ನುಸುಳಬಹುದಾಷ್ಟೇ ಜಾಗ– ಅಲ್ಲೇ ಮಂಚದ ಮೇಲ್ಭಾಗದ ಅಟ್ಟದಲ್ಲಿದ್ದ ಪುಸ್ತಕ ರಾಶಿಯತ್ತ ಕೈ ತೋರಿಸಿ. "ಒಂದು ಪುಸ್ತಕ ತೆಗೆದುಕೊಡು," ಎಂದಳು.

ಅವಳ ಮೈ ತಾಗಿಸದೆ ಮುಂದೆ ಹೋಗಲು ರವಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಮೆದುವಾದ ಅವಳ ಮೈ ತಗುಲದಿರಲಿಲ್ಲ.



ಅವಡುಗಚ್ಚಿ ಪುಸ್ತಕಕ್ಕೆ ತಡಕಾಡಿದ. ಒಮ್ಮೆಲೇ ಧೊಪ್ಪೆಂದು ಸಾಯಿರಾ ಮೇಲೆ ಬಿದ್ದಾಗ ಅವನ ಸಮತೋಲನ ತಪ್ಪಿತ್ತು. ಹಸಿದ ವ್ಯಾಘ್ರ ಹೊಂಚುಹಾಕಿ ಬೇಟೆಯ ಮೇಲೆರಗಿತ್ತು. ಅದರ ಸಂಚಿನ ಅರಿವು ಮೊದಲೇ ಇದ್ದುದರಿಂದ ಮಿಂಚಿನಂತೆ ನೆಗೆದ ಬೇಟೆ ಹೊರಗೋಡಿತು.

ಒಂದೆಡೆ ಹಸಿವು, ಮತ್ತೊಂದೆಡೆ ಬೇಟೆ ಕೈತಪ್ಪಿದ ರೋಷ. ವ್ಯಾಘ್ರ ಒಮ್ಮೆಲೇ ಗರ್ಜಿಸಿತು!

ಮತ್ತೊಂದು ಅಪಾಯದ ಸೂಚನೆ. ಬೆಚ್ಚಿದ ಬೇಟೆ ಸದ್ಯ ಪಾರಾದರೆ ಸಾಕೆಂದು ಓಡಿತು.

× × ×

ನಾಯರ್ ಮನೆಯ ಆರ್ಡರ್ಲಿ ವಿಜಯನ್ ಕೆಲಸ ಮುಗಿಸಿ ಬಂದಾಗ ರವಿ ಮಲಗಿಯೇ ಇದ್ದ. ಕಣ್ಣುಗಳಲ್ಲಿ ಚಿಂತೆಯ ಭಾವ ನೆಲೆಸಿತ್ತು. ಎಲ್ಲ ಹುಡುಗರೂ ತಟ್ಟೆ ಮಗ್ ಹಿಡಿದು ಮೆಸ್ಸಿನತ್ತ ಹೋಗಿದ್ದರು.

ಕೈಯಲ್ಲಿದ್ದ ಬಿಸಿಬಿಸಿ ದೋಸೆಯ ಕಟ್ಟನ್ನು ರವಿಯ ಮಂಚದ ಮೇಲಿರಿಸಿ, "ಯಾಕೆ ರವಿ... ಮಲಗಿದ್ದೀ..." ಅಂದ. ರವಿಯ ಕಣ್ಣಾಲಿಗಳು ತುಂಬಿ ನಿಂತವು. ಅವನಿಗೆ ಒಮ್ಮೆಲೇ ಮನೆಯ ನೆನಪಾಯಿತು. "ನಾನು ಯಾತಕ್ಕಾಗಿ ಸೈನ್ಯಕ್ಕೆ ಸೇರಿದೆನೋ?" ರವಿ ಗದ್ಗದಿತನಾಗಿ ನುಡಿದ.

"ಏನಾಯಿತೀಗ ? ಒಮ್ಮೆಲೇ ಮನೆಯ ನೆನಪುದುದೇಕೆ ?"

ರವಿ ನಡೆದುದೆಲ್ಲವನ್ನೂ ವಿವರಿಸಿದ.

ವಿಷಯ ವಿಕೋಪಕ್ಕೆ ತಿರುಗಬಹುದೆಂದು ವಿಜಯನ್‌ಗೆ ಕೂಡ ಮನವರಿಕೆಯಾಯಿತು. ಒಂದು ಕ್ಷಣ ಮಾತಾಡಲಿಲ್ಲ ಇಬ್ಬರೂ.

"ಈಗೇನು ಮಾಡುವುದು?" ರವಿ ಕೇಳಿದ ದೀನನಾಗಿ.

ಅಷ್ಟರಲ್ಲಿ ಅಲ್ಲಿಗೆ ಸರದಾರ್ ಖುಷವಂತ್ ಬಂದ. ಅವನಿಗೂ ವಿಷಯ ತಿಳಿಸಿದ ವಿಜಯನ್.

"ಯೇ ರವೀ ಹೈನ.. ಬಿಲ್‌ಕುಲ್ ಬುದ್ದು... ವೋ ಹೋನೇಸೆ ಏಕ್ ಹಾತ್ ದೇಖತಾಥಾ..." ಎಂದ ಸರದಾರನ ನುಡಿ ಕೇಳಿ ರವಿಯ ಮುಖದಲ್ಲೂ ನಗೆ ಇಣುಕಿತು.

"ವಹ ತೋ ಬುಡ್ಡೀ ಹೈ," ವಿಜಯನ್ ನುಡಿದ.

"ತೋ...ಕ್ಯಾ...ಮಾಲ್ ಮಾಲ್ ಹೀ ಹೈನ..?"

"ಓತೋ ಛೋಡ್‌ದೋ...... ಆಗೆ ಕ್ಯಾ ಹೋಗಾ...?"

"ಹೋಗಾ ಕ್ಯಾ... ರವೀಕಾ..." ಏನೋ ಹೇಳಲಿದ್ದ ಖುಷವಂತ ರವಿಯ ಮುಖ ನೋಡಿ ಸುಮ್ಮನಾದ.

ವಿಜಯನ್ ಬಾಸ್, ನಾಯರ್ ಬಳಿ ಮಾತಾಡಲು ಖುಷವಂತನೇ ಸೂಚಿಸಿ ಹೊರ ಹೋದ.

ರವಿ ಹಾಗೂ ವಿಜಯನ್ ನಾಯರ್ ಮನೆಯತ್ತ ನಡೆದರು. ಊಟದ ಹೊತ್ತಾದುದರಿಂದ ಪ್ಲೆಟೂನ್ ಕಮಾಂಡರ್‌ಗೆ ತಿಳಿಯಲಾರದೆಂದು ಆ ಸಮಯ ಆರಿಸಿದರು.

ವಿಜಯನ್ ಜೊತೆ ಇನ್ನೊಬ್ಬ ಹುಡುಗನೂ ಬಂದಾಗ ಮೇಜರನ ಪತ್ನಿ ಲತಾ ಹುಬ್ಬೇರಿಸಿದಳು. ವಿಜಯನ್ ಮಲೆಯಾಳದಲ್ಲಿ ವಿಷಯವೆಲ್ಲವನ್ನು ಸೂಕ್ಷ್ಮವಾಗಿ ವಿವರಿಸಿದ. ಲತಾಳ ನೋಟವೆಲ್ಲ ರವಿಯ ಮೇಲಿತ್ತು. ರವಿ ನಾಚಿ ನೀರಾಗಿದ್ದ.

ವಿಷಯವೆಲ್ಲ ತಿಳಿಸಿದ ವಿಜಯನ್, "ಪೋಯಿಟ್ರ್ ಏಕಿ ಚೇಡಿ," ಎನ್ನುತ್ತಾ ಮೆಟ್ಟಿಲಿಳಿದ. ರವಿ ಹಿಂಬಾಲಿಸಿದ.

ಎದುರುಗಡೆ ಕಟ್ಟಡದಲ್ಲಿ ಇವರ ಸಹೋದ್ಯೋಗಿ ಹುಡುಗ, ರಾಜನ್, ಕ್ಯಾಪ್ಟನ್ನನ ಹೆಂಡತಿಯ ಸೀರೆ ಒಣ ಹಾಕುತ್ತಿದ್ದ.

"ನೋಡು... ಈ ಅಧಿಕಾರಿಗಳ ಪತ್ನಿಯರ ಅಧಿಕಾರಶಾಹಿ ಪ್ರವೃತ್ತಿ. ಇನ್ನೂ ಬ್ರಿಟಿಷರ ಕಾಲದಲ್ಲೇ ಇದ್ದೇವೆಂದು ತಿಳಿದಿದ್ದಾರೆ," ಎನ್ನುತ್ತಾ ವಿಜಯನ್ ಸೈಕಲೇರಿದ.

× × ×

ರವಿ ರಾತ್ರಿಯಿಡೀ ನಿದ್ದೆಯಿಲ್ಲದೇ ಹೊರಳಾಡಿದ. ಯಾರಿಗೂ ತಿಳಿಸದೇ ಓಡಿಹೋದರೆ ಹೇಗೆ ಎನಿಸಿತೊಮ್ಮೆ. ಸೆಂಟ್ರಿಗಳ ಕಣ್ಣು ತಪ್ಪಿಸಿ ಸಾಧ್ಯವೇ ಇಲ್ಲ. ಅದು ಒಂದು ವೇಳೆ

ಸಾಧ್ಯವಾದವರೂ ಎಂಪಿಗಳು (ಮಿಲಿಟರಿ ಪೋಲೀಸ್) ಜೆನ್ನು ಬಿಡಲಾರರು. ಎಂಬ ಸತ್ಯ ಹೊಳೆದಾಗ ಅತ್ತಲಿಂದ ಮನಸ್ಸನ್ನು ಈಚೆಗೆಳೆದ.

"ಅವಳ ಮನಸ್ಸಿನಂತೆ ನಡೆದಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ ಅನಿಸಿತೊಮ್ಮೆ. ಆದರೆ ಅವಳು ಬಂದಾಗ ಇವನ ಅವಸ್ಥೆ ಹಿಮದ ಮಳೆಯಲ್ಲಿ ತೊಯ್ದಂತಾಗಿತ್ತು. ಮೆಟ್ರಿಕ್ ಪಾಸಾದ ಕೂಡಲೇ ಸೈನ್ಯಕ್ಕೆ ಸೇರಿದ ಆತನಿಗೆ ಹುಡುಗಿಯರನ್ನು ಛೇಡಿಸಿಯೂ ಗೊತ್ತಿಲ್ಲ. ತರಬೇತಿಯಲ್ಲಿರುವ ಇಂದಿನ ದಿನಗಳಲ್ಲಿ ಪುರುಷತ್ವವೇ ನಾಶವಾಗಿದೆಯೋನೋ ಎನ್ನುವ ಅನುಭವ! ಇದರಿಂದಾಗಿ ರವಿಯ ಮನಸ್ಸು ಹೆಣ್ಣನ್ನರಸಲೇ ಇಲ್ಲ.

ಈ ಭಾಗ್ಯಕ್ಕಾಗಿ ತಾನು ಸೈನ್ಯಕ್ಕೆ ಸೇರಿದೆನೇ ಎನಿಸಿದಾಗ ಸೈನ್ಯಕ್ಕೆ ಸೇರಲು ಪಟ್ಟ ಪಾಡು ನೆನಪಾಯಿತು.

ಹತ್ತನೇ ತರಗತಿಯ ಫಲಿತಾಂಶ ಹೊರ ಬಿದ್ದಾಗಲೇ ಇವನೂ ಇವನ ಗೆಳೆಯನೂ ಕೂಡಿ ಸೈನ್ಯಕ್ಕೆ ಸೇರಲು ಪ್ರವೇಶ ಪತ್ರ ಭರ್ತಿ ಮಾಡಿ ಕಳಿಸಿದರು. ಇಬ್ಬರೂ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವೈದ್ಯ ಪರೀಕ್ಷೆಯಲ್ಲಿ ವಿವಸ್ತ್ರರಾಗಲು ತಿಳಿಸಿದಾಗ ರವಿಯ ಗೆಳೆಯ ಮೂರ್ತಿ ಕಿರುಬೆರಳು ತೋರಿಸಿ ಹೊರಗೆ ನಡೆದವನು ಮತ್ತೆ ಒಳಗೆ ಬರಲೇ ಇಲ್ಲ. ಮರುದಿನ ರವಿಯನ್ನು ಕಂಡು,

"ಏನು ಮಾರಾಯ? ಅವರೆಲ್ಲರ ಮುಂದೆ ಗೊಮ್ಮಟನಂತೆ ನಿಂತೆಯಾ?" ಎಂದು ಛೇಡಿಸಲು ಮರೆಯಲಿಲ್ಲ.

ಸ್ವಂತ ಪರಿಶ್ರಮದಿಂದ ಆಯ್ಕೆಯಾದ ರವಿಗೆ ಮನೆಯಲ್ಲಿ ಅನುಮತಿ ದೊರೆಯಲಿಲ್ಲ. ರವಿ ಪೆಚ್ಚಾದ. ತಂದೆಯ ಹಸ್ತಾಕ್ಷರ ಇಲ್ಲದೆ ಇವನನ್ನು ಸೈನ್ಯಕ್ಕೆ ಭರ್ತಿ ಮಾಡಿಸಲು ಸಾಧ್ಯವೇ ಇಲ್ಲವೆಂದರು.

ಮರುದಿನ ಒಂದು ಉಪಾಯ ಹೊಳೆಯಿತು. ಸೈನ್ಯ ಭರ್ತಿ ಕೇಂದ್ರದ ಮುಂದಿದ್ದ ರಸ್ತೆಯಲ್ಲಿ ಹೋಗುತ್ತಿದ್ದ ವಯಸ್ಕ ಪಾದಚಾರಿಯ ಕೈಗೆ ಹತ್ತು ರೂಪಾಯಿ ತುರುಕಿ ಕಿವಿಯಲ್ಲಿ ಪಿಸುಗುಟ್ಟಿದ.

ಹೆತ್ತವರ ಹಸ್ತಾಕ್ಷರ ದೊರಕಿತು. ರವಿ ತನ್ನ ಬುದ್ಧಿ ಮತ್ತೆಗೆ ತಾನೇ ಬೀಗಿದ.

ಮನೆಯವರ ಅನುಮತಿ ಇಲ್ಲದೆ. ಮನೆಯವರಿಗೆ ತಿಳಿಸದೆ ಮಂಗಳೂರು - ಬಿಟ್ಟ ರವಿ ಹೈದರಾಬಾದ್ ತಲಪಿದವನೇ ಮನೆಯವರಿಗೊಂದು ಪತ್ರ ಬರೆದ. ಮನೆಯಿಂದ ಹೊರಡುವಾಗ ಇದ್ದ ಹುರುಪು ರೇಲ್ವೇ ನಿಲ್ದಾಣದಲ್ಲಿಯೇ ಕಮ್ಮಿಯಾಗಿತ್ತು. ರೈಲು ಹೈದರಾಬಾದಿನತ್ತ ಧಾವಿಸುತ್ತಿದ್ದಂತೆ ಈತನ ಮನಸ್ಸು ಮಂಗಳೂರಿನತ್ತ ಓಡುತ್ತಿತ್ತು.

ತರಬೇತಿ ಕಾಲದ ಕಠಿಣ ಪರಿಶ್ರಮ ಕಂಡು ದೇಶಸೇವೆಯ ಆಸೆ ಮಣ್ಣಾಗಿತ್ತು. ಸೈನ್ಯವೂ ಒಂದು ಉದ್ಯೋಗ ಎಂದು ಬಂದವರೇ ಅಧಿಕ ಸಂಖ್ಯೆಯಲ್ಲಿದ್ದರು. ಎಲ್ಲರ ಮುಂದಿದ್ದುದು ದೇಶಸೇವೆಯ ಹುಮ್ಮಸ್ಸು ಅಲ್ಲ, ಉದರ ಸೇವೆಯ ಉದ್ದೇಶ ಎಂಬುದರ ಅರಿವು ಆತನಿಗಾಗಲು ಹೆಚ್ಚು ದಿನ ಬೇಕಾಗಲಿಲ್ಲ.

ದಿನವಿಡೀ ದುಡಿತ, ತಪ್ಪಿದರೆ ಪ್ಲಟೂನ್ ಕಮಾಂಡರ್‌ನ ಒದೆತ!

× × ×

ಮುಂಜಾನೆ ಪರೇಡ್ ಮುಗಿಸಿ ಬಂದಾಗಲೇ ರವಿಗೆ ಕಾದಿತ್ತು ಅಪ್ಪಣೆ! ಆತನ ಮೈ ಸಣ್ಣಗೆ ಕಂಪಿಸಿತು. ವಿಜಯನ್‌ನತ್ತ ನೋಡಿದ. ಇವನ ಮುಖದಲ್ಲಿ ದೀನಭಾವ ಅಡಗಿತ್ತು.

"ಎದೆಗುಂದಬೇಡ......" ಎಂದು ಧೈರ್ಯ ತುಂಬಿದ ಆತ. ಸಮವಸ್ತ್ರ ಧರಿಸಿದ ರವಿ ಡವಗುಟ್ಟುವ ಎದೆಯನ್ನು ಹಿಡಿದು, ಥರಗುಟ್ಟುವ ಕಾಲುಗಳನ್ನೆಳೆದುಕೊಂಡು ನಡೆದ.

ಬಾಗಿಲ ಬಳಿ ಸರಿದ "ಕಮಾನ್......" ಅಂದರು. ಕಮಾಂಡೆಂಟ್ ಜಯದೇವ್,

ಒಳ ನಡೆದ ರವಿ. ನೆಲ ಅದುರುವಂತೆ ಬೂಟುಗಾಲನ್ನೆತ್ತಿ ಬಡಿದು ಕೈ ಬೀಸಿ ಹಣೆಯ ಮೇಲಿಟ್ಟ.

ಕೈಯಲ್ಲಿದ್ದ ಪೆನ್ನಿನೊಂದಿಗೆ ಆಟವಾಡುತ್ತಾ ಜಯದೇವ್ ಕುರ್ಚಿಗೊರಗಿ ಕೇಳಿದರು:

"ನಿನ್ನ ಮೇಲೆ ಆರೋಪ ಇದೆ. ಅದು ನಿಜಾನಾ...?"

"........."

"ಜವಾಬು ಕೊಡು."

"ಆರೋಪ ಏನೆಂದು ತಿಳಿಯಲಿಲ್ಲ." ಹಾಗೆನ್ನುವಾಗ ಆತನ ನಾಲಗೆ ತೊದಲಿದು ದನ್ನು ಜಯದೇವ್ ಗಮನಿಸಿದರು.

"ನೀನು ಶ್ರೀಮತಿ ಸಿಂಗ್‌ರ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿದೆಯೆಂಬುದು."

ರವಿ ಬೆಚ್ಚಿದ!

"ನಿಜವಾ...?" ಜಯದೇವ್ ಮತ್ತೊಮ್ಮೆ ಕೇಳಿದರು.

ಹಾಗಾದರೆ ನಿನ್ನೆ ನಾಯರ್ ಮನೆಗೆ ಹೋದುದಕ್ಕೆ ಲಾಭ ಹವಲ್ದಾರ್ ಮೇಜರ್‌ನಿಂದ ದೊರೆತ ಶಿಕ್ಷೆ ಮಾತ್ರ ಎಂದುಕೊಂಡ ರವಿ.

ರವಿಯ ಮೌನ ಕಂಡು ಆತನ ಬಳಿ ಬಂದು ಮೈದಡವಿದ ಜಯದೇವ್, "ಹೇಳು ಮಗೂ... ಅಂಜಬೇಡ. ನೀನೊಬ್ಬ ಯೋಧನೆಂಬುದನ್ನು ಮರೆಯಬೇಡ. ನಿನ್ನ ತಪ್ಪಿಲ್ಲವಾದರೆ ನಿನ್ನನ್ನು ರಕ್ಷಿಸುತ್ತೇನೆ," ಎಂದರು.

ತುಸು ಧೈರ್ಯ ಬಂದ ರವಿಯ ತುಂಬು ನೇತ್ರಗಳಿಂದ ಅಶಾಭಾವನೆ ಇಣುಕಿತು.

"ಕಮಾನ್–ಬೇಗ..."

ರವಿ ನಡೆದುದೆಲ್ಲವನ್ನೂ ಕೂಲಂಕಷವಾಗಿ ವಿವರಿಸಿದ.

"ಮದವೇರಿದ ಹೆಣ್ಣಾನೆ !" ಉದ್ಗರಿಸಿದರು ಜಯದೇವ್. "ಪೆದ್ದ ಗಂಡನಿಂದ ಹೀಗೇ ಆಗ್ಯ ವುದು," ಮತ್ತೊಮ್ಮೆ ಸ್ವಗತವೆಂಬಂತೆ ನುಡಿದು ಕುರ್ಚಿಯಲ್ಲಿ ಕುಳಿತರು.

"ಓ...ಕೇ... ಯು ಕ್ಯಾನ್ ಗೋ..."

ರವಿ ಮತ್ತೊಮ್ಮೆ ಕಾಲು ಹಿಡಿದು ಹೊರ ಬಂದ.

ಅವನು ಅತ್ತ ಹೋದ ಮೇಲೆ ಜಯದೇವ್ ಯೋಚಿಸಿದರು. ಹೆಂಡತಿಯ ಮಾತನ್ನು ನಂಬಿ ಕೊಂಡು ಬಂದ ಮೇಜರನಿಗೆ ಸತ್ಯವನ್ನು ಅರುಹಲೇ ?

ಹಾಗೆ ಮಾಡಿ ಅವನ ಮನಸ್ಸಿಗೆ ನೋವುಂಟು ಮಾಡುವುದು ಸರಿಯೆನಿಸಲಿಲ್ಲ... ಅವರಿಗೆ. ಸಾಯಿರಾಳ ಸ್ವಭಾವದ ಪರಿಚಯವಿದ್ದ ಜಯದೇವ್‌ಗ ರವಿಯ ಮಾತಲ್ಲಿ ಸಂಪೂರ್ಣ ನಂಬುಕೆಯಿತ್ತು.

ಮೇಜರ್ ಸಾಬ್‌ಗ ಬುಲಾವು ಹೋಯಿತು.

ಆತನೂ ಬಂದು ಜಯದೇವರ ಮುಂದೆ ಕಾಲಪ್ಪಳಿಸಿ ನಿಂತ.


"ನೋಡಪ್ಪಾ ಸಿಂಗ್... ನೀನು ಕೊಟ್ಟ ಸಮಯದಲ್ಲಿ ರವಿ ನಾಯರ್ ಮನೆಯಲ್ಲಿ ಇದ್ದ. ಆತ ನಿನ್ನೆ ನಿಮ್ಮನೆಗೆ ಬಂದಂತೆ ವಾಪಸು ಹೊರಟುಹೋದ. ಆ ಬಗ್ಗೆ ಲೈನಿನಲ್ಲಿ ಎಲ್ಲರಿಗೂ ಗೊತ್ತಿದೆ. ಆದ್ದರಿಂದ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡು," ಎಂದಾಗ ಮೇಜರ್‌ನ ಮುಖ ಇಂಗು ತಿಂದ ಮಂಗನಂತಾಗಿತ್ತು.

"ನಾವು ಹಿರಿಯ ಅಧಿಕಾರಿಗಳು. ಕಿರಿಯರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಅದರ ಬದಲು ಅಕಾರ್ಯಕ್ಕಿಳಿಯುವುದು ಸರಿಯಲ್ಲ. ನೀನು ಅವನ ಮೇಲೆ ಆರೋಪ ಹೊರಿಸಿದಂತೆ ನಿನ್ನ ಮೇಲೆ ಆರೋಪ ಹೊರಿಸಲು ನನಗೂ ಬರಬಹುದು."

ಜಯದೇವರ ನುಡಿ ನಯವಾಗಿದ್ದರೂ ಹರಿತವಾಗಿತ್ತು.

× × ×

ಮರುದಿನದಿಂದಲೇ ರವಿಯ ಆರ್ಡರ್ಲೀ ಕೆಲಸ ನಿಂತು ಹೋಯಿತು. ರವಿ ಮನಸ್ಸಲ್ಲೇ ಜಯದೇವರಿಗೆ ವಂದಿಸಿದ. ಜೊತೆಗೇ ಗೆಳೆಯ ವಿಜಯನನ್ನು ತಬ್ಬಿಕೊಂಡ.



# ನಿಮ್ಮ ಶಬ್ದಭಾಂಡಾರ ಬೆಳೆಯಲಿ

## ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಕೀರ್ತನ**
(ಅ) ಕತ್ತರಿಸುವುದು (ಆ) ಕೊರತೆ (ಇ) ಹೊಳೆಯುವಿಕೆ (ಈ) ಹೊಗಳಿಕೆ

೨. **ಕಲ್ಯಾಣ**
(ಅ) ಕಲ್ಲಿನ ಮೆಟ್ಟಲು (ಆ) ಹಳೇ ಒಂದು ನಾಣ್ಯ (ಇ) ಮಂಗಲ (ಈ) ನಾಳೆಯದು

೩. **ಬಕ್ಷೀಸು**
(ಅ) ಇನಾಮು (ಆ) ತಿಂದುಹಾಕು (ಇ) ದಾಖಲೆ (ಈ) ಮಡಕೆ

೪. **ಬಂಡುಣಿ**
(ಅ) ಕಾಮುಕ (ಆ) ತುಂಬಿ (ಇ) ಕೊಳಕುಮಾತು (ಈ) ಅಲೆಮಾರಿ

೫. **ವ್ಯಕ್ತ**
(ಅ) ಗೋಚರ (ಆ) ಬಿಡಲ್ಪಟ್ಟ (ಇ) ತೊಂದರೆಗೊಳಗಾದ (ಈ) ಶೀತ

೬. **ತ್ರಸ್ತ**
(ಅ) ನೀರಡಿಕೆ (ಆ) ಶೀತ (ಇ) ಕಷ್ಟಕ್ಕೊಳಗಾದ (ಈ) ತುರಿಕೆ

೭. **ಮೀಮಾಂಸೆ**
(ಅ) ಚಿಂತನೆ (ಆ) ಮೀನಿನ ಮಾಂಸ (ಇ) ಬಯಕೆ (ಈ) ದ್ವೇಷ

೮. **ಮೀಸಲು**
(ಅ) ಸ್ನಾನ (ಆ) ಬೆರಕೆ (ಇ) ಕಣ್ಮುಚ್ಚುವಿಕೆ (ಈ) ಕಾದಿಟ್ಟದ್ದು

೯. **ವರ್ಜ್ಯ**
(ಅ) ಭಾರ (ಆ) ಕೆಲಸ (ಇ) ಶುದ್ಧ (ಈ) ಬಿಡಬೇಕಾದದ್ದು

೧೦. **ವರ್ಣಿಕೆ**
(ಅ) ಬೇಡುವುದು (ಆ) ಹೂವಿನ ಪಕಳೆ (ಇ) ಬಣ್ಣ ಬಳಿಯುವಿಕೆ (ಈ) ಒನಕೆ

೧೧. **ಸಾಟಿ**
(ಅ) ಬಡಿಗೆ (ಆ) ಸಮಾನ (ಇ) ರಾಗ (ಈ) ಸತ್ಯ

೧೨. **ಹೋರಟೆ**
(ಅ) ಹೋರಾಟ (ಆ) ಪ್ರಯಾಣ (ಇ) ಚಾಡಿ (ಈ) ಒಂದು ಹುಳ

## 'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ಕೀರ್ತನೆ** (ಈ) ಹೊಗಳಿಕೆ, ಸ್ತುತಿ, ದೇವರ ಸ್ತೋತ್ರ; ದೇವರ ಕಥೆಯನ್ನು ಹಾಡಿನೊಡನೆ ಹೇಳುವುದು. ಉದಾ:– ಹರಿಕೀರ್ತನೆ. [ಸಂ.]

೨. **ಕಲ್ಯಾಣ** (ಇ) ಮಂಗಲ, ಶುಭ, ಒಳಿತು; ಮದುವೆ. ಉದಾ:– ಲೋಕ ಕಲ್ಯಾಣ. [ಸಂ.]

೩. **ಬಕ್ಷೀಸು** (ಅ) ಇನಾಮು, ಸಂಭಾವನೆ ಉದಾ:– ಸುದ್ದಿ ಹೇಳಿದ್ದಕ್ಕೆ ಹತ್ತು ರೂಪಾಯಿ ಬಕ್ಷೀಸು [ಫಾರಸಿ– ಬಖ್‌ಶಿಸ್]

೪. **ಬಂಡುಣಿ** (ಅ) ತುಂಬಿ, ಭ್ರಮರ, ಜೇನ್ನೊಣ. ಉದಾ:– ಬಂಡುಣಿಗಳ ವೃಂದಗಾನ. [ಕನ್ನಡ — ಬಂಡು = ಹೂವಿನ ರಸ + ಉಣಿ = ಉಣ್ಣುವಂ–ಥಾದ್ದು]

೫. **ತ್ಯಕ್ತ** (ಅ) ಬಿಡಲ್ಪಟ್ಟ, ತೊರೆದ. ಉದಾ:– ಸಮಾಜದಿಂದ ತ್ಯಕ್ತರಾದವರು. [ಸಂ. ತ್ಯಜ್ = ಬಿಡು–ಎಂಬುದರಿಂದ]

೬. **ತ್ರಸ್ತ** (ಇ) ಕಷ್ಟಕ್ಕೊಳಗಾದ, ಪೀಡಿತ, ಹೆದರಿದ. ಉದಾ:– ದುರದೃಷ್ಟದಿಂದ ತ್ರಸ್ತನಾದ. [ಸಂ. ತ್ರಸ್ = ನಡುಗಾಲ–ಎಂಬುದರಿಂದ]

೭. **ಮೀಮಾಂಸೆ** (ಅ) ಚಿಂತನೆ, ವಿವೇಚನೆ, ವಿಚಾರ ಮಾಡುವಿಕೆ. ಉದಾ:– ರಾಜಕೀಯ ಮೀಮಾಂಸೆ. [ಸಂ.ಮೀಮಾಂಸಾ]

೮. **ಮೀಸಲು** (ಈ) ಕಾದಿಟ್ಟದ್ದು, ಬೇರೆ ತೆಗೆದಿಟ್ಟದ್ದು, ವಿಶಿಷ್ಟ ಉದ್ದೇಶಕ್ಕೆಂದೇ ಪ್ರತ್ಯೇಕ ಇಟ್ಟದ್ದು. [ಕನ್ನಡ]

೯. **ವರ್ಜ್ಯ** (ಈ) ಬಿಡಬೇಕಾದದ್ದು, ತ್ಯಜಿಸತಕ್ಕದ್ದು, ಉದಾ:– ನೆಗಡಿಯಿದ್ದಲ್ಲಿ ಮೊಸರು ವರ್ಜ್ಯ. [ಸಂ. ವರ್ಜ್– ಬಿಡು ಎಂಬುದರಿಂದ]

೧೦. **ವರ್ಣಿಕೆ** (ಇ) ಚಿತ್ರಕಲೆ ಅಥವಾ ನಾಟ್ಯದಲ್ಲಿ ಬಣ್ಣ ಬಳಿಯುವಿಕೆ; ಅದಕ್ಕೆ ಇರುವ ವಿಶಿಷ್ಟ ವಿಧಾನ, ಮುಖವಾಡ. ಉದಾ:– ಮುಖವರ್ಣಿಕೆ. [ಸಂ. ವರ್ಣಿಕಾ]

೧೧. **ಸಾಟಿ** (ಅ) ಸಮಾನ; ಅದಲುಬದಲು. ಉದಾ:– ನನಗೂ ಅವನಿಗೂ ಸಾಟಿಯೆ? [ಸಂ. ಸಾರಥಿ–ಇಂದ ?]

೧೨. **ಹೋರಟೆ** (ಅ) ಹೋರಾಟ, ತೀವ್ರ ಕದನ, ತುಮುಲ. ಉದಾ:– ಹೋರಟೆಯಲ್ಲಿ ಎಲ್ಲ ಕಳೆದುಕೊಂಡ. [ದೇಶ್ಯ– ಪೋರ್ = ಜಗಳಾಡು–ಎಂಬುದರಿಂದ]

### ನಿಮ್ಮ ಶಬ್ದಶಕ್ತಿಯ ತರಗತಿ

**ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.**

| | | |
|---|---|---|
| **೬—೮ ಸರಿಯಿದ್ದರೆ** | ... | **ಸಾಧಾರಣ** |
| **೯–೧೦** ,, | ... | **ಉತ್ತಮ** |
| **೧೧–೧೨** ,, | ... | **ಅತ್ಯುತ್ತಮ** |

# ಹೀರಾಬಾಯಿ-ಔರಂಗಜೇಬ ಪ್ರಣಯ ಪ್ರಸಂಗ

**ಎಸ್. ಬಲರಾಮು**

ದೌಲತಾಬಾದಿನ ದುರ್ಗಮವಾದ ಪರ್ವತ ಪ್ರದೇಶ ಔರಂಗಜೇಬ ಮತ್ತು ಹೀರಾಬಾಯಿಯರ ಪ್ರಣಯ ಸ್ಥಳ. ಈ ಪ್ರಣಯಿಗಳ ಸಮಾಧಿಗಳು ಔರಂಗಬಾದಿನ ಬುಲ್ದಾಬಾದಿನಲ್ಲಿವೆ. ಇವೆರಡೂ ಸಮಾಧಿಗಳ ಮಧ್ಯೆ ದೌಲತಾಬಾದಿನ ಭವ್ಯವಾದ ಐತಿಹಾಸಿಕ ಕೋಟೆ ತಲೆಯೆತ್ತಿ ನಿಂತಿದೆ.

ಹುಣ್ಣಿಮೆಯ ರಾತ್ರಿಯ ಕಾಲದಲ್ಲಿ ಈ ಕೋಟೆಯ ಮೇಲ್ಭಾಗ ಚಂದ್ರನ ರಜತಕಿರಣಗಳಿಂದ ಬೆಳಗಲ್ಪಟ್ಟಾಗ ಈ ಸಮಾಧಿಗಳಲ್ಲಿ ಅಡಗಿರುವ ಎರಡು ಆತ್ಮಗಳ ಸ್ಮೃತಿಪಟಲಗಳ ಮೇಲೆ ಭೂತಕಾಲದ ಅರೆಮರೆತ ದಿನಗಳ ಅಸ್ಪಷ್ಟ ಚಿತ್ರಗಳು ತೇಲಾಡುತ್ತವೆ. ಆತ್ಮಗಳೆರಡೂ ಭವ್ಯಪ್ರಕೋಷ್ಠದೆಡೆಗೆ ತೃಷಿತನೇತ್ರಗಳಿಂದ ನೋಡಿ ತಮ್ಮ ಕ್ಷುಧೆಯನ್ನು ಹಿಂಗಿಸಿಕೊಳ್ಳಲು ಆಸೆಪಡುತ್ತವೆ. ಅಲ್ಲಿ ಅವುಗಳ ಮಿಲನದ ದಿವ್ಯಕ್ಷಣಗಳು ವಿರಹರೂಪತಾಳಿ ಹರಡಿಕೊಂಡಿವೆ. ಹೀಗೆಯೇ ಆ ಆತ್ಮಗಳ ಪ್ರಣಯ ಕಥೆ ಮೂಡಿಬರುತ್ತದೆ.

*  *

"ನನ್ನ ರೋಗ ಯಾವುದೆಂದು ತಿಳಿಸಿದರೆ ಅದರ ಔಷಧಿ ನೀನು ಕೊಡುತ್ತೀಯಾ? ಮೌನವನ್ನು ಮುರಿದು ಔರಂಗಜೇಬ್ ಅತ್ತೆಗೆ ಪ್ರಶ್ನೆಹಾಕಿದ

"ಔಷಧಿ? ಎಂಥ ಔಷಧಿ ರಾಜಕುಮಾರ? ಮೊದಲು ನಿನ್ನ ರೋಗವಾದರೂ ಏನು ಎನ್ನುವುದನ್ನು ಹೇಳು," ಎಂದಳು ಅವಳು ಕಾತರಳಾಗಿ.

ಔರಂಗಜೇಬನಿಗೆ ಆಶ್ವಾಸನೆ ಸಿಕ್ಕಿದ ಹಾಗಾಯಿತು. ಆವೇಗದ ಒಡ್ಡು ಒಡೆಯಿತು. ಎಲ್ಲವನ್ನೂ ಅತ್ತೆಗೆ ತಿಳಿಸಿದ.

೧೬೫೨–೫೩ರಲ್ಲಿ ಈ ಮಾತುಕತೆ ನಡೆಯುತ್ತಿತ್ತು. ಆಗಿನ್ನೂ ಔರಂಗಜೇಬ ಆಲಂ ಗೀರನಾಗಿರಲಿಲ್ಲ. ಯುವರಾಜನ ಪಟ್ಟವು ದೊರೆತಿರಲಿಲ್ಲ. ಅವನು ಕೇವಲ ಶಹಜಹಾನ್ ಸಾಮ್ರಾಟರ ತೃತೀಯ ಪುತ್ರ ಒಬ್ಬ ರಾಜಕುಮಾರನೆನೆಸಿದ್ದ. ಅದೇ ವರ್ಷ ಅವನು ದಕ್ಷಿಣದ ಸುಭೇದಾರನಾಗಿ ನೇಮಿಸಲ್ಪಟ್ಟಿದ್ದ. ದಕ್ಷಿಣ ಖಾನದೇಶ ಮತ್ತು ಅಹ್ಮದ ನಗರಗಳು ಮೊಗಲರ ವಶದಲ್ಲಿದ್ದವು. ಆದರೆ ವಿಜಾಪುರದ ಆದಿಲ್‌ಶಾಹ ಗೋಳಕೊಂಡದ ಕುತುಬಶಾಹರನ್ನೆದುರಿಸಲು ಔರಂಗಜೇಬನಂಥ ಸೂಕ್ಷ್ಮ ವಿವೇಕವುಳ್ಳ ಚತುರ ಹಾಗೂ ಕೂಟನೀತಿಜ್ಞ ಸೇನಾಪತಿಯ ಅವಶ್ಯಕತೆಯಿತ್ತು. ದಾರಾನಿಗೂ ಅವನಿಂದ ದೂರ

ವಿರುವುದೇ ಲೇಸೆನಿಸಿತ್ತು. ಔರಂಗಜೇಬ ತನ್ನ ಹೊಸ ಹುದ್ದೆಯನ್ನು ಸ್ವೀಕರಿಸುವುದಕ್ಕಾಗಿ ಪರಿವಾರದ ಸಂಗಡ ಔರಂಗಾಬಾದಿಗೆ ಪ್ರಯಾಣ ಬೆಳೆಸಿದ. ಮಧ್ಯೆ ಬರಹಾನಪುರದಿಂದ ಹಾಯ್ದು ಹೋಗಬೇಕಾಗಿತ್ತು. ಆಗ ಅವನ ಮಾವ ಅಲ್ಲಿಯೇ ತೋಪುಖಾನೆಯ ಹಿರಿಯ ಅಧಿಕಾರಿಯಾಗಿದ್ದ ಅವನ ಅತ್ತೆ (ಮುಮತಾಜಳ ತಂಗಿ) ತನ್ನ ಪತಿಯ ಸಂಗಡ ಅಲ್ಲಿಯೇ ಇದ್ದಳು. ಅಲ್ಲಿ ಬಿಡಾರ ಬಿಟ್ಟಾಗ ಅತ್ತೆಯನ್ನು ಕಾಣಲೇಬೇಕೆಂದು ಹಂಬಲಿಸಿ ಔರಂಗಜೇಬ ಅವಳ ಮನೆಗೆ ನಡೆದ.

ಮಳೆಗಾಲ ಕಳೆಯುತ್ತ ಬಂದಿತ್ತು. ಸಾತಪುಡಾದ ಹಚ್ಚ ಹಸಿರಾದ ಶಿಖರ ಶ್ರೇಣಿಗಳನ್ನು ಬಿಟ್ಟು ವಿರಹಕ್ಕೊಳಗಾದಾಗಲೂ ರಸಿಕ ಮೇಘಗಳ ಮನ ಒಪ್ಪುತ್ತಿದ್ದಿಲ್ಲ. ಪರ್ವತ ಶ್ರೇಣಿಯ ಸುತ್ತಲೂ ಮೇಘಮಾಲೆ ಹರಡಿಕೊಂಡಿತ್ತು. ತಮ್ಮ ಬಾಹುಪಾಶದಲ್ಲಿ ಅಳಿಯುವದಕ್ಕಾಗಿ ಎಂಬಂತೆ ಒಮ್ಮೊಮ್ಮೆ ಈ ಮೇಘರಾಶಿ ಶಿಖರಗಳೆಡೆಗೆ ನುಗ್ಗುತ್ತಿತ್ತು. ವಾತಾವರಣವೂ ಮದಮತ್ತವಾಗಿತ್ತು.

ಬರಹಾನಪುರದಿಂದ ಸ್ವಲ್ಪ ಆಚೆ ಜೈನಾಬಾದಿನಲ್ಲಿ ತಾಪಿಯ ತಟದ ಮೇಲೆ "ಅಹಬಾನಾ" ಎಂಬ ರಮಣೀಯವಾದ ಉದ್ಯಾನವಿತ್ತು. ಔರಂಗಜೇಬನ ಅತ್ತೆ ಸ್ವಾಗತಕ್ಕೆ ಎಲ್ಲ ಸಿದ್ಧತೆಗಳನ್ನು ಅಲ್ಲಿಯೇ ಮಾಡಿಸಿದ್ದಳು. ಅವನು ಉದ್ಯಾನವನ್ನು ತಲಪಿದಾಗ ಕತ್ತಲು ಆವರಿಸಿತ್ತು. ಉದ್ಯಾನದ ವಿವಿಧ ಕುಸುಮಗಳಿಂದ ಪರಿಮಳ ಸೂಸುತ್ತಿತ್ತು. ಉದ್ಯಾನವನ್ನು ಪ್ರವೇಶಿಸುವಾಗಲೇ ಅವನ ದೃಷ್ಟಿ ಎದುರಿಗಿರುವ ಮಾವಿನ ಮರಗಳ ಕಡೆಗೆ ಹರಿಯಿತು. ಯಾರೋ ಸುಂದರಿಯಾದ ಅಪ್ಸರೆ ಮಧುರವಾಗಿ ಮನದಲ್ಲಿಯೇ ಹಾಡುತ್ತ, ಉಸಿರೆನ್ನೆಳೆಯುತ್ತ ಉನ್ಮತ್ತಳಾಗಿ ಸಂಚರಿಸುತ್ತಿದ್ದಳು. ಮಾವುಗಳಿಂದ ತುಂಬಿದ ವೃಕ್ಷಗಳ ಶಾಖೆಗಳು ಅವಳ ಉನ್ಮಾದಕ್ಕೆ ಮೆರಗು ಕೊಟ್ಟಿದ್ದವು. ಅವಳು ಔರಂಗಜೇಬನ ಮೇಲೆ ಮಾದಕವಾದ ಕಟಾಕ್ಷವನ್ನು ಬೀರಿ, ನಕ್ಕು ಎದುರಿಗಿರುವ ಶಾಖೆಯಿಂದ ಒಂದು ಹಣ್ಣನ್ನು ಕಿತ್ತುಕೊಂಡಳು. ಅವಳನ್ನು ಕಂಡು, ಔರಂಗಜೇಬ ತನ್ನನ್ನು ತಾನೇ ಮರೆತುಬಿಟ್ಟ. ಅನಿಮಿಷ ನೇತ್ರದಿಂದ ಎಲ್ಲವನ್ನೂ ನೋಡಿ ಮಂತ್ರಮುಗ್ಧನಾದ. ಅವನ ಕಣ್ಣುಗಳ ಮುಂದೆ ಏನೋ ಮಿಂಚಿ ಮಾಯವಾದಂತಾಯಿತು.

ಔರಂಗಜೇಬನ ಮನಸೆಳೆದವಳು ಆ ಕಾಲದ ಪ್ರಸಿದ್ಧ ಗಾಯಕಿ ಹಾಗೂ ನರ್ತಕಿಯಾದ ಹೀರಾಬಾಯಿ. ಅವಳು ಗುಣಶಾಲಿಯಾಗಿದ್ದಂತೆ ರೂಪದಲ್ಲಿಯೂ ರತಿಯನ್ನು ಮೀರಿಸುವಂತಿದ್ದಳು. ಚಿನ್ನಕ್ಕೆ ಕುಂದಣವಿಟ್ಟಂತಾಗಿತ್ತು ಅವಳ ಸೌಂದರ್ಯ. ವೇಷಭೂಷಣಗಳಿಂದ ಅಲಂಕೃತಳಾಗಿ ರಂಗಶಾಲೆಗೆ ಅವಳು ತನ್ನ ರೂಪರಾಶಿಯನ್ನೇ ಹೊತ್ತು ತಂದಾಗ ಅಲ್ಲಿದ್ದ ರಸಿಕರ ಮೇಲೆ ಇಂದ್ರಜಾಲದ ಪ್ರಭಾವವಾಗುತ್ತಿತ್ತು. ಅವಳ ಹಾವಭಾವಗಳ ಭಂಗಿಯನ್ನು ನೋಡಿ ಅವರ ಹೃದಯ ಉದ್ವೇಗಗೊಳ್ಳುತ್ತಿತ್ತು. ಹೀಗೆಯೇ ಇಂಥ ಒಂದು ಅಮೃತಘಳಿಗೆಯಲ್ಲಿ ಅವಳ ಉನ್ಮತ್ತ ನಯನಗಳ ಬಾಣ ಅಲ್ಲಿದ್ದ ಒಬ್ಬ ಖಾನನ ಹೃದಯಕ್ಕೆ ತಾಗಿತು. ಅವನು ಅವಳ ರೂಪರಾಶಿಯಲ್ಲಿ ಮುಳುಗಿ ಹೋದ. ಅವಳನ್ನು ತನ್ನವಳನ್ನಾಗಿ ಅಂತಃಪುರದಲ್ಲಿಯೇ ಇಳಿಸಿಕೊಂಡ. ಸಂಯೋಗವಶಾತ್ ಅವನ ಸ್ವಾಗತ ಸಮಯದಲ್ಲಿ ತನ್ನ ಸಖಿಯರೊಂದಿಗೆ ಅವಳು ಆ ಉದ್ಯಾನಕ್ಕೆ ಆಗಮಿಸಿದ್ದಳು.

ಅವಳನ್ನು ನೋಡಿದ ತಕ್ಷಣವೇ ಕೆಲವು ಗಂಟೆಗಳ ಕಾಲ ಔರಂಗಜೇಬ ಮೂರ್ಛಿತನಾಗಿ ಹೋದ. ಯಾವ ವೈದ್ಯರ ಚಿಕಿತ್ಸೆಯೂ ಫಲಿಸಲಿಲ್ಲ. ಇತ್ತ ಅತ್ತೆಯ ಪ್ರಯತ್ನಗಳು ನಿಷ್ಪ್ರಯೋಜಕವಾದವು. ಸುಮಾರು ಅರ್ಧ ರಾತ್ರಿ ಕಳೆದಾಗ ಅವನಿಗೆ ಪ್ರಜ್ಞೆ ಬಂದಿತು. ಅವನ ರೋಗ ತಿಳಿದು ಅತ್ತೆ ಅವಾಕ್ಕಾದಳು. ಮುಖ ವಿವರ್ಣವಾಯಿತು. ಬಾಯಿಂದ ಮಾತೇ ಹೊರಡದಾದವು. ಅವನಿಗೆ ಅತ್ತೆಯ ನಿರ್ಮಲ ಕಣ್ಣುಗಳಿಂದ ಅವಳಲ್ಲಿರುವ ಆತಂಕ ಅರ್ಥವಾಯಿತು. ಅವನೇ ಹೇಳಿದ: "ಅತ್ತೆ, ನನಗೆ ನಿನ್ನಿಂದ ಈ ರೋಗಕ್ಕೆ ಔಷಧಿ ಸಿಕ್ಕುವದಿಲ್ಲ ಎಂದು ಗೊತ್ತು. ನೀನು ವ್ಯರ್ಥ ಹಳಹಿಡಿದೆ.

ನನ್ನ ಮಾತಿಗೇ ಉತ್ತರವಿಲ್ಲದಾದಾಗ ರೋಗಕ್ಕೆ ಸಮಾಧಾನವನ್ನೆಲ್ಲಿಂದ ಕೊಡುವಿ ?"

"ಖಾನನನ್ನು ನೀನರಿಯೆ ರಾಜಕುಮಾರ. ನಿನ್ನ ತಂದೆಗೇನೇ ತಲೆ ಬಾಗದವನು ನಿನ್ನನ್ನು ಕೇಳುವನೇ ? ಈ ಮಾತು ಅವನಿಗೆ ತಿಳಿದಿದ್ದೇ ಆದರೆ ಅವನು ಹೀರಾಬಾಯಿಯನ್ನು ಜೀವಂತವಾಗಿ ಉಳಿಸಲಾರ. ಅಲ್ಲದೆ ಇದರಿಂದ ನಿನಗೂ ಅಪಖ್ಯಾತಿ."

ಅತ್ತೆಯ ಮಾತುಕೇಳಿ ಔರಂಗಜೇಬ ಕೊಂಚ ಹೊತ್ತು ಮೌನವಾಗಿದ್ದ. ನಂತರ ದೀರ್ಘವಾದ ಉಸಿರೆಳೆದು ಹೇಳಿದ: "ನೀನು ಹೇಳುವುದು ಸರಿ. ಇದು ನನಗೂ ಸರಿಯೆನಿಸುವುದಿಲ್ಲ. ನೀನೀಗ ಹೊರಡು. ವಿಶ್ರಾಂತಿಯನ್ನು ತೆಗೆದುಕೋ. ಉದ್ದೇಶ ಪೂರ್ತಿಗೊಳ್ಳಲು ನಾನೇ ಉಪಾಯ ಹುಡುಕುವೆ" ಅತ್ತೆಯನ್ನು ಬೀಳ್ಕೊಟ್ಟ ಔರಂಗಜೇಬ ತನ್ನ ಶಿಬಿರಕ್ಕೆ ಬಂದ ಹೀರಾಬಾಯಿಯ ಚಿತ್ರ ಅವನ ಹೃದಯದಲ್ಲಿ ಅಚ್ಚೊತ್ತಿತ್ತು. ರಾತ್ರಿಯೆಲ್ಲಾ ನಿದ್ದೆ ಇಲ್ಲದೆ ಹಾಸಿಗೆಯ ಮೇಲೆ ಹೊರಳಾಡಿದ.

ಮರುದಿನ ಮುಂಜಾವಿನಲ್ಲಿ ತನ್ನ ಆಪ್ತ ಮಿತ್ರ ಹಾಗೂ ಅಂತರಂಗದ ಸಹಯೋಗಿ ಮುರ್ಶಿದಖಾನನನ್ನು ಕರೆಸಿ ತನ್ನೆಲ್ಲಾ ವೃತ್ತಾಂತವನ್ನು ವಿವರಿಸಿದ. ಅವನು ಔರಂಗಜೇಬನಿಗೆ ಧೈರ್ಯ ಹೇಳುತ್ತ, "ನಿರಾಶರಾಗಬೇಡಿ. ನನ್ನ ಭುಜಗಳಲ್ಲಿ ಬಲವಿರುವ ವರೆಗೆ ತಮ್ಮ ಇಚ್ಛೆಯನ್ನು ಪೂರ್ತಿಗೊಳಿಸಲು ಹೆಣಗುತ್ತೇನೆ," ಎಂಬ ಆಶ್ವಾಸನೆ ಇತ್ತ. ಮುಳುಗುವವನಿಗೆ ಹುಲ್ಲುಕಡ್ಡಿಯ ಆಧಾರ ಸಿಕ್ಕಂತಾಯಿತು.



ಔರಂಗಜೇಬನ ಕಣ್ಣುಗಳು ಅರಳಿದವು. "ಮುರ್ಶಿದ, ನೀನು ನನ್ನ ನಂಬಿಕಸ್ತ ಸೇವಕ, ನನಗಾಗಿ ನೀನು ಗಗನ ಕುಸುಮವನ್ನೂ ತಂದು ಕೊಡಬಲ್ಲೆ ಎಂದು ನನಗೆ ಗೊತ್ತು. ಆದರೆ ಒಂದು ಮಾತು, ಹೀರಾಬಾಯಿಯನ್ನು ಪಡೆಯಲು ಖಡ್ಗದ ಉಪಯೋಗ ಬೇಡ. ಒಮ್ಮೆ ಖಾನನನ್ನು ಕಂಡು ಕೇಳಿ ನೋಡು. ಅವನು ಏನು ಹೇಳುತ್ತಾನೆಂಬು ಕೇಳಿಕೊಂಡು ಬಾ." ಮುರ್ಶಿದಖಾನ್ ಕೂಡಲೆ ಖಾನನ ಬಳಿಗೆ ಬಂದ. ಖಾನ್ ಮನೆಯಲ್ಲಿಯೇ ಇದ್ದ. ಮುರ್ಶಿದ ಒಳ್ಳೆಯ ಯುಕ್ತಿಯಿಂದ ರಾಜಕುಮಾರನ ಬೇಡಿಕೆಯನ್ನು ಖಾನನ ಮುಂದಿಟ್ಟ. ಖಾನನಿಗೂ ಹೀರಾಬಾಯಿ ಪ್ರಾಣ ಪ್ರಿಯಳಾಗಿದ್ದಳು. ಮುರ್ಶಿದನ ಮಾತು ಕೇಳಿ ಉಭಯ ಸಂಕಟಕ್ಕೆ ಬಿದ್ದ. ಸ್ವಲ್ಪ ಸಮಯದ ನಂತರ ಹೇಳಿದ, "ಸರಿ, ನೀನು ಹೋಗು. ರಾಜಕುಮಾರನಿಗೆ ನನ್ನ ವಂದನೆಗಳನ್ನು ತಿಳಿಸು. ಇದಕ್ಕೆ ಉತ್ತರವನ್ನು ಅವನ ಅತ್ತೆಯೊಂದಿಗೆ ಹೇಳಿ ಕಳಿಸುವೆ."



"ಪರೀಕ್ಷೆ ಇದೆ ಸ್ವಾಮಿ. ಈ ಸಲವಾದ್ರೂ ಪರ್ಸೆಂಟೇಜ್ ಜಾಸ್ತಿ ಬರ್ಬೇಕೂಂತ ಮೇಷ್ಟ್ರುಗಳೇ ಬರೀತಿದ್ದಾರೆ."

ಮುರ್ಶಿದನನ್ನು ಬೀಳ್ಕೊಟ್ಟು ಖಾನ್ ತನ್ನ ಪ್ರೇಯಸಿಯ ಬಳಿಗೆ ಬಂದು ಅವಳಿಗೆ ಎಲ್ಲವನ್ನೂ ವಿವರವಾಗಿ ಹೇಳಿದ. "ಔರಂಗಜೇಬ ತನ್ನ ಹೆಂಡತಿ ಛತರಾಬಾಯಿಯನ್ನು ನನ್ನ ವಶಕ್ಕೆ ಒಪ್ಪಿಸಿದಲ್ಲಿ ನಾನು ಹೀರಾಬಾಯಿಯನ್ನು ಕೊಡುವೆ. ಇದರಿಂದ ನನ್ನಾವ ಅಭ್ಯಂತರವೂ ಇಲ್ಲ. ನೀನು ಹೋಗಿ ಕೇಳಿಕೊಂಡು ಬಾ" ಖಾನನ ಮಾತು ಕೇಳಿ ಮೊದಲು ಹೀರಾಬಾಯಿಗೆ ಸಂಕೋಚವಾಯಿತು. ನಂತರ ಉಪಾಯವಿಲ್ಲದೆ ಅವಳು ಔರಂಗಜೇಬನ ಬಳಿಗೆ ಹೋಗಿ ವಿಷಯವನ್ನೆಲ್ಲಾ ತಿಳಿಸಿದಳು. ಅವನು ಹೀರಾಬಾಯಿಯ ಸಲುವಾಗಿ ಏನನ್ನಾದರೂ ಮಾಡಲು ಸಿದ್ಧನಿದ್ದ. ಆಗ ಆತ ಒಬ್ಬ ಹೆಂಡತಿಯನ್ನೇಕೆ, ಇಬ್ಬರನ್ನು ಬೇಕಾದರೂ ಅತ್ತೆಯ ಸಂಗಡ ಅದೇ ಕ್ಷಣ ಕಳಿಸಲು ಸಿದ್ಧನಿದ್ದ. ಅಂತೆಯೇ ಖಾನನಿಗೆ ಹೇಳಿ ಕಳಿಸಿದ. ಇದನ್ನು ಕೇಳಿ ಖಾನನಿಗೆ ಆಶ್ಚರ್ಯ ಸಂತೋಷಗಳೆರಡೂ ಒಟ್ಟಿಗೇ ಆದವು. ಒಂದು ಹೆಣ್ಣಿಗಾಗಿ ಇಂಥ ತ್ಯಾಗವನ್ನು ಮಾಡಲು ಔರಂಗಜೇಬ ಸಿದ್ಧನಿರುವನೆಂದು ಖಾನ್ ಕನಸಿನಲ್ಲಿಯೂ ಎಣಿಸಿರಲಿಲ್ಲ. ನಿರುಪಾಯನಾಗಿ ಹೀರಾಬಾಯಿಯನ್ನು ತನ್ನ ಕಡೆಯಿಂದ ಉಡುಗೊರೆ ಎಂಬ ಸಂದೇಶದೊಡನೆ ಔರಂಗಜೇಬನಿಗೆ ಕಳುಹಿಸಿಕೊಟ್ಟ. ಔರಂಗಜೇಬನು ಹೀರಾಬಾಯಿಯನ್ನು ಪಡೆದಿದ್ದು ಜೈನಾಬಾದಿನಲ್ಲಿ. ಅಂತೆಯೇ ಆಕೆಗೆ ಜೈನಾಬಾದಿ ಎಂದು ಹೆಸರಿಟ್ಟು ಕರೆದ. ಇತಿಹಾಸದಲ್ಲಿ ಕೂಡ ಆಕೆ ಈ ಹೆಸರಿನಲ್ಲಿಯೇ ಪರಿಚಿತಳಾಗಿದ್ದಾಳೆ. ಆಕೆಯ ಸಂಗದಲ್ಲಿ ಔರಂಗಜೇಬ ಜಗತ್ತನ್ನೇ ಮರೆತ.

* *

ಶರದೃತುವಿನ ಪೂರ್ಣಿಮೆಯ ರಾತ್ರಿ. ಚಂದ್ರನ ಬೆಳ್ಳಿಯ ಕಿರಣಗಳು ದೌಲತಾಬಾದಿನ ಕೋಟೆಯನ್ನು ಅಲ್ಲಿಯ ನೆಲವನ್ನು ಮುದ್ದಿಸುತ್ತಿವೆ. ಮಹಲಿನ ಮೇಲಂತಸ್ತಿನಲ್ಲಿ ಔರಂಗಜೇಬ– ಹೀರಾಬಾಯಿಯರು ಪ್ರೇಮಾಲಾಪದಲ್ಲಿ ಮಗ್ನರಾಗಿದ್ದಾರೆ. "ಪ್ರಿಯಾ, ನೀನು ನನ್ನನ್ನು ಹೃದಯಾಂತರಾಳದಿಂದ ಪ್ರೇಮಿಸುವಿಯಾ?"

ಹೀರಾಬಾಯಿ ಔರಂಗಜೇಬನ ಕೈಯಲ್ಲಿ ತನ್ನ ಕೈ ತೆಗೆದುಕೊಳ್ಳುತ್ತಾ ಕೇಳಿದಳು.

"ನನ್ನನ್ನು ನಂಬಲಾರೆಯಾ? ನಿನಗೇನು ಸಾಕ್ಷಿ ಬೇಕು ಹೇಳು?"

"ಸರಿ. ನನ್ನ ಮಾತೊಂದನ್ನು ನಡೆಸಿಕೊಡು. ನಿನ್ನ ಪ್ರೇಮ ಎಷ್ಟು ಮಟ್ಟಿಗೆ ಅಪ್ಪಟವಾಗಿದೆ ಎಂಬುದನ್ನು ಅದರಿಂದ ತಿಳಿಯುವೆ."

"ಒಂದಲ್ಲ ನೂರು ಹೇಳು. ಈಗಲೇ ನಡೆಸಿಕೊಡುವೆ."

"ಇಗೋ, ಈ ಪಾನ ಪಾತ್ರೆಯಲ್ಲಿರುವ ಸುರೆಯನ್ನು ನನ್ನ ಪ್ರೇಮದ ಪ್ರತೀಕವಾಗಿ ಕುಡಿ."

ಔರಂಗಜೇಬ ಧರ್ಮ ಸಂಕಟದಲ್ಲಿ ಬಿದ್ದ. ಅವನು ಅಂದಿನವರೆಗೂ ಸುರೆಯನ್ನು ಮುಟ್ಟಿರಲಿಲ್ಲ. ಅವನು ಬೇಡವೆಂದು ಎಷ್ಟು ಕೇಳಿಕೊಂಡರೂ ಹೀರಾಬಾಯಿ ತನ್ನ ಹಠ ಬಿಡಲಿಲ್ಲ. ಕೊನೆಗೂ ಅವನ ಧರ್ಮ ಪ್ರಣಯದ ಮುಂದೆ ತಲೆ ತಗ್ಗಿಸಿತು. ಮಧುಬಾಲೆ ಮಧು ಬಟ್ಟಲನ್ನು ನೀಡಿದಳು. ಅಸಹಾಯಕನಾದ ಔರಂಗಜೇಬ ಅದನ್ನು ಕೈಗೆ ತೆಗೆದುಕೊಳ್ಳುತ್ತಾ ತನ್ನ ತುಟಿಗಳವರೆಗೆ ತಂದ. ತತ್‌ಕ್ಷಣ ಹೀರಾ ಅದನ್ನು ತಡೆದಳು.

"ಸಾಕು ಪ್ರಿಯಕರ, ನಾನು ಸೋತೆ. ನೀನು ವಿಜಯಿಯಾದೆ. ಇಂಥಾ ಘೃಣಿತ ವಸ್ತುವಿನಿಂದ ನಿನ್ನ ಶುಚಿತ್ವವನ್ನು ಕೆಡಿಸಲಾರೆ. ನಿನಗೆ ನನ್ನ ಮೇಲಿರುವ ಪ್ರೇಮ ನಿಜವಾಗಿಯೂ ಶುಭ್ರ ಸ್ಫಟಿಕ," ಎಂದು ಹೇಳಿ ಹೀರಾ ಔರಂಗಜೇಬನನ್ನು ಆಲಂಗಿಸಿಕೊಂಡಳು.

* *

ಇದು ನಡೆದು ಸುಮಾರು ಒಂದು ವರ್ಷ ಕಳೆದಿರಬಹುದು. ಹೀರಾ ಹಾಸಿಗೆ ಹಿಡಿದಳು. ಅವಳ ಕಾಯಿಲೆಗೆ ಯಾವ ಮದ್ದೂ ಪ್ರಯೋಜನವಾಗಲಿಲ್ಲ. ಸ್ವಲ್ಪ ಸಮಯದ ನಂತರ ಆಕೆ ಮರಣ ಹೊಂದಿದಳು. ಇಂದಿಗೂ ದೌಲತಾಬಾದ ದುರ್ಗದಲ್ಲಿರುವ ಅವಳ ಸಮಾಧಿ ಔರಂಗಜೇಬ – ಹೀರಾಬಾಯಿಯರ ಪ್ರಣಯ ಪ್ರಸಂಗವನ್ನು ನೆನಪಿಗೆ ತರುತ್ತದೆ.

ಪ್ರಸಿದ್ಧ ಚಲನಚಿತ್ರ ಗೀತರಚನೆಕಾರರಾದ ದಿ. ಸರಶಾರ್ ಸೈನಾನಿಯವರು ಚಲನ ಚಿತ್ರಗಳಿಗೆ ಗೀತೆಗಳನ್ನು ಬರೆಯಲು ಆಗ ತಾನೇ ಹೊಸದಾಗಿ ಬೊಂಬಾಯಿಗೆ ಬಂದಿದ್ದರು.

ಅವರು ವಿಜಯಭಟ್ಟರನ್ನು ಮೊದಲಿಗೆ ಭೇಟಿಮಾಡಿದರು; ಸೈನಾನಿ ಅವರು ಭಟ್ಟರಿಗೆ ೧೫೦ ರೂಪಾಯಿಗಳಿಗೊಂದರಂತೆ ಗೀತೆ ಬರೆದುಕೊಡುತ್ತಿದ್ದರು. ಕ್ರಮೇಣ ಅವರು ಖ್ಯಾತಿಗಳಿಸಲಾರಂಭಿಸಿದರು ಸಂಭಾಷಣೆ ಬರೆಯುವುದರಲ್ಲಿಯೂ ಸಿದ್ಧಹಸ್ತರಾಗಿ ದೊಡ್ಡ ಹೆಸರು ಗಳಿಸಿದರು

ಆ ನಂತರ ಒಮ್ಮೆ ವಿಜಯಭಟ್ಟರು ಅವರನ್ನು, "ಸರಶಾರ್ ಸಾಹೇಬರೇ, ಹಿಂದೆ ನಾನು ನಿಮ್ಮಿಂದ ಗೀತೆಗಳನ್ನು ಬರೆಸಿದಾಗ ನಾನು ನಿಮಗೆ ಪ್ರತಿ ಗೀತೆಗೆ ೨೫೦ ರೂಪಾಯಿಗಳ ವರೆಗೂ ಕೊಡಲು ತಯಾರಿದ್ದೆ. ಆದರೆ ನೀವು ೧೫೦ ರೂಪಾಯಿಗಳಿಗೆ ಒಂದೊಂದು ಗೀತೆ ಬರೆದು ಕೊಡಲು ತಯಾರಾದಿರಿ ಎಂಬುದು ನಿಮಗೆ ಗೊತ್ತೆ? ಹಾಗಾಗಿ ನಿಮಗೆ ಪ್ರತಿಗೀತೆಗೂ ೧೦೦ ರೂಪಾಯಿಗಳಂತೆ ಆಗ ನಷ್ಟವಾಯಿತು," ಎಂದು ಹೇಳಿದರು.

ಆಗ ಸರ್‌ಶಾರ್ ಸಾಹೇಬರು, "ಜನಾಬ್, ಆದರೂ ನಷ್ಟ ಆದದ್ದು ನನಗಲ್ಲ; ನಿಮಗೇ. ಏಕೆಂದರೆ ಆಕಾಲದಲ್ಲಿ ನಾನು ೫೦ ರೂಪಾಯಿಗೂ ಒಂದೊಂದು ಗೀತೆಯನ್ನು ಬರೆದು ಕೊಡಲು ತಯಾರಿದ್ದೆ," ಎಂದು ನಗುತ್ತ ಹೇಳಿದರು.

-ಎಸ್. ವಿಶ್ವನಾಥ

-೬೪-

# ಶಂಭು ಶಿವ ಮಹಾದೇವ

ದೇವತೆಗಳ ಮೂಲ ಹುಡುಕುವುದು ಬಲು ಜಿಡುಕಿನ ಕೆಲಸ. ಅವರು ಒಂದು ಜನಾಂಗ ದಿಂದ ಇನ್ನೊಂದು ಜನಾಂಗಕ್ಕೆ ದಾಟಿ ಹೋಗುತ್ತಾರೆ. ಆಳುವ ಜನಾಂಗದಿಂದ ಆಳಿಸಿಕೊಳ್ಳುವ ಜನಾಂಗಕ್ಕೆ ಹೇಗೋ ಹಾಗೆ ದಾಸೀಕೃತ ಜನಾಂಗದಿಂದ ಪ್ರಭು ಜನಾಂಗಕ್ಕೂ ಸೇರಿಕೊಳ್ಳುವು ದುಂಟು. ಕೆಲವು ಸಲ ಅವರು ಈ ಉತ್ಕ್ರಮಣದಲ್ಲಿ ತಮ್ಮ ಹೆಸರುಗಳನ್ನು ಹೊಸ ಜನಾಂಗದ ಭಾಷೆಗೆ ಅನುವಾದಿಸಿಕೊಂಡರೆ ಕೆಲವು ಸಲ ಸ್ವಲ್ಪ ಅಕ್ಷರ ವ್ಯತ್ಯಾಸದೊಡನೆ ಮೂಲ ಹೆಸರಿನೊಡ ನೆಯೇ ವಲಸೆ ಹೋಗುತ್ತಾರೆ.

ನಮ್ಮ **ಶಿವನನ್ನೇ** ತೆಗೆದುಕೊಳ್ಳಿ. ಅವನಿಗೆ ಸುಸ್ಕೃತದಲ್ಲಿ **ಶಂಕರ, ಶಂಭು** ಇತ್ಯಾದಿ ಹೆಸರುಗಳೂ ಇವೆ. **ಶಿವ, ಶಂ** ಎಂಬ ಪದಗಳಿಗೆ ವೈದಿಕ ಸಂಸ್ಕೃತದಲ್ಲೇ **ಮಂಗಲ** ಮಂಗಲಕರ ಎಂಬ ಅರ್ಥವಿದೆ. ಶಿವನು ಆ ಗುಣಗಳುಳ್ಳ ವೈದಿಕಾರ್ಯರ ದೇವತೆಯೆಂದು ಥಟ್ಟನೆ ಗುರುತಿಸಿ ಬಿಡುತ್ತೇವೆ. ಆದರೆ **ಶಿವನನ್ನು** ಹೋಲುವ ದೇವತೆ ವೈದಿಕ ವಾಙ್ಮಯವಲ್ಲಿ **ಮಹಾದೇವನಾಗಿ** ಯಜುರ್ವೇದದಲ್ಲಿ, ಅಂದರೆ ತಡವಾಗಿ ತಾನೇ ಕಾಣಿಸಿಕೊಳ್ಳುತ್ತಾನೆ.

ದೇವತೆಗಳ ತಳ ಶೋಧನೆ ಮಾಡಿದ ವಿದ್ವಾಂಸರ ಪ್ರಕಾರ **ಶಿವ** ಎಂಬವನು ಆರ್ಯರು ಇಲ್ಲಿ ವಸತಿ ಹೂಡುವ ಮೊದಲೇ ಇದ್ದ ದೇವತೆ. ಹಳೇ ತಮಿಳಿನಲ್ಲಿ **ಚಿವನ್** ಎಂದರೆ ಕೆಂಪು ಬಣ್ಣದ ವನು. ದ್ರಾವಿಡ ಭಾಷೆಗಳೆಲ್ಲ **ಚೆಂ, ಚೆವ್, ಕೆಂ** ಎಂದರೆ ಕೆಂಪೆಂದರ್ಥ. (ತಮಿಳಿನಲ್ಲಿ ಇಂದಿಗೂ ಚ, ಶ ಗಳು ಬೇರೆಯಲ್ಲ.) **ಚಿವಪ್ಪನ್** ಎಂದರೆ ತಮಿಳಿನಲ್ಲಿ ಕೆಂಪಾದವ. **ಶಂಭು** ಎಂಬ ಅವನ ಇನ್ನೊಂದು ಹೆಸರು (ದ್ರಾವಿಡ **ಚೆಂಬು** ತಾಮ್ರ, ಕೆಂಪು) ಕೂಡ ಕೆಂಪುತನವನ್ನೇ ಹೇಳುವಂ ಥಾದ್ದು. ಯಜುರ್ವೇದದಲ್ಲಿ ಶಿವಪರವಾದ ಶತರುದ್ರೀಯ ಸೂಕ್ತಗಳಲ್ಲಿ ಈತನನ್ನು **ನೀಲ ಲೋಹಿತ** (= ನೀಲಿ – ಕೆಂಪಾದವ) ಎಂಬ ಹೆಸರಿಂದಲೂ ಕರೆದಿದೆ. ಇದೂ ಅವನ ಕೆಂಪುತನ ವನ್ನು ಸಿದ್ಧಪಡಿಸುತ್ತದೆ. ಕರ್ನಾಟಕದಲ್ಲಿ **ಕೆಂಪಣ್ಣ, ಕೆಂಪಯ್ಯ, ಕೆಂಪಿ, ನೀಲಯ್ಯ, ನೀಲವ್ವ** ಎಂಬ ಹೆಸರುಗಳು ಮೊದಲಿಂದ ಕಾಣಿಸುತ್ತವೆ. ಅವೂ ಶಿವನಾಮಗಳೇ. ಶಿವನು ನೀಲಿಕೊರಳ ದೇವತೆ ಎಂದು ಪುರಾಣ ಪ್ರಸಿದ್ಧನಾಗಿದ್ದಾನೆ. ಈ ದ್ರಾವಿಡ **ಚಿವ, ಶಿವನನ್ನು** ಸ್ವೀಕರಿಸಿ ಅವ ನನ್ನು ವೈದಿಕರು ತಮ್ಮ ಹಳೆಯ ರುದ್ರನಿಗೆ ಸಮೀಕರಿಸಿದರು. **ರುದ್ರರು** ಉಗ್ರ ದೇವತೆಗಳು; ಶಿವನೂ ಉಗ್ರನೇ. ಈ **ರುದ್ರ** ಮೂಲದಲ್ಲಿ **ರುಧ್ರನೆಂದು ಪೂರ್ವ** ವೈದಿಕ ಭಾಷಾ ಪುನಾರಚನೆ ಮಾಡಿದವರ ಮತ. ರುದ್ರರು **ರೋದಿಸುವವರು** ಎಂದರೆ ಆರ್ಭಟಿಸುವವರು ಎನ್ನುವುದು ವೇದ ಸಿದ್ಧವಾಗಿದ್ದರೂ ರುಧಿರ ಶಬ್ದಕ್ಕೆ ರಕ್ತ, ಕೆಂಪು ಎಂಬರ್ಥಗಳಿರುವುದನ್ನೂ ಗಮನಿಸಬೇಕು; ರುದ್ರದ ಮೂಲ ರೂಪ **ರುಧ್ರನಾಗಿದ್ದರೆ** ಅವನು **ಚಿವ, ಚೆಂಬು**ಗಳಿಗೆ ಸಮವರ್ಣನೇ ಆಗು ತ್ತಾನೆ. ಶಿವನು ಪುರುಷ ಲಿಂಗದ ಸಂಕೇತದವನಾಗಿರುವುದರಿಂದ ಅವನಿಗೆ ಕೆಂಪುತನ ಆರೋಪಿತ ವಾಗಿರಬೇಕು.

ಕನ್ನಡಿಗರಿಗೆ ಪ್ರಿಯನಾದ **ಹನುಮಂತ** ಕೂಡ ದ್ರಾವಿಡನೇ. ಅವನ ಹೆಸರಿಗೆ ಸಂಸ್ಕೃತದಲ್ಲಿ **ಹನೂ+ಮಾನ್** (= ಹನುವುಳ್ಳವ) ಎಂದು ಅರ್ಥ ಮಾಡಲಾಗಿದೆ. **ಹನು** ಅಂದರೆ ಗಲ್ಲ, **ದವಡೆ.** ಕಪಿಯಾಗಿರುವುದರಿಂದ ದೊಡ್ಡ ದವಡೆ ಅಥವಾ ಮುಂದೆ ನೀಡಿದ ಮುಸುಡು ಎಂಬರ್ಥ ಮಾಡುವುದು ಅಸಂಗತವಲ್ಲ. ಆದರೆ ಸುನೀತಿಕುಮಾರ ಚಟರ್ಜಿಯವರ ಅಭಿಪ್ರಾಯದಲ್ಲಿ ಹನು

ಮಂತ ಎಂಬುದು ದ್ರಾವಿಡದ **ಆಣ್ ಮಂತಿಯ** ಸಂಸ್ಕೃತೀಕರಣ. ಆಣ್ (= ಗಂಡು) ಮಂತಿ (=ಮಂಗ.) ಅದನ್ನೇ ಸಂಸ್ಕೃತಕ್ಕೆ ಭಾಷಾಂತರಿಸಿ **ವೃಷಾಕಪಿ** (= ಗಂಡು ಮಂಗ) ಮಾಡಿದ್ದಾರೆಂದು ಚಟರ್ಜಿ ಹೇಳುತ್ತಾರೆ. ಆದರೆ ಈ ಹೆಸರು ಪುರಾಣಗಳಲ್ಲಿ ವಿಷ್ಣುವಿಗೆ, ಶಿವನಿಗೆ ಸಲ್ಲುತ್ತದೆ ಹೊರತು ಹನುಮಂತನಿಗಲ್ಲ ಎಂಬುದು ಚಟರ್ಜಿಯವರ ಊಹೆಯನ್ನು ಚಿಂತ್ಯವಾಗಿ ಮಾಡುತ್ತದೆ.


ಶಿವನನ್ನು ನಾವು ಲಿಂಗ ರೂಪದಲ್ಲಿ ಪೂಜಿಸುತ್ತೇವೆ. **ಲಿಂಗ** ಎಂಬುದು ಪುರುಷ ಜನನೇಂದ್ರಿಯದ ಹೆಸರೆಂದು ಬಗೆಯುತ್ತೇವೆ. ಆದರೆ ಲಿಂಗದ ಮುಖ್ಯಾರ್ಥ **ಗುರುತು, ಕುರುಹು,** ಸಂಕೇತ, ಅಂಕಿತ, ಗುಣ ಎಂದಲ್ಲದೆ ಪುರುಷ ಜನನೇಂದ್ರಿಯವೆಂದಲ್ಲ. ಪುರುಷನನ್ನು ಅವನ ಜನನೇಂದ್ರಿಯದಿಂದ **ಗುರುತಿಸುವುದರಿಂದ** ಅದು ಅವನ **ಲಿಂಗ.** (ಈ ದೃಷ್ಟಿಯಿಂದ ಸ್ತ್ರೀ ಯೋನಿಯೂ ಕುಚಗಳೂ ಲಿಂಗವೇ.) ಶಿವನನ್ನು ವಿಶ್ವಸೃಷ್ಟಿಯ ಜನಕ ಎನ್ನುವುದರಿಂದ **ಶಿಶ್ನ**ವನ್ನು ಅವನ **ಗುರುತಾಗಿ** ಅಂದರೆ **ಲಿಂಗವಾಗಿ** ಮಾಡಿಕೊಂಡದ್ದು. ಹೀಗೆ **ಶಿವಲಿಂಗ** ಎಂದರೆ ಶಿವನ ಗುರುತು. ವಚನಕಾರರು **ಕುರುಹು, ಕುರುಹು** ಎನ್ನುವುದು ಇದೇ ಅರ್ಥದಲ್ಲಿ. ಅದೇ ತರ್ಕದಿಂದ ವಿಷ್ಣುವಿನ ಮೂರ್ತಿಯನ್ನೂ "ವಿಷ್ಣುಲಿಂಗ" ಎಂದರೆ ತಪ್ಪಲ್ಲ. ವ್ಯಾಕರಣದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ ಎನ್ನುವುದು **ಕುರುಹು** ಲಕ್ಷಣ ಎಂಬರ್ಥದ ವಿಸ್ತರಣೆ. ಹೀಗೆ ಅದು **ಜಾತಿ**ವಾಚಕ. (ಇಲ್ಲದಿದ್ದರೆ **ನಪುಂಸಕ ಲಿಂಗ** ಎನ್ನುವುದಕ್ಕೆ ಏನರ್ಥ?) ಇಂಗ್ಲೀಷಿನಲ್ಲಿ ಇದನ್ನು gender ಎನ್ನುತ್ತಾರಲ್ಲ. ಆದರರ್ಥವೂ **ಜಾತಿ** ಎಂದೇ.

**ಲಿಂಗಕ್ಕೆ** ಆಪಟೆ **ಕೋಶ** ಕನಿಷ್ಠ ಪಕ್ಷ ೧೭ ಅರ್ಥಗಳನ್ನು ಕೊಡುತ್ತದೆ. ಗುರುತಿಸಲು ಅನುಕೂಲವಾಗುವ ಹೊರ ಲಕ್ಷಣವನ್ನು **ಲಿಂಗವೆಂದು** ಕರೆದ ಮೇಲೆ, **ತೋರಿಕೆಗೆ** ಮಾಡಿಕೊಂಡ **ಠಕ್ಕು ಗುರುತು ಲಿಂಗವಾಯಿತು.** ಅರ್ಥಾತ್ ಕೃತಕ ವೇಷ. ತದ್ವಿರುದ್ಧವಾಗಿ ಹೊರಗೆ ವಿಶಿಷ್ಟ ಲಕ್ಷಣಗಳಿಂದ ಗುರುತಿಸಲ್ಪಡುವ ಒಳಗಿನ ವಾಸ್ತವಿಕ ಸೂಕ್ಷ್ಮ ಆತ್ಮದ ಸ್ವರೂಪವನ್ನೂ **ಲಿಂಗ ಶರೀರ** ಎನ್ನುವುದಾಯಿತು. ಸ್ಥೂಲ ಶರೀರದ ಒಳಗಿರುವಂಥಾದ್ದು ಅವಿನಾಶಿಯಾದ **ಲಿಂಗ** ಶರೀರ. ಮನುಷ್ಯನ ಆಲೋಚನೆಯಾದ ರೀತಿ ಒಂದೇ ಪದವನ್ನು ಒಂದಕ್ಕೊಂದು ವಿರುದ್ಧ ಅರ್ಥಗಳಲ್ಲಿ ನಡೆಸುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. **ಹೀಗೆ ಲಿಂಗಿ** ಎಂದರೆ ಯಾವುದಾದರೂ (ಧರ್ಮದ, ದೇವತೆಯ) ಕುರುಹನ್ನು, ವಿಶೇಷವಾಗಿ ಶಿವನದನ್ನು ಧರಿಸಿದವನೂ ಹೌದು, ಹಾಗೆ ಧರಿಸಿ ಮೋಸ ಮಾಡುವ ದಾಂಭಿಕನೂ ಹೌದು.

■

ಭಾರತೀಯ ಜ್ಯೋತಿಷದಲ್ಲಿ ಆಕಾಶದ ಗ್ರಹಪಥದ ನಕ್ಷತ್ರಗಳನ್ನು ಹನ್ನೆರಡು ರಾಶಿಗಳಾಗಿ ವಿಂಗಡಿಸಿದ್ದಾರೆ. **ಮೇಷ,** ವೃಷಭ, ಮಿಥುನ ಇತ್ಯಾದಿಯಾಗಿ. ಇದರ ಮೂಲ ಭಾರತೀಯವಲ್ಲ ಎಂದರೆ ತುಸು ಆಘಾತವೇ ಆದೀತು. ನಿಜಕ್ಕೂ ಇದು ಪುರಾತನ ಮೆಸಪ್ರೊಟೇಮಿಯದ ಸುಮೇರಿಯನ್ ಜ್ಯೋತಿಷಿಗಳ ಕೈವಾಡ–ಕ್ರಿಸ್ತನಿಗಿಂತ ೧೫೦೦ ವರ್ಷಕ್ಕೂ ಹಿಂದಿನದು. ಇದಕ್ಕೆ ಶಬ್ದಗಳು ಸಾಕ್ಷಿ ಹೇಳುತ್ತವೆ. ಗ್ರೀಕ್, ಅರಬ್ಬಿ, ಪಾರಸೀಕ ಮತ್ತು ಭಾರತೀಯ ಜ್ಯೋತಿಷದ ರಾಶಿಗಳ ಹೆಸರುಗಳ ಅನುವಾದಗಳೇ. **ಮೇಷ** ಅಂದರೆ **ಮೇಕೆ;** ಗ್ರೀಕ್ Aerias ಎಂದರೂ ಅದೇ; ಪ್ರಾಚೀನ ಪಾರಸಿಕ **ವರಕ್** ಎಂದರೂ ಅದೇ; ಇಂಗ್ಲೀಷ್ Ram ಎಂದರೂ ಮೇಕೆ. ನಮ್ಮ ವೇದಾಂಗ ಜ್ಯೋತಿಷದಲ್ಲಿ ೨೮ ನಕ್ಷತ್ರಗಳುಂಟೇ ಹೊರತು ರಾಶಿಗಳಿಲ್ಲ. ಕ್ರಿಸ್ತ ಶಕಾರಂಭಕ್ಕೆ ಸ್ವಲ್ಪ ಹಿಂದೆ ತಾನೇ ನಮ್ಮ ಜ್ಯೋತಿಷಿಗಳು ಈ ಪದ್ಧತಿಯನ್ನು ಸ್ವೀಕರಿಸಿದಂತೆ ಕಾಣುತ್ತದೆ.

**–ಹಾವೆಂ.**


ಸುತ್ತಮುತ್ತ
ಕೇಳಬೇಕಾದದ್ದು
೧

"ಪ್ರಭುಗಳು ಕರುಣಿಸಿ ನಡೆಸಿಕೊಡುವುದಾದರೆ…
ನಾನು ಒಂದು ಘಳಿಗೆಯಷ್ಟು ಕಾಲ
ಸಿಂ–ಸಿಂಹಾಸನದ ಮೇಲೆ ಕು–ಕುಳಿತು ರಾಜ…"
ಕಣ್ಣನಿಂದ ಮುಂದಿನ ಮಾತು ಬರಲಿಲ್ಲ…

'ಅಶ್ವತ್ಥ'

ಒಂದು ಕಾಲ ಇತ್ತು. ಆಗ ಅಂಥ ಜನರು ಇದ್ದರು. ಆಗ ತಿರುವಾಂಕೂರು ಸಂಸ್ಥಾನ ಅಸ್ತಿತ್ವದಲ್ಲಿತ್ತು. ಇನ್ನೂ ಪ್ರಜಾಪ್ರಭುತ್ವ ಜಾರಿಗೆ ಬಂದಿರಲಿಲ್ಲ. 'ಅನಂತ ಪದ್ಮನಾಭ ದೇವರ ಪರವಾಗಿ' ಎಂದು ರಾಜ್ಯವಾಳುತ್ತಿದ್ದ ವರ್ಮ ರಾಜರ ಸಂತತಿ ಆಡಳಿತ ನಡೆಸುತ್ತಿತ್ತು.

ಪದ್ಮನಾಭ ಸೇವಕನಾದರೇನು, ರಾಜರು ರಾಜರೇ. ರಾಜವೈಭೋಗ. ಭಾರಿ ಅರಮನೆ, ಆಸ್ಥಾನ, ಸಿಂಹಾಸನ, ಛತ್ರ, ಚಾಮರ, ದಿವಾನರು, ಮಂತ್ರಿಗಳು, ಅಧಿಕಾರಿಗಳು ಆಸ್ಥಾನ ವಿದ್ವಾಂಸರು, ವಂದಿ ಮಾಗಧರು, ಆಳುಕಾಳು ಅಪರಿಮಿತ ಪರಿವಾರ, ಊಹಿಸಬಹುದಾದಂತೆ.

ರಾಜರು ಬಹಳವಾಗಿ ಅರಮನೆಯಲ್ಲೇ ಇರುತ್ತಿದ್ದರು. ಆಡಳಿತ ತೀರ್ಮಾನ, ಮಂತ್ರಾಲೋಚನೆ ಸಭೆ, ವಿದ್ವದ್ಗೋಷ್ಠಿ, ಸಾಹಿತ್ಯ ಸಂಗೀತಾದಿ ಸಾಂಸ್ಕೃತಿಕ ಚಟುವಟಿಕೆಗಳು ಉತ್ಸವಗಳು ಎಲ್ಲವೂ ಸಿಂಹಾಸನ ಇದ್ದ ಭವ್ಯ ರಾಜಾಸ್ಥಾನದಲ್ಲಿಯೇ ನಡೆಯುತ್ತಿದ್ದುವು. ಅಲ್ಲಿ ಸಿಂಹಾಸನದ ಮೇಲೆ ಕುಳಿತು ಪ್ರಮುಖ ತೀರ್ಮಾನಗಳಿಗೆ, ಶಾಸನಗಳಿಗೆ ಹಸ್ತಾಕ್ಷರವನ್ನು ಹಾಕಿ ರಾಜಾಜ್ಞೆಗಳನ್ನು ಹೊರಡಿಸುತ್ತಿದ್ದರು.

ಇತರ ಸಮಯಗಳಲ್ಲಿ ಕೈಯಿಗೆ ಬಟ್ಟು, ಕಾಲಿಗೆ ಬಟ್ಟು ಎನ್ನುವಂತೆ ಹೇಗೆ ಪರಿವಾರದ ಜನರು ಇರುತ್ತಿದ್ದರೋ ಹಾಗೆಯೇ ರಾಜ ಸಿಂಹಾಸನಾರೂಢನಾಗಿ ಕುಳಿತ ಹೊತ್ತಿನಲ್ಲಿಯೂ ಅವನಿಗೆ ರಾಜಛತ್ರವನ್ನು ಹಿಡಿಯುವುದಕ್ಕೆ, ಚಾಮರಗಳನ್ನು ಹಾಕುವುದಕ್ಕೆ, ರಾಜದಂಡವನ್ನು ಹಿಡಿದಿರುವುದಕ್ಕೆ, ಪತ್ರ ಲೆಕ್ಕಣಿಗಳನ್ನು ಒದಗಿಸುವುದಕ್ಕೆ ಹೀಗೆಲ್ಲ ಪ್ರತಿಯೊಂದು ಕೆಲಸಕ್ಕೂ ಒಬ್ಬೊಬ್ಬನು ನಿಯಮಿತನಾಗಿರುತ್ತಿದ್ದ. ರಾಜತನ ರಾಜನಿಗೆ ಹೇಗೆ ವಂಶಪಾರಂಪ್ಯರವಾಗಿ ಬಂದಿದ್ದಿತೋ ಹಾಗೆಯೇ ಈ ಸೇವಾ ಕೆಲಸಗಳು ಆಯಾ ಸೇವಕರಿಗೆ ವಂಶಪಾರಂಪರ್ಯವಾಗಿ ಬಂದಿದ್ದವು.

ಇಂಥ ದೊಡ್ಡ ಸೇವಕ ಪರಿವಾರದಲ್ಲಿ ರಾಜನಿಗೆ ಛತ್ರ ಹಿಡಿಯುವ ಕಾರ್ಯ ಕಣ್ಣನಿಗೆ ಬಂದಿದ್ದಿತು. ಕಣ್ಣ ಛತ್ರವನ್ನು ರಾಜಾಸ್ಥಾನದಲ್ಲಿ ಅಷ್ಟೇ ಅಲ್ಲ, ರಾಜ ಅರಮನೆಯ ಹೊರಗೆ ಹೋಗುವಾಗಲೂ ಹಿಡಿದು ರಾಜನ ಹಿಂದೆ ಇರುತ್ತಿದ್ದ. ಆ ದಿನಗಳಲ್ಲಿ ರಾಜ ನಿತ್ಯವೂ ಶುಚಿರ್ಭೂತನಾಗಿ ಬೆಳಗಾಲಿನಲ್ಲಿ ಅರಮನೆಯಿಂದ ಪದ್ಮನಾಭ ಸ್ವಾಮಿಯ ದೇವಾಲಯಕ್ಕೆ ಹೋಗಿ, ಸೇವೆ ಸಲ್ಲಿಸಿ, ಪ್ರಮುಖ ತೀರ್ಮಾನಗಳ ವರದಿ

ಯನ್ನು ದೇವರಿಗೆ ಒಪ್ಪಿಸಿ ಹಿಂದಿರುಗುತ್ತಿದ್ದ. ಆಗಿನ ರಾಜರು ಅಡಿಗಲ್ಲಿನಿಂದ ಅಡಿಗಲ್ಲಿಗೆ, ಅನಾವರಣದಿಂದ ಅನಾವರಣಕ್ಕೆ, ಆರಂಭೋತ್ಸವದಿಂದ ಆರಂಭೋತ್ಸವಕ್ಕೆ, ಸಭೆಯಿಂದ ಸಭೆಗೆ ಸಮ್ಮೇಳನದಿಂದ ಸಮ್ಮೇಳನಕ್ಕೆ ಪ್ರಶಸ್ತಿ ಪ್ರದಾನದಿಂದ ಪ್ರಶಸ್ತಿ ಪ್ರದಾನಕ್ಕೆ, ಭಾಷಣದಿಂದ ಭಾಷಣಕ್ಕೆ ಅಲೆದಾಡುತ್ತಿರಲಿಲ್ಲವಾದರೂ ಆಗೊಮ್ಮೆ ಈಗೊಮ್ಮೆ ಅಲ್ಲಿ ಇಲ್ಲಿ ರಾಜ್ಯದಲ್ಲಿ ಎಲ್ಲಾದರೂ ಅಪರೂಪವಾಗಿ ಹೋಗಿ ಬರುತ್ತಿದ್ದರು. ಅಪರೂಪ ಭಾಷಣವೊಂದನ್ನು ಓದುತ್ತಿದ್ದರು. ಅದನ್ನು ಜನರು ಬಹಳ ಎಚ್ಚರಿಕೆಯಿಂದ ಕೇಳುತ್ತಿದ್ದರು. ಪತ್ರಿಕೆಗಳಲ್ಲಿ 'ಪಂಕ್ತಿಗಳ ಮಧ್ಯೆ' ಎನ್ನುವಂತೆ ಓದಿಕೊಳ್ಳುತ್ತಿದ್ದರು, ಗಹನವಾಗಿ ಚರ್ಚಿಸುತ್ತಿದ್ದರು, ಅದರ ಪರಿಣಾಮವನ್ನು ತಿಳಿದುಕೊಳ್ಳುತ್ತಿದ್ದರು. ಅದರ ಪ್ರಭಾವ ಜನರ ಮೇಲೆ, ಜನಜೀವನದ ಮೇಲೆ ಆಗುತ್ತಿತ್ತು. ಇಂಥ ರಾಜ ಸಂಚಾರದ ವೇಳೆಯಲ್ಲೂ ಕಣ್ಣನ ಕೊಡೆ ರಾಜನ ತಲೆಯ ಮೇಲೆ ಇರುತ್ತಿತ್ತು.

ರಾಜ ಛತ್ರದ ಜವಾಬ್ದಾರಿಯನ್ನು ಹೊರುತ್ತಿದ್ದ ಕಣ್ಣನ ಸ್ವಂತ ಛತ್ರ ಅರ್ಥಾತ್ ಅವನ ಸೂರು ಇರುತ್ತಿದ್ದುದು ರಾಜಧಾನಿಯ ಬಡಜನ ವಿಭಾಗದಲ್ಲಿ. ಸಣ್ಣ ಸಂಬಳದಲ್ಲಿ, ಸಣ್ಣಮನೆಯಲ್ಲಿ, ಸಣ್ಣ ಸಂಸಾರದೊಂದಿಗೆ ಕಾಲ ಹಾಕುತ್ತಿದ್ದ. ಅರಮನೆಯಲ್ಲಿ ಇರದ ವೇಳೆಯಲ್ಲಿ ತನ್ನ ಕಿರು ಕಿರುಮನೆಯಲ್ಲಿ ಅದರ ಸುತ್ತ ಮುತ್ತಣ ಸಂಸಾರಗಳೊಂದಿಗೆ ಮಾತುಕಥೆ ಮಾಡುತ್ತ ಅವರೊಡನೆ ಹೊಂದಿಕೊಂಡು ಬಾಳುತ್ತಿರುತ್ತಿದ್ದ. ರಾಜ ಹೋದ ಹೋದ ಎಡೆಗಳಲ್ಲಿ ಇವನಿಗೆ ಬಿಡುವು ದೊರೆತಾಗ ಅಲ್ಲಲ್ಲಿ ಇದ್ದ ನೆಂಟರು ಇಷ್ಟರು ಇವರುಗಳನ್ನು ಕಂಡು ವಿಚಾರಿಸಿಕೊಂಡು ಬರುತ್ತಿದ್ದ. ಇಂಥ ಬಾಳಿನಲ್ಲಿ ಈ ಕೊಡೆಯಾಳು ವರ್ಷದ ಮೇಲೆ ವರ್ಷ, ದಶಕದ ಮೇಲೆ ದಶಕ ಕಳೆದಿದ್ದ. ರಾಜನಾದ ಮೇಲೆ ರಾಜನ ಈ ಸೇವೆಯಲ್ಲಿ ಕಣ್ಣ ಸವೆದು ಹಣ್ಣು ಮುದುಕನಾಗಿದ್ದ. ಆದರೂ ಇನ್ನೂ ಕೊಡೆಯನ್ನು ಹಿಡಿಯುತ್ತಲೇ ಇದ್ದ.

ಹೀಗಿರುವಲ್ಲಿ ಯುವರಾಜ ವರ್ಮ ಪಟ್ಟಕ್ಕೆ ಬಂದ. ರಾಜ ವರ್ಮನಿಗೂ ಕಣ್ಣನಿಗೂ ಇವತ್ತಿನ ನಂಟಲ್ಲ. ಕೊಡೆಯ ಮೂಲಕದ ನಂಟಷ್ಟೆ ಅಲ್ಲ, ರಾಜ ಮಗುವಾಗಿದ್ದಾಗ ಕಣ್ಣ ಅವನನ್ನು ಎತ್ತಿ ಆಡಿಸಿದ್ದ– ಅರಮನೆಯಲ್ಲಿ ಅಂಥ ಅವಕಾಶ ಒದಗಿದ್ದಾಗ, ತನ್ನ ಕೊಡೆಯ ಕಾರ್ಯಭಾರವಿಲ್ಲದಿದ್ದ ಹೊತ್ತಿನಲ್ಲಿ ಅರಮನೆಯ ಇತರ ಕೆಲಸದಲ್ಲಿ ತೊಡಗಿರುತ್ತಿದ್ದಾಗ. ಹಾಗೆ ಈ ರಾಜನಿಗೂ ಈ ಮುದಿ ಕೊಡೆಯಾಳಿಗೂ ಸಾಕಾದಷ್ಟು ಪರಿಚಯ, ಸ್ನೇಹ, ಪ್ರೀತಿ– ಒಬ್ಬ ರಾಜನಿಗೂ ಒಬ್ಬ ಸೇವಕನಿಗೂ ಎಷ್ಟೆಷ್ಟು ಇರಬಹುದೋ ಅಷ್ಟೂ. ಅವರವರೇ ಇದ್ದಾಗ ರಾಜನಿಂದ 'ಕಣ್ಣಜ್ಜ' ಎಂದು ಕರೆಯಿಸಿಕೊಳ್ಳುವಷ್ಟು.

ರಾಜ ವರ್ಮ ಆಳ್ವಿಕೆಯನ್ನು ನಡೆಸುತ್ತ ಕೆಲವು ವರ್ಷಗಳಾಗಿದ್ದುವು. ಆಗ ಒಂದು ದಿನ ರಾಜ ದೇವಾಲಯಕ್ಕೆ ಹೋಗುತ್ತಿದ್ದಾಗ ಕೊಡೆಯಾಳು ಕಣ್ಣನಿಗೆ ಸ್ವಲ್ಪ ಕೈ ಸೋತಂತಾಗಿ ಕೊಡೆ ಕೊಂಚ ಓಲಿತ್ತು. ಅವನು ಕೊಂಚವೇ ಕೊಂಚ ತತ್ತರಿಸಿ, ತಟ್ಟನೆ ಎಚ್ಚತ್ತುಕೊಂಡು ನಡೆದಿದ್ದ. ಆದರೂ ತನ್ನಲ್ಲಿ ತನಗೇ ಬೇಸರವಾಗಿತ್ತು. ಅದೇ ದಿನ ಸಂಜೆ ಸಮಯವನ್ನು ಸಾಧಿಸಿ, ರಾಜ ಒಬ್ಬನೆ ತನ್ನ ಓದು ಕೋಣೆಯಲ್ಲಿದ್ದಾಗ ಭೆಟ್ಟಿಗೆ ಹೋಗಿ ಕೈಜೋಡಿಸಿ ನಿಂತುಕೊಂಡಿದ್ದ. ಯಯಾತಿಯ ಪ್ರಕರಣವನ್ನು ಓದುತ್ತಿದ್ದ ರಾಜ ತನ್ನ ನಸುನಗೆ ಮೊಗದ ತಲೆಯನ್ನೆತ್ತಿ ನೋಡಿದಾಗ ಕಣ್ಣ ಅವನ ಕಣ್ಣಿಗೆ ಬಿದ್ದಿದ್ದ.

"ಏನು ಕಣ್ಣಜ್ಜ ಸಮಾಚಾರ?" ರಾಜ ನಸುನಗುತ್ತಲೇ ಮೃದುವಾಗಿ, ವಿನೋದವಾಗಿ, ವಿಶ್ವಾಸದಿಂದ ಕೇಳಿದ.

"ಪ್ರಭು, ನನಗೆ ನಿವೃತ್ತಿಯನ್ನು ದಯಪಾಲಿಸಬೇಕು." ಕಣ್ಣ ಅದುರುವ ಧ್ವನಿಯಿಂದ ಪ್ರಾರ್ಥಿಸಿಕೊಂಡ. ರಾಜನ ಮುಖದ ನಸುನಗೆ ಇದ್ದಕ್ಕಿದ್ದಂತೆ ಮಾಯವಾಯಿತು.

"ಯಾಕೆ ಕಣ್ಣಜ್ಜ?" ರಾಜ ಆತಂಕದಿಂದ ಗಂಭೀರವಾಗಿ ಕೇಳಿ ಮತ್ತೆ ನಸುನಗೆಯನ್ನು ತಂದು

ಕೊಂಡು, "ನನಗೆ, ನಮ್ಮ ಹಿರಿಯರಿಗೂ ನನಗೂ, ಕೊಡೆ ಹಿಡಿದು ಹಿಡಿದು ಬೇಸರವಾಯಿತೆ?" ಎಂದು ಕೇಳಿದ.

"ಉಂಟೆ ಪ್ರಭು ಉಂಟೆ? ಹಾಗೆಂದಾದರೂ ಆದೀತೆ? ಅದು ಕೃತಘ್ನತೆಯಾದೀತು, ದ್ರೋಹ ವೂ ಆದೀತು. ನನ್ನ ಉದ್ಯೋಗದಲ್ಲಿ, ಪ್ರಭುಗಳ ಸೇವೆಯಲ್ಲಿ ನನಗೆ ಅಪಾರ ತೃಪ್ತಿ ಸಂತೋಷ."

"ಮತ್ತೆ?"

"ಪ್ರಭು, ನಾನು ವೃದ್ಧನಾಗುತ್ತಿದ್ದೇನೆ. ಶರೀರ ಬಲ ಕುಗ್ಗಿದೆ. ಕೈ ಸೋಲಲಾರಂಭಿಸಿದೆ. ಛತ್ರಿ ಸ್ವಲ್ಪ ಅತ್ತಿತ್ತ ಜೋಲಿ ಹೊಡೆಯುತ್ತಿದೆ, ನನ್ನ ಕೈಯಲ್ಲಿ."

"ನನಗೆ ಅಂಥ ಸೂಚನೆ ಕಂಡುಬಂದೇ ಇಲ್ಲವಲ್ಲ?"

"ಪ್ರಭುಗಳಿಗೆ ಗೊತ್ತಾಗದಿರಬಹುದು. ಆದರೆ ನನಗೆ ಗೊತ್ತಾಗಿದೆ."

"ಹೂಂ."

"ಇಂಥ ದುರ್ಬಲ ಕೈಗಳಿಂದ ಪ್ರಭುಗಳ ಸೇವೆ ಮಾಡುವುದು ಸರಿಯಲ್ಲ. ನಾಳೆ ಏನಾದರೂ ಅನುಚಿತವಾದದ್ದು ಆದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ..."

"ಓ, ಆ ಅಪರಾಧದ ಮಾತು ಇರಲಿ, ನೋಡೋಣ."

"ಇಲ್ಲ ಪ್ರಭು, ಕ್ಷಮಿಸಬೇಕು. ಒಂದು ವೇಳೆ ಪ್ರಭುಗಳು ನನ್ನಿಂದ ಆದ ಅಚಾತುರ್ಯ ವನ್ನು ಕ್ಷಮಿಸಿದರೂ, ನಾನೇ ನನ್ನನ್ನು ಕ್ಷಮಿಸಿ ಕೊಳ್ಳಲಾರೆ. ಅಷ್ಟು ವಿವೇಚನೆ ನನ್ನಲ್ಲಿ ಇನ್ನೂ ಇದೆ. ಆ ದೇಹ ದುರ್ಬಲವಾಗಿದ್ದರೂ ನನ್ನ ಮನಸ್ಸು ಇನ್ನೂ ದುರ್ಬಲವಾಗಿಲ್ಲ. ಶಕ್ತಿ ಮೀರಿದ ಆಸೆ ಸಲ್ಲದೆಂಬ ಅರಿವು ಹೋಗಿಲ್ಲ. ಪ್ರಭುಗಳು ನನ್ನ ನಮ್ರ ಒತ್ತಾಯ ವನ್ನು ತಪ್ಪಾಗಿ ತಿಳಿಯದೆ ಮನ್ನಿಸಿ ನನ್ನ ಪ್ರಾರ್ಥನೆಯನ್ನು ದಯಮಾಡಿ ನಡೆಸಿಕೊಡ ಬೇಕು."

"ಹೂಂ."

ರಾಜ ಮೌನವಾಗಿ ಬಹಳ ಹೊತ್ತು ಚಿಂತಿಸುತ್ತಿದ್ದ. ಕಡೆಗೆ ದೀರ್ಘವಾಗಿ ಉಸಿರನ್ನು ಬಿಟ್ಟು ಯೋಚಿಸುತ್ತಲೇ ಹೇಳಿದ, "ಅಲ್ಲ ಕಣ್ಣಜ್ಜ, ಪ್ರಪಂಚದಲ್ಲಿ ಸಾಮಾನ್ಯವಾಗಿ ಎಲ್ಲರೂ ಎಷ್ಟೇ ವಯಸ್ಸಾದರೂ ದೇಹ ಮನಸ್ಸುಗಳೆರಡರಲ್ಲೂ ತಮ್ಮ ತಮ್ಮ ಪದವಿ ಅಧಿಕಾರ ಸಂಪಾದನೆಗಳ ಮೋಹದಿಂದ ಬಿಡಿಸಿ ಕೊಳ್ಳಲಾರದೆ ತಮ್ಮ ತಮ್ಮ ಸ್ಥಾನಕ್ಕೆ ಅಂಟಿಕೊಂಡಿರಲು ಇಷ್ಟಪಡುತ್ತಾರೆ, ಅದ ಕ್ಕಾಗಿ ಹೆಣಗಾಡುತ್ತಾರೆ; ಕಾಡುತ್ತಾರೆ ಬೇಡುತ್ತಾರೆ. ಹೋರಾಡುತ್ತಾರೆ. ಹೀನ ನೀಚ ಆದದ್ದು ಏನೇನೆಲ್ಲ ಮಾಡಲೂ ಹೇಸುವುದಿಲ್ಲ ಬಲವಂತವಾಗಿ ಅವರನ್ನು ಕಿತ್ತೊಗೆಯದಿದ್ದರೆ ತಾವಾಗಿಯೇ ಹೋಗುವ ಮಾತೇ ಇಲ್ಲ. ಇನ್ನು ಕೆಲವರಂತೂ ಹೇಗೇ ಇರಲಿ ಏನೇ ಮಾಡಲಿ ಮೃತ್ಯುವಿನಿಂದಲ್ಲದೆ ನಿವೃತ್ತ ರಾಗುವದೇ ಇಲ್ಲ; ಸ್ಥಾನದಲ್ಲೇ ಸಾಯ ಬೇಕು. ಈಗ ನಮ್ಮನ್ನೆ ನೋಡು, ರಾಜ ರನ್ನು. ನಾವು ಆಶ್ರಮ ಧರ್ಮದ ಪಾಠ ಕಲಿ ಯುತ್ತೇವೆ. ಆದರೆ ಆ ಪುರಾತನ ರಾಜ ಋಷಿ ಗಳಂತೆ ಆ ಧರ್ಮವನ್ನು ಅನುಷ್ಠಾನಕ್ಕೆ ತರದೆ ನಮ್ಮ ನಮ್ಮ ಸುಖ ಲಾಲಸೆಯಲ್ಲಿ ಸ್ಥಾನ ಮೋಹದಲ್ಲಿ ಮುಳುಗಿಯೇ ಇರುತ್ತೇವೆ, ಮೃತ್ಯುವಶರಾಗುವವರೆಗೂ. ಯಥಾ ರಾಜಾ ತಥಾ ಪ್ರಜಾ. ನಮ್ಮ ಪ್ರಜೆಗಳೂ, ಅಧಿ ಕಾರಿಯಾಗಲಿ, ಆಳಾಗಲಿ, ಆಸೆಬುರುಕರೇ; ಆಶ್ಚರ್ಯವೇನು. ಇಂದಿನ ನೀತಿ ಸ್ಥಿತಿ ಗತಿ ಹೀಗಿರುವಾಗ ನೀನೊಬ್ಬ, ಬಡ ಕೊಡೆಯಾಳು, ನಿನ್ನ ದೌರ್ಬಲ್ಯ ಸೂಚನೆಯನ್ನು ಕಂಡು ಕೊಂಡ ಆಸೆಯನ್ನೆಲ್ಲ ತೊರೆದು ನೀನಾ ಗಿಯೇ ನಿವೃತ್ತಿಯನ್ನು ಬಯಸುತ್ತಿದೀಯಲ್ಲ– ಆಶ್ಚರ್ಯ! ಅತ್ಯಾಶ್ಚರ್ಯ! ನಿನ್ನಂಥವರು ಇನ್ನು ಒಬ್ಬಿಬ್ಬರು ಇದ್ದಾರೆಯೋ, ಯಾರೂ ಇಲ್ಲವೇ ಇಲ್ಲವೋ... ಇರಲಿ. ಕಣ್ಣಜ್ಜ, ಚೆನ್ನಾಗಿ ಯೋಚಿಸಿದ್ದೀಯಾ ಹೇಗೆ? ನಿನ್ನ ಸ್ಥಿತಿ ಯಲ್ಲಿಯೂ ಏನೇನನ್ನು, ಎಷ್ಟೆಷ್ಟನ್ನು ಕಳೆದು ಕೊಳ್ಳುತ್ತಿಯೇ ಎಂದು ತಿಳಿದಿದ್ದೀಯಾ ? ಇನ್ನಷ್ಟು ಕಾಲವನ್ನು ಬೇಕಾದರೆ ತೆಗೆದುಕೊ. ಅನಂತರ ಬಂದು ಹೇಳು."

"ಪ್ರಭು, ತಾವು ಅಪ್ಪಣೆ ಕೊಡಿಸಿದ್ದನ್ನೆಲ್ಲ ಕೇಳಿದ್ದೇನೆ. ಈಗಾಗಲೇ ಎಷ್ಟೋ ಹೊತ್ತು ಬಹಳ ಚೆನ್ನಾಗಿ ಯೋಚಿಸಿಯೇ ನನ್ನ ಪ್ರಾರ್ಥನೆಯನ್ನು ಸಲ್ಲಿಸಿದ್ದರೂ ಈಗಲೂ ಪ್ರಭುಗಳ ಮಾತನ್ನು ಮನನ ಮಾಡಿದೆ... ಪ್ರಭು, ಇಲ್ಲಿ ಯೋಚನೆ ಮಾಡಬೇಕಾದದ್ದು ಇಷ್ಟೇ ಎಂದು ನನಗೆ ಅನ್ನಿಸುತ್ತದೆ: ಸಾಕಾದಷ್ಟು ಯೋಗ್ಯತೆ ಇಲ್ಲದ ಮೇಲೂ, ಅಥವ ಯೋಗ್ಯತೆಯನ್ನು ಕಳೆದುಕೊಂಡ ಮೇಲೆ ಒಂದು ಸ್ಥಾನದ ಸಂಪಾದನೆಯ ಬಗ್ಗೆಯಾಗಲೀ, ಅದನ್ನು ಉಳಿಸಿಕೊಳ್ಳುವ ಬಗ್ಗೆಯಾಗಲಿ ಯೋಚಿಸುವದೇ ಯೋಗ್ಯವಲ್ಲ. ಇಲ್ಲಿ ಲಾಭ ನಷ್ಟ ಆಸೆಗಳ ವಿಷಯವೇ ಬರಬಾರದು. ಸರಿಯೆಂದು ತೋರಿದ್ದನ್ನು ಮಾಡಿಬಿಡಬೇಕು. ಪರಿಣಾಮವನ್ನು ಗಣನೆಗೆ ತಾರದೆ ಬಂದದ್ದನ್ನು, ಆದದ್ದನ್ನು ಅನುಭವಿಸಬೇಕಷ್ಟೆ. ಅದೇ ನ್ಯಾಯ.. ಪ್ರಭುಗಳು ಅಪ್ಪಣೆಕೊಡಿಸಿದ ರೀತಿಯಲ್ಲಿ ಅದೇ ಧರ್ಮ– ಇಲ್ಲಿ ಆಶ್ರಮ ಧರ್ಮ, ಅನುಭವಿಸಬೇಕಾದ ಧರ್ಮ. ನಾನು ಅತಿಯಾಗಿ ಮಾತನಾಡಿದೆನೆಂದು ಪ್ರಭುಗಳು ಭಾವಿಸಬಾರದಾಗಿ ಬೇಡಿಕೊಳ್ಳುತ್ತೇನೆ. ಇಷ್ಟರ ಮೇಲೆ ನನ್ನಿಂದ ಅಪರಾಧವಾಗಿದ್ದರೆ ಪ್ರಭುಗಳು ಅದನ್ನೂ ಕರುಣೆಯಿಂದ ಕ್ಷಮಿಸಬೇಕು. ಇಷ್ಟು ಮಾತನ್ನು, ನಡೆವಳಿಕೆಯನ್ನು ನಾನು ಕಲಿತದ್ದು ಪ್ರಭುಗಳ ಹಿರಿಯ ಪ್ರಭುಗಳವರ ಆಸ್ಥಾನದಲ್ಲಿ, ಹೊರಗೆ, ನಾನು ಇಷ್ಟು ಪ್ರಭುಗಳಿಗೆ ಕೊಡೆ ಹಿಡಿಯುತ್ತಿದ್ದ ಕಾಲದಲ್ಲಿ ನಾನು ಕೇಳಿದ್ದರಿಂದ, ನನ್ನ ಮುಂದೆ ನಡೆದಿದ್ದುದರಿಂದ. ಇದರಲ್ಲಿ ನನ್ನದೇನೂ ಇಲ್ಲ."

ಇಬ್ಬರ ಮಧ್ಯ ಇನ್ನಷ್ಟು ಮೌನ ನೆಲೆರಿಸಿದ್ದಿತು.

"ಕಣ್ಣಜ್ಜ," ರಾಜ ಇನ್ನೂ ಯೋಚಿಸುತ್ತಲೆ ನಿಧಾನವಾಗಿ ಮಾತಾಡಿದ. "ಕಣ್ಣಜ್ಜ, ನೀನು ಹೇಳಿದಂತೆ ನಿನ್ನ ಶರೀರವೇನೋ ಅಷ್ಟಿಷ್ಟು ತಗ್ಗಿರಬಹುದು ನಲುಗಿರಬಹುದು, ಆದರೆ ನಿನ್ನ ಮನಸ್ಸು ಕತ್ತಿಯ ಅಲುಗಿನಂತೆ ಇನ್ನೂ ಹರಿತವಾಗಿದೆ. ನೀನು ಯಾರಾದರೇನು? ಕೊಡೆಯಾಳೇ ಆದರೇನು, ಕಂಡದ್ದರಿಂದ ಕೇಳಿದ್ದರಿಂದ ಅನುಭವದಿಂದಲೂ ಬಹಳ ಕಲಿತಿದ್ದೀಯೇ.ಅಷ್ಟೇ ಅಲ್ಲದೆ ಚಿಂತನಶೀಲನೂ... ಆಗಿದ್ದೀಯೆ ಎಂದು ತೋರುತ್ತದೆ. ನಿಜವಾದ ವಿದ್ಯೆ ಬರುವುದು ಹೀಗೆಯೇನೋ. ಬಹಳ ಸಂತೋಷ ಕಣ್ಣಜ್ಜ, ಇನ್ನು ನಿನ್ನನ್ನು ನನ್ನ ಇಷ್ಟ ದೃಷ್ಟಿ ದಾರಿಗೆ ಹುಸಲಾಯಿಸುವದಿಲ್ಲ, ನಿನ್ನ ಇಷ್ಟಕ್ಕೆ ವಿರುದ್ಧವಾಗಿ ಬಲವಂತ ಮಾಡುವುದಿಲ್ಲ. ನೀನು ನಿವೃತ್ತನಾಗಬಹುದು. ಈ ಸಂದರ್ಭದಲ್ಲಿ ನಿನಗೆ ಅರಮನೆಯಿಂದ ಬರಬೇಕಾಗುವುದನ್ನು ಕೊಡುವಂತೆ ಅಜ್ಞೆ ಮಾಡುತ್ತೇವೆ."

"ಪ್ರಭುಗಳಿಂದ ಪರಮಾನುಗ್ರಹವಾಯಿತು."

"ಇನ್ನು ನೀನು ಅರಮನೆಯ ಸೇವೆಯಲ್ಲಿರುವುದಿಲ್ಲವಲ್ಲ ಎಂದು ನಮಗೆ ಬಹಳ ವ್ಯಥೆಯಾಗಿದೆ."

"ಪ್ರಭುಗಳ ಪ್ರೀತಿ ಕಾರುಣ್ಯ. ನಾನು ಕೃತಾರ್ಥ, ಕೃತಜ್ಞ."

"ಮುಖ್ಯವಾಗಿ ಇದು ನಿನ್ನ ಇಷ್ಟ, ನಿವೃತ್ತಿ ಜೀವನ ಮನಶ್ಶಾಂತಿಗಳ ವಿಷಯವಾಗಿದ್ದು ನಿರ್ವಾಹವಿಲ್ಲದೆ ನಾವು ಒಪ್ಪಿಕೊಂಡಿದ್ದೇವೆ. ನಿನ್ನ ಮುಂದಿನ ದಿನಗಳು ತೃಪ್ತಿ, ಶಾಂತಿಗಳಿಂದ ನಡೆಯುತ್ತಿರಲಿ. ಮಿಕ್ಕೆಲ್ಲ ಬಗೆಯ ನೂರಾರು ಸಂಪತ್ತುಗಳಿಗಿಂತ ಶಾಂತಿ ಸಂಪತ್ತು ಅತಿ ಶ್ರೇಷ್ಠ."

"ಪ್ರಭುಗಳು ಬಹಳ ಸರಿಯಾಗಿ ಅಪ್ಪಣೆ ಕೊಡಿಸೋಣವಾಯಿತು. ಸರ್ವದಾ ನೆನಪಿನಲ್ಲಿಟ್ಟುಕೊಂಡು ಬಾಳನ್ನು ನಡೆಸುತ್ತೇನೆ."

"ಯಾವಾಗಲಾದರೊಮ್ಮೆ ಆಗಾಗ ಕಾಣಿಸಿಕೊಳ್ಳುತ್ತಿರು. ಯೋಗಕ್ಷೇಮವನ್ನು ತಿಳಿಸುತ್ತಿರು."

"ಅಪ್ಪಣೆ. ಪ್ರಭುಗಳವರ ದರ್ಶನಲಾಭ ನನಗೆ ಎಂದೂ ಪರಮಾನಂದವೇ."

"ಹೋಗಿ ಬಾ, ಶ್ರೀ ಪದ್ಮನಾಭ ಸ್ವಾಮಿಯ ಅನುಗ್ರಹ ಸರ್ವದಾ ಇರಲಿ."

"ಮಹಾಪ್ರಭುಗಳಿಗೆ ನಮಸ್ಕಾರ!" ಕಣ್ಣ ತಲೆಬಾಗಿ ಕೈಜೋಡಿಸಿ ನಮಸ್ಕರಿಸಿ ಹಿಂದು ಹಿಂದಾಗಿ ನಡೆಯುತ್ತ ಹೊಸ್ತಿಲನ್ನು ದಾಟಿದ.

ರಾಜ ಮತ್ತೆ ಕೈಯಲ್ಲಿದ್ದ ಗ್ರಂಥದ ಕಡೆಗೆ ತಿರುಗಿದ. ಕಣ್ಣ ಹೊಸ್ತಿಲನ್ನು ದಾಟಿ ಬೆನ್ನು ತಿರುಗಿಸಿ ಕಟಾಂಜನದಲ್ಲಿ ಹೆಜ್ಜೆಹಾಕುತ್ತಿದ್ದ.

"ಕಣ್ಣಪ್ಪಾ," ರಾಜ ಕೂಗಿದುದು ಕಣ್ಣನ ಕಿವಿಗೆ ಬಿದ್ದಿತು.

ಕಣ್ಣ ತಟ್ಟನೆ ನಿಂತು ತಿರುಗಿ ನಡೆದು ಬಂದು ರಾಜನ ಕೋಣೆಯನ್ನು ಪ್ರವೇಶಿಸಿ ರಾಜ ಸಮ್ಮುಖದಲ್ಲಿ ತಲೆಬಾಗಿ ನಿಂತುಕೊಂಡು

"ನೋಡು ಕಣ್ಣಪ್ಪ, ಇಂಥ ಸಂದರ್ಭದಲ್ಲಿ ನಾವು ಇನ್ನೊಂದು ಮಾತನ್ನು ಹೇಳಬೇಕಾಗಿತ್ತು–ಕೇಳಬೇಕಾಗಿತ್ತು," ಅಂದ ರಾಜ ಕೊಂಚ ತಡೆದು ಯೋಚಿಸುತ್ತ.

"ಅಪ್ಪಣೆ ಕೊಡಿಸೋಣವಾಗಬೇಕು. ಸರ್ವದಾ ನಾನು ಪ್ರಭುಗಳ ಆಜ್ಞಾಧಾರಕ."

"ನಮ್ಮ ಅರಮನೆಯ ಸೇವಕರಲ್ಲಿ ನೀನು ಬಹಳ ಹಳಬ. ಎಷ್ಟೋ ಕಾಲದಿಂದ ನಮ್ಮ ವಂಶದ, ವಂಶದವರ, ನಮ್ಮ ಹಿರಿಯರ ಸೇವೆಯನ್ನು ಅತ್ಯಂತ ನಿಷ್ಠೆಯಿಂದಲೂ ಪ್ರೀತಿ ತೃಪ್ತಿ ಸಂತೋಷಗಳಿಂದಲೂ ಮಾಡಿಕೊಂಡು ಬಂದಿದ್ದೀಯೇ. ನಮ್ಮ ವಿಷಯದಲ್ಲಂತೂ ನಮ್ಮ ಬಾಲ್ಯದಿಂದ ಹಿಡಿದು ಇಂದಿನವರೆಗೂ ನಡೆದ ನಿನ್ನ ಸೇವೆ ತುಂಬ ವಿಶೇಷವಾದದ್ದೆಂದು ನಾವು ಬಲ್ಲೆವು. ಅದರಿಂದ ನಾವು ಅತ್ಯಂತ ಸುಪ್ರೀತರಾಗಿದ್ದೇವೆ ಆದುದರಿಂದ ನಿನ್ನಂಥ ಶ್ರೇಷ್ಠ ಸೇವಕರಿಗೆ ಇತರರೆಲ್ಲರಿಗೂ, ನೀಡುವ ಸಾಮಾನ್ಯ ಬಳುವಳಿಯ ಜತೆಗೆ, ಇನ್ನೇನಾದರೂ ವಿಶೇಷವಾದದ್ದನ್ನು, ನಿನಗೆ ಇಷ್ಟವಾದದ್ದನ್ನು, ನೀಡಬೇಕೆಂಬುದು ನಮ್ಮ ಸಂತೋಷದ ಇಷ್ಟವಾಗಿದೆ. ಅಂಥಾದ್ದೇನಾದರೂ ನಿನ್ನ ಮನಸ್ಸಿನಲ್ಲಿ ಈಗಾಗಲೆ ಇದ್ದರೆ ತಿಳಿಸು, ಈಗ ಮನಸ್ಸಿನಲ್ಲಿಲ್ಲದಿದ್ದರೆ ಯೋಚಿಸಿಕೊಂಡು ಬಂದು ಕೇಳು. ಅದನ್ನು ಕೊಡಮಾಡುತ್ತೇವೆ, ಇಷ್ಟಾರ್ಥವನ್ನು ಹೇಳು, ನಡೆಸಿಕೊಡುತ್ತೇವೆ."

"ಪ್ರಭುಗಳವರ ಚಿತ್ತ ಬಹಳ ಪ್ರೀತಿ ಧಾರಾಳದ್ದು. ಪ್ರಭುಗಳವರ ಪ್ರಶ್ನೆಗಾಗಿ, ವಾಗ್ದಾನಕ್ಕಾಗಿ ನಾನು ಅತ್ಯಂತ ಕೃತಜ್ಞ. ಆದರೆ ಪ್ರಭು, ನನಗೇನು ತಾನೆ ಇಲ್ಲ, ಏನು ತಾನೆ ಬೇಕು? ನಾನು ಪ್ರಭುಗಳ ವಂಶದ ಕೃಪಾಶ್ರಯದಲ್ಲಿಯೇ ಬೆಳೆದವನು. ಆ ಕೃಪಾಶ್ರಯವೇ ಮುಂದೆಯೂ ನನ್ನನ್ನು ನೋಡಿಕೊಳ್ಳುತ್ತದೆ. ಈ ಭವ್ಯ ಅರಮನೆಯನ್ನು ಸೇರುವದಕ್ಕೆ ಮುಂಚೆಯೇ ಪೂರ್ವಭಾವಿ ಸಿದ್ಧತೆಗಾಗಿ ನನ್ನ ತಂದೆಯವರು ಅಷ್ಟಿಷ್ಟು ಅಕ್ಷರಾಭ್ಯಾಸ ಭಾಷಾಭ್ಯಾಸ ಮಾಡಿಸಿದ್ದರಾದರೂ ನಿಜವಾದ ವಿದ್ಯೆಯನ್ನು ಬುದ್ಧಿಯನ್ನು ಇಲ್ಲಿ ಸೇವೆ ಮಾಡುತ್ತ ಸಂಪಾದಿಸಿಕೊಂಡೆ. ಅಗ ನನ್ನ ಜೀವನದ ಮಹತ್ತರವಾದ ಆಸೆಯೊಂದು ನೆರವೇರಿತು. ಪ್ರಭುಗಳ ವಂಶದವರೂ ಪ್ರಭುಗಳೂ ನನ್ನನ್ನು ಎಲ್ಲ ವಿಧದಲ್ಲೂ ಬಹಳ ಚೆನ್ನಾಗಿ ನೋಡಿಕೊಂಡಾಗಿದೆ. ಯಾವ ಕೊರತೆಯೂ ಇಲ್ಲವಾಗಿದೆ. ಹೀಗಿದ್ದು ನಾನು ನನ್ನ ಕರ್ತವ್ಯ ನಿರ್ವಹಣೆಯಲ್ಲೇ, ಅದು ಕೊಟ್ಟ ತೃಪ್ತಿ ಸಂತೋಷಗಳಲ್ಲೆ ನನ್ನ ನಿಜವಾದ ಪ್ರತಿಫಲವನ್ನು ಪಡೆದುಕೊಂಡೆ. ಇನ್ನು ನನಗೆ ಇದು ಬೇಕು ಎನ್ನುವ ಯಾವೊಂದು ಆಸೆಯೂ ಇಲ್ಲ, ಮಹಾಪ್ರಭು."

"ಇಲ್ಲ ಇಲ್ಲ, ಅದನ್ನು ನಾವು ಒಪ್ಪುವದಿಲ್ಲ. ಮನುಷ್ಯನೆಂದ ಮೇಲೆ ಎಷ್ಟೋ ಆಸೆಗಳು, ಯಾವುವೋ ಒಂದೆರಡಾದರೂ ಇದ್ದೇ ಇರುತ್ತವೆ. ಯೋಚಿಸಿಕೊಂಡ ನೋಡು, ಹೇಳು. ನಾವು ನಿನಗೆ ವಿಶೇಷ ಇಷ್ಟ ಇರುವುದನ್ನೇನಾದರೂ ನೀಡಲೇಬೇಕು; ಮಾಡಿಕೊಡಲೇಬೇಕು.'

"ಪ್ರಭುಗಳ ಪ್ರೀತಿ, ಕರುಣೆ ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಿವೆ. ಪ್ರಭುಗಳ ಇಷ್ಟವನ್ನು ನಾನು ಮೀರುವಂತಿಲ್ಲ. ಹಾಗೇ ಯೋಚಿಸಿದರೆ ಪ್ರಭುಗಳ ಅಭಿಪ್ರಾಯ, ಮನುಷ್ಯರ ಆಸೆಯ ಬಗ್ಗೆಯದು, ಸರಿಯೆನ್ನದೆ ವಿಧಿಯಿಲ್ಲ. ಹೌದು. ನನಗೂ ಒಂದು ಆಸೆಯೇನೋ ಇದೆ, ಬಹಳ ಕಾಲದಿಂದ ಬಂದಿರುವ ಆಸೆ. ಅದೊಂದು ವಿಚಿತ್ರ ಆಸೆ; ಯಾರೊಡನೆಯೂ ಅದರಲ್ಲಾಗಿ ಪ್ರಭುಗಳೊಡನೆಯಂತೂ ಹೇಳಿಕೊಳ್ಳಲಾಗದ, ಹೇಳಿಕೊಳ್ಳಲಾರದ ಆಸೆ. ಪ್ರಭುಗಳು ನಡೆಸಿ ಕೊಡಲಾಗದ ಆಸೆ..."

"ಅಂಥಾದ್ದು. ನಾವೂ ನಡೆಸಿಕೊಡಲಾಗದಂಥಾ

ಹಾಗೇನು ಆಗಿರುವಂತಿಲ್ಲ. ಆದರೆ ಅದು ಯಾವುದು, ಅಷ್ಟು ಮಹತ್ವವಾದದ್ದು? ಅಷ್ಟು ನಮಗೂ ಅಸಾಧ್ಯವಾದದ್ದು? ನಾವು ಅದನ್ನು ನಡೆಸಿಯೇ ಕೊಡುತ್ತೇವೆ, ನೋಡುತ್ತಿರು. [illegible]. ಇದು ನಮ್ಮ [illegible] ಮೇಲೆ ಆಣೆ, ನಾವು ಕೂಡ ನಡೆಸಿಕೊಡಲು ಅಸಾಧ್ಯವಾದುದನ್ನು ನೀನು ಏನನ್ನೂ ಕೇಳಲಾರೆ. ಅದು ನನಗೆ ಗೊತ್ತು. ಹೇಳು ಮತ್ತೆ."

"ಪ್ರಭೂ, ಈ ಬಡ ಸೇವಕನನ್ನು ಕ್ಷಮಿಸಬೇಕು. ನಾನು ಪ್ರಭುಗಳ [illegible] [illegible] ಮಾಡಿದ್ದೇ, ಬಹಳ ತಪ್ಪು. ಅಭಿಮಾನವನ್ನು ಮೀರಿದ ಕೆಟ್ಟ ಧೈರ್ಯ ಮಾಡುತ್ತಿದ್ದೇನೆ. ಪ್ರಭುಗಳ ಪ್ರೀತಿ ಕರುಣೆಗಳು ಮಾಯವಾಗಿ ಪ್ರಭುಗಳಿಗೆ ಅತೀವ ಕೋಪವೇ ಬಂದು ಬಿಡಬಹುದು, ಅಂಥ ಕೋಪದಲ್ಲಿ ನನ್ನನ್ನು ತೀವ್ರವಾಗಿ ಶಿಕ್ಷಿಸಬಹುದು. ಅದರಿಂದ..."

"ಅಪ್ಪ, ಇಷ್ಟು ಹೆದರಬೇಡ. ನಾವೇ ಹೀಗೆ [illegible] ಕೇಳಿ, [illegible] ಹೇಳಿ ಅದರಿಂದ ಕೋಪಗೊಳ್ಳುವುದು ನ್ಯಾಯವಲ್ಲ. ನಮಗೆ ಬಹಳ ಕುತೂಹಲವಾಗಿದೆ. ಅದು ಮಾತನ್ನು ನಡೆಸಿಕೊಡಬೇಕೆಂಬ ಹಟವೂ ನಮಗೆ ಆಗಿದೆ. ಕೋಪ ಶಿಕ್ಷೆಗಳ ಮಾತೇ ಇಲ್ಲ. ಧೈರ್ಯವಾಗಿ ಹೇಳು, ಅದೇನಿದೆಯೋ ಅದನ್ನು. ಇದು ನಮ್ಮ ಅಪ್ಪಣೆ ರಾಜಾಜ್ಞೆ."

"ಪ್ರಭುಗಳ ಅಪ್ಪಣೆಯ ಆಣೆ ಮೇಲೆ ನಾನು ನಿಸ್ಸಹಾಯ. ಹೇಳಲೇಬೇಕಾದದ್ದು ಅನಿವಾರ್ಯ. ಪ್ರಭುಗಳು ಆಜ್ಞಾಪಿಸಿದಂತೆ ನಾನು ಕೇಳಿದ ಹೇಳಿದ ಮಾತ್ರಕ್ಕೆ, ಪ್ರಭುಗಳು ನಡೆಸಿಕೊಡುವ ವಚನ ಕೊಟ್ಟರೆಂದು ಅದನ್ನು ನಡೆಸಿಕೊಡಲೇ ಬೇಕಾದ ಅಗತ್ಯವೇನೂ ಇಲ್ಲ."

"ಸರಿ, ಅದನ್ನೆಲ್ಲ ನಮಗೆ ಬಿಡು. ನಮ್ಮ ವಂಶದ ರಾಜರು ವಚನಭ್ರಷ್ಟರಲ್ಲ. ಇರಲಿ, ಇನ್ನು ತಡಮಾಡದೆ ಹೇಳು. ಇನ್ನು [illegible] ಬೇಡವೇ? ಬಹಳ ಹೊತ್ತು."

"ಹಾಗಾದರೆ ಪ್ರಭುಗಳ ಮೇಲೆಯೇ ಭಾರ [illegible] ಹಾಕಿ ನನ್ನ ಕೋರಿಕೆಯು ಉಚಿತಾನುಚಿತವನ್ನೂ ಪ್ರಭುಗಳಿಗೆ ಬಿಟ್ಟು ಹೇಳಿ ಬಿಡುತ್ತೇನೆ." ಕಣ್ಣ ಇನ್ನೂ ಹೇಳಿ ಸ್ವಲ್ಪ ತಡೆದ. ಅವನಿಗೆ ಬೇಗ ಮಾತು ಹೊರಡಲಿಲ್ಲ. ಮಾತು ಹೊರಟಾಗ ಅವನ ಧ್ವನಿ ನಡುಗುತ್ತಿತ್ತು. ತುಟಿ ಅದುರುತ್ತಿತ್ತು, ಮುಖ ಬೆವರುತ್ತಿತ್ತು. "ಬಡ ಕಣ್ಣನ ಆ ಆಸೆ ಬಹಳ ದೊಡ್ಡ ಆಸೆ. "ಪ್ರಭುಗಳು ಕರುಣೆ ನಡೆಸಿ ಕೊಡುವುದಾದರೆ......ನಾನು ಒಂದು ಘಳಿಗೆ ಯಷ್ಟು ಕಾಲ ಸಿಂ–ಸಿಂಹಾಸನದ ಮೇಲೆ ಕು–ಳಿತು ರಾಜ..." ಕಣ್ಣನಿಂದ ಮುಂದಿನ ಮಾತು ಬರಲಿಲ್ಲ. ಸುಮ್ಮನಾಗಿ ಬಿಟ್ಟ. ಅವನ ಗಂಟಲು ಒಣಗಿ ಹೋಯಿತು. ನಾಲಗೆ ಆಡಲಿಲ್ಲ. ಕೈ ಕಾಲುಗಳು ಕೊಂಚ ನಡುಗುತ್ತಿದ್ದವು.

[illegible], ರಾಜಮಾನ್ಯರಿಗೂ ಸಿಡಿಲು ಹೊಡೆದಂತಾಗಿ ಆ ಕ್ಷಣದಲ್ಲಿ ಮಾತು ನಿಂತುಹೋಗಿದ್ದು—ಇಂಥ ಕೋರಿಕೆಯನ್ನು ಕೇಳಿ. ಕಣ್ಣುಗಳು ಅಗಲವಾಗಿ ಬಿಟ್ಟುಕೊಂಡು [illegible] ನೋಡುತ್ತಿದ್ದರು. ಮುಖ [illegible], ಕೆಂಪಾಯಿತು.

ಮೌನ – ಇನ್ನೂ ಮೌನ.....ಮತ್ತೂ ಮೌನ.

ಇನ್ನು ಈ ಮೌನದ ಬಿಗುವನ್ನು ಕಣ್ಣ ಅಷ್ಟು ಹೊತ್ತು ತಾಳಲಾರದೇ ಹೋದ. ರಾಜನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡ. ಮೌನವನ್ನು ಕೊನೆಗೊಳಿಸಲು ಪುನಃ ಅವನೇ ಮಾತಾಡಿದ:

"ಪ್ರಭುಗಳು ನನ್ನನ್ನು ಕ್ಷಮಿಸಬೇಕು. ಪ್ರಭುಗಳ ಪ್ರೋತ್ಸಾಹ, ಒತ್ತಾಯಗಳು ತಂದ ಉತ್ಸಾಹದ ಭರದಲ್ಲಿ ಏಕೆ ಚಪಲವೇನೋ ನನ್ನಿಂದ ಆ ಮಾತನ್ನು ಆಡಿಸಿಬಿಟ್ಟಿತು. ಅದು ನಿಜವಾಗಿಯೂ ಅತಿಯಾದ ಮಾತಾಯಿತು. ಅದರ ಅರಿವು ನನಗೆ ಇದೆ. ಪ್ರಭುಗಳು ಅದನ್ನು ಗಮನಕ್ಕೆ ತಂದು ಕೊಳ್ಳಬಾರದು. ಕೃಪೆಮಾಡಿ ಅದನ್ನು ಮರೆತು ಬಿಡಬೇಕು......... ಹಾಗೆ ಮಾಡುವುದರಲ್ಲಿ ವಚನಭಂಗದ ಪ್ರಶ್ನೆಯೇ ಇರುವುದಿಲ್ಲ...... ಪ್ರಭುಗಳು ಆತಂಕಪಡಬೇಕಾಗಿಲ್ಲ...... ನನಗೆ ಏನೇನೂ ಆಶಾಭಂಗ, ಅತೃಪ್ತಿಗಳಿಲ್ಲ– ಖಂಡಿತವಾಗಿಯೂ, ಆ ಶ್ರೀ [illegible]

ಆಸೆಯಾಗಿಯೂ, ನನ್ನ ಆಸೆಯಾಗಿಯೂ... ಈ ಬಿಳಿ ವೃಷಭಗಳನ್ನು ಬಿಟ್ಟರೆ ಬೇರೆ ಏನಕ್ಕೂ ಅಪ್ಪಣೆಯನ್ನು ಬಯಸಲಿಲ್ಲ."

"ಆಹಾ! ಸಿಂಹಾಸನ...ಅಂದರೆ ........" ರಾಜ ಮತ್ತೆ ಪತ್ನಿಯ ಕೊರಳನ್ನು ಹಿಡಿದು ಬಿಕ್ಕಲಾರಂಭಿಸಿದ. "ಅಂದರೆ ಬರೀ ಕುದುರೆಗಳು ಅಲ್ಲ ನೀನು ರಾಜನಾಗಬೇಕೆಂಬ ಬಯಕೆಯೂ ನಿನ್ನ ಅಭಿಪ್ರಾಯ. ಆಸೆ.....ಮತ್ತೆ..."

"ವೃಷಭ. ವೃಷಭ. ನನ್ನ ಆ ಆಸೆ ಬೇರೆಯದು ಬೇಕಾಗಿಲ್ಲ. ಸತ್ಯವಾಗಿಯೂ. ವೃಷಭಗಳು ಆ ಬಯಲನ್ನು ಮನಸ್ಸಿಗೆ ಮೆಚ್ಚಿಕೊಳ್ಳುವುದು; ಅದು ನನ್ನ ಆಸೆ ಇದ್ದುದರ ಕೊರತೆ: ವೃಷಭಗಳು ಇವನ್ನು ಬಯಸುವರೇ ಸಾಕು ನನಗೆ ಈಗ."

ರಾಜ ಇನ್ನಷ್ಟು ಕಾಲ ಮೌನವಾಗಿ ಕುಳಿತಿದ್ದನು. ಬರುವ ಮಾತನ್ನು ನುಂಗುತ್ತಿದ್ದ. ಬಹಳ ಹೊತ್ತಾಯಿತು.

"ಕಣ್ಣಿಟ್ಟು." ರಾಜ ಕಡೆಗೆ ಮಾತನಾಡಲಾರಂಭಿಸಿದ. "ಹೇಳುವುದಕ್ಕೆ ಇನ್ನೇನೂ ಇಲ್ಲ. ಆಗ ಬಳಿ ಇದ್ದುದೆಲ್ಲ ನಿನಗೆ ಒಪ್ಪುವ ಹಾಗಿದೆ, ಅಂಗರಾಜ ಹೇಳಿಕೊಂಡರು, ನಾನೇ ಕೊಡಬೇಕು, ಬಿಟ್ಟು... ನಿನ್ನ ಬರುವವನ್ನು ಹೇಳುವವರಿಗೂ ನನ್ನನ್ನು ಬಿಡಲಿಲ್ಲ. ಅದರಿಂದ ನನಗೆ ಬೇಸರ, ಕೋಪ ಏನೂ ಇಲ್ಲ. ನಿಜ. ನನ್ನ ಕೊರಳಿಗೆ ತೀರ ಬರೀ ಅಷ್ಟು ಆರೋಪಿತವು. ಅವರ ನಿರ್ಧಾರದಲ್ಲಿ ಬಲವಾದ ಗಹನತರ ಅರ್ಥವೂ, ತೊಂದರೆಗಳೂ ಇವೆ, ಸಹಜವಾಗಿಯೇ. ನಾನು ಈ ಬಗೆಗೆ ಇಷ್ಟು ದೀರ್ಘ ಕಾಲ ಯೋಚಿಸುತ್ತಿರುವುದು ಇದಕ್ಕಾಗಿಯೇ; ಕೊಟ್ಟ ಮಾತನ್ನು ನಡೆಸಲೇ ಬೇಕಾದದ್ದು, ಆ ಮಾತಿನಂತೆ ಬೇಗ ನಡೆದುಕೊಳ್ಳುವುದು ಎಂದಲ್ಲ. ಆ ವಚನಭ್ರಷ್ಟತೆ ನನ್ನ ಮನಸ್ಸಿಗೆ ಬಂದೇ ಇಲ್ಲ. ಇನ್ನು ಮುಂದೆಯೂ ಬರುವುದಿಲ್ಲ. ತೊಡಕು ತೊಂದರೆಗಳು ಬಂದೇ ಬರುತ್ತವೆ. ಮನುಷ್ಯ ದೊಡ್ಡ ದೊಡ್ಡ ಮನಸನ್ನಿಟ್ಟು ದೊಡ್ಡ ದೊಡ್ಡ ತೊಡಕುಗಳು ಬರುತ್ತವೆ. ಹಾಗೆಂದು ಅವುಗಳಿಂದ ತಪ್ಪಿಸಿಕೊಳ್ಳುವುದು ಯಾರಿಗೂ ತರವಲ್ಲ, ಅದರಲ್ಲಾಗಿ ರಾಜನೆನಿಸಿಕೊಂಡ ನಮಗೆ ಪ್ರಜೆಗಳಿಗೆ ಮಾದರಿಯಾಗಿ, ಹಾಕಿ ಬರುವ ರಾಜ್ಯದ ಪ್ರಥಮ ಪ್ರಜೆ. ಅದು ಮರೆಯಬಾರದಲ್ಲ. ಇದು ನಮಗೆ, ನಮ್ಮ ಯೋಗ್ಯತೆ ಬಂದು ಪರೀಕ್ಷೆಯ ಕಾಲವೆಂದು ತಿಳಿದು ಈ ಸಂದರ್ಭವನ್ನು ಸ್ವಾಗತಿಸುತ್ತೇನೆ. ಇಂಥ ಪರೀಕ್ಷೆಯ ಕಾಲದಲ್ಲಿ ಆ ಹರಿಶ್ಚಂದ್ರ ಮಹಾರಾಜ ಏನೇನನ್ನು ಮಾಡಿದ. ಅನುಭವಿಸಿದ! ದೇವತೆಗಳಿಗೆಲ್ಲ ಕಳೆದುಕೊಂಡು ಸಿಂಹಾಸನ ತಾನೇ ಅರಿಯದೆ ತನ್ನನ್ನು ಮಾರಿಕೊಂಡನು, ಮಗನನ್ನು ಮಡದಿಯನ್ನು ಮಾರಿ. ಚಾಂಡಾಲನ ಸ್ಮಶಾನವನ್ನು ಕಾಯುತ್ತ. ಅವನ ಸತ್ಯವನ್ನು ಕಂಡು ದೇವತೆಗಳು ತಲೆಬಾಗಿದ್ದು ಏಕೆ ನಿನಗೆ ಗೊತ್ತೇ? ರಾಜ ರಾಮ ರಾಜ್ಯಕ್ಕೆ ಮರಳಿದಾಗ ಅದ ತಂದೆ ಕೊಟ್ಟ ವಚನವನ್ನು ಉಳಿಸಲು ಅರಣ್ಯ ವಾಸವನ್ನು ಸ್ವೀಕರಿಸಿದ. ಎಲ್ಲ ಬಿಟ್ಟು ಹೊರಟನು ಯಾವುದಕ್ಕಾಗಿ? ಕೊಟ್ಟ ಮಾತನ್ನು ಉಳಿಸುವುದಕ್ಕೋಸ್ಕರ ತಾನು ಕೊಟ್ಟ ಅಂಗೀಕಾರ ಕೇಳಿ ಆ ಮಾತನ್ನು ಉಳಿಸಿಕೊಳ್ಳಲು ನನ್ನ ಪ್ರಾಣವನ್ನೇ ಕೊಡಬಲ್ಲನೇ? ನಾನು ಕೊಟ್ಟ ಮಾತು ಅಲ್ಲ. ತಂದೆಯವರ ದಶರಥ ಕೊಟ್ಟ ಮಾತನ್ನು ಉಳಿಸುವುದಕ್ಕಾಗಿ ಶ್ರೀ ರಾಮಚಂದ್ರ ಏನನ್ನು ಮಾಡಿದ. ಏನೇನನ್ನು ಅನುಭವಿಸಿದ! ಮಹಾಭಾರತದ ಹಿಂದಿನ ನಮ್ಮ ದೇಶದ ಪುರಾಣೇತಿಹಾಸಗಳಲ್ಲಿ ಅದೆಷ್ಟೊಂದು ಇಂಥ ನಿದರ್ಶನಗಳು ದೊರೆಯುತ್ತವೆ! ಅಂಥ ಮಹಾಪುರುಷರೊಡನೆ ಹೋಲಿಸಿಕೊಂಡರೆ ನಮ್ಮ ಬದುಕು ಎಷ್ಟು? ತೃಣ ಮಾತ್ರ. ಆದುದರಿಂದ ಈಗಲೂ ಒಂದೇ ವಿಷಯ ಯೋಚಿಸಿದರೆ. ನಮ್ಮ ಈ ಸಂದರ್ಭ ತರುವ ಅದೆ ತನಗಳನ್ನು ನಿವಾರಿಸುವುದು ತೊಂದರೆಯಾಗುವುದು; ಹಾಗೂ ಬಲವಾದ ಕಡೆಗಳಿಂದ ಬರಬಹುದಾದ ವಿರೋಧವನ್ನು ಎದುರಿಸಬೇಕಾದದ್ದು– ಇಷ್ಟೆ. ಈಗ ಈ ಬಗ್ಗೆ ಎಲ್ಲ ಪ್ರಶ್ನೆಗಳಿಗೂ ಸೂಕ್ತ ಉತ್ತರಗಳನ್ನು ಹೊಂದಿಸಿಕೊಂಡಿದ್ದೇನೆ; ಎಲ್ಲ ಸಂದರ್ಭಗಳಲ್ಲೂ ನಮ್ಮ ನಿರ್ಧಾರಕ್ಕೆ ನಿನ್ನ ಸಮರ್ಥಿಸಿಕೊಂಡಿದ್ದೇನೆ. ಇನ್ನು ನಿನ್ನ ಸಂತೋಷಕ್ಕೆ ಪ್ರಸನ್ನತೆಗೆ ಮರುಮಾತನ್ನಾಡಬೇಡ – ಅದೆ

ಕೊಡದು! ಹೇಳು, ಯಾವಾಗ ಸಿಂಹಾಸನಾರೋಹಣ ಮಾಡುತ್ತೀಯೆ; ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಬೇಕಾಗುತ್ತದೆ."

ಈಗ ಕಣ್ಣ ಒಳಗೊಳಗೆ ಎಷ್ಟು ಒದ್ದಾಡಿದರೇನು; ಹೊರಗೆ ಮರು ಮಾತಾಡುವಂತಿಲ್ಲ; ರಾಜ ಆಜ್ಞಾಪಿಸಿಬಿಟ್ಟಿದ್ದಾನೆ! ಉತ್ತರವನ್ನು ಕೊಡದೆ ಬಹಳ ಕಾಲ ಇರುವಂತೆಯೂ ಇಲ್ಲ.

"ಪ್ರಭುಗಳ ನುಡಿ ನಿಷ್ಠೆ ಕರುಣೆ ಧಾರಾಳತನಗಳ ಆಜ್ಞೆ, ನಾನೇ ಸೃಷ್ಟಿಸಿಕೊಂಡ ಬಿಕ್ಕಟ್ಟಿಗೆ ನನ್ನನ್ನು ಬಿಡಿಸಿಕೊಳ್ಳಲಾರದಂತೆ ಕಟ್ಟಿ ಹಾಕಿ ಬಿಟ್ಟಿದೆ. ಈಗ ನನಗೆ ಗತ್ಯಂತರಲಿಲ್ಲ. ಆ ಶ್ರೀ ಪದ್ಮನಾಭಸ್ವಾಮಿ ನನ್ನ ಭಾವನೆಗಳನ್ನು ತಿಳಿದುಕೊಂಡು ನನ್ನನ್ನು ಕ್ಷಮಿಸಲಿ–ಪ್ರಭುಗಳು ಮಾಡಿರುವಂತೆ... ಪ್ರಭುಗಳ ನಿರ್ಧಾರವೇ ಕೊನೆಯದಾಗಿದ್ದು, ನನ್ನ ಕೋರಿಕೆಯ ನೆರವೇರಿಕೆ ಅನಿವಾರ್ಯವೇ ಆದರೆ, ಪ್ರಭುಗಳೇ ಆ ದಿನ ಹೊತ್ತುಗಳನ್ನು ಗೊತ್ತು ಮಾಡಬೇಕೆಂಬುದು ಈ ಬಡವನ ಪ್ರಾರ್ಥನೆ." ಕಣ್ಣ ಕಣ್ಣು ಮುಚ್ಚಿಕೊಂಡು ಹೇಳಿಬಿಟ್ಟ.

"ಆಗಲಿ. ಸಕಾಲದಲ್ಲಿ ನಿನಗೆ ಎಲ್ಲವನ್ನೂ ತಿಳಿಸಲಾಗುವುದು–ನೀನಿನ್ನು ಹೋಗಬಹುದು."

ರಾಜನಿಗೆ ಕಣ್ಣ ವಂದಿಸಿ ಬೀಳ್ಕೊಂಡು ಹಿಂದಿರುಗಿದ.

'ಏನೂ ಬೇಡವೆಂದ ಇವನನ್ನೂ ಚಪಲ ಬಿಡಲಿಲ್ಲವಲ್ಲ' ಎಂದುಕೊಂಡು ನಸುನಕ್ಕು 'ಎಂಥೆಂಥ ತಪಸ್ವಿಗಳನ್ನೇ ಆಸೆ ಬಿಡಲಿಲ್ಲವಂತೆ; ಮುಕ್ತಿಯ ಆಸೆಯೇ ಅಸಲೇನಂತೆ, ಅದೂ ಆಸೆಯೇ ತಾನೆ? ಇನ್ನು ಈ ಬಡ ಮನುಷ್ಯನ ಪಾಡೇನು?' ಎಂದು ಗಂಭೀರವಾಗಿ ಚಿಂತಾಮಗ್ನನಾದ, ರಾಜ.

ಕಣ್ಣ ಅರಮನೆಯಿಂದ ಹೊರಟು ತನ್ನ ರಾಜ ಕನಸಿನಲ್ಲಿಯೇ ನಡೆಯುತ್ತ ತನ್ನ ಕಿರು ಮನೆಯನ್ನು ಸೇರಿದ.

ರಾಜ ತನ್ನ ಚಿಂತೆಯಿಂದ ಎಚ್ಚೆತ್ತು, ಪ್ರಧಾನ ಮಂತ್ರಿ ಪುರೋಹಿತ ಅರಮನೆಯ ಅಧಿಕಾರಿ ಇವರನ್ನು ಸಿಂಹಾಸನದ ಭವನಕ್ಕೆ ಬರಮಾಡಿಕೊಂಡು ವಿಷಯವನ್ನು ತಿಳಿಸಿದಾಗ ಅವರು ಹೌಹಾರಿದರು. ಪ್ರಧಾನಿ ತಟ್ಟನೆದ್ದು ಕೈಜೋಡಿಸಿ, "ಪ್ರಭುಗಳು..." ಎಂದು ಶುರುಮಾಡುತ್ತಿದ್ದಂತೆಯೇ ರಾಜ "ಪ್ರಧಾನಿಯವರೆ, ನಿಮ್ಮೆಲ್ಲರ ನಿರೀಕ್ಷಿತ ಪ್ರತಿಕ್ರಿಯೆಯನ್ನು ನಾವಾಗಲೇ ಯೋಚಿಸಿಕೊಂಡಿದ್ದೇವೆ. ನಾವು ಕೊಟ್ಟ ಮಾತಿಗೆ ಬದ್ಧರು; ಅದನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಈಗ ತಮ್ಮೆಲ್ಲರನ್ನೂ ಕರೆಯಿಸಿರುವುದು ಆ ವಿಷಯದ ವಿಮರ್ಶೆ, ವಿಶ್ಲೇಷಣೆಗಲ್ಲ. ಅದನ್ನು ಕಾರ್ಯಗತಗೊಳಿಸುವ ಸೂಕ್ತ ಏರ್ಪಾಡುಗಳನ್ನು ಮಾಡುವುದಕ್ಕಾಗಿ," ಎಂದು ಅವರ ಆಕ್ಷೇಪಣೆಗಳು ಏನೇನಿದ್ದುವೋ ಅವೆಲ್ಲವನ್ನೂ ಮೊಳಕೆಯಲ್ಲೇ ಚಿಗುಟಿ ಹಾಕಿಬಿಟ್ಟ, ಅವರಿಗೆ ಆಡುವುದಕ್ಕೇ ಅವಕಾಶಕೊಡದೆ.

"ಪ್ರಭುಗಳ ಚಿತ್ತ–ನಮಗೆ ದಿಗ್ಭ್ರಮೆಯಾಗಿದ್ದರೂ,"ಎಂದು ಇತರರ ಕಡೆಗೆ ನೋಡಿ ಎಲ್ಲರ ಪರವಾಗಿಯೂ ಉತ್ತರಿಸಿದ.

"ರಾಜಪುರೋಹಿತರೆ, ಮೊಟ್ಟ ಮೊದಲಿನ ಕೆಲಸ ತಮ್ಮದು. ನಮ್ಮ ವಾಕ್‌ಪೂರೈಕೆಯನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ– ಆಟ ವಿನೋದಗಳಂತಲ್ಲ. ಈ ಅರಮನೆಯ ರಾಜ ಸಿಂಹಾಸನಾರೋಹಣಕ್ಕೆ ಪ್ರಶಸ್ತವಾದ ಸುಮುಹೂರ್ತವನ್ನು ಗೊತ್ತು ಮಾಡಬೇಕು. ಇದೊಂದು ಬಹಳ ವಿಶೇಷ ಸಂದರ್ಭವಾಗಿದ್ದು ಆರೋಹಣಾ ಪೂರ್ವದಲ್ಲಿ, ಆರೋಹಣ ಕಾಲದಲ್ಲಿ, ಅವರೋಹಣಾ ನಂತರ ಯಾವ ಯಾವ ಶಾಸ್ತ್ರಗಳನ್ನು ಆಚರಿಸಬೇಕಾಗುತ್ತದೆಂಬುದನ್ನು ತಮ್ಮ ಶಾಸ್ತ್ರ ಗ್ರಂಥಗಳಿಂದಲೂ ತಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸುವುದರಿಂದಲೂ ನಿರ್ಧರಿಸಿ ತಮ್ಮ ಅಥವ ತಮ್ಮ ವಿದ್ವತ್ತು ಜ್ಞಾನಗಳಿಂದ ಯಾವುದಾದರೂ ಸಾಧುವಾದ ಸಾಧ್ಯವಾದ ಹೊಸ ದಾರಿಯನ್ನು ಕಂಡು ಹಿಡಿದು, ಈ ಆಚರಣೆಯಲ್ಲಿ ನಮ್ಮ ಪಾತ್ರವೇನು, ಆ ಘಳಿಗೆಯ ರಾಜನ ಪಾತ್ರವೇನು ಎಂದು ಮುಖ್ಯವಾಗಿ ನಮಗೂ ಅವನಿಗೂ ತಿಳಿಸಬೇಕು. ಅನಂತರ ಅಗತ್ಯ ಏರ್ಪಾಡುಗಳನ್ನು ಸಂಬಂಧಿಸಿದವರಿಗೆಲ್ಲ ತಿಳಿಸಿ ಶಾಸ್ತ್ರಸಮ್ಮತವಾಗಿ ನಡೆಯುವಂತೆ ನೋಡಿಕೊಳ್ಳಬೇಕು...

ಪ್ರಧಾನಿಯವರು ಈ ಬದಲಾವಣೆ ಪುನರ್ ಬದಲಾವಣೆಗಳಿಗೆ ರಾಜ್ಯದಲ್ಲಿ ಪೂರ್ಣ ಪ್ರಚಾರವನ್ನು ಕೊಡಬೇಕಾಗುತ್ತದೆ, ಪ್ರಜೆಗಳೆಲ್ಲರಿಗೂ ತಿಳಿಯುವಂತೆ ನಮ್ಮ ಸಂಬಂಧದಲ್ಲಿ ನಡೆಯುವಂತೆಯೇ ಉತ್ಸವ ಸಮಾರಂಭಗಳು ನಡೆಯತಕ್ಕದ್ದು. ಯಾವ ಭಾಗದಲ್ಲಿಯೂ ಕುಂದುಕೊರತೆ, ಕಾಟಾಚಾರ ಅಲಕ್ಷ್ಯಗಳು ಆಗಕೂಡದು. ಗಮನವಿರಲಿ. ಇದು ದಾನವಲ್ಲ: ಹಕ್ಕಿನ ವಿಚಾರ, ನಾವು ಮಾತು ಕೊಟ್ಟ ಮೇಲೆ, ದಾನವಲ್ಲಿ ಕೂಡ ಅಹಂಕಾರ ತಾತ್ಸಾರಗಳು ಸಲ್ಲವೆಂದು ತಾವೆಲ್ಲರೂ ಬಲ್ಲಿರಿ. ಮಾತುಕೊಟ್ಟು ನಮಗೆ ಕೆಟ್ಟ ಹೆಸರು ಬರದಂತೆ ಎಲ್ಲ ಎಚ್ಚರಿಕೆಗಳನ್ನೂ ವಹಿಸತಕ್ಕದ್ದು. ಅರಮನೆಯ ಅಧಿಕಾರಿಗಳು ಸರ್ವ ವಿಧದಲ್ಲಿಯೂ [ಪ್ರಧಾನಿ ಪುರೋಹಿತರೊಂದಿಗೆ ಉತ್ಸಾಹದಿಂದ ಸಹಕರಿಸತಕ್ಕದ್ದು. ನಿಜ, ಈ ಸಂದರ್ಭ ವಿಪರೀತ ವಿಶೇಷವಾಗಿರುವುದರಿಂದ ಅನೇಕಾನೇಕ ಕ್ಲಿಷ್ಟ- ಸಮಸ್ಯೆಗಳನ್ನೂ ತಂದು ಒಡ್ಡುತ್ತದೆ. ತಾವುಗಳು ಮೂಲಭೂತ ಮೌಲ್ಯಗಳನ್ನು ಉಳಿಸಿಕೊಂಡು ಆ ಸಮಸ್ಯೆಗಳ ಪರಿಹಾರ ದಾರಿಗಳನ್ನು ಅಗತ್ಯ ತೋರಿದಂತೆ ಕಂಡುಕೊಂಡು ನಡೆಸಬಹುದು. ಕಾಲಕಾಲಕ್ಕೆ ತಮ್ಮ ತಮ್ಮಲ್ಲಿ, ನಮ್ಮೊಡನೆಯೂ ಕೂಡ, ಪರ್ಯಾಲೋಚಿಸಿ ತೀರ್ಮಾನಿಸಬಹುದು. ನಮ್ಮ ಸಲಹೆ ಸಹಕಾರ ಪ್ರೋತ್ಸಾಹಗಳು ತಮಗೆ ಸರ್ವದಾ ದೊರೆಯುತ್ತವೆ."

ರಾಜ ಹೀಗೆ ಖಂಡಿತವಾಗಿ ಆಜ್ಞಾರೂಪದಲ್ಲಿ ಹೇಳಿ, ಅವರು ಭ್ರಮಾಲೋಕದಿಂದ ಎಚ್ಚೆತ್ತುಕೊಳ್ಳುವುದಕ್ಕೆ ಮುಂಚೆಯೇ, ಅವನು ಅಲ್ಲಿಂದ ಎದ್ದು ಹೊರಟುಹೋದ ಮೇಲೆ ಅವರಿಗೆ ಉಳಿದದ್ದಾದರೂ ಏನು? ರಾಜಾಜ್ಞೆಯನ್ನು ಪರಿಪಾಲಿಸುವುದಷ್ಟೆ. ಅವರು ಕ್ರಮೇಣ ಆ ಕಾರ್ಯದ ಬಗ್ಗೆ ಸಮಾಲೋಚಿಸಲಾರಂಭಿಸಿದರು. ಅನಂತರ ಸಾಧ್ಯವಾದಷ್ಟು ತೀರ್ಮಾನಗಳನ್ನು ಮಾಡಿಕೊಂಡರು. ಅಲ್ಲಿಂದ ಹೊರಟು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾದರು.

ಅರಮನೆಯಲ್ಲಿ ಸುದ್ದಿಹರಡಿತೋ ಇಲ್ಲವೋ ಭಾರಿ ಕೋಲಾಹಲವೆದ್ದಿತು. ಮಾತೃ ಮಹಾರಾಣಿ ಪತ್ನಿ ಮಹಾರಾಣಿಯರು ಕೂಡಲೆ ರಾಜನಲ್ಲಿಗೆ ಧಾವಿಸಿ ತಮ್ಮ ತಮ್ಮ ವಿರೋಧವನ್ನು ಸೂಕ್ತವಾಗಿ ವ್ಯಕ್ತಪಡಿಸಿದರು. ಮಾತೃ ಮಹಾರಾಣಿಯವರು ಸ್ವಲ್ಪ ಸಹಜ ಸ್ವಾತಂತ್ರ್ಯ ವಹಿಸಿ ಜೋರಾಗಿ, "ಇದೇಕೋ ಹುಚ್ಚಿನಂತೆಯೇ..." ಎನ್ನುವಷ್ಟರಲ್ಲಿ ರಾಜ ನಸುನಗುತ್ತ, "ಮಾತೃಶ್ರೀಯವರು ಅಂದದ್ದು ಸರಿ, ನನಗೆ ಹರಿಶ್ಚಂದ್ರನ ಹುಚ್ಚು. ಏನು ಮಾಡಲಿ?" ಎಂದು ತಾಯಿಯನ್ನು ಮೂಕಳನ್ನಾಗಿ ಮಾಡಿದ. ಪತ್ನಿ ಪುನರಾಲೋಚಿಸಬೇಕೆಂದು ಸೂಚಿಸಿದಾಗ ಅವನು, "ರಾಜವಚನವೆಂದರೆ ಉಪಶಮನ ಮಾಡದ, ಮಾಡಲಾಗದ ಅಸ್ತ್ರಪ್ರಯೋಗ. ಹಿಂದಿರುಗುವಂತಿಲ್ಲದ ಕರ್ಣಬಾಣ. ಇದು ರಾಜವಚನದ ಪ್ರಶ್ನೆಯಷ್ಟೇ ಅಲ್ಲ, ರಾಜ ಮನೆತನದ ಮರ್ಯಾದೆಯ ಪ್ರಶ್ನೆ. ಅದನ್ನು ಬಲಿಗೊಟ್ಟು ಸಿಂಹಾಸನವನ್ನು ಉಳಿಸಿಕೊಂಡು ಹೇಗೆ ಸುಖಪಟ್ಟೇನು ? ಸಾಧ್ಯವಿಲ್ಲ. ಹರಿಶ್ಚಂದ್ರನಿಗಿಂತ ನಾನು ಕಷ್ಟಪಟ್ಟೇನೆ ? ಎಂದಿಗೂ ಇಲ್ಲ. ಇಷ್ಟಕ್ಕೂ ನಾನು ರಾಜತ್ವವನ್ನು ರಾಜ್ಯವನ್ನು ಕಳೆದುಕೊಳ್ಳುವುದು ಕೇವಲ ಒಂದು ಘಳಿಗೆಯ ಕಾಲ ಮಾತ್ರವಷ್ಟೆ?" ಎಂದು ಸಮಾಧಾನ ಹೇಳಿದ. ಆ ಅಸೆಬುರುಕ ಕಣ್ವ ಆ ಘಳಿಗೆಯಲ್ಲೇನಾದರೂ ರಾಜನಾಗಿ ವಿಪರೀತ ಮಾಡಿದರೋ ಎಂಬ ಆಕ್ಷೇಪಣೆಗೆ ರಾಜ, "ಹಾಗೇನೂ ಆಗಲಾರದು. ಇದು ಏನೋ ಒಂದು ಚಾಪಲ್ಯದ ವಿಷಯವೆಂದು ತೋರುತ್ತದೆ. ಇಷ್ಟರಮೇಲೆ ವಿಷಯ ಹೇನಾದರೂ ವ್ಯಕ್ತ ಆಸೆಗೆ ಮೀರಿ ವಿಷಮಿಸಿದರೆ ಆ ಸ್ಥಿತಿಯನ್ನು ಎದುರಿಸಬಲ್ಲ ಶಕ್ತಿ ನನಗೆ ರಾಜನಲ್ಲದೆಯೂ ಇರುತ್ತದೆ. ಆ ಬಗ್ಗೆ ಆತಂಕವೇನನ್ನೂ ಇಟ್ಟುಕೊಳ್ಳಬೇಕಾಗಿಲ್ಲ," ಎಂದು ಭರವಸೆ ಕೊಟ್ಟ.

ವಿಷಯ ಪ್ರಜೆಗಳಿಗೆ ತಿಳಿದಾಗಲಂತೂ ಅವರೆಲ್ಲರೂ ದಂಗುಬಡಿದು ಹೋದರು. ನಿಧಾನವಾಗಿ ಚೇತರಿಸಿಕೊಂಡ ನಂತರ ಎಲ್ಲೆಲ್ಲೂ

ಚರ್ಚೆಯೋ ಚರ್ಚೆ. ಪ್ರತಿಕ್ರಿಯೆ ನೂರೆಂಟು– ಈ ತುದಿಯಿಂದ ಆ ತುದಿಯವರೆಗೆ. ಯಾರೂ ಇಲ್ಲವೆನ್ನದಂತೆ ಎಲ್ಲರೂ ಏಕ ಕಂಠದಿಂದ 'ಕೆಟ್ಟ ಕಣ್ಣಿನ ದುರಾಸೆ'ಯನ್ನೂ ಮನಸಾರೆ ಬೈದು ಅವನು ಬೇಕಿತ್ತು ಆಗ ಬಯಸಿದನು. "ಮಹಾ ರಾಜರೇ ನೋಡಿ ಎಷ್ಟು ಒಳ್ಳೆಯ ತನದಿಂದ ಒಪ್ಪಿದರು ಮಾತು ಕೇಳಿದರೆ ಈ ದುರಾಶಾ ಪಿಶಾಚಿಗೆ [illegible] ಕೇಳಲು ಹೊಳೆಯಲೇ ಇಲ್ಲವೆ? ಅಲ್ಲ, ಅವನ ಧೈರ್ಯ ನೋಡಿ! ಕೇಳು ವುದಕ್ಕೂ ಒಂದು ಮೇರೆ, ಮರ್‍ಯಾದೆ ಇರಬೇಡವೆ? ಎಲ್ಲ ಬಿಟ್ಟು ಸಿಂಹಾಸನವನ್ನೇ, ಅಂದರೆ, ರಾಜತನವನ್ನೇ ಕೇಳಿದ್ದಾನಲ್ಲ! ಒಂದು ಘಳಿಗೆ ಯಾದರೇನು, . ಒಂದು ಕ್ಷಣವಾದರೇನು?" "ಅವನೇನೊ ಶತಮೂರ್ಖ, ದುಷ್ಟ, ಹುಚ್ಚು ಚಪಲದ ಅರಳು ಮರುಳಿನ ಮುದುಕ, ಕೇಳ ಬಾರದ್ದನ್ನು ಕೇಳಿದ ಅಂದರೆ ಈ ನಮ್ಮ ಮಹಾ ರಾಜರಿಗೇನು ಬಂದಿತ್ತು ಕೇಡುಗಾಲ ಅಂತ– ಹುಂ ಅಂತ ಒಪ್ಪಿಕೊಂಡೂ ಬಿಟ್ಟು ಅದಕ್ಕೆ ಸಿದ್ಧ ತೇನೂ ಮಾಡೋದಕ್ಕೆ? ಶುದ್ಧ ಅವಿವೇಕ? ಏನು ಇಂಥ ವಿಷಯದಲ್ಲೇ ಹುಡುಗಾಟ ಆಡೋದು, ಮಾಡೋದು ಅಂದ್ರೆ? ಚೆನ್ನಾಯ್ತಪ್ಪ! ಅವರಿಗೆಲ್ಲೊ ಬುದ್ಧಿ ಕೆಟ್ಟು ಹೋಗಿರಬೇಕು. ಅವರಂತೂ ಹಾಗಾದ್ರು ಅಂದ್ರೆ ಅವರಿಗೆ ಹೇಳೋರು ಕೇಳೋರು ಯಾರೂ ಇಲ್ವೇ ಇಲ್ವೆ ಅಂತ– ಮನೆಯೋರು ಮಂತ್ರಿಗಳು ಅಧಿಕಾರಿಗಳು ಯಾರೂ ಇಲ್ವೆ? ಸುಮ್ಮನೆ ಬಾಯಿ ಮುಚ್ಕೊಂಡು ಕುಳಿತಿದಾರಲ್ಲ; ಸಂಭ್ರಮ ಪಡ್ತಾ ಇದಾರಲ್ಲ, ಸಿಂಹಾಸನಾರೋಹಣ ಮಹೋತ್ಸವ ಅಂತ! ಸರಿಯಾಯ್ತು ಸರಿ ಯಾಯ್ತು!" "ಅವರೆಲ್ಲ ಹೇಳ್ದೆ ಕೇಳ್ದೆ ಇರ್‍ತಾರೇನ್ರಿ? ಹೇಳಿ ಕೇಳಿ ಮಾಡೇ ಇರ್‍ತಾರೆ. ಎಲ್ಲೋ ಮಹಾರಾಜರೇ ಜಂಬ ಅಂದ್ಕೊಂಡು ಹಿಡಿದಿದ್ದಾರೆ. ಪಾಪ ಬಾಯೋರು ಏನು ತಾನೆ ಮಾಡ್ತಾರೆ? ದೇವರು ವರ ಕೊಟ್ಟ ಮೇಲೆ ಪೂಜಾರ್‍ರು ಮಾತೇನು ನಡೆ ಯುತ್ತೆ, ಹೇಳಿ?" "ಮಹಾರಾಜರು ಯಾಕೆ ಹೀಗೆ ಮಾಡಿದರೂ ಅಂತ! ಕೇಳಿದರೆ ಅಂದವಂತೆ.

ಅದೇನೋ ಮಾಡಿ ಹರಿಶ್ಚಂದ್ರ, ಶ್ರೀರಾಮ, ಕರ್ಣ ಅಂತ. ಹಾಗೆ ಅನ್ನೋದಕ್ಕೆ ಇದೇನು ಕೃತ ಯುಗವೆ, ತ್ರೇತಾಯುಗವೆ, ದ್ವಾಪರಯುಗವೆ? ಇದು ಕಲಿಯುಗ, ಕಲಿಯುಗ. ಮೂರ್ಖ ಮಾತು ಕೊಟ್ರೆ ಏನಾಯ್ತು? ಇಲ್ಲ ಅನ್ನೋದು. ನನ್ನಂಥೋನಾಗಿದ್ರೆ ಅವನಂಥೋನು ನನ್ನ ಮನೆ ಮುರುಕಲು ಮಣೆ ಮೇಲೆ ಕೂತ್ಕೋ ತೀನಿ ಅಂದಿದ್ರೂ ಅತ್ತಲಾಗಿ ಒದ್ದು, ಕತ್ತು ಹಿಡಿದು ಹೊರಗೆ ದಬ್ಬಿಸ್ತಾ ಇದ್ದೆ. ಓಹೋ, ಈ ಕೊಡೆಯಾಳು ಮುಂಡೇ ಮಗ ತಾನು ಏನೂ ಅಂತ ತಿಳ್ಕೊಂಡು ಬಿಟ್ಟಿದಾನೋ– ಏನೋ! ಅಧಿಕಾರದ್ರೆ ಏನು, ಅರಮನೆ ಅಂದ್ರೆ ಏನು. ಸಿಂಹಾಸನ ಅಂದ್ರೆ ಏನು, ಸಿಂಹಾಸನದ ಮೇಲೆ ಕುಳಿತುಕೊಳ್ಳೋದೂ ಅಂದ್ರೆ ಏನು, ರಾಜ ಆಗೋದೂ ಅಂದ್ರೆ ಏನು! ಬಗ್ಗೆ ಬಂದು ಹೋಯ್ತು ವಿಷಯ ಅಂತ!" "ಅದು ಸರೀರೀ, ನಾವು ಯಾರಾಗಿದ್ರೂ ನೀವು ಹೇಳಿದ ಹಾಗೇ ಮಾಡ್ತಾ ಇದ್ವಿ. ಆದ್ರೆ ನಾವು ಮಹಾರಾಜರಲ್ಲವಲ್ರೀ, ಅವರಿಗೆ ದೇವ್ರು ಸರ್‍ಯಾಗಿ ಬುದ್ಧಿ ಕೊಡಬೇಕಾಗಿತ್ತು. ಅದರಿಂದ ತಾನೆ ಈ ಗುಲ್ಲು, ಗೊಂದ್ಲ ಗೋಳು ಎಲ್ಲ. ಕೆಲವು ರಾಜರು ಅಂದ್ರೆ ಹೀಗೇ. ಒಂದು ತರಹ, ಧರ್ಮಭ್ರಾಂತು ಆ ಧರ್ಮರಾಯ, ನಳ ಮಹಾರಾಜ ಇವರು ಕಂಡೂ ಕಂಡೂ ಆಗ್ನಿ ರಾಜ ಧರ್ಮ ಅಂತ ಪಗಡೆ ಜೂಜು ಆಡಿ ಏನು ಮಾಡಿ ಕೊಂಡ್ರು, ತಮಗೂ ತಮ್ಮೋರಿಗೂ? ಆ ವಿಶ್ವಾ ಮಿತ್ರ ಕೇಳ್ದ ಅಂತ ಆನೆ ಮೇಲೆ ನಿಂತುಕೊಂಡು ಕವಡೆ ಚಿಮ್ಮಿದ ಎತ್ತರದಷ್ಟು ಧನರಾಶೀನ ಕೊಡ್ತೀನಿ ಅಂತ ಆ ಹರಿಶ್ಚಂದ್ರ ಒಪ್ಪಿ ಕ್ಕೊಂಡನಲ್ಲ ! ಈ ರಾಜರದ್ದು ವಿಚಿತ್ರ ನೀತಿ ಅಂದ್ಕೊಳ್ಳಿ. ಅದನ್ನೇನು ಧರ್ಮ ಶ್ರದ್ಧೆ ಅನ್ನ ಬೇಕೋ, ಧರ್ಮಾಂಧತೆ ಅನ್ನಬೇಕೋ ಕಾಣೆ. ಆಯಾ ಕಾಲದ ಧರ್ಮ ಅಂದುಕೊಂಡು ಸಮಾ ಧಾನ ಪಡಬೇಕು ಅಷ್ಟೆ." "ಆ ಹರಿಶ್ಚಂದ್ರನೂ ಚಂಡಾಲ ಕನ್ಯೆಯರನ್ನು ವಿವಾಹವಾಗಲಿಲ್ಲ, ಅವರ ಇಷ್ಟ ಸಲ್ಲಿಸೋದಾಗಿ ಮಾತುಕೊಟ್ನೊ? ಅವನಿಗೆ ಅಷ್ಟಾದ್ರೂ ಬುದ್ಧಿ ಇತ್ತಲ್ಲ. ನಮ್ಮ

ಮಹಾರಾಜರು ಕಣ್ಣಿನಂಥ ಕಿರಿ ಮಗನಿಗೆ ಸಿಂಹಾಸನವನ್ನೇ ಬಿಟ್ಟಿದ್ದಾರೆ– ಇದು ಇನ್ನೂ ಅತಿಶಯ. ಹೆಂಡತಿ ಕನ್ಯೆಯನ್ನು ರಾಜ ಮಾಡುವ ಆಗೋದಕ್ಕಿಂತ ರಾಜ್ಯ ಬಿಟ್ಟು ಕಾಡಿಗೆ ಹೋದ ರಾಮ ಆದ್ರು ಮಹಾರಾಜನಾದಾಗ [illegible]. ಸಿಂಹಾಸನ ಇಷ್ಟು ಅಂತಿಂಥ ವಸ್ತು [illegible] ಬಿಡುವ ತರದ್ದು [illegible] ಬಿಟ್ಟು ಹೋಗುತ್ತಾರೆ: ನಮ್ಮ ಹಿರಿಯ ಈ ಮಹಾರಾಜರ ಹಾಗೆ ಅಲ್ಲವಲ್ಲ". "ಹೌದು. ಆ ಹಕ್ಕ [illegible] ಅದು ಹಾಗೆ ಕಾಣಿ. [illegible] ಬರಿ [illegible] ಬೇಡವ. ಕೊಡುವುದು ಕೊಟ್ಟಿದ್ದಾರೆ. ತೆಗೆದುಕೊಳ್ಳುವರು ತೆಗೊಂಡಾರೆ. [illegible] ಮಾಡಿಕೊಂಡಿದ್ದಾರೆ. ರಾಜಮಹಲೊಳಗೆ ಬಿಟ್ಟ ರಾಜ್ಯನಿಂದ ಬರೋ ರಾಜ್ಯ [illegible]. ಹಿರಿ ಯೋಗದ್ದು ಕಮ್ಮಿ ನಡೆಯುತ್ತೆ. ನಾವು ಈಗ ಯೋಚನೆಮಾಡ್ತಾಗುತ್ತೆ? ನಮಗೇನು? ಆಗಲಿ ಬಿಡಿ. ಈಗ ಪ್ರಶ್ನೆಕ್ಕೆ ಬನ್ನಿ. ಅದೇನು, ಕೊಡುವವರು ಮಕ್ಕಳ ಕೈಗೆ ಸಿಂಹಾಸನವೇಕೆ– [illegible] ಬಿಡು ಮಾಡಿದ್ದಾರೆ ಅಂತ. ಅದೂ ಒಂದು ಘಳಿಗೆ. ಅದೂ [illegible]! "ಇನ್ನೊಂದು ಮಾಡಬೇಕಿದೆ. ಒಂದು ಘಳಿಗೆ ಆ ರಾಜ್ಯಭಾರವನ್ನು ಕೊಡುವುದು ಕನ್ನ ಮಹಾರಾಜನಾಗಿ ಮೆರೆದಾನೆ ಅಷ್ಟೆ. ಸಾಕ್ಷಿ. ಪ್ಪ, ಅವನ ಅದೃಷ್ಟವೇ ಅದೃಷ್ಟ– ಈ ಪ್ರಪಂಚದಲ್ಲಿ ಯಾವ ಸಾಮಾನ್ಯ ವ್ಯಕ್ತಿಯೂ ಅನುಭವಿಸದ ಇದ್ದಂಥಾದ್ದು! ಯಾರು ಯಾರೋ ಯುದ್ಧಗಳ್ಳ ಹಾಳು, ರಾಜ್ಯ ಗೆದ್ದು, ಸಿಂಹಾಸನ ಏರಿ, ರಾಜ ಮಹಾರಾಜ ಅನ್ನಿಸಿಕೊಂಡ್ರು. ಇವನು ಒಂದು ಹನಿ ಬೆವರು ನೀರು ಸುರಿಸದ ಹಾಗೆ ನಿರಾಯಾಸವಾಗಿ ಮಹಾರಾಜ ಪದವಿ ಗಿಟ್ಟಿಸಿ ಬಿಟ್ಟನಲ್ಲ! ಪ್ಪ", "ಅವನ ಅದೃಷ್ಟದ ಮಾತಿರಲಿ. ರಾಜ್ಯದ ದುರದೃಷ್ಟದ ಮಾತು ಹೇಳೀರಪ್ಪಾ. ಅಂಥೋನು ಸಿಂಹಾಸನ ಏರೋದು ಎಂಥ ಅಪಚಾರ! ಏನು ಕಥೆ! ನೋಡಪ್ಪ ಇಂ. ಈಗೇ

ಹೀಗಿದೆಯೋ ಪರಿಸ್ಥಿತಿ, ಇಂಥ ಮಹಾರಾಜರೇ ಇರುವಾಗ! ಇನ್ನು ಈ ಕಿರುಕ್ಷಣದ ಒಂದು ಘಳಿಗೆಯವರೂ ರಾಜ ಅಂತ ಆದರೆ ಇದ್ದಿದ್ದು ಹಾಳೆ [illegible] ಹೋಗಿ ಹೆಚ್ಚು ಬಾಕಿಕ್ಕಿದ್ದಾಗ ಏನೇನು ಇದ್ದೀತು ವಿಶೇಷ ನಾಶ. ಕ್ಷಾಮಡಾಮರ, ಯುದ್ಧ, ರೋಗ ರುಜಿನ ಹೀಗೆ, ಇಂಥೆಂಥಾದ್ದನ್ನೆಲ್ಲ ನಾವೆಲ್ಲ ಪ್ರಜೆಗಳು ಅನುಭವಿಸಬೇಕಾಗುತ್ತದೆ, ಆ ಹದ ನಾಥ ಸ್ವಾಮಿಗೇ ಗೊತ್ತು. ಅವನೇ ನಮ್ಮನ್ನು ಕಾಪಾಡಬೇಕು!" "ಹೌದು ಹೌದು. ಹಾಗೆಲ್ಲ ಆಗುತ್ತೆ–ಇಂಥ ಅನ್ಯಾಯ ಅನ್ಯಾಯವೇ ಅಸಾಧಾರಣ ಅದ ಹೋಯ್ತು. ನನಗ ಅನ್ನಿಸುತ್ತೆ, ಅದು ಬರದ ಹಾಗೆ ಅಷ್ಟು ಬದ ಆ ಹರಿಣ್ಯ ಕಣ್ಣಿನ ಮಗನಿಗೆ ಹೋಗಿ ಅವನನ್ನು ಹಾಗೆ ಮಾಡಿದರೆ, ಇಲ್ಲ, ಅಷ್ಟು ಬೇಡ ಅದ್ರೆ ಅವನನ್ನು ನಮ್ಮ ರಾಜ್ಯದಿಂದ ಹೊರಗೆ ಬಿಟ್ಟ ಬೇಕು– ರಾಜ್ಯಭ್ರಷ್ಟನನ್ನಾಗಿ ಮಾಡಿ. ಏನಂತೀರಿ?". "ಇವನು ಸಿಕ್ಕ ಬಿಟ್ರೆ ಬಂಧಿಸಿ ಅಂತ ತಿಳಿದುಕೊಂಡಿದೀರೇನು? [illegible] ಬಿಟ್ಟು ಬೆರಳಿಗೆ ಹೊಳೆಯುತ್ತಿದ್ದ ಬಿಡಿ. ಏನ ಕೊಡಬೇಕಿಲ್ಲ." "ಅದ್ರೂ. ಅದು ನಡೆಯೋ ಮಾತಲ್ಲಪ್ಪ. ಕಿರೀಟ ಬಂದವರೂ ಹಾಗೆ ಯೋಚಿಸಬಹುದು ಅಂತ ಮಂತ್ರಿಯೋರಿಗೆ ಗೊತ್ತಿರೋ ದಿಲ್ವಾ? ಅದಕ್ಕೆ ಸೀದಾ, ಆ ಕಣ್ಣಿನ ಸುತ್ತ ಭಯಂಕರ ಕಾವಲಿನ ಏರ್ಪಾಟು ಮಾಡಿದೆ. ಗೊತ್ತಿಲ್ವ? ಅವನು ಭವಿಷ್ಯದ ರಾಜನಲ್ವ? ಅದಕ್ಕೇ ಈಗಿಂದಲೂ ಈ ಮರ್ಯಾದೆ–ರಕ್ಷಣೆ ಏರ್ಪಾಟು! ಅವನಿಗೇನಾದ್ರೂ ಅಪಾಯ ಆದ್ರೆ, ಮಹಾರಾಜರಿಗೇ ಕೆಟ್ಟ ಹೆಸರು ಬರುತ್ತೆ. ಬೇಕೂಂತಲೇ ಅವನನ್ನು ರಕ್ಷಿಸಲಿಲ್ಲ ಅಂತ, ಕಡೆಗೆ ಮಹಾರಾಜರೇ ಹಾಗೆ ಮಾಡಿಸಿದ್ರೂ ಅಂತಾನೂ. ಅವರೊಂದಿಗೇನು. ಏನು ಬೇಕಾದ್ರೂ ಯೋಚಿಸ್ತಾರೆ ಅಡ್ತಾರೆ. ನೋಡಿದಿರಾ? ನಾವೇನೂ ಮಾಡೋ ಹಾಗಿಲ್ಲ. ಆ ಮಾತ್ರ ಅಲ್ಲಿಗೇ ನಿಲ್ಲಿಸೋಣ. ಯಾವ ಗೋಡೆ ಹಾರ ಹಕ್ಕಿರ್ತಾನೋ, ನಮ್ಮ ಮಾತನ್ನು ಕೇಳಿ

ಸ್ಕೋತಾನೋ. ಹುಷಾರಾಗಿರಿ!" "ಹೌದಪ್ಪ, ನಮ್ಗೆಲ್ಲ ಯಾಕೆ ಅಂಥಾ ಮಾತು-ಬಡವನ ಮಾತು ದವಡೆಗೆ ಮೂಲ ಅಂತ. ಗಂಭೀರ ವಾಗಿ ಸುಮ್ಮನೆ ಇದ್ದುಕೊಂಡು ಇರೋಣ. ಯಾರು ಸಿಂಹಾಸನ ಏರಿದರೇನು, ಯಾರು ಇಳಿ ದರೇನು ನಮಗೆ: ನಾವು ಮೂಗಿಗೆ ಕವಡೆ ಕಟ್ಟಿಕೊಂಡು ಗಾಣದ ಎತ್ತಿನ ಹಾಗೆ ದುಡೀತಾ ಇರೋದು ತಪ್ಪುತ್ತೇನು? ನಮ್ಮ ಬಡತನ ಹೋಗುತ್ತೇನು? ಏನೋ ಭಾರಿ ಉತ್ಸವಗಳು ನಡೀತವೆ, ಲಕ್ಷಾಂತ ಜನರ ಸೇರ್ತ್ತಾರೆ. ನೋಟ, ನುಡಿ ಊಟ ತಿಂಡಿ ಏನೇನೋ ಇರುತ್ತೆ. ಕಣ್ಣಿಗೆ ಬಿದ್ದದ್ದನ್ನು ನೋಡೋಣ. ಕಿವಿಗೆ, ಬಿದ್ದದ್ದನ್ನು ಕೇಳೋಣ, ಬಾಯಿಗೆ ಬಿದ್ದದ್ದನ್ನು ತಿನ್ನೋಣ. ಆದಷ್ಟೇ ಲಾಭ ಅನುಭವಿಸೋಣ, ರಾಮ ಕೃಷ್ಣ ಅಂತ." "ಹೌದು, ಅದೇ ಕ್ಷೇಮ ಬುದ್ಧಿವಂತಿಕೆ ಎರಡೂ." "ಅದು ಸರಿ, ಹಾಗೇ ಮಾಡೋಣ. ಆದ್ರೆ ಆ ಕಣ್ಣ ಈಗ ಏನು ಮಾಡ್ತಾ ಇದಾನೋ. ಅದೂ ಒಂದು ಕುತೂಹಲ ಕೆರಳಿಸೋ ವಿಚಾರವೇ", "ಇನ್ನೇನು ಮಾಡ್ತಾನೆ? ಮುಂದಿನ ಆ ದಿನದ ಕನಸು ಕಾಣ್ತಾ ಇರ್ತಾನೆ, ಅಷ್ಟೆ.", "ಅಲ್ಲಾ, ಎಂಥ ಸ್ಥಿತೀಲಿ ಹುಟ್ಟಿದೋನು, ಈಗ ಎಂಥ ಸ್ಥಿತಿಗೆ ಏರ್ತಾನೆ ಅಂತ! ಅದೃಷ್ಟಕ್ಕೆ ನಿಜವಾಗಿಯೂ ಕಣ್ಣಿಲ್ಲ ಕಣ್ರಿ." , "ನಿಜ, ಒಪ್ದೆ. ಮೊದಲಿಗೆ ಕಡು ಬಡವರ ಮಗನಂತೆ. ಗುಡಿಸಿಲಲ್ಲಿ ಇದ್ರಂತೆ, ಕೂಲಿ ನಾಲಿ ಮಾಡ್ಕೊಂಡು. ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ. ಇವನು ಹುಡುಗನಾಗಿದ್ದಾಗ ಯಾರೋ ಪುಣ್ಯಾತ್ಮರು ಅರಮನೆ ಕಾರಕೂನರು ಮನೆ ಮಕ್ಕಳನ್ನು ಸ್ಕೂಲಿಗೆ ಕರ್ಕೊಂಡು ಹೋಗೋಕೆ ಅಂತ ಕೆಲ್ಸಕ್ಕೆ ಇಟ್ಕೊಂಡ್ರತೆ. ಆ ಮಕ್ಳ ಪುಸ್ತಕ ಪೆನ್ಸಿಲ್‌ನಲ್ಲಿ ಓದು ಬರಹ ಇವನೂ ಕಲೀತಾ ಇದ್ನಂತೆ. ಆ ಮೇಲೆ ಮನೆಯೋರು ಕನಿಕರ ದಿಂದ ಅರಮನೇಲಿ ಆಳಿನ ಕೆಲ್ಸ ಕೊಡ್ಸಿದರು. ತಗೊಳ್ಳಿ. ಇವ್ನ ಅದೃಷ್ಟದ ಬಾಗಿಲು ತೆಗೀತು ಅನ್ನಿ. ಯಾರ ಯಾರ ಕಣ್ಣಿಗೋ ಬಿದ್ದು ಮಹಾ ರಾಜರುಗಳ ಕೊಡೆಯಾಳು ಸ್ಥಾನಕ್ಕೆ ಏರಿಬಿಟ್ಟ ಈಗಂತೂ ..." "ಹುಂ, ನಾಳಿನ ಕನಸಿನ ಜತೆಗೆ ತನ್ನ ಹಿಂದಿನ ಹಂತಹಂತದ ಬಾಳನ್ನು ನೆನೆಸಿ ಕೊಂಡು, ಅದನ್ನೂ ಮನಸ್ಸಿನಲ್ಲಿ ತಿರುವಿ ಹಾಕ್ತಾ ಇದಾನೇನೋ.", "ತಿರುವಿಹಾಕೋ ದೇನು ಸ್ವಲ್ಪವೆ? ಅಷ್ಟು ದೀರ್ಘ ಬಾಳು, ಅಷ್ಟು ತರಹ ತರಹದ್ದು. ಮೊದ ಲಬಾಳೋ, ಅನಂತರ ಅರಮನೆದೋ, ಆಸ್ಥಾನದ್ದೋ, ಮಹಾರಾಜರುಗಳ ಜತೆ ರಾಜ್ಯದಲ್ಲಿ ತಿರುಗಾಡು ವಾಗಿನದೋ - ಎಷ್ಟೆಷ್ಟು ಎಂಥೆಂಥಾದ್ದನ್ನೆ ಕಂಡಿರಬೇಕು ಕೇಳಿರಬೇಕು ಅನುಭವಿಸಿರ ಬೇಕು," "ಅಯ್ಯೋ ಬಿಡ್ರಿ. ಅವ್ನು ಏನು ಮಾಡ್ತಾ ಇದ್ರೆ ನಮಗೇನು ? ಅವನೇನು ಆಗಲೇ ಮಹಾರಾಜ ಆಗಿಹೋಗಿದಾನೆಯೆ, ಅವನು ಕೂತದ್ದು ನಿಂತದ್ದು ಕೆಮ್ಮಿದ್ದು ಸೀನಿದ್ದು ಎಲ್ಲ ಚರ್ಚಿಸೋದಕ್ಕೆ? ಈಗೆ ಇನ್ನೂ ಬಡ ಕೊಡೆಯಾಳು ತಾನೆ. ಬನ್ನಿ ಸುಮ್ಮನೆ. ನಮಗೆ ಬೇರೆ ಕೆಲಸ ಏನೂ ಇಲ್ವೆ? ಅವನು ಒಂದು ಘಳಿಗೆ ಮಹಾರಾಜನಾದರೂ ಆಗ್ಲಿ ಮೊದಲು. ಆ ಮೇಲೆ ನೋಡೋಣ, ಆಡೋಣ, ಬೇಕು ಬೇಕಾದಷ್ಟು." ಇದೊಂದು ಜನರ ಮಾತು ವೈಖರಿ.

ರಾಜ್ಯಕ್ಕೆ ರಾಜ್ಯವೇ ಆ ಮಹಾದಿನ ಕ್ಕಾಗಿ, ಆ ಮಹಾ ಘಳಿಗೆಗಾಗಿ, ಅತ್ಯಂತ ಕುತೂಹಲ, ವಿಸ್ಮಯ, ವಿನೋದ, ಭಯ, ಸಂಭ್ರ ಮಗಳಿಂದ ತುದಿಗಾಲಿನ ಮೇಲೆ ಕಾಯುತ್ತ ನಿಂತಿದೆ ಎನ್ನುವಂತಿತ್ತು-ಹಾಗಿತ್ತು ಈ ವಿಚಿತ್ರ ಸ್ವಾರಸ್ಯ ಸುದ್ದಿ ಬಾಯಿಂದ ಬಾಯಿಗೆ ರಾಜ್ಯ ದಲ್ಲೆಲ್ಲ ಹರಡಿದ್ದ ರೀತಿ. ಆ ದಿನ ಘಳಿಗೆಗಳು ನಿಶ್ಚಯವಾದ ಮೇಲೆ ರಾಜಾಜ್ಞೆಯಂತೆ ಪ್ರಧಾನಿ ಎಲ್ಲೆಲ್ಲೂ ಮಾಡಿಸಿದ್ದ ಪ್ರಚಾರ. ಕಣ್ಣನಿಗೆ ದಿನ ಘಳಿಗೆಗಳ ಜತೆಗೆ ಅವನು ಯಾವ ಯಾವ ಹೊತ್ತಿನಲ್ಲಿ ಯಾವ ಯಾವ ಆಚಾರ ಸಂಪ್ರದಾಯ ವ್ಯವಹಾರ ಮುಂತಾ ದವುಗಳಲ್ಲಿ ಹೇಗೆ ಹೇಗೆ ಭಾಗವಹಿಸಬೇಕು ಎಂಬ ಸರ್ವ ಸವಿಸ್ತಾರ ಸೂಕ್ಷ್ಮ ವಿವರಗಳ ನ್ನೆಲ್ಲ ತಿಳಿಸಲಾಗಿತ್ತು. ಅವುಗಳಿಗೆ ಯೋಗ್ಯ ಏರ್ಪಾಡುಗಳೆಲ್ಲ ಭರದಿಂದ ಸಾಗುತ್ತಿದ್ದುವು.

ಈ ಏರಡು ಸಿಂಹಾಸನಾರೋಹಣ, ಅವರೋಹಣ ವಿಸರ್ಜನಗಳ ನಡಾವಳಿ ವಿವರಗಳು ಮಹಾರಾಜರಿಗೂ ಹೋಗಿದ್ದುವು. ಅವರ ಅವಗಾಹನೆಗಾಗಿ, ಅವರ ಅನುಮೋದನೆಗಾಗಿ, ಅವರ ಪಾತ್ರ ನಿರ್ವಹಣೆಗಾಗಿಯೂ. ಎಲ್ಲ ಸಿದ್ಧತೆಗಳೂ ಸ್ವಯಂಚಾಲಿತ ಯಂತ್ರ ಚಲನೆಯಂತೆ ಸಮರ್ಪಕವಾಗಿ ಜರುಗುತ್ತಿದ್ದುವು, ಮುಗಿಯುತ್ತ ಬಂದಿದ್ದುವು.

ರಾಜ್ಯದ ದೂರ ದೂರ ಪ್ರದೇಶಗಳಿಂದ, ನೆರೆ ರಾಜ್ಯಗಳಿಂದಲೂ. ರಾಜಧಾನಿಗೆ ಕೆಲವು ದಿನಗಳಿಂದಲೂ ಬಂದು ಜಮಾಯಿಸುತ್ತಿದ್ದ ಮಹಾ ಜನರು ಆ ಸಿಂಹಾಸನಾರೋಹಣ ಸುಮುಹೂರ್ತಕ್ಕೆ ಎಷ್ಟೋ ಹೊತ್ತು ಮುಂಚಿನಿಂದಲೇ ಅರಮನೆಯ ನಿಶ್ಚಿತ ಆವರಣದಲ್ಲಿ ಕಿಕ್ಕಿರಿದು ನೆರೆದಿದ್ದರು. ಜನ ತಮ್ಮ ತಮ್ಮಲ್ಲೇ ಗುಜುಗುಜು ಗುಟ್ಟುತ್ತಿದ್ದರು.ಒಳಗೆ ಶಾಸ್ತ್ರಗಳು ಪೂರ್ತಿಯಾದ ನಂತರ ತಂದು ಸಭಾ ಮಂಟಪದಲ್ಲಿ ಇಡಲಾಗಿದ್ದ ಸಿಂಹಾಸನದ ಮೇಲೆ ಜನರ ಕಣ್ಣು ಆಗಾಗ ಹೋಗಿ ಬರುತ್ತಿತ್ತು. ಸಭಾ ಮಂಟಪದೊಳಗೆ ಗಣ್ಯ ಆಹ್ವಾನಿತರು, ಅಧಿಕಾರಿಗಳು ಸಾಲುಸಾಲಾಗಿ ಕುಳಿತು ಪಿಸಿ ಮಾತಾಡುತ್ತ ಎಲ್ಲರಂತೆ ಆ ಆರೋಹಣ ಶುಭ ಮುಹೂರ್ತವನ್ನು ನಿರೀಕ್ಷಿಸುತ್ತಿದ್ದರು. ಇಲ್ಲಿ ಕಡೆಯ ಕ್ಷಣದ ಪೂರಕ ಕೆಲಸ ಕಾರ್ಯಗಳಲ್ಲಿ ತೊಡಗಿದ್ದ ಅರಮನೆಯ ಸಿಬ್ಬಂದಿ ವರ್ಗದವರು ಅಲ್ಲಲ್ಲಿ ಸುಳಿದಾಡುತ್ತಿದ್ದರು. ಪೂಜೆ ಶಾಸ್ತ್ರ ಸಂಬಂಧವಾಗಿ ಎಷ್ಟೋ ಹೊತ್ತಿನಿಂದ ಅರಮನೆಯ ಒಳಗಿನ ಆವರಣದಲ್ಲಿ ಮಂಗಳ ವಾದ್ಯಗಳ ಮೇಲು ಸುಸ್ವರ ಕೇಳಿ ಬರುತ್ತಿತ್ತು. ಅಷ್ಟೊಂದು ಜನರಲ್ಲಿ ವಿವಿಧ ಭಾವನೆಗಳು ಇರುವುದು ಸಹಜವಾದರೂ ಎಲ್ಲ ಮುಖಗಳ ಮೇಲೂ ಕುತೂಹಲ ಕೂಡಿದ ತವಕ ಮುದ್ರೆ ಪ್ರಮುಖವಾಗಿ ಎದ್ದು ಕಾಣುತ್ತಿತ್ತು.

ಈಗ, ಈಗ, ಈಗ, ಆ ಸುಸಮಯ ಸಮೀಪಿಸುತ್ತಿತ್ತು!

ತಕ್ಕ ಸಮಯಕ್ಕೆ ಸರಿಯಾಗಿ ಛತ್ರ ಚಾಮರಾದಿ ರಾಜಮರ್ಯಾದೆ, ಮಂತ್ರಘೋಷ, ವಂದಿಮಾಗಧ ಪರಾಕು, ರಾಜ ಪರಿವಾರ ಸಮೇತ ಶಾಸ್ತ್ರೋಕ್ತ ತಾತ್ಕಾಲಿಕ 'ರಾಜ' ತಿರುಕಣ್ಣನ್ ಮಹಾರಾಜ ಸಭಾ ಮಂಟಪವನ್ನು ಪ್ರವೇಶಿಸಿ ಮೆಲ್ಲಗೆ ಗಂಭೀರ ಗತಿಯಿಂದ ಸಿಂಹಾಸನದ ಕಡೆಗೆ ನಡೆಯುತ್ತಿದ್ದ. ಆ ಪರಿವಾರದಲ್ಲಿ ಮಾಜಿ ಮಹಾರಾಜ ವರ್ಮನೂ ಇದ್ದ. ಸಿಂಹಾಸನದ ವೇದಿಕೆಯ ಮೇಲಕ್ಕೆ ಕೈ ಹಿಡಿದು ತಿರುಕಣ್ಣನ್ ಮಹಾರಾಜನನ್ನು ಹತ್ತಿಸಿದ ಮೇಲೆ, ಹತ್ತಿರದ ಸಾಲಿನ ಸಾಮಾನ್ಯ ಪೀಠದಲ್ಲಿ ಕುಳಿತುಕೊಂಡ.

ತಿರುಕಣ್ಣನ್ ಹಿಂದಿನ ಮಹಾರಾಜರುಗಳು ಮಾಡುತ್ತಿದ್ದಂತೆ ಸಿಂಹಾಸನವನ್ನು ಪೂಜಿಸಿ ನಮಿಸಿ. ಹತ್ತಿ ಕುಳಿತ. ಆ ಒಂದು ಘಳಿಗೆ ಪ್ರಾರಂಭವಾಯಿತು ಮಂಗಳ ವಾದ್ಯಗಳು ಮೊಳಗಿದವು. ವಂದಿ ಮಾಗಧರು ಪರಾಕು ಹಾಕಿ ಜಯಘೋಷ ಮಾಡಿದರು. ಸಭಾಸದರು ಮೇಲೆದ್ದು ನಿಂತು ಗೌರವವನ್ನು ಸಲ್ಲಿಸಿದರು. ದುಂದುರೆ ಸಮರ್ಪಣೆಯಾಯಿತು. ಆದರೆ ಅದೇನು ಇಂಥ ಸಾಮಾನ್ಯ ಮನುಷ್ಯ ರಾಜನಾಗಿ ಸಿಂಹಾಸನವನ್ನು ಏರ




ಬಹುದೆ? ಎಂಬ ಅತ್ಯಾಶ್ಚರ್ಯದಿಂದ ವ್ಯೈಮು ರೆತೋ, ಹೀಗೆ ಆಗಿ ಹೋಯಿತಲ್ಲ, ಎನ್ನುವ ಜುಗುಪ್ಸೆ ಅಸಹ್ಯಗಳಿಂದಲೋ, ಹೀಗೆ ಈ ಅನರ್ಹನಿಂದ ಆಗಬಾರದಾಗಿತ್ತು ಎಂಬ ಅವನ ಮೇಲಿನ ಕೋಪದಿಂದಲೋ, ಹೊರಗಡೆಯಲ್ಲಿ ನೆರೆದಿದ್ದ ಜನಸ್ತೋಮದಿಂದ ರೂಢಿಯ ಚಪ್ಪಾಳೆಯಾಗಲಿ ಜಯಘೋಷವಾಗಲಿ ಮತ್ಯಾವ ಸಂಭ್ರಮ ಗೌರವ ಸೂಚನೆಯಾಗಲಿ ಕೇಳಿರಲಿಲ್ಲ, ಕಾಣಬಂದಿರಲಿಲ್ಲ. ಎಲ್ಲೋ ಸ್ವಲ್ಪ ಅಲ್ಲೊಂದು ಇಲ್ಲೊಂದು ಮಾತ್ರ, ತಗ್ಗಿನ ಮಟ್ಟದಲ್ಲಿ, ಲಕ್ಷ್ಯಕ್ಕೇ ಬರದಷ್ಟು. ರಾಜ ತಿರುಕಣ್ಣನ್ ಸ್ವಲ್ಪ ಕಾಲ ಸಿಂಹಾಸನದ ಮೇಲೆ ಕುಳಿತಿದ್ದರೆ ಮೆಚ್ಚಿಕೆ ದನೂ ಪ್ರಜೆಗಳಿಂದ ಆಗುತ್ತಿತ್ತೋ ಹೇಗೋ. ಆದರೆ ಅವನು ಕ್ರಾಂತಿ ಕಾ ತ್ತಿದ್ದನೋ ಇಲ್ಲವೋ ಕೂಡಲೆ ಇದ್ದು ನಿಂತಿದ್ದ ಪ್ರಜೆಗಳು ತಮ್ಮ ಸ್ಥಿತಿಯಿಂದ ಎಚ್ಚೆತ್ತುಕೊಳ್ಳುವ ಮುನ್ನವೇ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಅಧಿಕಾರಿಯೊಬ್ಬ ಮುಂದೆ ಬಂದು ತಂದು ಒಪ್ಪಿಸಿದ ರಾಜ ಭಾಷಣವನ್ನು ತನಗೆ ಪರಿಚಿತವಾಗಿದ್ದ ರಾಜಗಾಂಭೀರ್ಯದ ಸ್ವರದಿಂದ ಪ್ರಾರಂಭಿಸಿಬಿಟ್ಟನು. ಅವನ ಆ ತಾರಸ್ವರ ದಿಂದ ಎಲ್ಲೆಲ್ಲೂ ಸಭೆಗೆ ಸಭೆಯೇ ಸ್ತಬ್ಧವಾಗಿ ಆಲಿಸುತ್ತಿತ್ತು:

"ನಮ್ಮ ತಿರುವಾಂಕೂರು ರಾಜ್ಯದ ಮಹಾ ಜನರೆ!

"ನಾವು ಎಷ್ಟೋ ಕಾಲದಿಂದ ಎಷ್ಟೋ ಬಾರಿ ಆಶಿಸಿದ ಆದರೆ ಸಹಜವಾಗಿಯೇ ಕನಸಿನಲ್ಲಿಯೂ ನಿರೀಕ್ಷಿಸದಿದ್ದ ಇಂಥ ಅತ್ಯಪೂರ್ವ ಸುವರ್ಣಾವಕಾಶವೊಂದು ನಮ್ಮ ಜೀವನದಲ್ಲಿ ಶ್ರೀ ಅನಂತ ಪದ್ಮನಾಭ ದೇವರ ಮಹಾ ವರಪ್ರಸಾದವಾಗಿ, ಸತ್ಯವಂತ ಮಹಾನುಭಾವರು ರಾಜ ವರ್ಮರ ಕೃಪೆಯಿಂದ, ಯೋಗಾಯೋಗದಿಂದ, ನಮ್ಮ ಪುಣ್ಯವಶ ದಿಂದ, ನಮಗೆ ಲಭಿಸಿದೆ. ಅದರ ಪ್ರಯೋಜನವನ್ನು ಪಡೆದುಕೊಳ್ಳಲು ನಾವು ನಿರ್ಧರಿಸಿದ್ದೇವೆ.

"ನಮ್ಮ ಇಷ್ಟು ದೀರ್ಘ ಬಾಳಿನಲ್ಲಿ ನಾವು ಅತ್ಯಂತ ಕೆಳಗಿನ ಗುಡಿಸಲು ಕಡು ಬಡತನ ದಿಂದ ಅರಮನೆಯ ಶ್ರೀಮಂತಿಕೆವರೆಗೆ ಎಲ್ಲಾ ಹತ ಹಂತ ಜೀವನವನ್ನೂ ಕಣ್ಣಾರೆ ಕಂಡಿದ್ದೇವೆ. ರಾಜಧಾನಿಯಲ್ಲಿ ಇರುವಾಗ, ಮಾನ್ಯ ಮಹಾರಾಜರುಗಳು ನಾಡಿನ ಉದ್ದಗಲಕ್ಕೂ ನಾನಾ ಸ್ಥಳಗಳಲ್ಲಿ ಪ್ರವಾಸ ಕೈಕೊಂಡಾಗ ಪ್ರಭುಗಳ ಕೊಡೆಯಾಳಾಗಿ ರಾಜ್ಯದ ಮೂಲೆ ಮೂಲೆ ಪ್ರದೇಶಗಳನ್ನು, ಅಲ್ಲಿಯ ಜನ ಜೀವನವನ್ನು ಕಂಡಿದ್ದೇವೆ. ಪ್ರಭುಗಳ ಮುಂದೆ ಎಲ್ಲ ಸ್ಥಳದ ಎಲ್ಲ ತರಹದ ಜನರು ವಿಜ್ಞಾಪನ ಪತ್ರಗಳ ಮೂಲಕವಾಗಿಯೂ, ಬಾಯಿಮಾತಿನಲ್ಲಿಯೂ ಅರಿಕೆಮಾಡಿಕೊಂಡ ಅವರ ಸ್ಥಿತಿಗತಿಯನ್ನೂ ಅಗತ್ಯವಾದ ಬೇಡಿಕೆಗಳನ್ನೂ ಕೇಳಿದ್ದೇವೆ. ಈ ಬಗ್ಗೆ ಸ್ಥಳದಲ್ಲಿಯೇ ಹಾಗೂ ರಾಜಧಾನಿ ರಾಜಾಸ್ಥಾನಗಳಲ್ಲಿಯೂ ನಡೆಯುತ್ತಿದ್ದ ಚರ್ಚೆ, ಆಗುತ್ತಿದ್ದ ತೀರ್ಮಾನಗಳನ್ನು ಮೂಕವಾಗಿ ಗಮನಿಸಿದ್ದೇವೆ. ಅದೂ ಅಲ್ಲದೆ ಆಗಿನ ನಮ್ಮ ಕೆಳ ಹಂತದ ಸ್ಥಾನಕ್ಕೆ ನುಗುಣವಾಗಿ ಎಲ್ಲೆಡೆಗಳಲ್ಲೂ ಇದ್ದ ನಂಟರು ಇಷ್ಟರು ಇತರ ಜನರೊಂದಿಗೆ ಬೆರೆತು ಮಾತುಕಥೆಯಾಡಿ ಅವರ ಕಷ್ಟ ಸುಖಗ



ಆರ್.ಕೆ. ಕುಲಕರ್ಣಿ.

ಳನ್ನು ಅರಿತುಕೊಂಡಿದ್ದೇವೆ.

"ಹೀಗೆ ಇಷ್ಟೊಂದನ್ನು ಅನುಭವಿಸಿ, ಕಂಡು, ಕೇಳಿ, ಸಹಜವಾಗಿಯೇ ಎಲ್ಲದರ ಬಗ್ಗೆ ನಮ್ಮ ಜೀವನದ ಉದ್ದಕ್ಕೂ ಚಿಂತನ ಮಂಥನ ಮಾಡಿದ್ದೇವೆ. ಇದರ ಪರಿಣಾಮವಾಗಿ ಎಷ್ಟೋ ಸಮಸ್ಯೆಗಳಿಗೆ ನಮ್ಮದೇ ಆದ ಪರಿಹಾರಗಳು ನಮ್ಮ ಮನಸ್ಸಿಗೆ ಹೊಳೆದಿದ್ದುವು. ಕಾಲ ಪರೀಕ್ಷೆಯಿಂದ ಈ ಪರಿಹಾರಗಳಲ್ಲಿ ಕೆಲವನ್ನು ಕೈ ಬಿಡಲಾಯಿತು. ಇನ್ನು ಕೆಲವನ್ನು ಕಾಲಗುಣಾನುಸಾರ ಮಾರ್ಪಡಿಸಲಾಯಿತು. ಮತ್ತೆ ಕೆಲವು ಇನ್ನೂ ಅದೇ ರೂಪದಲ್ಲಿಯೇ ಇವೆ. ಈ ಪರಿಹಾರೋಪಾಯಗಳನ್ನು ಸೂಚಿಸುವ, ಅಥವ ಪ್ರಯೋಗಾರ್ಥವಾಗಿ ಕಾರ್ಯಗತಗೊಳಿಸುವ ಸ್ಥಾನಮಾನಗಳು ಕೇವಲ ಕೊಡೆಯಾಳಾದ ನನಗೆ ಇರಲಿಲ್ಲ. ಸುಮ್ಮನಿದ್ದೆವು. ಈಗ ಅದೃಷ್ಟವಶಾತ್ ಅಂಥ ಅಗತ್ಯ ಸ್ಥಾನಮಾನಗಳು ಲಭಿಸಿರುವುದರಿಂದ ಆ ಪರಿಹಾರಗಳನ್ನು ರಾಜಾಜ್ಞೆಗಳಾಗಿ ಪ್ರಕಟಿಸುತ್ತಿದ್ದೇವೆ. ಆ ರಾಜಾಜ್ಞೆಗಳು ಹೀಗಿವೆ."

ಈಗ ರಾಜ ತಿರುಕಣ್ಣನ್, ತನ್ನ ಸೂಚನೆಗಳ ಆಧಾರದ ಮೇಲೆ ಅಧಿಕಾರಿ ಆಗಲೇ ಬರೆದು ತನಗೆ ಒಪ್ಪಿಸಿದ ರಾಜಾಜ್ಞೆಗಳ ಪತ್ರವನ್ನು ಕೈಗೆತ್ತಿಕೊಂಡು ಓದಲಾರಂಭಿಸಿದ.

ಅವನು ಒಂದೊಂದಾಗಿ ರಾಜಾಜ್ಞೆಗಳನ್ನು ಗಟ್ಟಿಯಾಗಿ ಸ್ಪಷ್ಟವಾಗಿ ಪಠಿಸಿ ಘೋಷಿಸುತ್ತಿದ್ದಾಗ, ಈ ವರೆಗೆ ಸ್ತಬ್ಧವಾಗಿದ್ದ ಸಭೆ ವಿದ್ಯುತ್ ಪ್ರಭಾವಕ್ಕೆ ಒಳಗಾದಂತೆ ಎಚ್ಚೆತ್ತುಕೊಂಡು ಚೈತನ್ಯಪೂರ್ಣವಾಯಿತು. ಒಂದೊಂದು ಆಜ್ಞೆಯನ್ನೂ ಎಚ್ಚರಿಕೆಯಿಂದ ಆಲಿಸಿತು. ಆ ಅಲ್ಪಾವಕಾಶದಲ್ಲಿ ಆದಷ್ಟು ಮಟ್ಟಿಗೆ ಅರ್ಥ ಮಾಡಿಕೊಂಡಿತು. ಸಾಮಾನ್ಯ ಜನಜೀವನದ ಮೇಲೆ ಅದರ ಪರಿಣಾಮವನ್ನು ಊಹಿಸಿಕೊಂಡಿತು, ಆನಂದದಿಂದ ತಲೆದೂಗಿತು, ಉತ್ಸಾಹದಿಂದ, ಆದರ ಪ್ರೀತಿ ಗೌರವಗಳಿಂದ, ಶಿಸ್ತಿನಿಂದ ಕೈ ತಟ್ಟಿತು. ತಾತ್ಕಾಲಿಕ ಮಾಜಿ ರಾಜವರ್ಮನೂ ಇಂಥ ಬಹು ಸಂಖ್ಯಾತರಲ್ಲಿ ಒಬ್ಬನಾಗಿದ್ದ.

ರಾಜಾಜ್ಞೆ ಘೋಷಣೆ ಮುಗಿದೊಡನೆ ರಾಜ ತಿರುಕಣ್ಣನ್ ಸಿಂಹಾಸನದ ಮೇಲೆ ಕುಳಿತು, ಅಧಿಕಾರಿಯಿಂದ ನೀಡಲಾದ ಲೇಖನಿಯಿಂದ ಆ ಪತ್ರಕ್ಕೆ ರಾಜನಾಗಿ ಸಹಿಯನ್ನು ಹಾಕಿದ. ರಾಜಮುದ್ರೆ ಬಿದ್ದಿತು. ಕೂಡಲೆ ಅವನು ಮೇಲೆದ್ದು ನಿಂತ.

"ಈ ನಮ್ಮ ಆಜ್ಞೆಗಳನ್ನು ನಮ್ಮ ಮುಂದಿನ ರಾಜರು ಪ್ರಾಯೋಗಿಕವಾಗಿ ಕಾರ್ಯಗತಗೊಳಿಸತಕ್ಕದು. ಸಾಕಾದಷ್ಟು ಕಾಲಾವಕಾಶ ಕೊಟ್ಟು, ಅವುಗಳ ಪರಿಣಾಮವನ್ನು ಅಧ್ಯಯನದಿಂದ ಪರೀಕ್ಷಿಸಿ, ಪ್ರಜೆಗಳ ಹಿತದ ದೃಷ್ಟಿಯಿಂದ ಅಗತ್ಯ ತೋರಿದಂತೆ ಈ ಆಜ್ಞೆಗಳನ್ನು ಸೂಕ್ತವಾಗಿ ಮಾರ್ಪಡಿಸಬಹುದು.

"ಈಗ ನಮ್ಮ ಜೀವನದ ಹಿರಿಯಾಸೆ ಪೂರ್ತಿಯಾಯಿತು. ಶ್ರೀ ಅನಂತ ಪದ್ಮನಾಭ ಸರ್ವರಿಗೂ ಮಂಗಳವನ್ನು ಮಾಡಲಿ!"

ಇಷ್ಟನ್ನು ಹೇಳಿ ಕೈ ಮುಗಿದು ತನ್ನ ಪೇಟ ಮುಕುಟವನ್ನು ತೆಗೆದು ಸಿಂಹಾಸನದ ಮೇಲಿಟ್ಟು ಆ ಒಂದು ಘಳಿಗೆಯೂ ಮುಗಿಯುವುದಕ್ಕೆ ಮುಂಚೆಯೇ ಅಲ್ಲಿಂದ ಕೆಳಗಿಳಿದು ಬಿಟ್ಟ— ಸಭಾಜನರ ಜಯಘೋಷ ಇನ್ನೂ ಆರಂಭವಾಗುತ್ತಿರುವಾಗಲೇ.

ಮುಂದೆ ಅಲ್ಲಿ ನಡೆದದ್ದು ಈ ಪ್ರಸಂಗ ದೃಷ್ಟಿಯಿಂದ ಅಪ್ರಕೃತ.

ಇಲ್ಲಿ ಪ್ರಕೃತವಾದದು ಇಷ್ಟು: ತಿರುಕಣ್ಣನ್ ರಾಜನ ಆಜ್ಞೆಗಳನ್ನು ರಾಜ ವರ್ಮ ಕಾರ್ಯಗತಗೊಳಿಸಿದಾಗ ರಾಜ್ಯದಲ್ಲಿ ಎಲ್ಲೆಲ್ಲೂ ಹೆಚ್ಚು ಸುವ್ಯವಸ್ಥಿತವಾಗಿ, ಸುಭಿಕ್ಷವಾಗಿ, ಅನುಕೂಲಕರವಾಗಿ ಜನರಲ್ಲಿ ಸುಖ ಮೆರೆದಾಡಿತು. ಕೃತಜ್ಞರಾದ ಹಲವು ತಲೆಮಾರಿನ ಪ್ರಜೆಗಳು ಅವನನ್ನು 'ಕೊಡೆಯಾಳು ಭೂಪಾಲ'ನೆಂದು ಸ್ಮರಿಸಿಕೊಳ್ಳುತ್ತಿದ್ದರು.

ಈಗ ಹೇಳಿ, ಕಣ್ಣನಂಥವನನ್ನು ರಾಜವರ್ಮನಂಥವನನ್ನು ಎಲ್ಲಿ ಕಾಣೋಣ— ಏನಾದರೂ ಆಗಲಿ ಹೋಗಲಿ, ನಾನಂತೂ ಸಿಕ್ಕಿದ ಸಿಂಹಾಸನವನ್ನು ಬಿಡದೆ ಅದರ ಮೇಲೆಯೇ ಸಾಯುತ್ತೇನೆ ಎನ್ನುವ ಪ್ರಜಾತಂತ್ರ ನಾಯಕರ ಈ ಕಾಲದಲ್ಲಿ? ✡

# ನಾಯಿಬಾಲ

ಬುದ್ಧನಿಗೂ ನನಗೂ ಸಾವಿರ ವರ್ಷದ ಸ್ನೇಹ
ಆತ, ಪ್ರತಿದಿನ ರಾತ್ರಿ
ಕನಸಲ್ಲಿ ಕಂಡರಿಯದ ಕಾಮಿನಿಯರ
ಕೂಡುವ ಮುಹೂರ್ತದಲ್ಲಿ ಬಂದು
ನೀನು ನೀನಲ್ಲ
ನೀನು ನಾನೂ ಅಲ್ಲ - ಎನ್ನುತ್ತಾನೆ
ತೆಕ್ಕೆಗಳಲ್ಲಿ ಕರಗಿಹೋಗುವ ರಾತ್ರಿಗಳು
ತೆಕ್ಕಾಮುಕ್ಕಿ ಬಿದ್ದು ಗೋಳಿಡಿಸುವ
ಪ್ರಶ್ನೆಗಳು
ನೀನು ಬಯಸಿದ್ದೇ? – ಎಂದು ಪ್ರಶ್ನಿಸುತ್ತಾನೆ
ರನ್ನದ ತೊಟ್ಟಿಲಲ್ಲೋ
ಅಥವಾ ಕೊಳಚೆಯ ಹಟ್ಟಿಯಲ್ಲೋ
ಹುಟ್ಟುವ
ಬೆಟ್ಟದ ತಪ್ಪಲಲ್ಲೋ ಅಥವಾ ಮನೆಯ ಹಿತ್ತಲಲ್ಲೋ
ಬೆಳೆಯುವ ಅರಳುವ
ಜೀವ-ಜೀವಗಳಂತರ ಅಸಹ್ಯವಾಗುತ್ತಾ
ಎಲ್ಲ ಮರೆಯುವ
ಎಲ್ಲ ಮರೆತಿರುವೆನೆನ್ನುವುದನ್ನೂ ಮರೆಸುವ
ನಿರ್ವಾಣ ಸ್ಥಿತಿಗೆ
ಕಾತರದಲ್ಲಿ ಕಂಪಿಸುತ್ತೇನೆ
ಅವನ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ
ಯಂತ್ರಗಳಂತೆ ಕೆಲಸ ಮಾಡಿ
ತಟಸ್ಥವಾದಾಗ
ತಲೆಯೆತ್ತಿ ನೋಡುತ್ತೇನೆ
ಇರುವುದಿಲ್ಲ – ಬೋಧಿ ವೃಕ್ಷದ
ಎಲೆ ಟೊಂಗೆ ಕೊನೆಗೆ ನೆರಳೂ
ಪುನಃ
ರಾತ್ರಿಯ ಕನಸಿನಲ್ಲಿ
ಬರೀ ಮೋಡಗಳ ಲೋಕ ತೇಲಿ ಬರುತ್ತದೆ
ನಿಂತಿದ್ದ ನೃತ್ಯ ಗತಿ
ಪಡೆಯುತ್ತದೆ

–ಶ್ರೀನಾಥ ರಾಯಸಂ

ಪ್ರಲ್ಹಾದ ಮುದಗಲ್ಲ

ಪುಸ್ತಕ ಪರಿಚಯ

# ಶೂರ ಅಬಲೆ

ಶ್ರೀರಾಮಚಂದ್ರನಿಗೆ 'ಧನುರ್ಧಾರಿ" ಎಂದು ಸಂಬೋಧಿಸುವದು ಸರ್ವಶ್ರುತ. ಆದರೆ ಕಳೆದ ಶತಮಾನದ ಉತ್ತರಾರ್ಧ, 'ಧನುರ್ಧಾರಿ' ಎಂಬ ಅಂಕಿತದಲ್ಲಿ ಮಹಿಳಾ ವಿಮೋಚನೆ, ಮತ್ತು ಸ್ತ್ರೀಯರು ರಣಭೂಮಿಯಲ್ಲಿ ತೋರಿಸಿದ ಶೌರ್ಯವನ್ನು ಕುರಿತು 'ಶೂರ ಅಬಲಾ' ಎಂಬ ಪುಸ್ತಕವನ್ನು ಬರೆದವರು ರಾಮಚಂದ್ರ ವಿನಾಯಕ ಟಿಕೇಕರ. ಇವರು ೧೮೬೨ ರಲ್ಲಿ ಧಾರವಾಡದಲ್ಲಿ ಹುಟ್ಟಿದರು. ಈ ಮನೆತನದ ಮೂಲ ಪುರುಷರು ರತ್ನಾಗಿರಿ ಜಿಲ್ಲೆಯಲ್ಲಿರುವ ಟಿಕೇ ಎಂಬ ಗ್ರಾಮದವರು. ಯಾವ ಕಾರಣದಿಂದಲೋ ರಾಮಚಂದ್ರರಾಯರ ತಂದೆ ವಿನಾಯಕರಾಯರು ಧಾರವಾಡಕ್ಕೆ ವಲಸೆ ಬಂದರು. ತಮ್ಮ ಕರ್ತೃತ್ವ ಶಕ್ತಿಯಿಂದ ಧಾರವಾಡದಲ್ಲಿ ಸ್ವಂತದ ಮನೆ ಕಟ್ಟಿಸಿದರು. ಧಾರವಾಡದ ಸಮೀಪದ ಹಳ್ಳಿಗಳಲ್ಲಿ ಇವರ ಸ್ವಂತದ ಫಲವತ್ತಾದ ಹೊಲ ಮತ್ತು ಮಾವಿನ ತೋಪುಗಳು ಇದ್ದವು. ಧಾರವಾಡದ ಬಳಿಯಲ್ಲಿರುವ ಕ್ಯಾರಕೊಪ್ಪದ ಮಾವಿನ ಹಣ್ಣುಗಳ ಸ್ವಾದವನ್ನು ಸವಿದ ನೆನಪನ್ನು ಶ್ರೇಷ್ಠ ಪತ್ರಕರ್ತ, ಇತಿಹಾಸ ಸಂಶೋಧಕರಾದ ದಿ. ಶ್ರೀ. ರಾ. ಟಿಕೇಕರ ಅವರು ಹೇಳುತ್ತಿದ್ದರು. ಈ ಮನೆತನಕ್ಕೆ ನಿಜಾಮ ಸಂಸ್ಥಾನದಲ್ಲಿಯ ಅಫಜಲಪುರ ತಾಲೂಕಿನಲ್ಲಿಯ ಅಥನೂರು ಗ್ರಾಮದ ಪಾಟೀಲಕೀಯ ಹಕ್ಕು ಕೂಡ ಇದ್ದಿತು.

ಧಾರವಾಡದ ವಾಸ್ತವ್ಯದ ಮೂಲಕ ಟಿಕೇಕರ ಮನೆತನದ ಶರೀರ ಸಂಬಂಧ ಕಿರ್ಲೋಸ್ಕರ ಮತ್ತು ಟೋಂಬೆ ಮನೆತನಗಳೊಡನೆ ಉಂಟಾಯಿತು. ಸಂಸಾರ ಬೆಳೆದಂತೆಯೇ ಬಡತನವೂ ಹಿಗ್ಗಿತು. ಹೀಗಾಗಿ ಧನುರ್ಧಾರಿಯವರಿಗೆ ದೊರೆತ ಶಿಕ್ಷಣವೂ ಅಷ್ಟಕ್ಕಷ್ಟೇ. ಅವರೂ ಕುಟುಂಬ ಸಾಗಿಸಲು ಧಾರವಾಡದಲ್ಲಿ ರೇಲ್ವೆ ಖಾತೆಯಲ್ಲಿ ಲೆಕ್ಕ ಪತ್ರ ಇಡುವ ಗುಮಾಸ್ತನ ಕೆಲಸವನ್ನು ಅವರು ಸ್ವೀಕರಿಸಿದ್ದರು. ಆದರೆ ಈ ಕೆಲಸವನ್ನು ಹೆಚ್ಚು ದಿನ ಮಾಡಲಿಲ್ಲ. ಧನುರ್ಧಾರಿ ಅವರ ಮೊದಲ ಪತ್ನಿ ಧಾರವಾಡದವಳು. ಇವಳ ಆಕಸ್ಮಿಕ ಮರಣದ ನಂತರ ಎರಡನೆಯ ಲಗ್ನವಾದರು. ಇವಳು ಜಾರ್ನಿಯ ಜಾವಡೇಕರ ಮನೆತನದವಳು.

ರಾಮಚಂದ್ರರಾಯರು ಸಂಚಾರಿ ಸ್ವಭಾವದವರಾಗಿದ್ದರು. ತಮ್ಮ ಉತ್ತರಾರ್ಧ ಜೀವ

ಸವನ್ನು ಸೊಲ್ಲಾಪುರದಲ್ಲಿ ಕಳೆದರು. ಇವರ ತಮ್ಮ ಲಕ್ಷ್ಮಣರಾವ್ ಮತ್ತು ಗಣಪತರಾವ್ ಸರದೇಸಾಯಿಯವರು ಬಡೋದೆಯಲ್ಲಿ ಶಿಕ್ಷಣ ಪಡೆದು ಸೊಲ್ಲಾಪುರದಲ್ಲಿ ಕೈಮಗ್ಗದ ಉದ್ಯಮವನ್ನು ಪ್ರಾರಂಭಿಸಿದರು. ಧನುರ್ಧಾರಿ ಪ್ರಚಲಿತ ರಾಜಕಾರಣ, ಇತಿಹಾಸ, ಧರ್ಮಗಳ ಅಧ್ಯಯನ ಮಾಡಿದ್ದರಲ್ಲದೇ ಸ್ವಧರ್ಮ ಜಾಗ್ರತಿಗಾಗಿ ಯುದ್ಧವನ್ನೇ ಹೂಡಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಇವರ ಕೃತಿಗಳು ಆಗಿನ ಕಾಲದ ರೂಢಿಯಂತೆ ಹೆಚ್ಚಾಗಿ ಮರಾಠಿ ಭಾಷೆಯಲ್ಲಿವೆ. ತಮ್ಮ ೪೬ನೆಯ ವಯಸ್ಸಿನಲ್ಲಿ ಅಂದರೆ ೧೯೦೭ರ ಅಕ್ಟೋಬರ್ ತಿಂಗಳ ಲಲಿತಾ ಪಂಚಮಿಯ ದಿನ ಸೊಲ್ಲಾಪುರದಲ್ಲಿ ಪರಲೋಕವಾಸಿಗಳಾದರು. ಗೋಲ್ಡ್‌ಸ್ಮಿತ್‌ನ 'ವಿಕಾರ್ ಆಫ್ ದಿ ವೇಕ್‌ಫೀಲ್ಡ್' ಕಾದಂಬರಿಯನ್ನು 'ವಾಯಿಕರ ಭಡಜೀ' ಎಂದು ಮರಾಠಿಯಲ್ಲಿ ರೂಪಾಂತರಿಸಿದವರು ಇವರೇ. ಮುಂಬಯಿ ಮತ್ತು ನಾಗಪುರ ವಿಶ್ವವಿದ್ಯಾಲಯಗಳ ಪದವಿ ಅಭ್ಯಾಸ ಕ್ರಮಕ್ಕೆ ಇದು ಪಠ್ಯ ಪುಸ್ತಕವೂ ಆಗಿತ್ತು.

'ಶೂರ ಅಬಲಾ' ಎಂಬ ನಾಲ್ವತ್ತು ನಾಲ್ಕು ಪುಟಗಳ ಚಿಕ್ಕ ಪುಸ್ತಕವನ್ನು ಧನುರ್ಧಾರಿಯವರು ೧೮೯೧ರಲ್ಲಿ ಪ್ರಕಟಿಸಿದರು. ಎರಡನೆಯ ಆವೃತ್ತಿ ಹೊರ ಬಂದುದು ೧೮೯೪ರಲ್ಲಿ. ಮಹಾರಾಷ್ಟ್ರದ ಹಿರಿಯ ಸಾಹಿತಿ, 'ಕಿರಾತ' (ಕೃಷ್ಣಾಜಿ ಲಕ್ಷ್ಮಣ ಸೋಮಣ) 'ಶೂರ ಅಬಲಾ' ಪುಸ್ತಕದಲ್ಲಿ ಚಿತ್ರಿಸಿದ ಝಾಂಶಿ ಲಕ್ಷ್ಮೀಬಾಯಿ, ತಾಯಿ ತೇಲಣ, ಕಿತ್ತೂರ ಚೆನ್ನಮ್ಮಾ, ಉಮಾಬಾಯಿ ದಾಭಾಡೆ ಇವರ ದೇಶಾಭಿಮಾನ, ಶೌರ್ಯ, ತ್ಯಾಗ ಕುರಿತು, 'ಕೇಸರಿ' ಪತ್ರಿಕೆಯಲ್ಲಿ ಲೇಖ ಬರೆದು ಧನುರ್ಧಾರಿಯವರ ಪಾಂಡಿತ್ಯ, ನಿರೂಪಣ ತಂತ್ರಗಳನ್ನು ಮನಸಾರೆ ಕೊಂಡಾಡಿದರು.

ಹಿಂದುಸ್ತಾನದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಬ್ರಿಟಿಶ್ ಆಳರಸರ ಅವಕೃಪೆ 'ಶೂರ ಅಬಲಾ' ಪುಸ್ತಕದ ಮೇಲೂ ಉಂಟಾಯಿತು. ಕಾಂಗ್ರೆಸ್ ಮಂತ್ರಿಮಂಡಲವು ಮುಂಬಯಿ ಇಲಾಖೆಯ ಅಧಿಕಾರ ಸೂತ್ರಗಳನ್ನು ತನ್ನ ಕಡೆಗೆ ತೆಗೆದುಕೊಂಡ ಬಳಿಕ ದಿ. ಬಾ. ಗಂ. ಖೇರ ಅವರು ಹಿಂದೆ ಆಕ್ಷೇಪಾರ್ಹವೆಂದು ನಾಮಕರಣ ಮಾಡಿದ ಪುಸ್ತಕಗಳ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದರು. ಅವುಗಳಲ್ಲಿ 'ಶೂರ ಅಬಲಾ'ನ ಪುಸ್ತಕದ ಸಮಾವೇಶವೂ ಇದ್ದಿತು. ಅನಂತರ ಮೂರನೆಯ ಆವೃತ್ತಿ ೧೯೪೬ರಲ್ಲಿ ಹೊರ ಬಂದಿತು.

ಮೊದಲ ಆವೃತ್ತಿಗೆ ಧನುರ್ಧಾರಿ 'ಪಕ್ಷಪಾತ' ಎಂಬ ಶೀರ್ಷಿಕೆಯ ಮುನ್ನುಡಿ ಬರೆದಿದ್ದಾರೆ. ಅದರ ಸಾರಾಂಶ ಕೆಳಗಿನಂತಿದೆ. "ಸಮಾಜದ ಪ್ರತಿಬಿಂಬವನ್ನು ಚಿತ್ರಿಸುವ ಪುರುಷ ವರ್ಗದ ಕವಿ, ನಾಟಕಕಾರ, ಮತ್ತು ಕಾದಂಬರಿಕಾರ ತಮ್ಮ ಸ್ವಾರ್ಥ ಸಾಧನೆಗಾಗಿ, ಸ್ವಪ್ರತಿಷ್ಠೆಗಾಗಿ, ತಮ್ಮನ್ನು ಅವಲಂಬಿಸಿ ಜೀವಿಸುವ ಸ್ತ್ರೀವರ್ಗವನ್ನು 'ಅಬಲಾ–ಭೀರೂ' ಎಂದು ಉಲ್ಲೇಖಿಸಿದುದು ನಮಗೆ ಅವರ ಕೃತಿಗಳಲ್ಲಿ ಕಾಣುವುದು. ಸ್ತ್ರೀವರ್ಗದ ಅವಹೇಳನ ಮಾಡುವ ಪ್ರಸಂಗವು ಒದಗಿದಾಗ, ಅನುಚಿತ ವಿಶೇಷಣಗಳನ್ನು ಅಂಟಿಸಿ ಅವರ ಭೀರುತ್ವವನ್ನೇ ಎತ್ತಿ ತೋರಿಸುವುದು ಸಹಜ ಪ್ರವೃತ್ತಿಯಾಗಿದೆ. ಪುರುಷರು ನಿರ್ಧರಿಸಿದ ಗುಣಗಳಿಗೆ ಆಹ್ವಾನ ನೀಡುವ ಗುಣಗಳು ಸ್ತ್ರೀಯರಲ್ಲಿ ಕಂಡುಬಂದಿವೆ; ಮತ್ತು ಆ ಗುಣಗಳು ವಿಕಾಸಗೊಂಡು ಪುರುಷರ ಭ್ರಮನಿರಸಗೊಳಿಸಿವೆ. ಅಂತಹ ಸಮಯದಲ್ಲಿ ಸ್ತ್ರೀಯರನ್ನು ಹೊಗಳದೇ ಇರುವುದೂ ಕಂಡು ಬಂದಿದೆ. ಇದಕ್ಕೆಲ್ಲ ಅವರ ಸ್ವಭಾವವೇ ಪ್ರಮುಖ ಕಾರಣವಾಗಿದ್ದರೂ ಕೆಲವು ಮಟ್ಟಿಗೆ ಸ್ತ್ರೀಯರ ರಚನೆ, ಅವರ ಸಾಮಾಜಿಕ ಜೀವನವನ್ನು ಇಲ್ಲಿ ಗಮನಿಸುವುದು ಅಗತ್ಯ. ಈ ಬಗೆಯ ವರ್ತನೆ ತಮ್ಮ ಸ್ವಾರ್ಥಸಾಧನೆಗಾಗಿ ಕೈಕೊಂಡ ಕ್ರಮವೆಂದು ನಿರ್ಧರಿಸಿದ್ದರೆ, ಅದು ಕೇವಲ ಪುರುಷರ ಟೊಳ್ಳು ಅಭಿಮಾನವೆಂದು ಹೇಳಬೇಕಾಗುವದು."

"ಸ್ತ್ರೀ ಪುರುಷರಲ್ಲಿ ಸದ್ಗುಣ ಮತ್ತು ದುರ್ಗುಣ ಇರುವುದು ಸ್ವಾಭಾವಿಕವಾದ ಸಂಗತಿ. ಆದರೆ ಒಂದು ವರ್ಗದಲ್ಲಿ ಸದ್ಗುಣಗಳು ಕಂಡುಬಂದಲ್ಲಿ ಅವು ಅವಾಸ್ತವವಾದವು ಎಂದು ನಿರ್ಧರಿಸುವರು. ಇದು ಸರಿಯಲ್ಲ. ಒಂದೊಮ್ಮೆ ದೋಷಗಳು ಕಂಡುಬಂದರೆ ಅವುಗಳನ್ನು ದೂರ ಮಾಡುವ ಮಾರ್ಗವನ್ನು ಶೋಧಿಸುವುದು ಹಿತಕರವಾದದ್ದು. ಆದರೆ ನಮಗೆ ಸಮಾಜದಲ್ಲಿ ಈ ರೀತಿಯಾಗಿ ನಡೆದುದು ಕಾಣುವದು ವಿರಳ. ಸ್ತ್ರೀಯರು ಅಬಲೆಯರು, ಅಜ್ಞಾನಿಗಳು, ಅನಾಥರು, ಪುರುಷರಷ್ಟು ಮುತ್ಸದ್ದಿಗಳಲ್ಲ ಎಂದು ಕಲ್ಪಿಸಿ ಕವಿ, ನಾಟಕಕಾರ, ಕಾದಂಬರಿಕಾರರು ಬರೆದುದು ನಮಗೆ ಮುಂದುವರಿದ ರಾಷ್ಟ್ರಗಳಲ್ಲಿ ಮತ್ತು ಪ್ರಗತಿಯ ಮಾರ್ಗದಲ್ಲಿದ್ದ ರಾಷ್ಟ್ರಗಳಲ್ಲಿ ಪ್ರಕಟಗೊಂಡ ಈ ಎಲ್ಲ ಲೇಖಕರ ಕೃತಿಗಳಲ್ಲಿ ನಿರ್ಧರಿಸಿದ್ದು ಕಾಣುವದು. ಪುರುಷರ ಶೌರ್ಯ, ಕರ್ತವ್ಯದಕ್ಷತೆ, ಸ್ತ್ರೀಯರಲ್ಲಿ ಕಂಡುಬಂದಲ್ಲಿ ಆ ಸದ್ಗುಣಗಳು ವಿಕಾಸ ಪಡೆಯಲು ಅವಶ್ಯವಿದ್ದ ಪ್ರೋತ್ಸಾಹದ ಪರಿಪಾಠ ಪುರಾತನ ಕಾಲದಿಂದಲೂ, ರೂಢಿಯಲ್ಲಿ ಇದ್ದಂತೆ ತೋರುವದಿಲ್ಲ."

"ಸೃಷ್ಟಿಕರ್ತನು ಸ್ತ್ರೀ ಪುರುಷರನ್ನು ನಿರ್ಮಿಸುವಾಗ ಭೇದ ಭಾವ ಕೈಕೊಂಡನೆಂದು ಕಲ್ಪಿಸುವದು ಅವಾಸ್ತವ ವಿಚಾರವೆಂದೇ ಹೇಳಬೇಕಾಗುವುದು. ಪುರುಷರೇ ಈ ಭೇದಭಾವಕ್ಕೆ ಕಾರಣರಾಗಿದ್ದಾರೆ. ಕೆಲವು ಪ್ರಸಂಗಗಳಲ್ಲಿ ಈಶ್ವರನೇ ಸ್ತ್ರೀಯರಲ್ಲಿ ಅಡಗಿದ ಸದ್ಗುಣಗಳ ಪ್ರದರ್ಶನಕ್ಕಾಗಿ ಘಟನೆಗಳನ್ನು ನಿರ್ಮಾಣ ಮಾಡಿ ಉನ್ಮತ್ತರಾದ ಪುರುಷರ ಗರ್ವಭಂಗ ಮಾಡಿರುವನು. ನಮ್ಮ ಈ ವಿಚಾರಗಳಿಗೆ ಜೋನ್ ಆಫ್ ಆರ್ಕ್, ಚಾಂದಬೀಬಿ, ಝಾಂಸೀ ಲಕ್ಷ್ಮೀಬಾಯಿ, ತಾಯಿ ತೇಲೀಣ, ಕಿತ್ತೂರ ದೇಸಾಯಿ ಚೆನ್ನಮ್ಮಾ ಹೀಗೆ ಅನೇಕ ಮಹಿಳೆಯರು ಕೈಕೊಂಡ ಕಾರ್ಯಗಳನ್ನು ಆಧಾರಗಳೆಂದು ಹೇಳಲು ಸಾಧ್ಯವಿದೆ. ಮಾತ್ರವಲ್ಲ ಅವರ ಕರ್ತವ್ಯದಕ್ಷತೆ, ದೇಶಾಭಿಮಾನ, ಶೌರ್ಯ, ವ್ಯಕ್ತಪಡಿಸಿದ ಧೈರ್ಯಗಳನ್ನು ಯಾರಿಂದಲೂ ಅಮಾನ್ಯ ಮಾಡಲು ಸಾಧ್ಯವಿಲ್ಲ. ಈ ವಿವೇಚನೆಯ ಆಧಾರದಿಂದ 'ಶೂರ ಅಬಲಾ' ಶಬ್ದ ಸರ್ವವ್ಯಾಪ್ತಿಯೊಗಿದೆ ಮತ್ತು ಹಾಗೆಯೇ ಉಲ್ಲೇಖಿಸಲು ಯೋಗ್ಯವೂ ಆಗಿದೆ."

"ಶೂರರು ಎಂದು ಯಾರನ್ನು ಕರೆಯಲು ಸಾಧ್ಯವಿದೆ? ಶೌರ್ಯವೆಂದು ಯಾವ ಬಗೆಯ ಕಾರ್ಯವನ್ನು ತಿಳಿಯಬೇಕು? ಇತ್ಯಾದಿ ವಿಷಯಗಳ ಬಗೆಗೆ ಸವಿಸ್ತರ ಚರ್ಚೆ ಕೈಕೊಳ್ಳುವುದಕ್ಕಿಂತ ಸರ್ವಶ್ರುತ, ಸರ್ವಜ್ಞಾತ, ವ್ಯಾಖ್ಯೆಯನ್ನೇ ಒಪ್ಪಿಕೊಳ್ಳುವುದು ಸಮಂಜಸ. ಈ ಹಿನ್ನೆಲೆಯಲ್ಲಿ ಯಶ-ಅಪಯಶ ನಿರ್ಧರಿಸಲು ಬರುವುದು. ಪರೋಪಕಾರ ಬುದ್ಧಿ, ಕರ್ತವ್ಯ ಪರಿಪಾಲನೆ ಮುಂತಾದ ಸುಸಂಘಟಿತ ಗುಣಗಳ ಪ್ರಭಾವಕ್ಕೆ ಒಳಗಾಗಿ ಜೀವದ ಹಂಗಿಲ್ಲದೇ ಕಠಿಣ ಪ್ರಸಂಗಗಳನ್ನು ಧೈರ್ಯದಿಂದ ಎದುರಿಸುವುದು ಶೌರ್ಯವೆಂದು ನಿರ್ಧರಿಸಿದಲ್ಲಿ, ಸದ್ಯದ ಸ್ಮಶಾನ ಶಾಂತತೆಯ ಸಮಯದಲ್ಲಿ ಅನೇಕ ಶೂರ ಅಬಲೆಯರು ಕೈಕೊಂಡ ಕರ್ತವ್ಯ ಪರಿಪಾಲನೆಯ ಕಾರ್ಯಗಳನ್ನು ಎತ್ತಿ ಹೇಳಲು ಸಾಧ್ಯವಿದೆ."

"ರಣಭೂಮಿ, ರಣಕಹಳೆ, ಯುದ್ಧ ಶಬ್ದಗಳನ್ನು ಕೇಳಿ ಪುರುಷರೂ ಗಾಬರಿಗೊಳ್ಳುವರು. ಇಂತಹ ಹಿನ್ನೆಲೆಯಲ್ಲಿ ಅಬಲೆಯರ ಪಾಡೇನು? ಅವರು ಯಾವ ಗಿಡದ ತೊಪ್ಪಲು? ಆದರೆ ಅಬಲೆಯರ ಜೀವನದಲ್ಲಿ ಒದಗಿಬಂದ ಕೆಲವು ಅವಿಸ್ಮರಣೀಯ ಘಟನೆಗಳನ್ನು ಅವಲೋಕಿಸಿದರೆ ಅವರ ಬಗ್ಗೆ ಛಾಪಿಸಿದ ಹುಚ್ಚು ಕಲ್ಪನೆ ದೂರಾಗುವುದು ನಿಶ್ಚಿತ. ಕಿತ್ತೂರ ದೇಸಾಯಿ ಚೆನ್ನಮ್ಮ... ಕೈಕೊಂಡ ವಿಲಕ್ಷಣ ಸಾಹಸ, ಅಲೌಕಿಕ ಧೈರ್ಯ, ನೋಡಲಾಗಿ ಸ್ತ್ರೀವರ್ಗವನ್ನು ಅಬಲೆಯರು ಎಂದು ಕರೆಯುವವರ ಬಾಯಿ ಮುಚ್ಚಿದಂತಾಗುವುದು. ಇದರಲ್ಲಿ ಸಂಶಯವಿಲ್ಲ." ಧನುರ್ಧಾರಿ ಅವರು ಬರೆದ ಈ ಮುನ್ನುಡಿಯಲ್ಲಿ ೧೯ನೆಯ ಶತಮಾನದ ಸಾಮಾ

ಜಿಕ ಚಿತ್ರಣವು ಕಂಡುಬರುವದು. ಪೇಶವೆ ರಾಜರ ಕಾಲ ಕೊನೆಗೊಂಡಿದ್ದರೂ (೧೮೧೭) ಮರಾಠಿಭಾಷೆಯ ಪ್ರಭಾವ ಉತ್ತರ ಕರ್ನಾಟಕದ ನಾಲ್ಕೂ ಜಿಲ್ಲೆಗಳ ಮೇಲೆ ಗಾಢವಾಗಿ ಉಳಿದು ಬಿಟ್ಟಿತ್ತು. ಧನುರ್ಧಾರಿ ಅವರು ತಮ್ಮ ಕೃತಿಗಳನ್ನು ಮರಾಠಿಯಲ್ಲಿ ರಚಿಸಿದ್ದು ಸಹ ಈ ಹಿನ್ನೆಲೆಯಲ್ಲಿ ಎಂದು ಕಲ್ಪಿಸಲು ಬರುವದು.

ಕಿತ್ತೂರ ಚೆನ್ನಮ್ಮನನ್ನು ಕುರಿತು ಧನುರ್ಧಾರಿಯವರು ಬರೆದ ಕೆಲ ಮಾತುಗಳನ್ನು ಅವರ ಪುಸ್ತಕದಿಂದಲೇ ಉದ್ಧರಿಸುತ್ತಿದ್ದೇವೆ.

*

ಉತ್ತರ ಕರ್ನಾಟಕದ (ಲೇಖಕರು ದಕ್ಷಿಣ ಮಹಾರಾಷ್ಟ್ರವೆಂಬ ಪದ ಪ್ರಯೋಗಿಸಿದ್ದಾರೆ.) ಬೆಳಗಾವಿ ಜಿಲ್ಲೆಯಲ್ಲಿ ಕಿತ್ತೂರು ಎಂಬ ಸಂಸ್ಥಾನವಿತ್ತು. ಈ ಸಂಸ್ಥಾನದ ಅಧಿಪತಿಗೆ ದೇಸಾಯಿ ಎಂದು ಕರೆಯುತ್ತಿದ್ದರು. ಈತನ ಹೆಸರು ಶಿವಲಿಂಗರುದ್ರ ಸರ್ಜ. ಈತ ಪೇಶವೆ ರಾಜರ ಮಾಂಡಲೀಕ. ಪ್ರತಿ ವರುಷ ಪೇಶವೆ ಅವರಿಗೆ ೭೫೦೦೦ ರೂಪಾಯಿ ಖಂಡಣಿ ಕೊಡುತ್ತಿದ್ದನು. ಖಡಕಿ ಕಾಳಗದ ನಂತರ ಪೇಶವೆ ಸಾಮ್ರಾಜ್ಯ! ಕಂಪನಿ ಸರಕಾರದ ಅಧೀನಕ್ಕೆ ಸೇರಿತು. ಶಿವಲಿಂಗರುದ್ರ ಸರ್ಜ ಖಡಕಿ ಯುದ್ಧದ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ಖಂಡಣಿಯನ್ನು ಕಂಪನಿ ಸರಕಾರಕ್ಕೆ ಕೊಡತೊಡಗಿದನಲ್ಲದೇ, ಸುಖವಾಗಿ ಕಾಲ ಕಳೆಯುತ್ತಿದ್ದನು. ಶಿವಲಿಂಗರುದ್ರ ಸರ್ಜ ಕ್ರಿ. ಶ. ೧೮೨೪ ರಲ್ಲಿ ಪುತ್ರಸಂತಾನವಿಲ್ಲದೇ ಪರಲೋಕವಾಸಿಯಾದನು. ದೇಸಾಯಿ ಮನೆತನದ ಹಿತಚಿಂತಕರು ಓರ್ವ ಬಾಲಕನನ್ನು ವಾರಸದಾರನೆಂದು ದತ್ತಕ ತೆಗೆದುಕೊಂಡರಲ್ಲದೇ ಈ ಸಂಗತಿಯನ್ನು ಕಂಪನಿ ಸರಕಾರಕ್ಕೆ ತಿಳಿಸಿದರು. ಪಟ್ಟಕ್ಕೆ ವಾರಸದಾರನಿಲ್ಲದೆ ಅಧಿಪತಿಯು ಮರಣ ಹೊಂದುವದು ದೊಡ್ಡ ಪಾಪವೆಂದು ಕಂಪನಿ ಸರಕಾರ ಭಾವಿಸುತ್ತಿತ್ತು. ಇಂತಹ ಪಾಪಕ್ಕೆ ಪ್ರಾಯಶ್ಚಿತ್ತವೆಂದು ಒಂದಿಲ್ಲ ಒಂದು ಕಾರಣದಿಂದ ಆ ರಾಜ್ಯದ ಖಾಲಸಾ ಕೈಕೊಳ್ಳುವುದು ಕಂಪನಿ ಸರಕಾರದ ತತ್ವವೇ ಆಗಿತ್ತು.

ಥ್ಯಾಕರೆ ಎಂಬ ಅಧಿಕಾರಿ, ಕೋಶಾಗಾರ, ಲೆಕ್ಕಪತ್ರ ಪರೀಕ್ಷಿಸಲು ಮತ್ತು ಸಲಹೆ ನೀಡಲು ಕಂಪನಿ ಸರಕಾರದ ಪರವಾಗಿ ಕಿತ್ತೂರಿಗೆ ಆಗಮಿಸಿದನು. ದೇಸಾಯಿಯ ತಾಯಿಯ ಹೆಸರು ಚೆನ್ನಮ್ಮಾ; ವಯಸ್ಕಳು. ಅವಳಿಗೆ ತನ್ನ ಕೋಟೆಯೊಳಗೆ ಪರದೇಶದ, ಪರಧರ್ಮದ, ಕೆಂಪು ಮುಖದ ಅಧಿಕಾರಿ ಬರುವನು ಎಂಬುದು ರುಚಿಸಲಿಲ್ಲ. ಕೆಂಪು ಮುಖದವನನ್ನು ಕೋಟೆಯೊಳಗೆ ಬಿಡಕೂಡದು ಎಂದು ಆಜ್ಞೆ ಮಾಡಿದಳು. ಇಂಗ್ರಜರಿಗೆ ತಾವು ಸಾರ್ವಭೌಮರು ಎಂಬ ಅಹಂಕಾರವಿತ್ತು. ಚೆನ್ನಮ್ಮನು ಪ್ರವೇಶವಿಲ್ಲವೆಂದು ಮಾಡಿದ ಆಜ್ಞೆಯು ಘೋರ ಅವಮಾನವೆಂದು ಇಂಗ್ರಜ ಅಧಿಕಾರಿಗಳು ತಿಳಿದರು. ತನ್ನ ಅಸ್ತಿತ್ವ, ಮಹತ್ವ ಪ್ರಕಟಿಸಲು ಪ್ರತಿಯೊಬ್ಬನೂ ಕಾರಣಕ್ಕಾಗಿ ಹಂಚಿಕೆ ಹಾಕುತ್ತಾನೆ. ಇದು ಮನುಷ್ಯ ಸ್ವಭಾವ. ಮಾಂಡಲೀಕರ ಸಂಪತ್ತಿನ ಮೇಲೆ ತಮ್ಮ ಅಧಿಕಾರವಿದೆ; ವಿಚಾರ ವಿನಿಮಯ ಕೈಕೊಳ್ಳುವ ಅಧಿಕಾರ ತಮಗೆ ಇದೆ ಎಂಬ ಅಭಿಪ್ರಾಯ ಕಂಪನಿ ಸರಕಾರದ್ದಾಗಿತ್ತು. ಚೆನ್ನಮ್ಮ ತಾನು ಸಂಪತ್ತಿನ ಒಡೆಯಳು, ಖಂಡಣಿ ಪಡೆಯುವ ಮಟ್ಟಿಗೆ ಇಂಗ್ರಜರ ಅಧಿಕಾರ; ಇನ್ನುಳಿದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿರುವದಿಲ್ಲ ಎಂದು ಪ್ರತಿಪಾದಿಸಿದಳು. ಪರಿಣಾಮ – ಚೆನ್ನಮ್ಮ ಮತ್ತು ಕಂಪನಿ ಸರಕಾರದ ನಡುವೆ ವ್ಯಾಜ್ಯ ಉಂಟಾಗಿ ವೈರತ್ವದಲ್ಲಿ ರೂಪುಗೊಂಡಿತು. ಚೆನ್ನಮ್ಮ ವಾಸಿಸುವ ಕೋಟೆಯನ್ನೇ ತಾವು ಕೈವಶ ಮಾಡಿಕೊಳ್ಳುವುದನ್ನು ಇಂಗ್ರಜರು ನಿರ್ಧರಿಸಿದರು. ಆ ಅಬಲೆ ಏನು ಮಾಡಲು ಸಾಧ್ಯ? ಎಂಬ ಅಹಂಕಾರ ಇದಕ್ಕೆಲ್ಲಾ ಕಾರಣವಾಗಿತ್ತು. ಬೆಳಗಾವಿಯಲ್ಲಿದ್ದ ಇಂಗ್ರಜ ಸೈನ್ಯಕ್ಕೆ ಕಿತ್ತೂರಿನ ಮೇಲೆ ದಂಡೆತ್ತಿ ಹೋಗಲು ಅಪ್ಪಣೆ ಕೊಡಲಾಯಿತು. ತನ್ನ ರಾಜ್ಯದ ಪರಿಸರದಲ್ಲಿ ಇಂಗ್ರಜ ಸೈನ್ಯದ ಚಟುವಟಿಕೆಗಳು ಸಾಗಿವೆ ಎಂಬುದನ್ನು ತಿಳಿದ ಚೆನ್ನಮ್ಮ ರೊಚ್ಚಿಗೆದ್ದಳು. ಚೆನ್ನಮ್ಮ ನೋಡಲು ಸಶಕ್ತ ಮತ್ತು ಸದೃಢಳಾಗಿದ್ದಳು. ಆ ಶೂರ ಅಬಲೆಗೆ ಈ ಅವ್ಯವಹಾರ ಹೇಗೆ ಸಹನವಾದೀತು?

ಇಂಗ್ರಜ ಸೈನ್ಯದ ಕೆಲವು ಅಧಿಕಾರಿಗಳು ತನ್ನ ಕೋಟೆಯ ಬಾಗಿಲಲ್ಲಿ ಮಣೆಕಟ್ಟತೊಡಗಿದ್ದಾರೆ ಎಂಬುದು ತಿಳಿದ ಬಳಿಕ ರಣಚಂಡಿ ಚೆನ್ನಮ್ಮಾ ತನ್ನ ಅನುಯಾಯಿಗಳೊಡನೆ ಇಂಗ್ರಜ ಸೈನ್ಯದ ಮೇಲೇರಿ ಹೋದಳು. ಎರಡೂ ಸೈನ್ಯದಲ್ಲಿ ಘನಘೋರ ಯುದ್ಧವಾಯಿತು. ಸಂಪೂರ್ಣ ವಿಜಯ ಪ್ರಾಪ್ತಿಯಾದದ್ದು ಚೆನ್ನಮ್ಮನಿಗೆ. ಥ್ಯಾಕರೆ ಮತ್ತು ಆತನ ಅನುಯಾಯಿಗಳ ಪಾರುಪತ್ಯವನ್ನು ಸ್ವತಃ ಚೆನ್ನಮ್ಮನೇ ಕೈಕೊಂಡು ಅವರನ್ನು ಯಮಸದನಕ್ಕೆ ಅಟ್ಟಿದಳು. ಈ ಪರಾಭವದಿಂದ ಇಂಗ್ರಜರಿಗೆ ಉಂಟಾದ ಅಪಮಾನಕ್ಕೆ ಎಣೆ ಇದ್ದಿದ್ದಿಲ್ಲ. ಈ ಅಪಮಾನದ ಸೇಡು ತೀರಿಸಿಕೊಳ್ಳಲು ಸುಸಜ್ಜಿತ ಸೈನ್ಯವನ್ನು ಕಳಿಸಿ ಪುನಃ ಚೆನ್ನಮ್ಮನ ಕಿತ್ತೂರಿನ ಮೇಲೆ ನಡೆತ್ತಿ ಬಂದರು. ದುರ್ದೈವದಿ ಚೆನ್ನಮ್ಮನಿಗೆ ಈ ಬಾರಿ ಜಯ ಪ್ರಾಪ್ತವಾಗಲಿಲ್ಲ. ತಾವು ಮಿತ್ರರು, ಆಶ್ರಯದಾತರು ಎಂದು ಬಡಾಯಿ ಕೊಚ್ಚುತ್ತಿರುವ ಗೋಮುಖ ವ್ಯಾಘ್ರಗಳಾದ ಕಂಪನಿ ಸರಕಾರ ಕಿತ್ತೂರನ್ನು ತನ್ನ ಕೈವಶ ಮಾಡಿಕೊಂಡಿತು. ಇದೇ ಈ ಶೂರ ಅಬಲೆಯ ಪರಾಕ್ರಮ.

ಇಲ್ಲಿ ಧನುರ್ಧಾರಿ ಬರೆದದ್ದರಲ್ಲಿ ಕನ್ನಡಿಗರಿಗೆ ಗೊತ್ತಿಲ್ಲದ ವಿಷಯ ಯಾವುದೂ ಇಲ್ಲ. ಆದರೆ ಈ ನಾಡಿನಲ್ಲಿ ಚೆನ್ನಮ್ಮನ ನೆನಪು ಇನ್ನೂ ಹಸಿರು ವಾಗಲೇ ಹಾಗೂ ಕುರುಡು ಅಭಿಮಾನದಿಂದ ನಾವು ಈ ವಾಸ್ತವ ಇತಿಹಾಸಕ್ಕೆ ಬಣ್ಣ ಬಳಿಯುವ ಮುನ್ನವೇ ಬರೆದಂಥ ಲೇಖನವೆಂಬುದೇ ಇದರ ಮಹತ್ವ.

ಪ್ರಯಾಸಕರವಪ್ಪಾ ಈ ಊರು

# ಪ್ರಯಾಗ

**ಕೆ. ಚಂದ್ರಮೌಳಿ**

ಹಿಂದೊಮ್ಮೆ ಕಾಶಿಗೆ ಹೋಗುವ ರೈಲಿನಲ್ಲಿ ಅಲಹಾಬಾದ ನಿಲ್ದಾಣದಲ್ಲಿ ಪಂಡಾಗಳಿಗೆ ಆಸೆ ತೋರಿಸಿ ಅಲ್ಲಿ ಇಳಿಯದೆ ಅವರಿಗೆ ಮೋಸ ಮಾಡಿದ್ದೆ. ಈ ಮೋಸದ ಫಲವೋ ಏನೋ ಅನಂತರ ಪ್ರಯಾಗಕ್ಕೆ ಬಂದು ತ್ರಿವೇಣಿ ಸಂಗಮದಲ್ಲಿ ಸ್ನಾನಕ್ಕೆ ಹೊರಟಾಗ ಪಂಡಾಗಳು ನನಗೆ ಸಾಕಷ್ಟು ಮೋಸ ಮಾಡಿದರು. ಅಲಹಾಬಾದಿನಿಂದ ಸಂಗಮಕ್ಕೆ ಹೋಗುವ ದಾರಿ ಒಂದೆಡೆ ಕವಲೊಡೆಯುತ್ತದೆ. ಅಲ್ಲಿ ಸಂಗಮದ ದಾರಿ ವಿಚಾರಿಸಿದಾಗ ಒಬ್ಬ ಪಂಡಾ ತಾನೇ ನಮ್ಮ ಜೊತೆ ಬರುತ್ತೇನೆಂದು ಗಂಟು ಬಿದ್ದ. "ನಮಗೆ ಯಾರ ಜೊತೆಯೂ ಬೇಡಪ್ಪಾ, ನೀನು ದಾರಿ ಹೇಳಿದರೆ ಸಾಕು." ಅಂದಾಗ "ಸಾಬ್ ಸಂಗಮಕ್ಕೆ ಏಕೆ ಮೋಕ್ಷಕ್ಕೇ! ನಾನು ದಾರಿ ಹೇಳುವಲ್ಲೆ. ನೀವು ನನ್ನನ್ನೂ ಜೊತೆಗೆ ಕರೆದುಕೊಳ್ಳಿ. ಕೊನೆಗೆ ಹತ್ತಿಪ್ಪತ್ತು ರೂಪಾಯಿ ನೀವು ಸಂತೋಷದಿಂದ ಕೊಟ್ಟರೆ ಸಾಕು," ಎಂದ. ಹತ್ತಿಪ್ಪತ್ತು ರೂಪಾಯಿಗೆ ಸಿಗುವ ಮೋಕ್ಷ ಅದ್ಹೇಗೆ ಇರಬಹುದೆಂದು ಬೆದರಿಕೆಯೂ ಆಯಿತು. ನಮ್ಮ ಜೊತೆಗೆ ಯಾರೂ ಬೇಡವೆಂದು ಖಡಾ ಖಂಡಿತವಾಗಿ ಹೇಳಿದ ಮೇಲೆ "ಸರಿ, ಹಾಗಿದ್ದರೆ ನಿಮ್ಮಿಷ್ಟ" ಎಂದು ನಮಗೆ ಸಂಗಮಕ್ಕೆ ಹೋಗುವ ದಾರಿ ತೋರಿಸಿದ. ಇಷ್ಟು ಸುಲಭವಾಗಿ ಜಿಗಣೆಯ ಕಾಟದಿಂದ ತಪ್ಪಿಸಿಕೊಂಡೆವಲ್ಲಾ ಎಂದು ಮುಂದೆ ಹೋದೆವು. ಎಷ್ಟೋ ದೂರ ಹೋದ ಮೇಲೆ ದಾರಿ ತಪ್ಪೆಂದು ತಿಳಿದು ಬಿಸಿಲಿನಲ್ಲಿ ಮತ್ತೆ ವಾಪಸ್ಸು ಬರಬೇಕಾಯಿತು. ಮೋಸ ಮಾಡಿದ ಆ ಪಂಡಾನನ್ನು ಬೈದುಕೊಂಡು ವಾಪಸ್ಸು ರಸ್ತೆ ಕವಲೊಡೆದಿದ್ದ ಜಾಗಕ್ಕೆ ಬಂದಾಗ ಅಲ್ಲಿ ಅದೇ ಪಂಡಾ

ನಗುತ್ತಾ ನಿಂತಿದ್ದ. ನಾವು ಅವನನ್ನು ಬೈದಾಗ ಅವನು ಏನೂ ಆಗದಂತೆ ನಗುತ್ತಾ ಸಾಬ್ ಇನ್ನಾದರೂ ಸರಿಯಾದ ಮಾರ್ಗದರ್ಶನಕ್ಕಾಗಿ ನನ್ನನ್ನು ಕರೆದುಕೊಂಡು ಹೋಗಿ ಎಂದು ಕಳ್ಳ ನಗೆ ನಕ್ಕ. ಸಿಟ್ಟಿನಿಂದ ಅವನನ್ನು ಕರೆದುಕೊಳ್ಳದೇ ಮುಂದೆ ಹೋದೆವು. ಎಷ್ಟೋ ದೂರ ಮರಳ ಮೇಲೆ ನಡೆದುಕೊಂಡು ಪಂಡಾಗಳಿಗಿಂತಲೂ ಹೆಚ್ಚಾಗಿ ದೋಣಿ ನಡೆಸುವವರ ಹಾವಳಿ ತಪ್ಪಿಸಿಕೊಂಡು ಅಕಬರನ ಕೋಟೆಯ ಪಕ್ಕದಲ್ಲೇ ನಡೆದು ಯಮುನಾ ದಂಡೆಗೆ ಬಂದು ನಿಂತೆವು. ನಾವು ಹೋದಾಗ ಯಾವ ಕುಂಭಮೇಳವಿಲ್ಲದಿದ್ದರೂ ಯಾತ್ರಿಕರ ಗುಂಪು ಸಾಕಷ್ಟಿತ್ತು. ಎಲ್ಲಿ ನೋಡಿದರೂ ದೋಣಿ ನಡೆಸುವವರ ಗಲಾಟೆಯೋ ಗಲಾಟೆ.

ಪ್ರಾಯಶಃ ತುಳಸೀದಾಸರ ರಾಮಚರಿತ ಮಾನಸದಲ್ಲೊಂದೇ ಕಡೆ ಅಂಬಿಗನ ಬಗ್ಗೆ ಒಳ್ಳೆಯ ಮಾತುಗಳಿರುವವು. ಅಲ್ಲಿಯ ಕೇವರನ ಪ್ರಸಂಗ ಇಡೀ ತುಳಸೀ ರಾಮಾಯಣದಲ್ಲೇ ಒಂದು ಸುಂದರ ಪ್ರಸಂಗ. ಶ್ರೀರಾಮನ ಪಾದಧೂಳಿ ಸೋಂಕಿದಾಕ್ಷಣ ಕಲ್ಲಿನಿಂದ ಅಹಲ್ಯೆಯಂಥ ಸುಂದರಿ ಮೂಡಿಬಂದಿರುವಾಗ ಆ ಪಾದಧೂಳಿ ಸೋಂಕಿದರೆ ಮರದ ದೋಣಿಯೇ ಇನ್ನೇನೋ ಆಗಿ ಬದಲಾಗಿ ಬಿಟ್ಟರೆ ಆ ಮೇಲೆ ದೋಣಿಯನ್ನೇ ಅವಲಂಬಿಸಿದ ಅಂಬಿಗನ ಮುಂದಿನ ಜೀವನ ಸಾಗುವದಾದರೂ ಹೇಗೆ ಎಂದು ರಾಮನಿಗೇ ಸವಾಲು ಹಾಕುತ್ತಾನೆ. ಆದ್ದರಿಂದ ರಾಮನ ಪಾದವನ್ನು ನೀರಿನಿಂದ ಮೊದಲು ತೊಳೆಯುವವರೆಗೂ ದೋಣಿಯಲ್ಲಿ ಶ್ರೀರಾಮನನ್ನು ಗಂಗಾ ಪಾರು ಮಾಡಿಸಲು ಸಾಧ್ಯವಿಲ್ಲ ಅನ್ನುತ್ತಾನೆ. ಇಂಥ ಮುಗ್ಧ ಪ್ರೇಮದ ಲಟಪಟಿಯ ಮಾತು ಕೇಳಿ ಶ್ರೀರಾಮ ಸಂಪ್ರೀತನಾಗುತ್ತಾನೆ. ಹೀಗೆ ರಾಮನ ಸುಂದರ ಪವಿತ್ರ ಪಾದಗಳನ್ನು ಗಂಗಾಜಲದಿಂದ ತೊಳೆದು ತಲೆಯ ಮೇಲೆ ಆ ನೀರನ್ನು ಚಿಮುಕಿಸಿಕೊಂಡು ಮೊದಲು ತನ್ನ ಪಿತೃಗಣವನ್ನೆಲ್ಲಾ ಭವ ಸಾಗರ ದಾಟಿಸಿ, ಅನಂತರ ಶ್ರೀರಾಮನನ್ನು ಗಂಗೆ ದಾಟಿಸಿದನಂತೆ.

ಪ್ರಾಯಶಃ ಇಂದಿನ ಎಲ್ಲಾ ಅಂಬಿಗರಿಗೂ ಪ್ರತಿಯೊಬ್ಬರ ಪಾದಧೂಳಿಯ ಮಹಿಮೆಯ ಬಗ್ಗೆ ತಿಳಿವು ಇರುತ್ತದೆಂದು ಕಾಣುತ್ತದೆ. ಅಥವಾ ಅಂಬಿಗನ ಪುಣ್ಯ ಆ ಯುಗಕ್ಕೆ ಮುಗಿದು ಹೋಯಿತೋ ಅನ್ನಿಸುತ್ತದೆ. ಅಂತೂ ಈಗ ಎಲ್ಲಾ ಅಂಬಿಗರೂ ತ್ರಿವೇಣಿ ಸಂಗಮಕ್ಕೆ ಬರುವ ಯಾತ್ರಿಕರನ್ನು ಅಳೆದು ಅವರನ್ನು ಸುಲಿದು ತಿನ್ನುತ್ತಾರೆ. ನದೀ ದಂಡೆಯಿಂದ ಒಂದೆರಡು ಫರ್ಲಾಂಗು ದೂರದಿಂದಲೇ ಅಂಬಿಗರ, ಅವರ ಏಜೆಂಟರ ಹಾವಳಿ ಶುರುವಾಗುತ್ತದೆ. "ಬನ್ನಿ ಸಾಬ್, ಇಡೀ ದೋಣಿ ನಿಮಗಾಗಿ ಇದೆ. ಹೋಗಿ ಸಂಗಮದಲ್ಲಿ ಸ್ನಾನ ಮಾಡಿ ಪುಣ್ಯ ಕಟ್ಟಿಕೊಳ್ಳಿ" ಎಂದು ಎಲ್ಲರೂ ಕರೆಯುತ್ತಾರೆ. "ಎಷ್ಟು ಹಣ?" ಎಂದು ಕೇಳಿದಾಗ ಕೇವಲ ನೂರೈವತ್ತು ಎಂದ ನಮಗೆ ಸಿಕ್ಕಿದ ಏಜೆಂಟ್. ಚೌಕಾಸಿ ಮಾಡುವಾಗ ಮೊದಲನೆ ಪಾಠ ಅಂದರೆ ಹೇಳಿದ ಬೆಲೆಗಿಂತ ಅರ್ಧ ಬೆಲೆಗೆ ಸಾಮಾನು ಕೇಳುವದು. ಈ ಪಾಠ ನೆನಪಿಟ್ಟುಕೊಂಡು, ಇಲ್ಲಿಯ ಅಂಬಿಗರ ತೋಳದಂಥ ಕ್ರೂರತನ ನೆನಪಿನಲ್ಲಿಟ್ಟುಕೊಂಡು ನಾನು ಅರ್ಧ ಬೆಲೆಗಿಂತ ಕಡಿಮೆ ಕೇಳುವದೆಂದು ಗಡಸಾಗಿ ೫೦ ರೂಪಾಯಿಗೆ ಬರುತ್ತೀಯಾ ಅಂದೆ. ಬರಲಿಲ್ಲ. ಹೀಗೆ ನಾಲ್ಕಾರು ಜನರೊಡನೆ ಚರ್ಚೆ ಮಾಡಿ ಸುಸ್ತಾದೆ. ಕೊನೆಗೊಬ್ಬ "ಸಾಬ್ ಇಪ್ಪತ್ತೈದು ಕೊಡಿ" ಅಂದಾಗ ಖುಷಿಯಾಗಿ ಎಲ್ಲರೂ ದೋಣಿ ಹತ್ತಲು ಹೊರಟೆವು. "ಸಾಬ್ ನೀವು ೫ ಜನ ಇದ್ದೀರಾ, ತಲೆಗೆ ಇಪ್ಪತ್ತೈದರಂತೆ ನೂರಿಪ್ಪತ್ತೈದು ಕೊಡಿ" ಅಂದಾಗ ಇಟ್ಟ ಕಾಲನ್ನು ಹಿಂತೆಗೆದು ಅವನನ್ನು ಬೈದೆವು. ಈ ಮಧ್ಯದಲ್ಲಿ ನಾಲ್ಕೈದು ಅಂಬಿಗರ ಗುಂಪು ನಮ್ಮನ್ನು ಸುತ್ತುವರೆದು ಒಂದೇ ಸಮನೆ ಹಿಂಸೆ ಮಾಡಲು ಶುರು ಮಾಡಿದರು. ಇವರ ಜೊತೆ ಚರ್ಚೆ ಮಾಡಿ ತಲೆ ಚಿಟ್ಟು ಹಿಡಿದು "ನಾವು ಇಲ್ಲಿಂದಲೇ ಸಂಗಮ ನೋಡಿ ಬಿಡ್ತೀವಿ. ನಮಗೆ ಸಂಗಮದಲ್ಲಿ ಸ್ನಾನ ಮಾಡಲೇ ಬೇಕೆಂ

ದಿಲ್ಲ" ಎಂದು ಎಲ್ಲರನ್ನೂ ವಾಪಸ್ಸು ತಿರುಗಿಸಿದೆ. ನಾನು ಚೌಕಸಿ ಮಾಡುತ್ತಿದ್ದ ರೀತಿ ನೋಡಿ ಕೆಲವರಂತೂ ನನ್ನನ್ನೇ ಮೂದಲಿಸಲು ಶುರುಮಾಡಿದರು. "ಐವತ್ತು ರೂಪಾಯಿ ಕೊಟ್ಟು ಶ್ರೀರಾಮ ತುಳಿದ ಪುಣ್ಯ ದೋಣಿಯನ್ನು ಮುಟ್ಟಿ ನಮಸ್ಕಾರ ಮಾಡಬಹುದು, ಆದ್ರೆ ಸಂಗಮದಲ್ಲಿ ಸ್ನಾನ ಮಾಡುವ ಪುಣ್ಯ ನಿಮಗಿಲ್ಲ" ಎಂದಾಗ ಇವರ ಉದ್ಧಟತನಕ್ಕೆ ಬಹಳೇ ಸಿಟ್ಟು ಬಂತು. ಕೊನೆಗೆ ಸ್ನಾನವೇ ಬೇಡವೆಂದು ಅರ್ಧ ದೂರ ವಾಪಸ್ಸು ಬಂದಾಗ ಯಾವನೊ ಒಬ್ಬ ಬಂದು "ಸಾಬ್, ಹೀಗೆ ಮಾಡ್ತೀರಿ. ಇಲ್ಲಿಗೆ ಬಂದ ಮೇಲೆ ಸಂಗಮದಲ್ಲಿ ಸ್ನಾನ ಮಾಡದೇ ಹೋಗುವದೆಂದರೇನು? ಬನ್ನಿ ಕೇವಲ ಹತ್ತಿಪ್ಪತ್ತು ರೂಪಾಯಿ ಮುಖ ನೋಡ್ಕೊಂಡು ಪುಣ್ಯ ಗಳಿಸಲು ಜೀವನದಲ್ಲೊಮ್ಮೆ ಸಿಗುವ ಅವಕಾಶ ಕಳೆದುಕೊಳ್ಳಬೇಡಿ. ನಡೀರಿ, ನಿಮ್ಮ ಪುಣ್ಯವೆ ನಮ್ಮ ಪುಣ್ಯ. ನಡೀರಿ, ನಿಮಗೆ ಏನು ತೋರುತ್ತೋ ಅಷ್ಟನ್ನೇ ಕೊಡಿ. ಸಂಗಮದಲ್ಲಿ ಸ್ನಾನ ಮಾಡಿ ಪುಣ್ಯ ಕಟ್ಟಿಕೊಳ್ಳಿ" ಎಂದು ನಯವಾಗಿ ಮಾತಾಡಿದ. ಅವನ ನಯಕ್ಕೆ ಮನಸೋತು ೫೦ ರೂಪಾಯಿಗೆ ಒಪ್ಪಿಕೊಂಡು ಹೋಗಿ ಸ್ನಾನ ಮಾಡಿ ಬಂದೆವು. ವಾಪಸ್ಸು ದಡ ಮುಟ್ಟಿದ ಮೇಲೆ ಅವನು "ನಮ್ಮದು ಇದೇ ಜೀವನ ಸಾಬ್, ಇನ್ನೂ ೧೦ ರೂಪಾಯಿ ಕೊಡಿ" ಎಂದು ಗೋಗರೆದು ಕೇಳಿದಾಗ ಆಗಲೇ ಸಂಗಮ ಸ್ನಾನದ ಪುಣ್ಯ ಗಳಿಸಿದ್ದ ಸಂತೋಷದಿಂದ ಇನ್ನೂ ೧೦ ರೂಪಾಯಿ ಕೊಟ್ಟೆ. ಅಂತೂ ಇಂತೂ ೧೫೦ ಕೊಡದೆ ೬೦ಕ್ಕೆ ಮುಗಿಸಿದೆನಲ್ಲಾ ಎಂದು ನನ್ನ ವ್ಯಾಪಾರಿ ಬುದ್ಧಿಗೆ ನಾನೇ ಮೆಚ್ಚುಗೆ ಪಟ್ಟುಕೊಳ್ಳುತ್ತಿದ್ದೆ. ಆಗ ನಮ್ಮ ಜೊತೆಯೇ ಬಂದು ಬೇರೆ ದೋಣಿ ಹಿಡಿದು ಸ್ನಾನ ಮಾಡಿ ವಾಪಸ್ಸು ಬಂದಿದ್ದ ದೊಣಪ ದೊಣಪಿಯರು ಸಿಕ್ಕಿ "ನೀವೆಷ್ಟು ದೋಣಿ ಬಾಡಿಗೆ ಕೊಟ್ಟಿರಿ?" ಎಂದು ಕೇಳಿದರು. ೬೦ ಅಂದಾಗ ನಗುತ್ತಾ "ಹಾ ಪರವಾಗಿಲ್ಲ! ನೀವು ಮದ್ರಾಸಿಗಳೆಂದು ತಿಳಿದು ಚೆನ್ನಾಗಿ ಮೋಸ ಮಾಡಿದ್ದಾನೆ" ಎಂದರು. ನನ್ನನ್ನು ಇವನು ಮದ್ರಾಸಿ ಅಂದನಲ್ಲಾ ಎಂಬ ಸಿಟ್ಟು ಒಂದು ಕಡೆ, ಇಷ್ಟೆಲ್ಲಾ ಚರ್ಚೆಯ ನಂತರ ನಾನೂ ಮೋಸ ಹೋದೆನೋ ಎಂಬ ದುಃಖ ಇನ್ನೊಂದು ಕಡೆ, ಅವರು ಕೇವಲ ೨೫ ರೂಪಾಯಿ ಕೊಟ್ಟಿರುವಾಗ ನನ್ನಿಂದ ಇಷ್ಟೊಂದು ಖರ್ಚಾಯಿತಲ್ಲಾ ಎಂಬ ಕಿರಿ ಕಿರಿ ಇನ್ನೊಂದು ಕಡೆ. ಹೀಗಾಗಿ ಸಂಗಮದಲ್ಲಿ ಸ್ನಾನ ಮಾಡಿದ ಸಂತೋಷವೆಲ್ಲಾ ಒಂದೇ ಕ್ಷಣದಲ್ಲಿ ಹಾರಿ ಹೋಗಿ ಮೈಕೈ ಪರಚಿಕೊಳ್ಳುವ ಹಾಗಾಯಿತು.

ಯಮುನಾ ಭಾರತದ ಪವಿತ್ರ ನದಿಗಳಲ್ಲೊಂದು. ಉತ್ತರದಲ್ಲಿ ಸಾಮಾನ್ಯವಾಗಿ ಜಮುನಾ ಎಂದೇ ಇವಳನ್ನು ಕರೆಯುತ್ತಾರೆ. ಪುರಾಣ ಕಥೆಗಳ ಪ್ರಕಾರ ಯಮುನೆ ಯಮರಾಜನ ತಂಗಿ. ಅವಳು ತನ್ನ ಅಣ್ಣನನ್ನು ಸಂತೈಸಿ ಪಡೆದ ವರದ ಬಲದಿಂದ ವರ್ಷದಲ್ಲೊಂದು ದಿನ ಯಾವ ಅಣ್ಣ ತಂಗಿಯರು ಯಮುನೆಯಲ್ಲಿ ಒಟ್ಟಿಗೆ ಸ್ನಾನ ಮಾಡುತ್ತಾರೋ ಅವರಿಗೆ ಅಕಾಲ ಮೃತ್ಯುವಿನ ಭಯವಿಲ್ಲ ಎಂಬುದೊಂದು ದೊಡ್ಡ ನಂಬುಗೆ. ತುಳಸಿದಾಸರ ಪ್ರಕಾರ ಈ ವರದ ಪ್ರಭಾವದಿಂದ ಯಮುನೆಗೆ ಯಮದೂತರೆ ಮುಖಕ್ಕೇ ಮಸಿ ಬಳೆದಿದ್ದಾಳೆ. ಈ ಯಮುನೆ ಯಮುನೋತ್ರಿಯೆಂಬೆಡೆ ಹುಟ್ಟಿ ಮಸ್ಸೂರಿಯ ಮೂಲಕ ಡೆಲ್ಲಿಗೆ ಹರಿದು ಬರುತ್ತಾಳೆ. ಯಮುನೆ ಪಶ್ಚಿಮದಲ್ಲಿ ಉತ್ತರ ಪ್ರದೇಶ ಮತ್ತು ಹರಿಯಾಣಗಳ ಸೀಮಾರೇಖೆಯಾಗುತಿದ್ದಾಳೆ. ಇವಳಿಗೆ ಪ್ರಾಶಸ್ತ್ಯ ಬರುವುದು ಬೃಜ್‌ದೇಶ ತಲಪಿದ ಮೇಲೆಯೇ. ಬೃಂದಾವನ ಮಥುರಾಗಳಲ್ಲಿ ಶ್ರೀಕೃಷ್ಣ ಲೀಲೆ ರಾಸಲೀಲೆಗಳಲ್ಲಿ ಹಾಸು ಹೊಕ್ಕಾಗಿ ಬರುವಳು ಯಮುನೆ. ಕಾಳಿಂದಿಯೆಂಬ ಕಾಳ ಸರ್ಪದ ಮರ್ದನವಾಗಿದ್ದು ಇಲ್ಲಿಯೇ. ಗೋಪಿಕಾ ಸ್ತ್ರೀಯರ ವಸ್ತ್ರಾಪಹರಣವಾಗಿದ್ದೂ ಇಲ್ಲಿಯೆ. ಇಲ್ಲಿಂದ ಮುಂದೆ ಆಗ್ರಾ, ಇಟಾವಾ ತಲಪಿ ಹಮೀದಪುರ ಕೌಶಂಬಿಗಳ ಮೂಲಕ ಅಲಹಾಬಾದ ಸಂಗಮದೆಡೆಗೆ ಹರಿದು ಬರುತ್ತಾಳೆ. ಇಲ್ಲಿಗೆ ಬರುವಷ್ಟಲ್ಲಿ ಯಮುನೆ

ಘನಗಂಭೀರಳಾಗಿ ನಿಧಾನವಾಗಿ ಹರಿಯುತ್ತಾಳೆ. ಅಕಬರ ಕೋಟೆಯಿಂದ ದೋಣಿಯಲ್ಲಿ ೨೦ ನಿಮಿಷ ಸಂಗಮದ ವರೆಗೂ ಹೋಗುವಾಗ ಯಮುನೆ ಹರಿಯುತ್ತಿದ್ದಾಳೆ ಅನಿಸುವುದಿಲ್ಲ. ನಾವೊಂದು ದೊಡ್ಡ ಸರೋವರದ ಮೇಲೆ ದೋಣಿಯಲ್ಲಿ ಹೋಗುತ್ತಿದ್ದೇವೆ ಅನ್ನಿಸುತ್ತದೆ. ಗಂಗೆ ಯಮುನೆಯರ ಸಂಗಮದ ಜಾಗವನ್ನು ಚೆನ್ನಾಗಿ ಗುರುತಿಸಬಹುದು. ಗಂಗೆ ಬಿಳಿಯಾಗಿ ರಭಸದಿಂದ ಓಡುತ್ತಿದ್ದರೆ ಯಮುನೆ ಕಪ್ಪಾಗಿ ಗಂಭೀರವಾಗಿ ನಿಂತಿರುವಂತೆ ಕಾಣುತ್ತಾಳೆ. ಸಂಗಮದಲ್ಲಿ ಯಮುನೆಯ ಪಾತ್ರ ದುದ್ದಕ್ಕೂ ಒಂದು ಗೆರೆ ಎಳೆದಂತೆ ಕಾಣುತ್ತದೆ. ರೇಲ್ವೆ ಪ್ಲಾಟ್‌ಫಾರ್ಮಿನಲ್ಲಿ ನಿಂತಿರುವಾಗ ಯಾವುದೋ ಎಕ್ಸಪ್ರೆಸ್ ರೈಲು ಅಲ್ಲಿ ನಿಲ್ಲದೆ ಗುಡುಗುಡು ಗುಡುಗುಡು ಅಂದುಕೊಂಡು ಬಿರ್ರನೆ ಓಡುವಂತೆ ಗಂಗೆಯು ಓಡುತ್ತಾಳೆ.



"ಮಕ್ಕಳಿಗೆ ಮನೆಯೇ ಮೊದಲ ಪಾಠ ಶಾಲೆ......!!"

ಅವಳ ರಭಸವನ್ನು ಲೆಕ್ಕಿಸದೆ ಯಮುನೆ ನಿಧಾನವಾಗಿ, ಸ್ವಲ್ಪ ಸ್ವಲ್ಪವಾಗಿ ಗಂಗೆಯೊಡನೆ ಬೆರೆತುಕೊಳ್ಳುತ್ತಾಳೆ. ಅಲ್ಲಿಯ ವರೆಗೂ ತಾನೇ ತಾನಾಗಿದ್ದ ಯಮುನೆ ಸಂಗಮದಲ್ಲಿ ತನ್ನತನವನ್ನು ಮರೆತು ಗಂಗೆಯಲ್ಲಿ ಲೀನಳಾಗಿಬಿಡುತ್ತಾಳೆ. ಇಲ್ಲಿಯೇ ಗುಪ್ತಗಾಮಿನಿ ಸರಸ್ವತಿಯೂ ಬಂದು ಸೇರುತ್ತಾಳೆಂದು ಕಥೆ. ಮಾಘ ಮಾಸದಲ್ಲಿ ನಡೆಯುವ ಇಲ್ಲಿಯ ಕುಂಭ ಮೇಳ ಭಾರದಲ್ಲಿ ಅತ್ಯಂತ ದೊಡ್ಡ ಮೇಳ. ಆ ಮೇಳದ ಕಥೆ ಇನ್ನೊಮ್ಮೆಗಿರಲಿ.

ಅಲಹಾಬಾದಿನಲ್ಲಿರುವ ಭಾರದ್ವಾಜ ಆಶ್ರಮ (ಭರದ್ವಾಜ ಮುನಿಗಳು ವನವಾಸಕ್ಕೆ ಹೊರಟ ಶ್ರೀರಾಮ, ಲಕ್ಷ್ಮಣ, ಸೀತೆಯರನ್ನು ಆದರಿಸಿದ ಆಶ್ರಮ) ಅಶೋಕ ಸ್ತಂಭ, ಸಮುದ್ರಗುಪ್ತನ ವಿಜಯ ಏಳಿಗೆಗಳನ್ನು ಸಾರುವ ಮಾಸ್ತಿ ಕಲ್ಲು, ಅಕಬರನ ಕೋಟೆ ಮತ್ತು ನೆಹರೂ ಮನೆತನದ ಆನಂದ ಭವನ ಇವುಗಳನ್ನು ನೋಡಬಹುದು. ಪ್ರಯಾಗಕ್ಕೆ ಅಲಹಾಬಾದ ಅನ್ನುವ ಹೆಸರು ಹೇಗೆ ಬಂತೆಂದು ಯೋಚನೆ ಮಾಡುತ್ತಿದ್ದೆ. ತಕ್ಷಣ ಉತ್ತರ ಸಿಕ್ಕಲಿಲ್ಲ. ಕೊನೆಗೆ ಯಮುನೆಯ ದಡದಲ್ಲೇ ಇರುವ ಕೋಟೆಯನ್ನು ತೋರಿಸಿ ಈ ಕೋಟೆಯನ್ನು ಕಟ್ಟಿಸಿದವನು ಅಕ್ಬರ. "ಈ ಕೋಟೆಯ ಹೆಸರು ಅಲ್ಲಾಹಾಬಾದ ಎಂದರೆ ಅಲ್ಲಾನ ವಾಸಸ್ಥಳ ಎಂದು, ಈ ಕೋಟೆಯಿಂದಲೇ ಊರಿಗೂ ಅಲಹಾಬಾದ ಎಂಬ ಹೆಸರು ಬಂದಿದೆ" ಎಂದು ಒಬ್ಬ ವಿವರಿಸಿದ. ಅಕ್ಬರನ ಹೆಸರು ಕೇಳಿದ ತಕ್ಷಣ ಅವನಿಗಿಂತ ಮೊದಲು ಇದ್ದ ಇತರ ಹೆಸರುವಾಸಿ ಚಕ್ರಾಧಿಪತಿಗಳ ಹೆಸರುಗಳು ನೆನಪಿಗೆ ಬಂದುವು. ಅವುಗಳಲ್ಲಿ ಹರ್ಷ, ಚಂದ್ರಗುಪ್ತ, ವಿಕ್ರಮಾದಿತ್ಯ, ಸಮುದ್ರಗುಪ್ತ, ಕನಿಷ್ಕ, ಅಶೋಕ ಅವರುಗಳು ಮುಖ್ಯರಾದವರು. ಹರ್ಷ ತನ್ನ ಐಶ್ವರ್ಯವನ್ನು ಐದು ವರ್ಷಗಳಿಗೊಮ್ಮೆ ಸತ್ಪಾತ್ರರಿಗೆ ಹಂಚುವ ಯೋಜನೆಯನ್ನು ಹಾಕಿಕೊಂಡು ಅದಕ್ಕಾಗಿ ಮೋಕ್ಷ ಪರಿಷತ್ತನ್ನು ಸೇರಿಸುತ್ತಿದ್ದನಂತೆ. ಇಂಥ ಒಂದು ಮೋಕ್ಷ ಪರಿಷತ್ತು ಪ್ರಯಾಗದಲ್ಲಿ ನಡೆದಾಗ ೫ ಲಕ್ಷ

ಜನರೂ ಹದಿನೆಂಟು ಮಹಾರಾಜರುಗಳೂ ಸೇರಿದ್ದರಂತೆ. ಈ ಸಮಾರಂಭ ೭೫ ದಿನಗಳು ನಡೆದು ಹರ್ಷ ತನ್ನ ಸಕಲ ಸಂಪತ್ತನ್ನೂ ಹಂಚಿ ನಿರ್ಗತಿಕನಾದನಂತೆ. ವಾಪಸ್ಸು ತನ್ನ ರಾಜಧಾನಿಗೆ ಹೋಗಬೇಕಾದಾಗ ತನ್ನ ತಂಗಿ ರಾಜಶ್ರೀಯಿಂದ ತನಗೆ ಬೇಕಾದ ಬಟ್ಟೆಗಳನ್ನು ಬೇಡಬೇಕಾಯಿತಂತೆ. ಚರಿತ್ರಕಾರರು ಹರ್ಷನ ಹಿರಿಮೆಯನ್ನು ಹೆಚ್ಚಿಸಲು ಈ ಕಥೆಯನ್ನು ಕಟ್ಟಿರಬೇಕು. ಪ್ರಯಾಗದ ಜನಗಳು ಅವನು ಉಟ್ಟಿದ್ದ ಬಟ್ಟೆಯನ್ನು ಬಿಡದಂತೆ ಎಲ್ಲವನ್ನೂ ದೋಚಿರಬೇಕು. ಆಗ ಹೇಗಿತ್ತೊ ಗೊತ್ತಿಲ್ಲ. ಆದರೆ ಈಗ ಪ್ರಯಾಗಕ್ಕೆ ಹೋದರೆ ಇದೇ ಹೆದರಿಕೆ ಆಗುತ್ತದೆ.

ಪ್ರಯಾಗ ಅಥವಾ ಅಲಹಾಬಾದಿನಿಂದ ಹೊರಟರೆ ಕಲಕತ್ತಾ– ಡೆಲ್ಲಿಯ ಗ್ರ್ಯಾಂಡ್ ಟ್ರಂಕ್ ರೋಡನ್ನು ತಪ್ಪುವ ಹಾಗೆ ಇಲ್ಲ. ಬನಾರಸಿನ ಕಡೆಗೇ ಹೋಗಲಿ ಅಥವಾ ಡೆಲ್ಲಿಯ ಕಡೆಗೆ ಹೋಗಲಿ ಈ ಬೃಹದ್ ರಸ್ತೆಯ ಮೇಲೇ ಹೋಗಬೇಕು. ಅದರಲ್ಲಿ ಓಡಾಡುತ್ತಿರುವ ಟ್ರಕ್ಕು, ಕಾರು, ಎತ್ತಿನ ಗಾಡಿಗಳನ್ನು ನೋಡಿದಾಗಲೇ ಈ ಸಂಪರ್ಕ ಮೌಲ್ಯ ಗೊತ್ತಾಗುವದು. ಇದರ ಬಗ್ಗೆ ಎರಡು ಮಾತಾಡುವದರೊಳಗೆ ನನ್ನ ಸ್ನೇಹಿತ ಚರಿತ್ರೆಯ ವಿಷಯ ನೆನಪು ಮಾಡಿಕೊಟ್ಟ. ಮೌರ್ಯರ ಕಾಲದಲ್ಲಿಯೂ ಬೃಹತ್ ಹೆದ್ದಾರಿ ಪ್ರಯಾಗದ ಮೇಲೆಯೇ ಹಾದು ಹೋಗುತ್ತಿತ್ತಂತೆ. ಮೌರ್ಯರ ರಾಜ್ಯದ ಪಶ್ಚಿಮ ತುತ್ತತುದಿಯಿಂದ ತಕ್ಷಶಿಲಾ ಅಲ್ಲಿಂದ ಪಂಜಾಬಿನ ಐದು ನದಿಗಳನ್ನು ದಾಟಿ ಕನೋಜ; ಕನೋಜಿನಿಂದ ಪ್ರಯಾಗದ ಮೂಲಕ ಪಾಟಲಿಪುತ್ರ. ಅಲ್ಲಿಂದ ಗಂಗೆ ಸಮುದ್ರ ಸೇರುವ ವರೆಗೂ ಈ ಹೆದ್ದಾರಿ ಹಬ್ಬಿದ್ದು ಪ್ರಪಂಚದ ಅದ್ಭುತಗಳಲ್ಲೊಂದಾಗಿತ್ತಂತೆ. ಮೌರ್ಯರ ಸೇನೆ ಓಡಾಡಿದ ರಸ್ತೆಯ ಮೇಲೆ ನಾವೂ ಹೋಗುತ್ತಿದ್ದೇವೆಂದು ನೆನೆದು ಏನೋ ಹೆಮ್ಮೆ. ಆದರೆ ಅಲಹಾಬಾದಿನಲ್ಲಿ ಎಲ್ಲಿ ತಿರುಗಾಡಬೇಕಾದರೂ ಎಷ್ಟೇ ದೊಡ್ಡ ರಸ್ತೆಗಳಿದ್ದರೂ ಯಾಕೋ ಓಡಾಡಲು ಜಾಗ ಸಾಲದು ಅನ್ನುವಷ್ಟು ಕಿಷ್ಕಿಂಧ. ಎಲ್ಲೆಲ್ಲಿ ನೋಡಿದರೂ ರಿಕ್ಷಾಗಳು—ಎಲ್ಲಾ ಸೈಕಲ್ ರಿಕ್ಷಾಗಳು. ಇಲ್ಲಿಯೇ ಏಕೆ ಇಡೀ ಉತ್ತರ ಪ್ರದೇಶದ ಯಾವುದೇ ಊರಿನಲ್ಲಿ ತಿರುಗಾಡಬೇಕಾದರೂ ಸುಲಭವಾಗಿ ಸಿಗುವ ವಾಹನ, ಇಲ್ಲಿಯ ಸೈಕಲ್ ರಿಕ್ಷಾಗಳು. ಇಬ್ಬರು ಮೂವರು ಕೂತಿರುವಾಗ ಚಾಲಕ ಸೈಕಲ್ ತುಳಿದು ಏರು ತಗ್ಗಾದ ರಸ್ತೆಗಳಲ್ಲಿ ಬೆವರು ಸುರಿಸಿ ಒದ್ದಾಡುವುದನ್ನು ನೋಡಿದಾಗ ಆಹಾ ಇದೆಂತಹ ಅಮಾನುಷ ಜೀವನ ಎನ್ನಿಸದೇ ಇರದು. ಆದರೆ ಈ ಅನಿಸಿಕೆ ಹೆಚ್ಚು ಹೊತ್ತು ಇರಲಾರದು. ಇಲ್ಲಿ ಎಲ್ಲಿ ಓಡಾಡಬೇಕಾದರೂ ಸೈಕಲ್ ರಿಕ್ಷಾಗಳೇ ಬೇಕು. ಆದರಲ್ಲೂ ಇನ್ನೆಲ್ಲಾ ಊರುಗಳಿಗಿಂತಲೂ ಅಲಹಾಬಾದಿನಲ್ಲಿ ಸೈಕಲ್ ರಿಕ್ಷಾಗಳ ಸಂಖ್ಯೆ ಅತಿ ಹೆಚ್ಚು.

ಉತ್ತರ ಪ್ರದೇಶ ಅಂದೊಡನೆ ಮೊದಲು ಮನಸ್ಸಿಗೆ ಬರುವುದು ಪಂಡಾಗಳು ಮತ್ತು ದಾಂತುವಾನ್ ಅಂಬಿದ್ದ. ಇವುಗಳ ಜೊತೆಗೆ ಇಷ್ಟೇ ಪ್ರಮುಖವಾದ ಇನ್ನೊಂದು ಹೆಗ್ಗುರುತು ಇಲ್ಲಿಯ ಸೈಕಲ್ ರಿಕ್ಷಾಗಳು. ✡

ಚಂದ್ರಕಿರಣಕ್ಕೆ ಚಂದ್ರಕಾಂತಿ ಒಸರುವುದಲ್ಲದೆ ಗೋರಿಕಲ್ಲು ಒಸರುವುದೆ ?
— ಪುರಂದರದಾಸರು

ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ?
— ಕನಕದಾಸರು

ಕೊಳಚೆನೀರಲಿ ಮುಳುಗಿದವನಾ ಜಲಧಿಯೀಸಬಲ್ಲನೆ ? — ಸಾಳ್ವ

ಗಾಳಿ ಪರವುಳವನಡಗಿಸುದುಂಟೆ ? — ಲಕ್ಷ್ಮೀಶ




M. K. Publicity

ಜಿ. ಟಿ. ನಾರಾಯಣರಾವ್

# ಲಡ್ವಿಗ್ ವಾನ್ ಬೇತೋವನ್

ಪಶ್ಚಿಮ ಜರ್ಮನಿಯ ಬಾನ್ ನಗರದಲ್ಲಿ ಲಡ್ವಿಗ್ ವಾನ್ ಬೇತೋವನ್ ೧೭೭೦ ಡಿಸೆಂಬರ್ ೧೬ರಂದು ಜನಿಸಿದ. ಇವನದು ವೃತ್ತಿ ಸಂಗೀತಗಾರರ ಮನೆತನ. ಅಜ್ಜ (ಹಿರಿಯ) ಲಡ್ವಿಗ್ ಹೆಸರಾಂತ ಪಿಟೀಲುವಾದಕ ಮತ್ತು ಗಾಯಕ. ತಂದೆ ಯೋಹನ್ ಪಿಟೀಲುವಾದಕ. ನಗರದ ವಾದ್ಯಮೇಳಗಳಲ್ಲಿ ಇವರಿಗೆ ಹುದ್ದೆ. ಯೋಹನ್ನನ ಹೆಂಡತಿ ಮೇರಿಯಾ. ಇವರದು ವಿಷಮ ವಿವಾಹ. ಗಂಡ ಕುಡುಕ, ಕಡು ಕೋಪಿಷ್ಠ, ದುಂದುಗಾರ. ಹೆಂಡತಿ ಸರಳೆ, ಸಂಕೋಚಶೀಲೆ. ಬಡತನದ ದುಂದುಗಗಳಲ್ಲಿಯೂ ಮನೆಯ ಐಕ್ಯ ಮತ್ತು ಓರಣ ಕಾಯ್ದುಕೊಂಡಿರಬಲ್ಲ ಜಾಣೆ. ಇವರ ಮಗನೇ (ಕಿರಿಯ) ಲಡ್ವಿಗ್. ಇವನಿಗೆ ಮೂರು ವರ್ಷವಯಸ್ಸಾಗಿದ್ದಾಗ ಅಜ್ಜ ಗತಿಸಿದ. ತಂದೆ ಯೋಹನ್ನನಿಂದ ಮಗ ಲಡ್ವಿಗ್ಗನಿಗೆ ದೊರೆತದ್ದು ಸಂಗೀತ ಶಿಕ್ಷಣಕ್ಕಿಂತಲೂ ಹೆಚ್ಚಾಗಿ ದೈಹಿಕ ಶಿಕ್ಷೆ. ಉದ್ದೇಶ ? ತನ್ನ ಎಳೆ ಅಣುಗ ಮಹಾ ಸಂಗೀತವಿದ ಆಗಬೇಕೆಂದು. ಆದರೆ ಅನುಸರಿಸಿದ ವಿಧಾನ ಸಂಗೀತದ ಬಗ್ಗೆ ಶಾಶ್ವತ ದ್ವೇಷ ತಿರಸ್ಕಾರ ಮೂಡುವಂತೆ.

ವಾಸ್ತವವಾಗಿ ಬೇತೋವನ್ ಶಿಕ್ಷಣದಿಂದ ರೂಪುಗೊಂಡ ಸಾಚೆಸಿದ್ಧ (stercotyped) ಕಲಾವಿದನಲ್ಲ, ಜನ್ಮತಃ ಪರಿಪೂರ್ಣವಾಗಿದ್ದ ಬಾಲ ಪ್ರತಿಭೆ. "ನಾನೇನು ಪಡೆದಿರುವೆನೋ ಅದು ಪೂರ್ತಿ ನನ್ನದೇ." ಇದು ಮುಂದೊಂದು ದಿನ ಜಗತ್ಪ್ರಸಿದ್ಧ ಬೇತೋವನ್ ನುಡಿದ ಮಾತು. ಯೋಹನ್ನನಿಗೆ ತನ್ನ ಮಗನ ಸುಪ್ತ ಸಾಮರ್ಥ್ಯದ ಅರಿವು ಇತ್ತು. ೧೭೫೬ರಲ್ಲಿ ಜನಿಸಿ ಆ ವೇಳೆಗೆ ಖ್ಯಾತಿ ಶಿಖರವೈದಿದ್ದ ಆಸ್ಟ್ರಿಯಾದ ವುಲ್ಫ್‌ಗಾಂಗ್ ಅಮೆಡ್ಯೂಸ್ ಮೊಝಾರ್ಟ್ (೧೭೫೬–೯೧) ಎಂಬ ಸಂಗೀತವಿದನ ಆದರ್ಶ ಎದುರೇ ಇತ್ತು. ತನ್ನ ಮಗನೂ ಹೀಗಾಗಬೇಕೆಂದು ಯೋಹನ್ ಮನಸ್ಸಿನಲ್ಲಿ ಮಂಡಿಗೆ ಮೆದ್ದ. ಆದರೆ ಯೋಹನ್–ಲಡ್ವಿಗ್ ಸಂಬಂಧ ಪರಸ್ಪರ ಪೂರಕವಾಗಿರದೇ ವಿಕರ್ಷಕವಾಗಿತ್ತು. ಯೋಹನ್ ಕಿರಿಕಿರಿ ಸ್ವಭಾವದವ. ತುಸುವೂ ಜವಾಬ್ದಾರಿಕೆ ವಹಿಸದವ. ಬೇತೋವನ್ ಅಂತರ್ಮುಖಿ, ಶೀಘ್ರಕೋಪಿ, ಜನವಿದೂರ ಪ್ರವೃತ್ತಿಯವ. ಹೀಗಾಗಿ ಹಿಂಡ ಸೇರಲೊಪ್ಪದ ಈ ಬಾಲ ಪ್ರತಿಭೆ ತನ್ನ ಸ್ವಭಾವ ತೋರಿದ ಹಾದಿಯಲ್ಲಿ ಒಂಟಿಯಾಗಿಯೇ ಸಾಗುವುದು ಅನಿವಾರ್ಯವಾಯಿತು.

ಐದನೆಯ ವರ್ಷದಿಂದ ಇವನಿಗೆ ಪಿಯಾನೊ ಮತ್ತು ಪಿಟೀಲು ಶಿಕ್ಷಣ ಆರಂಭವಾಯಿತು. ತಂದೆಯೇ ಮೊದಲ ಗುರು. ಆದರೆ ಇಬ್ಬರನ್ನೂ ಸಾಂಪ್ರದಾಯಿಕವಾಗಿ ಯಾವುದನ್ನೂ ನಡೆಯು

ಗೊಡದ ಸ್ವಭಾವ. ಮಗನಿಗೆ ವಯಸ್ಸು ಏಳಾಗಿದ್ದಾಗ ಇವನನ್ನು ರಂಗಪ್ರವೇಶಗೊಳಿಸಿ ಸಿಂಹಾಯಿಸಲು (lionize) ಯೋಹನ್ ಪ್ರಯತ್ನಿಸಿದ. ಯಶಸ್ಸು ಲಭಿಸಲಿಲ್ಲ. ಪಿತೃಸ್ಪರ್ಧ್ಯೆ ಬೇರೆ ಶಿಕ್ಷಕರ ಜೊತೆ ಪಾಠ ಮುಂದುವರಿಯಿತು– ಪಿಟೀಲು, ವಯೋಲಾ ಮತ್ತು ಪಿಯಾನೊ ವಾದ್ಯಗಳ ಗಳಲ್ಲಿ. ಈ ಪ್ರಚಂಡ ಪ್ರತಿಭೆಗೆ ಗುರು ನಿಮಿತ್ತ ಮಾತ್ರ. ಇವನೊಬ್ಬ ಸುಪ್ತ ಜ್ವಾಲಾಮುಖಿ. ಗುರುವಿನ ಮಾರ್ಗದರ್ಶನವಿರದಿದ್ದರೂ ಯುಕ್ತ ವೇಳೆಯಲ್ಲಿ ಚಿಮ್ಮೊಡೆದು ಸ್ವಂತ ಅಸ್ತಿತ್ವ ಸಾಧಿಸಬಲ್ಲ ಮಹಾಶಕ್ತಿ. ಮೊಜಾರ್ಟನಂತೆ ಇವನೂ ತೀರ ಎಳವೆಯಲ್ಲೇ ಸಂಗೀತಕೃತಿ ರಚಿಸಿದ. ವಯಸ್ಸು ಕೇವಲ ನಾಲ್ಕು ಆಗಿದ್ದಾಗ ಮೂರು ಪಿಯಾನೊ ಸೊನಾಟಾಗಳನ್ನು ರೂಪಿಸಿದ್ದ. (ಎದ್ದು ಕಾಣುವ ಮೂರು ಅಥವಾ ನಾಲ್ಕು ಸಂಚಾರಗಳಲ್ಲಿ ಒಂದು ಅಥವಾ ಎರಡು ವಾದ್ಯಗಳಿಗಾಗಿ ರಚಿಸಿದ ಕೃತಿಯೇ ಸೊನಾಟಾ.)

ಸಾಂಪ್ರದಾಯಿಕ ಶಿಕ್ಷಣ ಇವನಿಗೆ ಅಪಥ್ಯ. ಶಾಲೆಯಲ್ಲಿ ಕಲಿತದ್ದು ಅತ್ಯಲ್ಪ– ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಬಂದಿಷ್ಟು ಪ್ರವೇಶ ಮಾತ್ರ. ಸರೀಕರೊಡನೆ ಬೆರೆಯಲಾರ. ರೂಪ, ಗುಣ ಎಲ್ಲವೂ ಒರಟು. ಒಂಟಿ ಅಲೆತ ಮತ್ತು ಮೌನ ಅವಲೋಕನಪ್ರಿಯ ಹವ್ಯಾಸಗಳು. ಪ್ರಾಥಮಿಕ ದರ್ಜೆಗೆ ಶಿಕ್ಷಣ ಕೈದು. ಮುಂದೆ ಇವನನ್ನು ಪೂರ್ಣಕಾಲ ಸಂಗೀತಾಧ್ಯಯನಕ್ಕೆ ನಿಯೋಜಿಸಲಾಯಿತು– ವಯಸ್ಸು ಒಂಬತ್ತು.

ಈ ಸುಮಾರಿಗೆ ಇವನು ಆರ್ಗನ್ ವಾದ್ಯದಿಂದ ಆಕರ್ಷಿತನಾದ. (ಆರ್ಗನ್ ಅಥವಾ ಪೈಪ್ ಆರ್ಗನ್ ಒಂದು ಸುಷಿರವಾದ್ಯ– ನಮ್ಮ ಪುಂಗಿಯಂತೆ. ಇದರಲ್ಲಿ ಊದುಕೊಳವೆಗಳ ಒಂದು ಅಥವಾ ಹೆಚ್ಚು ಸಮುದಾಯ ಉಂಟು. ಸಂಘಟಿತ ವಾಯುವಿನ ನೆರವಿನಿಂದ ನಾದ ಹೊಮ್ಮಿಸಿ ಕೀಲಿಮಣೆ ಮೇಲೆ ಬೆರಳಾಡಿಸಿ ಯುಕ್ತ ಸ್ವರಗಳನ್ನು ಉತ್ಪಾದಿಸುವುದು ಇಲ್ಲಿಯ ತಂತ್ರ. ಮೋಹಕ ಸ್ವರಗಳ ವ್ಯಾಪಕ ವೈವಿಧ್ಯ ಈ ವಾದ್ಯದ ವೈಶಿಷ್ಟ್ಯ. ಪ್ರಬುದ್ಧ ಬೀತೋವನ್ನನ ಮಾತಿನಲ್ಲಿ ಆರ್ಗನ್ ವಾದ್ಯ ಸಕಲ ವಾದ್ಯಗಳ ಸಾರ್ವಭೌಮ.) ಬೀತೋವನ್ನನಿಗೆ ಆರ್ಗನ್ ವಾದ್ಯ ಕಲಿಸಿದ ಗುರು ಕ್ರಿಸ್ಟಿಯನ್ ಗಾಟ್ಲೋಬ್ ನೀಫೆ.

ಅಂದಿನ ಸಂಗೀತಗಾರರಿಗೆ ರಾಜರ ಇಲ್ಲವೇ ಧಾರ್ಮಿಕ ಸಂಸ್ಥೆಗಳ ಆಶ್ರಯ ಅನಿವಾರ್ಯವಾಗಿತ್ತು. ತಮ್ಮ ಯೋಗ್ಯತೆಯ ಬಂಡವಾಳವನ್ನೇ ಹೂಡಿಟ್ಟು ನೇರ ರಸಿಕರನ್ನೇ ಆಶ್ರಯಿಸಿ ಸ್ವತಂತ್ರ ಜೀವನ ನಡೆಸುವುದು ಶಕ್ಯವಿರಲಿಲ್ಲ. ಈ ಆಶ್ರಿತ ಜೀವನದಲ್ಲಿ ಕಲಾವಿದನ ಘನತೆ ಗೌರವಗಳಿಗೆ ಭಂಗ ತಟ್ಟುತ್ತಿದ್ದುದು ಸಹಜವೇ. ಆತ್ಮಗೌರವವನ್ನು ಬದಿಗೊತ್ತಿ ಜೀವನಯಾಪನೆಯನ್ನೇ ಮುಂದಿಟ್ಟು ಬಾಳುತ್ತಿದ್ದ ಬಹುಸಂಖ್ಯಾತ ಕಲಾವಿದರಿಗೆ ಅಪವಾದವಾಗಿದ್ದವ ನೀಫೆ. ಆಶ್ರಯದಾತನ ನಿಕೃಷ್ಟ ಅಭಿರುಚಿಗೆ ತಾಳಹಾಕಬೇಕಾಗಿ ಬರುವ ಸೃಷ್ಟಿಶೀಲ ಕಲಾವಿದನ ಮನಃಸ್ಥಿತಿಯ ಬಗ್ಗೆ ಸಾತ್ತ್ವಿಕರೋಷ ಮತ್ತು ವಿಶೇಷ ಅನುಕಂಪ ಇದ್ದವನೀತ. ತನ್ನ ಈ ಆದರ್ಶವನ್ನು ಶಿಷ್ಯ ಬೀತೋವನ್ನನಲ್ಲಿ ಚೆನ್ನಾಗಿ ಬಿತ್ತಿದ. ಮೊದಲೇ ಈತನದು ಸ್ವತಂತ್ರ ಮನೋಧರ್ಮದ ಹಸನು ನೆಲ. ಅದರಲ್ಲಿ ನೀಫೆ ನೆಟ್ಟ ಬೀಜ ಮೊಳೆತು ಸೊಂಪಾಗಿ ವಿಕಸಿಸಿತು. ಗರ್ವಿಷ್ಠ ಶ್ರೀಮಂತಿಕೆಗೆ ಎಂದೂ ಶಿರಬಾಗದ ಉಚ್ಛೃಂಖಲತೆ.

ನೀಫೆಯ ಗುರುತ್ವದಲ್ಲಿ ಬೀತೋವನ್ನನಿಗೆ ಅಭಿಜಾತ ಕೃತಿಕಾರರ ಹಾಗೂ ಲೆಸ್ಸಿಂಗ್, ಶಿಲ್ಲರ್ ಮೊದಲಾದ ಸಮಕಾಲೀನ ಜರ್ಮನ್ ಕಲಾವಿದರ ಕೃತಿಗಳಿಗೆ ಪ್ರವೇಶದೊರೆಯಿತು. ಆಗ ಅಷ್ಟೇನೂ ಪ್ರಸಿದ್ಧಿಗೆ ಬಂದಿರದಿದ್ದ ಬಾಕ್ (ಯೋಹನ್ ಸೆಬಾಸ್ಟಿಯನ್ ಬಾಕ್, ೧೬೮೫-೧೭೫೦, ಜರ್ಮನಿಯ ಕೃತಿಕಾರ ಮತ್ತು ಆರ್ಗನ್ ವಾದ್ಯ ಕೋವಿದ) ಎಂಬಾತನ ಕೃತಿಗಳಲ್ಲಿ ಅಂತರ್ಗತವಾಗಿದ್ದ ಅಭಿಜಾತ ಸೌಂದರ್ಯವನ್ನು ನೀಫೆ ಶಿಷ್ಯನ ಮನಸ್ಸಿನಲ್ಲಿ ಚೆನ್ನಾಗಿ ಪಡಿಮೂಡಿಸಿದ. ಈತನ ಪ್ರಗತಿ ಅತಿದ್ರುತವಾಗಿತ್ತು. ಅನೇಕ ಸಂದರ್ಭಗಳಲ್ಲಿ ಗುರುವಿನ ಗೈರುಹಾಜರಿಯಲ್ಲಿ ಆರ್ಗನ್ ವಾದಕನ

ಪಾತ್ರವನ್ನು ಇವನೇ ಸಮರ್ಥವಾಗಿ ನಿರ್ವಹಿಸುವುದಿತ್ತು. ೧೭೮೩ರಲ್ಲಿ ಬೇತೋವನ್ನನಿಗೆ ನೀಫೇ ನೇತೃತ್ವದ ವಾದ್ಯಮೇಳದಲ್ಲಿ ಪ್ರಮುಖ ಸ್ಥಾನ ದೊರೆತದ್ದು ಯೋಗ್ಯತೆಗೆ ಸಂದ ಸಹಜ ಪುರಸ್ಕಾರ. ೧೭೮೪ರ ವೇಳೆಗೆ (ವಯಸ್ಸು ಹದಿನಾಲ್ಕು) ಇವನೊಬ್ಬ ವೃತ್ತಿ ಆರ್ಗನ್ ವಾದಕ ಮತ್ತು ವೃತ್ತಿ ಸಂಗೀತವಿದ ಎಂಬ ಖ್ಯಾತಿ ಗಳಿಸಿದ.

ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ನಿಮ್ನ ಸ್ತರದಿಂದ ಬಂದಿದ್ದ ಬೇತೋವನ್ನನಿಗೆ ಅವನ ಸಂಗೀತವ್ಯಕ್ತಿತ್ವದ ಕಾರಣವಾಗಿ ಉಚ್ಚಸ್ತರಗಳಿಗೆ ನೇರ ಪ್ರವೇಶ ದೊರೆಯಿತು. ಆಗ ಇವನು ಜರ್ಮನ್ ಸಾಹಿತ್ಯ, ತತ್ತ್ವಶಾಸ್ತ್ರ, ಶೇಕ್ಸ್‌ಪಿಯರನ ಕೃತಿಗಳು ಮುಂತಾದ ಉದ್ದೀಪಕ ಹಾಗೂ ಉತ್ತೇಜಕ ವಾಙ್ಮಯ ಪ್ರಕಾರಗಳನ್ನು ಆಳವಾಗಿ ಅಭ್ಯಸಿಸಿದ. ಇದರಿಂದ ಇವನ ಸಹಜ ಪ್ರತಿಭೆಗೆ ಟಿಸಿಲೊಡೆದು ವಿಕಾಸವಾಗಲು ವಿಸ್ತಾರ ಕ್ಷೇತ್ರ ದೊರೆಯಿತು. ಕುಲೀನರು ಇವನ ಸಂಗೀತವನ್ನು ಮೆಚ್ಚಿ ತಲೆದೂಗಿ ಪುರಸ್ಕರಿಸುತ್ತಿದ್ದಾಗಲೇ ಇವನ ವ್ಯಕ್ತಿತ್ವವನ್ನು ಕಡೆಗಣಿಸಿ ಮೂದಲಿಸಿ ತಿರಸ್ಕರಿಸುತ್ತಿದ್ದರು. ಈತ ಒರಟ. ಉಡುಪಿನಲ್ಲಿ ಓರಣವಿಲ್ಲ. ಮುಂಗೋಪಿ. ಅತಿ ಸ್ವಾಭಿಮಾನಿ. ಉನ್ನತ ಸ್ತರದ ಗೋಳಿ ಮಂದಿಯ ಕೃತಕ ವರ್ತನೆಗೆ ಎಂದೂ ಮಣಿಯದ ಸ್ವಚ್ಛಂದ ಜೀವ. ಮನೆಯಲ್ಲಿ ಬಡತನ, ಅಶಾಂತಿ, ಪ್ರೇಮ ಪ್ರಕರಣಗಳಲ್ಲಿ ಮತ್ತೆ ಮತ್ತೆ ವೈಫಲ್ಯ. ಸ್ವಂತಾರೋಗ್ಯ ಎಂದೂ ಉತ್ಕೃಷ್ಟವಲ್ಲ. ಹೀಗೆ ಸಾಗಿತು ಕಲಾವಿದ ಬೇತೋವನ್ ಮತ್ತು ವ್ಯಕ್ತಿ ಬೇತೋವನ್ ನಡುವಿನ ಸಂಘರ್ಷ.

೧೭೮೭ರಲ್ಲಿ ಇವನು ಮೊದಲ ಬಾರಿಗೆ ವಿಯೆನ್ನಾಕ್ಕೆ ಹೋದ. ಅಲ್ಲಿ ಸಮಕಾಲೀನ ಐರೋಪ್ಯ ಸಂಗೀತವಿದರ ರಾಜನೆಂದು ಖ್ಯಾತನಾಗಿದ್ದ ಮೊಜ಼ಾರ್ಟನ ಭೇಟಿ ಆಯಿತು. ಈತನ ಉತ್ಕರ್ಷೆಯ ಪರಾಕಾಷ್ಠೆಯ ದಿನಗಳವು. ಹದಿನೇಳರ ಹರೆಯದ ಬೇತೋವನ್ನನ ಅಸಾಮಾನ್ಯ ಪ್ರತಿಭೆಯನ್ನು ಈತ ಒಡನೆ ಗುರುತಿಸಿ ಸ್ನೇಹಿತನಿಗೆ ಹೇಳಿದ "ಇವನೊಬ್ಬ ಗಮನಾರ್ಹ ವ್ಯಕ್ತಿ, ಒಂದಲ್ಲ ಒಂದು ದಿವಸ ಸಂಭಾಷಣೆಗೆ ವಸ್ತು ಒದಗಿಸುವುದು ದಿಟ." ಬೇತೋವನ್ನನನ್ನು ಮೊಜ಼ಾರ್ಟ್ ತನ್ನ ಶಿಷ್ಯನಾಗಿ ಅಂಗೀಕರಿಸಲು ಸಮ್ಮತಿಸಿದ. ಆದರೆ ಈ ಯೋಗ ಕೈಗೂಡಲಿಲ್ಲ. ಪ್ರೀತಿಯ ತಾಯಿ ಮರಣೋನ್ಮುಖಳಾಗಿದ್ದುದರಿಂದ ಬೇತೋವನ್ ಬಾನ್ ನಗರಕ್ಕೆ ಧಾವಿಸುವುದು ಅನಿವಾರ್ಯವಾಯಿತು. ತಾಯಿ ಸತ್ತಳು. ಗೃಹತಾಪತ್ರಯಗಳ ಗುರುತ್ವಬಲ ಇವನನ್ನು ಆ ನಗರಕ್ಕೆ ಜಗ್ಗಿ ಬಂಧಿಸಿತು.

ಆದರೆ ಈ ಎಲ್ಲ ಕಷ್ಟ ಕೋಟಲೆಗಳನ್ನೂ ಮೀರಿ ಇವನ ಸೃಷ್ಟಿಶೀಲ ಸಾಮರ್ಥ್ಯ ಮತ್ತು ವಾದನ ಕೌಶಲ ವರ್ಧಿಸಿದುವು. ಆಸ್ಟ್ರಿಯದ ಪ್ರಸಿದ್ಧ ವಾಗ್ಗೇಯಕಾರ ಫ್ರಾನ್ಜ಼್ ಜೋಸೆಫ್ ಹೇಯ್ಡ್‌ನ್ (೧೭೩೨ – ೧೮೦೯) ಇದೇ ಸುಮಾರಿಗೆ ಬಾನ್ ನಗರಕ್ಕೆ ಬಂದಿದ್ದ (೧೭೯೦). ಆಗ ಇವನಿಗೆ ಬೇತೋವನ್ನನ ಸಂಗೀತಪ್ರತಿಭೆ ಗಮನಿಸುವ ಅವಕಾಶ ಲಭಿಸಿತು. ತನ್ನಲ್ಲಿಗೆ (ವಿಯೆನ್ನಾ) ಬಂದುದಾದರೆ ಈತನಿಗೆ ಪ್ರೌಢಶಿಕ್ಷಣವೀಯುವುದು ಸಾಧ್ಯವಾದೀತೆಂದು ಆಶ್ವಾಸಿಸಿದ. ಈತನ ಶೈಲಿಯ ಅಸಾಮಾನ್ಯ ಕಸುವು ಮತ್ತು ಮೋಹಕತೆ ಈತನಿಂದ ಮಹತ್ತನ್ನು ನಿರೀಕ್ಷಿಸಬಹುದೆಂಬ ಭಾವನೆ ಹೇಯ್ಡ್‌ನ್ನನಿಗೆ ಕೊಟ್ಟಿತು. ೧೭೯೨ರಲ್ಲಿ ಬೇತೋವನ್ ವಿಯೆನ್ನಾ ಸೇರಿ ಹೇಯ್ಡ್‌ನ್ನನ ಶಿಷ್ಯನಾಗಿ ದಾಖಲಾದ. ಆದರೆ ಇವರಿಬ್ಬರ ನಡುವಿನ ಸಂಬಂಧ ಕಹಿ ಆಗದಿದ್ದರೂ ಸಫಲವಂತೂ ಆಗಲಿಲ್ಲ. ಮನೋಧರ್ಮ, ಶೈಲಿ, ದೃಷ್ಟಿಕೋನ ಒಂದೊಂದರಲ್ಲಿಯೂ ಇವರು ವಿಭಿನ್ನರು. ಎಲ್ಲ ಜನ್ಮಸಿದ್ಧ ಪ್ರತಿಭೆಗಳಂತೆ ಬೇತೋವನ್ ಕೂಡ ಸಂಗೀತದ ಪ್ರದರ್ಶನ ವಿಭಾಗದಲ್ಲಿ ಅದ್ಭುತ ಯಶಸ್ಸು ಗಳಿಸಿದ್ದ. ಆದರೆ ಅದರ ಮೂಲಭೂತ ವಿಚಾರಗಳಲ್ಲಿ ಇವು — ಶಾಸ್ತ್ರಕ್ಕೆ ಸಂಬಂಧಿಸಿದವು — ಅವನು ಕಲಿಯಬೇಕಾದದ್ದು ಸಾಕಷ್ಟು ಇತ್ತು. ಈ ದೈತ್ಯ

ಪ್ರತಿಭೆಯನ್ನು ಶಾಸ್ತ್ರದ ಸಂಕೋಲೆಯಲ್ಲಿ ಬಂಧಿಸಲು ಹೇಯ್ಡನ್ ಮಾಡಿದ ಪ್ರಯತ್ನ ವಿಫಲವಾಯಿತು. ಅಲ್ಲದೇ ಹೇಯ್ಡನ್ ನವ ಶೈಲಿಯ ಪ್ರವರ್ತಕನಾಗಿ ಸುಪ್ರಸಿದ್ಧನಾಗಿದ್ದ. ಖಾಸಗಿಯಾಗಿ ಪಾಠ ಹೇಳುವುದಕ್ಕಿಂತ ಸಾರ್ವಜನಿಕವಾಗಿ ಕಛೇರಿ ನೀಡಿ ಕೃತಾರ್ಥತೆ ಗಳಿಸುವುದು ಅವನಿಗೆ ಅಧಿಕ ಪ್ರಿಯವಾಗಿತ್ತು. ಯಾರಿಗೂ ಶಿರಬಾಗದ ಆತ್ಮಪ್ರತ್ಯಯ ಬೇತೋವನ್ನನದು. ಹೀಗೆ ಇಬ್ಬರೂ ಸಮಾಂತರ ಹಳಿಗಳ ಮೇಲೆ ಸಾಗುತ್ತ ಎಲ್ಲಿಯೂ ಸಂಧಿಸದೆ ಕಾಲ ಸಾಗಿತು.

ವಿಯೆನ್ನಾದಲ್ಲಿ ಬೇತೋವನ್ನನ ಕಾರ್ಯ ಕ್ಷೇತ್ರ ಮೂರು ಕವಲುಗಳಾಗಿ ವಿಸ್ತರಿಸಿತು. ವಿದ್ವಾಂಸರ ಜೊತೆ ಅಧ್ಯಯನ, ಸಂಗೀತ ಪ್ರದರ್ಶನ, ಕೃತಿರಚನೆ, ಪಿಯಾನೊವಾದನಕ್ಕೆ ಇವನು ಹೊಸ ಆಯಾಮ ನೀಡಿ ಅದರ ಸಾಧ್ಯತೆಗಳನ್ನು ವಿಶಾಲವಾಗಿಸಿದ. ಆಶು ಸಂಗೀತವಾದನ ಇವನಿಗೆ ಲೀಲಾ ವಿಹಾರ. ಈ ಕ್ಷೇತ್ರವಲ್ಲಿ ಇವನಿಗೆ ಹೆಗಲೆಣೆ ಆಗಬಲ್ಲ ಇನ್ನೊಬ್ಬ ಕಲಾವಿದನಿರಲಿಲ್ಲ. ವಾಸ್ತವವಾಗಿ ಅಂದು (೧೭೭೯) ವಿಯೆನ್ನಾ ನಗರದ ಸಂಗೀತ ಕೇಂದ್ರವೇ ಇವನಾಗಿದ್ದ. ಇದೇ ಸುಮಾರಿಗೆ ಇವನು ಸಂಗೀತಯಾತ್ರೆ ಹೊರಟು ಪ್ರೇಗ್, ಡ್ರೆಸ್ಡನ್, ಬರ್ಲಿನ್ ಮತ್ತು ಬುಡಾಪೆಸ್ಟ್ ನಗರಗಳಲ್ಲಿ ಕಛೇರಿ ನೀಡಿದ: ತನ್ನ ಕೃತಿಗಳ ಹಾಗೂ ಶೈಲಿಯ ಪ್ರಚಾರ ಮತ್ತು ನೂತನ ವಸ್ತು ಹಾಗೂ ಭಾವನೆಗಳ ಅನ್ವೇಷಣೆ ಉದ್ದೇಶ. ಅದೇ ಕೆಲವು ವರ್ಷಗಳ ಹಿಂದೆ ಮೊರ್‌ಝಾರ್ಟನ ದಿವ್ಯ ಭವ್ಯ ಸಂಗೀತ ಆಲಿಸಿದ್ದ ಹಲವಾರು ವಿಮರ್ಶಕರ ಪ್ರಕಾರ ಮೊರ್‌ಝಾರ್ಟನ ಅನಂತರ ಯಾರು ಎಂಬ ಪ್ರಶ್ನೆಗೆ ಉತ್ತರ ಬೇತೋವನ್ ಎಂದಿದ್ದರೆ ಇನ್ನೊಬ್ಬ ವಿಮರ್ಶಕನ ಪ್ರಕಾರ ಸಮ್ಮ ಕಿವಿಯನ್ನೇನೋ ಈತ ಗೆದ್ದ, ಆದರೆ ಹೃದಯ ವನ್ನಲ್ಲ ಎಂದಿತ್ತು. ಪ್ರಶ್ಯಾದ ದೊರೆ ಈತನ ಸಂಗೀತ ವೈಖರಿಗೆ ಮಾರು ಹೋಗಿ ಸ್ವರ್ಣ ನಾಣ್ಯ ಭರಿತ ಚಿನ್ನದ ನಸ್ಯ ಕರಡಿಗೆಯನ್ನು ಉಡುಗೊರೆಯಿತ್ತು ಗೌರವಿಸಿದ.

ಸಂಗೀತಗಾರನಾಗಿ ಮತ್ತು ಕೃತಿಕಾರನಾಗಿ ವ್ಯಕ್ತಿ ಎಷ್ಟೇ ಸಮರ್ಥನಾಗಿದ್ದರೂ ಜೀವನ ಯಾಪನೆಗೆ ಆತ ಆ ದಿನಗಳಲ್ಲಿ ಶ್ರೀಮಂತರ ಕೃಪಾಶ್ರಯ ಯಾಚಿಸುವುದು ಅನಿವಾರ್ಯ ವಾಗಿತ್ತು. ಮೊರ್‌ಝಾರ್ಟನಂಥ ಮಹಿಮಾನ್ವಿತ ಕಲಾವಿದ ಕೂಡ ಇದಕ್ಕೆ ಅಪವಾದವಾಗಿರಲಿಲ್ಲ. ತನ್ನ ಬಾಳ ಸಂಜೆಯಲ್ಲಿ ಆತ ಸ್ವಪ್ರತಿಷ್ಠೆ ಸ್ಥಾಪಿಸ ಹೊರಟು ಶ್ರೀಮಂತರ ಕೃಪಾವಲಂಬನಶೂನ್ಯ ನಾಗಿ ಹೇಳ ಹೆಸರಿಲ್ಲದೆ ನಶಿಸಿ ಹೋದ ದುರ್ಘಟನೆ ಬೇತೋವನ್ನನ ಎದುರೇ ಇತ್ತು. ಆದರೆ ಈತನ ಮೂಲವಸ್ತು ಬೇರೆಯೇ. ಅಚ್ಚು ಕೂಡ. ಇವನ ಪ್ರತಿಭಾಜ್ಯೋತಿಯೂ ಖ್ಯಾತಿಪ್ರಭೆಯೂ ಉಜ್ವಲವಾದಂತೆ ಒರಟು ತನವೂ ಅನಾಗರಿಕ ನಡವಳಿಕೆಯೂ ಜಾಸ್ತಿ ಆದುವು. ಆದರೂ ವಿಯೆನ್ನಾದ ಗಣ್ಯ ಸಂಗೀತಪ್ರಿಯರು ಈ ಎಲ್ಲ ವೈಯಕ್ತಿಕ ವೈಪರೀತ್ಯಗಳನ್ನೂ ಉಪೇಕ್ಷಿಸುತ್ತ ಇವನ ಸಂಗೀತ ಕೇಳಲು ತವಕಿಸುತ್ತಿದ್ದುದು ಅವರ ಸೌಜನ್ಯಕ್ಕೆ ಹೇಗೋ ಹಾಗೆ ಇವನ ಕಲಾ ಉತ್ಕೃಷ್ಟತೆಗೆ ನಿದರ್ಶನ.

ಹೀಗೆ ಹದಿನೆಂಟನೆಯ ಶತಮಾನ ಮಾಸುತ್ತಿ ದ್ದಾಗ ಬೇತೋವನ್ನನ ಮುಂದೆ ಅತ್ಯುಜ್ವಲ ಭವಿಷ್ಯ ಅನಾವರಣಗೊಳ್ಳುತ್ತಿದ್ದಂತೆ ತೋರು ತ್ತಿತ್ತು.

೧೮೦೦ರ ವೇಳೆಗೆ ಬೇತೋವನ್ ಗತಿಸಿದ್ದರೆ ಇವನೊಬ್ಬ ಸಮಕಾಲೀನ ಮಹಾ ಕಲಾವಿದನೆಂಬ ಹೆಸರಿಗೆ ಭಾಜನನಾಗುತ್ತಿದ್ದನೇ ವಿನಾ ಸಾರ್ವಕಾಲಿಕ ಮಹಾ ಪ್ರತಿಭಾವಂತ ನೆಂಬ ಖ್ಯಾತಿಗೆ ಅಲ್ಲ. ಇವನ ಸಾಧನೆ ಸಿದ್ಧಿಗಳೇನಿದ್ದರೂ ಮರಣದೊಂದಿಗೆ ಮಸುಳಿ ಹೋಗಿರುತ್ತಿದ್ದುವು. ಇವನು ಬದುಕಿ ಉಳಿದಿದ್ದ ಮುಂದಿನ ಇಪ್ಪತ್ತೇಳು ವರ್ಷ ಅತ್ಯಂತ ಫಲವಂತ ಅವಧಿ. ಆಗ ಇವನ ಸೃಷ್ಟಿಶೀಲ ಸಾಮರ್ಥ್ಯ ಗರಿಗೆದರಿ ವಿಶಾಲಾಕಾಶದಲ್ಲಿ ಹಾರಿ ಚಿರಂತನ ಮೌಲ್ಯದ ಮಹಾ ಕೃತಿ ಗಳನ್ನು ರಚಿಸಿತು. ಇದೇ ಅವಧಿಯಲ್ಲಿ ಇವನ ಆರೋಗ್ಯ ಕ್ರಮೇಣ ಹದಗೆಡುತ್ತ ಹೋಗಿ

ದೈಹಿಕ ವೇದನೆ ಮತ್ತು ಮಾನಸಿಕ ಮ್ಲಾನತೆ ಅಸಹನೀಯವಾದುವು. ಒಂಟಿ ಬಾಳ್ವೆಯು ನೀರಸ ಏಕತಾನತೆ. ಕಿವಿಯೊಳಗೆ ಸತತ ಮೊಳಗುತ್ತಿದ್ದ ಗುಂಯ್ ಎಂಬ ಶಬ್ದ. ಇದು ಕಿವುಡುತನದ ಹೆಜ್ಜೆ ದನಿ. ಕ್ರಮೇಣ ಇದು ತಾರಕ್ಕೇರಿ ಕೊನೆಯ ಹತ್ತು ವರ್ಷಗಳಲ್ಲಿ ಪೂರ್ತಿ ಕಿವುಡನೇ ಆದ. ಹೀಗಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಳ್ಳುವುದು ವಿರಳವಾಗಿ ಆರ್ಥಿಕ ಅಭದ್ರತೆ ನಿತ್ಯ ಸಂಗಾತಿಯಾಯಿತು. ಅರಿತ ರಸಿಕರಿಂದ ದೊರೆಯುವ ಪ್ರೋತ್ಸಾಹ ಪೋಷಣೆ ಇಲ್ಲವಾದುವು. ನೆಮ್ಮದಿ ಏನಿದ್ದರೂ ಕಲೆಯಿಂದ ಮಾತ್ರ. ನಿಸರ್ಗದ ರಾಗವೈವಿಧ್ಯವನ್ನು ಎಳವೆಯಲ್ಲಿಯೇ ಕೇಳಿ ಸಂಗೀತ ಸ್ವರಗಳ ವಿವಿಧ ಛಾಯೆ ಛಾಯಿ ಪಲುಕು ಬಳುಕುಗಳನ್ನು ಚೆನ್ನಾಗಿ ರೂಢಿಸಿಕೊಂಡಿದ್ದ ಬೇತೋವನ್ ತನ್ನ ಆಂತರಿಕ ಶ್ರವಣೇಂದ್ರಿಯಗಳು ತೋರಿದ ಹಾದಿಯಲ್ಲಿ ಕೃತಿ ರಚನೆಮಾಡುತ್ತ ಸಂಗೀತ ಸುಖಿಯಾಗಿರುತ್ತಿದ್ದ.

ವ್ಯಾಧಿ ಉಲ್ಬಣಿಸಿ ೧೮೨೭ ಮಾರ್ಚ್ ೧೪ರಂದು ಮರಣ ಹೊಂದಿದ.

ಬೇತೋವನ್ ಯಾವುದೇ ನೂತನ ಸಂಗೀತ ರೂಪದ ಅಥವಾ ಪ್ರಕಾರದ ಸೃಷ್ಟಿಕರ್ತನಲ್ಲ. ಇವನು ಪ್ರವರ್ತಿಸಿದ ವಾದ್ಯಮೇಳಕೃತಿಯ (ಸಿಂಫನಿ–ಪಾಶ್ಚಾತ್ಯ ವಾದ್ಯಮೇಳದಲ್ಲಿ ನುಡಿಸಲು ರಚಿಸಿರುವ ಸಂಗೀತಕೃತಿ, ಸಾಧಾರಣವಾಗಿ ನಾಲ್ಕು ಸಂಚಾರಗಳಲ್ಲಿರುವುದು) ರೂಪವನ್ನು ಮೊದಲು ಸಿದ್ಧಪಡಿಸಿದವ ಹೇಯ್ಡನ್. ಈ ಲಭ್ಯ ರೂಪಕ್ಕೆ ಜೀವ ತುಂಬಿ ಉತ್ತಾರಕ ಸ್ಥಿತಿಗೇರಿಸಿದ್ದು ಬೇತೋವನ್ನನ ಯುಗಪ್ರವರ್ತಕ ಪ್ರತಿಭೆ. ಬೇತೋವನ್ನನ ನವವಾದ್ಯಮೇಳಕೃತಿಗಳಿಂದೇ ಇವು ಪ್ರಸಿದ್ಧವಾಗಿವೆ. ಪಿಯಾನೊ ಸೊನಾಟಾಗಳಲ್ಲಿ ಮತ್ತು ತಂತ್ರಿ ಚತುಷ್ಕಗಳಲ್ಲಿ (ಸ್ಟ್ರಿಂಗ್ ಕ್ವಾರ್ಟೆಟ್-ಉದಾಹರಣೆಗೆ ಎರಡು ಪಿಟೀಲು, ತಲಾ ಒಂದು ವಯೋಲಾ ಮತ್ತು ಚೆಲ್ಲೊ ಎಂಬ ಚತುಸ್ತಂತ್ರೀ ವಾದ್ಯಗಳಿಗಾಗಿ ಸಾಧಾರಣ ಮೂರು ಅಥವಾ ನಾಲ್ಕು ಸಂಚಾರಗಳಲ್ಲಿ ರಚಿಸಿರುವ ಸಂಗೀತಕೃತಿ) ಇವನು ಪರಮೋನ್ನತ ಸಿದ್ಧಿ ಐದಿದ್ದಾನೆ. ಪಾಶ್ಚಾತ್ಯ ಸಂಗೀತಕ್ಕೆ ಹೊಸ ತಿರುವು ಕೊಟ್ಟ ಏಕಪುರುಷ. ಕಲಾವಿದನ ಸ್ವತಂತ್ರ ಅಸ್ತಿತ್ವವನ್ನು ಸ್ಥಾಪಿಸಿದ ಆತ್ಮಪ್ರತ್ಯಯವಂತ. ಜಗತ್ಪ್ರತಿಭೆ ಎಲ್ಲಿಯೇ ಇದ್ದರೂ ಎಂಥ ಪ್ರತಿಕೂಲ ಸನ್ನಿವೇಶ ಎದುರಿಸಬೇಕಾಗಿ ಬಂದರೂ ಆಂತರಿಕ ತ್ರಾಣದ ಕಾರಣವಾಗಿ ಇತಿಹಾಸದ ಪುಟಗಳಲ್ಲಿ ತನ್ನ ಅಸ್ತಿತ್ವದ ಶಾಶ್ವತ ಮುದ್ರೆ ಒತ್ತಿಯೇ ಒತ್ತುತ್ತದೆ ಎನ್ನುವುದಕ್ಕೆ ಸಾಕ್ಷಿ ಇವನ ಬದುಕು ಮತ್ತು ಕೃತಿ.

ಶೇಕ್ಸ್ಪಿಯರ್ ಹೇಗೆ ಮಾನವ ಮನಸ್ಸಿನ ಪ್ರತಿಯೊಂದು ರಾಗಭಾವವನ್ನೂ ತನ್ನ ನಾಟಕಗಳಲ್ಲಿ ಘನೀಭವಿಸಿ ಅದರ ಚಿರಂತನ ಮೌಲ್ಯವನ್ನು ಉದಾತ್ತೀಕರಿಸಿದ್ದಾನೋ ಹಾಗೆ ಬೇತೋವನ್ ಮಾನವನ ಸಾಹಸ ಪ್ರಜ್ಞೆಯ ಹಾಗೂ ಕಲ್ಪನಾಸಾಮರ್ಥ್ಯದ ಹಿರಿಮೆಯನ್ನು ತನ್ನ ಕೃತಿಗಳಲ್ಲಿ ಸೆರೆಹಿಡಿದು ಅವುಗಳ ಉಜ್ವಲ ಮುಖವನ್ನು ವೈಭವೀಕರಿಸಿದ್ದಾನೆ. ಅವನು ಕಾವ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೈ ಆಡಿಸಿ ಅವುಗಳಿಗೆ ಹಿರಿ ಅಂತಸ್ತು ನೀಡಿದರೆ ಇವನು ಸಂಗೀತದ ಎಲ್ಲ ಪ್ರಕಾರಗಳಲ್ಲಿಯೂ ಕೃತಿ ರಚಿಸಿ ಇವುಗಳಿಗೆ ಘನತೆ ತಂದುಕೊಟ್ಟಿದ್ದಾನೆ. ಇಬ್ಬರದೂ ಮೈದಾಸ್ (ಪರುಷ) ಸ್ಪರ್ಶ—ಮುಟ್ಟಿದ್ದನ್ನು ಚಿನ್ನವಾಗಿಸುವ ಗುಣ. ✡

**ಈ ಜಗತ್ತು ಒಂದು ರಂಗಮಂಚ. ನಾವೆಲ್ಲ ಅಲ್ಲಿ ಆಡುವ ನಟರು, ಆದರೆ ನಿರಾಶೆಯಿಂದ ಅರೆ ಅಭ್ಯಾಸ ಮಾಡಿದಂಥವರು.**

# ಇದುವೇ ಜೀವ ಇದು ಜೀವನ

ಮಾರ್ಕೆಟ್ ಬಳಿ ಸಿಟಿ ಬಸ್ಸು ನಿಂತಾಗ ನೂಕುನುಗ್ಗಲು ವಿಪರೀತ ಆಗತೊಡಗಿತು. ಅಂತೂ ಬಸ್ಸು ಬಂದಿತು ಎನ್ನುವ ಸಮಾಧಾನ ಕೆಲವರಿಗೆ, ಈ ಸ್ಟಾಪಿನಲ್ಲಿ ಬಸ್ಸು ನಿಂತಿತೆನ್ನುವ ಸಂತೋಷ ಇನ್ನು ಕೆಲವರಿಗೆ, ಕುಳಿತುಕೊಳ್ಳಲಿಕ್ಕಂತೂ ಸೀಟಿಲ್ಲ; ನಿಂತುಕೊಳ್ಳಲು ಒಂದಷ್ಟು ಸ್ಥಳ ಸಿಕ್ಕರೆ ಸಾಕೆಂದು ಹತ್ತತೊಡಗಿದರು. ಬಸ್ಸು ಪೂರ್ಣ ತುಂಬಿದರೂ ಕೆಳಗಿದ್ದ ನಾಲ್ಕೈದು ಜನರು ಇನ್ನೂ ಸೇರಲು ಹವಣಿಸತೊಡಗಿದ್ದರು. ಕಂಡಕ್ಟರ್ ರೈಟ್ ಹೇಳಿದ.

ನನ್ನ ಗಮನ ನಿಂತುಕೊಂಡ ಒಬ್ಬನ ಕಡೆಗೆ ಹರಿಯಿತು. ಎಡಗೈಯಲ್ಲಿ ಒಂದು ಮಗುವನ್ನೆತ್ತಿಕೊಂಡಿದ್ದಾನೆ. ಅವನ ಹೆಗಲ ಮೇಲೆ ಗೋಣು ಇಟ್ಟ ಮಗು ಅತ್ತೊಮ್ಮೆ ಇತ್ತೊಮ್ಮೆ ನೋಡುತ್ತಿದೆ. ಇವನ ಎಡಗೈ ಮುಂಗೈಯಲ್ಲಿ ತರಕಾರಿಯನ್ನು ಸೇರಿಸಿಕೊಂಡ ಕೈಚೀಲ ಜೋತು ಬಿದ್ದಿದೆ. ಅವನ ಕಾಲ ಬಳಿಯೇ ಇನ್ನೊಂದು ಕೈಚೀಲ. ಅದರಲ್ಲಿ ಪೊಟ್ಟಣಗಳು. ಬಲಗೈಯಿಂದ ಸಳಿ ಹಿಡಿದಿದ್ದಾನೆ. ನನಗೆ ಆಶ್ಚರ್ಯ ಎನಿಸಿದ್ದೆಂದರೆ ಇಂಥದರಲ್ಲಿ ಅವನು ಶಿಳ್ಳು ಹಾಕಿ ಸಿನೇಮಾದ ಹಾಡೊಂದನ್ನು ಮೆಲುಕು ಹಾಕುತ್ತಿದ್ದಾನೆ! ಇದೆಲ್ಲಾ ಪಾಮೂಲು ಎನ್ನುವ ಆಧುನಿಕ ನ(ಗ)ರ ಜೀವ (ನ) ಕ್ಕೆ ಅತ ಹೊಂದಿಕೊಂಡು ಬಿಟ್ಟಿದ್ದ.

ಹೊರಟ ಬಸ್ಸಿನಲ್ಲಿ ಕಂಡಕ್ಟರ್ ತಿಕೀಟು ಕೊಡುತ್ತ ಇವನ ಕಡೆಗೆ ಬಂದಾಗ ಜೇಬು ತೋರಿಸಿ ಒಂದರ ನೋಟು ತೆಗೆದುಕೊಳ್ಳಲು ಹೇಳಿದ. ಕಂಡಕ್ಟರ್ ಮುಗುಳ್ನಕ್ಕು ನೋಟು ತೆಗೆದುಕೊಂಡು ತಿಕೀಟು ಮತ್ತು ಚಿಲ್ಲರೆ ಜೇಬಿನಲ್ಲಿಯೇ ಸೇರಿಸಿ ಮುಂದೆ ಸಾಗಿದ.

ಒಂದೇ ಒಂದು ಕಾಲನ್ನು ಬಾಗಿಲ ಪಾವುಟಗೆಯ ಮೇಲೆ ಇಟ್ಟು ಜೋತು ಬಿದ್ದಿದ್ದ ಒಬ್ಬ ಇವನನ್ನು ನೋಡಿ, "ಓ...! ಮಾರ್ಕೆಟ್ಟಿಗೆ ಬಂದಿರಾ?" ಎಂದು ಮುಗುಳ್ನಕ್ಕು ಕೇಳಿದ. ಇವನು ಗೋಣ ಹಾಕಿ "ಹೌದು" ಎಂದು ಹೇಳಿ ಮುಗುಳ್ನಕ್ಕ. "ಆರಾಮಾ?" ಎಂದು ಅವನು ಕೇಳಿದ್ದಕ್ಕೆ "ಇದ್ದದಕ್ಕೇ ಆರಾಮು ಎನ್ನಬೇಕು," ಎಂದ!

—ಹ. ಶಿ. ಭೈರನಟ್ಟಿ

ಅದೊಂದು ದಿನ ನಮ್ಮ ತಂದೆಯವರ ಜೊತೆ ಆಸ್ಪತ್ರೆಗೆ ಹೋಗಲೆಂದು ಬಸ್ಸಿಗಾಗಿ ಕಾಯುತ್ತ ಕುಳಿತಿದ್ದೆ. ತುಸು ಹೊತ್ತಿನಲ್ಲಿ ೫೦-೬೦ ವರ್ಷದ ಬಿಚ್ಚೋಲೆ ಗೌರಮ್ಮನಂತೆ ತೋರುತ್ತಿದ್ದ ಒಬ್ಬ ಹೆಣ್ಣುಮಗಳು, "ಮಾರ್ಕೆಟ್ ಬಸ್ ಹೋಯ್ತಾ?" ಎನ್ನುತ್ತ ನನ್ನ ಬಳಿ ಬಂದು ಕುಳಿತಳು. ಹೂಂಗುಟ್ಟಿ ನಾನು ಮತ್ತೆ ತಂದೆಯವರೊಂದಿಗೆ ಮಾತಿಗೆ ತೊಡಗಿದೆ. ಆಕೆ ಮಧ್ಯದಲ್ಲಿ ಬಾಯಿ ಹಾಕಿ, "ಯಾರೋ ಮೂವತ್ತು ರೂಪಾಯಿ ಕೊಡಬೇಕಿತ್ತು; ಅದಕ್ಕೆ ಬಂದರೆ ಅವರೇ ಇಲ್ಲ," ಎಂದು ಉದ್ಗರಿಸಿದಳು. ನಾನು ಕೇಳಿ ಸುಮ್ಮನಾದೆ. ನಂತರ ಮತ್ತೆ ಅವಳು, "ನಾನು ಮೈಸೂರು ಬ್ಯಾಂಕ್ ಆಡಿಟರ್ ಮಗಳು. ತಂದೆ ರಿಟೈರ್ ಆಗಿದ್ದಾರೆ. ನನ್ನನ್ನು ಒಬ್ಬ ಆಫೀಸರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಹೋದ ತಿಂಗಳು ೩೦,೦೦೦ ಖರ್ಚು ಮಾಡಿ ಮಗಳ ಮದುವೆ ಮಾಡಿದೆವು," ಎಂದಳು. ಇದೆಲ್ಲವನ್ನು ನನಗೇಕೆ ಹೇಳುತ್ತಿದ್ದಾಳೆಂದು ತಿಳಿಯದೆ ನಾನು ಸುಮ್ಮನಿದ್ದೆ.

ಅಷ್ಟರಲ್ಲಿ ಒಂದು ಚಿಕ್ಕ ಹುಡುಗಿ ಬಂದು "ಅಮ್ಮಾ ಒಂದು ಹತ್ತು ಪೈಸೆ ಕೊಡಿ," ಎಂದು ದೈನ್ಯದಿಂದ ಅಂಗಲಾಚತೊಡಗಿತು. "ಏಯ್, ಹೋಗೇ ಇಲ್ಲಿ ಬರಬೇಡ, ಕಾಸು ಕೇಳಕ್ಕೆ," ಎಂದು ಆ ಮಗುವನ್ನು ಗದರಿಸಿ ಕಳಿಸಿದಳು. ನಂತರ ನನ್ನೆಡೆ ಹೊರಳಿ, "ಎಂಟಾಣೆ ಇದ್ರೆ ಕೊಡಿ ಬಸ್ಸಿಗೆ ಕಡಿಮೆ ಬಿದ್ದಿವೆ," ಎಂದಳು.

ತುಸು ತಿಂದರೆಯೇ ಏನೊ ಎಂದುಕೊಂಡು ನಾನು ಎಂಟಾಣೆ ಕೊಟ್ಟ ಸುಮ್ಮನಾದೆ. ಆಕೆ ಮುಂದೆ ಹೋಗಿ ಮತ್ತೊಬ್ಬ ಪ್ರಯಾಣಿಕನ ಹತ್ತಿರ ಹೋಗಿ ಅವನಿಂದಲೂ ಎಂಟಾಣೆ ಕಿತ್ತುಕೊಂಡಾಗಲೇ ಅವಳ ಬಣ್ಣ ಬಯಲಾದದ್ದು. ಆದರೆ ನನಗಾದ ಆಶ್ಚರ್ಯವೆಂದರೆ ಆ ಪುಟ್ಟ ಬಾಲೆಯನ್ನು ಗದರಿಸಿ ಕಳುಹಿಸಿ ಅವಳ ಪಾಲನ್ನೂ ತಾನೇ ಕಬಳಿಸಿದಳಲ್ಲಾ ಎಂಬುದು. —ನಾಗರತ್ನ

ಸಂಸಾರವೆಂದರೆ ನಿರಂತರವಾಗಿ ನಾವು ರಸ್ಯಕ್ಕಾಗಿ ಹೋರಾಡುವ ಒಂದು ಸಾಧನವೆಂದು ನನ್ನ ಭಾವನೆ. ವಿವಿಧ ಮುಖಗಳ ಯೋಚನಾ ತರಂಗಗಳು ಕಡೆಗೊಮ್ಮೆ ಆ ಗುರಿಯತ್ತ ಒಮ್ಮುಖವಾಗಲೇಬೇಕು. ಕಾರ್ಯ ನಿಮಿತ್ತ ತುರ್ತು ಹೋಗಬೇಕಿತ್ತು. ಹೊರಡಲು ಅನುವಾದೆ.

"ತಿಂಡಿ ತಿಂದುಕೊಂಡು ಹೋಗಿ......... ಇನ್ನೇನು ಆಯ್ತು" ಮಡದಿಯಿಂದ ಆಜ್ಞಾಪೂರ್ವಕ ವಿನಂತಿ.

"ಬಂದೆ..........ಬಂದು ತಿನ್ನುತ್ತೇನೆ. ಅರ್ಜೆಂಟ್" ಎಂದು ಹೊರಟೆ.

"ಇಗೋ ತಂದೆ ತಿಂಡೀನಾ......"ಧ್ವನಿ ಕ್ಷೀಣವಾಗಿ ಕೇಳಿಸುವಾಗ ನಾನಾಗಲೇ ಬಾಗಿಲು ದಾಟದ್ದೆ. ಮಿತ್ರರೊಬ್ಬರು ಎದುರಾದರು. ವಾಪಸಾಗಿ ಬಂದು ವರಾಂಡದಲ್ಲಿ ಆಸೀನರಾದೆವು. ಆಗ ನನ್ನ ಮಡದಿ ಮತ್ತು ನಾಲ್ಕು ವರ್ಷದ ಮಗನ ಸಂಭಾಷಣೆ ಈ ರೀತಿ ಕೇಳಿ ಬರುತ್ತಿತ್ತು:

"ಅಮ್ಮಾ......ತಿಂಡಿ ಆಯ್ತಾ......?"

"ಹೂಂ...... ಆಯ್ತು...... ಒಂದೆರಡು ನಿಮಿಷ......ಆಟ ಆಡ್ಕೊಂಡು ಬಾ......"

"ಏನಮ್ಮಾ ನೀನು...... ಅಪ್ಪಾಜಿಗಾದ್ರೆ ಇಗೋ ತಂದೇ ತಿಂಡೀನಾ ಅಂತೀಯಾ...... ನನಗಾದ್ರೆ...... ಒಂದೆರಡು ನಿಮಿಷ ಆಟ ಆಡ್ಕೊಂಡು ಬಾ ಅಂತೀಯಾ!"

—ಕುರುಬರಹಳ್ಳಿ ಕೆ. ಹೊನ್ನಪ್ಪ

ಸುಮಾರು ನಾಲ್ಕು ವರ್ಷಗಳಷ್ಟು ಹಿಂದೆ ನಡೆದ ಸಂಗತಿ. ನನ್ನ ಸ್ನೇಹಿತರೊಬ್ಬರ ಮದುವೆ ಆದೇ ಆಗಿತ್ತು. ಹೆಂಡತಿಗೆ ಬೆಂಗಳೂರು ಅಪರಿಚಿತ ನಗರವಾದ್ದರಿಂದ ಸ್ಥಳ ಪರಿಚಯವಾಗುವ ತನಕ ರಾಯಚೂರಿಂದ ತಮ್ಮೊಂದಿಗೆ ತಮ್ಮ ತಾಯಿಯನ್ನು ಕರೆದುಕೊಂಡು ಬಂದಿದ್ದರು. ಆಗ ನವೆಂಬರ್ ತಿಂಗಳು. ಕನ್ನಡ ರಾಜ್ಯೋತ್ಸವದ ಸಂಭ್ರಮವೇ ಸಂಭ್ರಮ. ನನ್ನ ಮಿತ್ರನ ತಾಯಿ ತನ್ನ ಸೊಸೆಯೊಡನೆ ಇಂಥ ಒದು ಸಮಾರಂಭಕ್ಕೆ ಹೋಗಿ ಬಂದರು.

ಸಭೆಯಲ್ಲಿ ಮಾತಾಡಿದ ನಾಯಕಮಣಿಗಳೆಲ್ಲರೂ, ಕನ್ನಡ ಕಲಿಯಲೇಬೇಕು; ಕನ್ನಡದಲ್ಲೇ ವ್ಯವಹಾರ ಮಾಡಲೇಬೇಕು, ಕನ್ನಡೇತರರು ಕೂಡ ಕನ್ನಡ ಕಲಿಯಲೇಬೇಕು ಇತ್ಯಾದಿಯಾಗಿ ಆವೇಶಪೂರ್ಣ ಭಾಷಣಗಳನ್ನು ಮಾಡಿದರು. ಅದನ್ನೆಲ್ಲ ಕೇಳಿ ಮನೆಗೆ ಮರಳಿದ್ದ ತಾಯಿ ರಾತ್ರಿ ಪಾಳಿ ಮುಗಿಸಿ ಆದೇ ಬಂದಿದ್ದ ಮಗನನ್ನು, "ಲೇ ಮುದುಕ, ಎಂತದಾ? ಕನ್ನಡ ಕಲಿಯಲೇಬೇಕಂತೆ, ಕನ್ನಡ ಮಾತಾಡಬೇಕಂತೆ, ನಿನಗೆ ಬರ್ತದನಾ ಅದು?" ಎಂದು ವಿಚಾರಿಸಿದಳಂತೆ.

ಆಕೆ ಮಾತಾಡುತ್ತಿದ್ದುದು ಕನ್ನಡವೇ ಎಂದು ತಾಯಿಗೆ ಮನವರಿಕೆ ಮಾಡಿಕೊಡಬೇಕಾದರೆ ನನ್ನ ಮಿತ್ರನ ಮೈಯೆಲ್ಲ ಬೆವರಿಟ್ಟಿತಂತೆ. ಅವನ ಬಾಯಿಂದ ಈ ಘಟನೆಯನ್ನು ಕೇಳಿದಾಗ ನಾನು ಮನದಲ್ಲೇ ಅಂದುಕೊಂಡೆ—ಸಿರಿಗನ್ನಡಂ ಗೆಲ್ಗೆ!

-ಯಾಬದಾಳು ಹೆಬ್ಬಟ್ಟಗೇರಿ

# ಕರ್ಮಸಿದ್ಧಾಂತವು ಒಂದು ಜಾಣ ಉಪಾಯ!

**ಡಾ. ಎಸ್. ಬಾಲಚಂದ್ರರಾವ್**

ಕಸ್ತೂರಿಯ ಜನವರಿ ಸಂಚಿಕೆಯಲ್ಲಿ ಪ್ರಕಟವಾದ 'ಕರ್ಮಸಿದ್ಧಾಂತವು ಒಂದು ಜಾಣ ಉಪಾಯವೇ?' ಎಂಬ ನನ್ನ ಲೇಖನಕ್ಕೆ ಮಾರ್ಚ್ ಸಂಚಿಕೆಯಲ್ಲಿ ನಾಲ್ಕು ಮಂದಿ ವಾಚಕರು ತಮ್ಮ ತೀವ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಆಕ್ಷೇಪಣೆಗಳ ಬಗ್ಗೆ ಈ ಲೇಖನದಲ್ಲಿ ವ್ಯಾಪಕವಾಗಿ ವಿವೇಚನೆ ಮಾಡಬಯಸಿದ್ದೇನೆ.

ಮೊದಲನೇ ಆಕ್ಷೇಪಣೆಯೆಂದರೆ, ಕರ್ಮಸಿದ್ಧಾಂತವು ಅಜ್ಞರನ್ನೂ—ದುರ್ಬಲರನ್ನೂ ಶಾಶ್ವತವಾಗಿ ಶೋಷಣೆಗೆ ಒಳಪಡಿಸಲು ಸಬಲರು ಮಾಡಿರುವ ಒಂದು ಜಾಣ ಉಪಾಯವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂಬುದು. ನಾನು ಹೀಗೆ ಸೂಚ್ಯವಾಗಿ ಕೂಡ ಹೇಳಿಲ್ಲ! ಮನುಷ್ಯ ನಿರ್ಮಿತವಾದ ಕಷ್ಟಗಳ ಸಂಕೋಲೆಯನ್ನು ಕಿತ್ತೊಗೆಯುವ ಶಕ್ತಿ ತಮಗಿದೆ ಎಂಬ ಅರಿವು ಶೋಷಿತ ವರ್ಗಕ್ಕೆ ಹೊಳೆಯದಂತೆ ಮಾಡುವ ಪ್ರಬಲ ಶಕ್ತಿಯನ್ನು ಕರ್ಮಸಿದ್ಧಾಂತವು ಹೊಂದಿದೆ ಎಂದು ಅಭಿಪ್ರಾಯಪಟ್ಟ ಮಾತ್ರಕ್ಕೆ ಸಬಲರು ಉದ್ದೇಶಪೂರ್ವಕವಾಗಿ ದುರ್ಬಲರನ್ನು ಶೋಷಿಸಲು ಕರ್ಮಸಿದ್ಧಾಂತವನ್ನು ಕಂಡುಹಿಡಿದವರೆಂದು ಅರ್ಥ ಬರಲು ಹೇಗೆ ತಾನೆ ಸಾಧ್ಯ?

ತಾತ್ವಿಕವಾಗಿ ಪರಿಶೀಲಿಸುವೆ. ಪುನರ್ಜನ್ಮ–ಕರ್ಮಸಿದ್ಧಾಂತಗಳಿಗೆ ಸೈದ್ಧಾಂತಿಕ ಆಧಾರಗಳು: (೧) ಹಿತೈಷಿ ಮತ್ತು ದಯಾಳುವಾದ ಒಬ್ಬ ದೇವರ (ಅಥವಾ ತತ್ತ್ವದ) ನೇತೃತ್ವದಲ್ಲಿರುವ ನ್ಯಾಯನಿಷ್ಠವಾದ ಪ್ರಪಂಚ (a just world with a bene-volent God as care-taker) ಮತ್ತು (೨) ಕಾರ್ಯ–ಕಾರಣ ಸಂಬಂಧವೆಂಬ ತಾರ್ಕಿಕ ನಿಯಮ. ಈ ಎರಡು ಆಧಾರಗಳನ್ನು ಆಶ್ರಯಿಸಿರುವ ನಮ್ಮ ಭಾರತೀಯ ಧರ್ಮಗಳಾದ ಹಿಂದೂ, ಬೌದ್ಧ, ಮತ್ತು ಜೈನರಲ್ಲಿ ಪುನರ್ಜನ್ಮ ಕರ್ಮಸಿದ್ಧಾಂತಗಳಿಗೆ ಮನ್ನಣೆ ಇರುವುದು ಸಹಜ. ಈ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ (ಉದಾ: ಕ್ರೈಸ್ತ ಮತ್ತು ಇಸ್ಲಾಂ) ಮುಗ್ಧರಾದ ಶಿಶುಗಳ ನರಳುವಿಕೆ ಮತ್ತು ಅಕಾಲ ಮರಣವನ್ನು ಬಹಳ ಸಾತ್ವಿಕ ಜೀವನ ನಡೆಸುವವರೂ ಹಲವೊಮ್ಮೆ ಅನುಭವಿಸುವ ಕಷ್ಟ ಕಾರ್ಪಣ್ಯಗಳನ್ನೂ ದುಷ್ಟ ಜನರು ಸ್ವೇಚ್ಛೆಯಿಂದ ಸುಖಗಳನ್ನು ಅನುಭವಿಸುವುದನ್ನೂ ಸಕಾರಣವಾಗಿ ವಿವರಿಸುವುದು ಬಹಳ ತೊಡಕಿನ ಕೆಲಸ. ಅಷ್ಟೇ ಅಲ್ಲದೆ, ಪ್ರತಿಯೊಂದು ಘಟನೆಗೂ ಒಂದು ಹೇತು ಅಥವಾ ಕಾರಣವಿರಲೇಬೇಕು.

ಆದವರೆ, ಈ ಮೇಲೆ ಹೇಳಿದ ಎರಡು ಸೈದ್ಧಾಂತಿಕ ಆಧಾರಗಳ ಹಿನ್ನೆಲೆಯಲ್ಲಿ, ಪುನರ್ಜನ್ಮ–ಕರ್ಮಸಿದ್ಧಾಂತವು ಒಂದು ತಾತ್ತ್ವಿಕ ಅವಶ್ಯಕತೆ. ಈ ದೃಷ್ಟಿಯಿಂದ ನೋಡಿದಾಗ, ಭಗವಾನ್ ಬುದ್ಧನು ಕರ್ಮ ಸಿದ್ಧಾಂತವನ್ನು ಒಪ್ಪಿಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಅಂತೆಯೇ ಆತನು 'ದುರ್ಬಲರನ್ನು, ಶೋಷಣೆಗೆ ಒಳಪಡಿಸುವ ಉದ್ದೇಶ' ಹೊಂದಿದ್ದನೆಂದು ಹೇಳಬೇಕಾಗಿಲ್ಲ. ಅಂತಹ ಒಂದು ಸಲ್ಲದ ಅಪವಾದವನ್ನು ಬುದ್ಧನ ಮೇಲಾಗಲಿ ಅಥವಾ ಇತರ ಪ್ರಾಚೀನ ಋಷಿಗಳ ಮೇಲಾಗಲಿ ನಾನು ಹೊರಿಸಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ.

ಆದರೆ ನಾವು ಮುಖ್ಯವಾಗಿ ಮನದಟ್ಟು ಮಾಡಿಕೊಳ್ಳಬೇಕಾಗಿರುವ ಅಂಶವೆಂದರೆ ಒಂದು ವೇಳೆ ನಮ್ಮ ದೈನಂದಿನ ಆಗು ಹೋಗುಗಳು ನ್ಯಾಯಬದ್ಧವಾಗಿ ಪ್ರಪಂಚದಲ್ಲಿ ಪಿತೃಪಿಯೂ ದಯಾಳುವೂ ಆದ ದೇವರ (ಅಥವಾ ತತ್ತ್ವದ) ನೇತೃತ್ವದಲ್ಲಿ ಜರುಗುತ್ತದೆ–ಎಂಬ ನಂಬಿಕೆಯನ್ನು ಒಪ್ಪಿಕೊಳ್ಳದಿದ್ದಾಗ ಪುನರ್ಜನ್ಮ – ಕರ್ಮ ಸಿದ್ಧಾಂತದ ಅವಶ್ಯಕತೆಯೂ ಇರುವುದಿಲ್ಲ. ಹಾಗಾದರೆ, ಸಂಭವಿಸುವ ಘಟನೆಗಳಿಗೆ ಕಾರಣಗಳಿರುವುದಿಲ್ಲವೆ? ಖಂಡಿತವಾಗಿಯೂ ಇರುತ್ತವೆ. ಆದರೆ, ಅವುಗಳನ್ನು ಹುಡುಕಿಕೊಂಡು ಪುನರ್ಜನ್ಮ ಸಿದ್ಧಾಂತಕ್ಕೆ ಮೊರೆಹೋಗಬೇಕಾದ್ದಿಲ್ಲ! ಅಂತೆಯೇ, ನಾವು ಮಾಡುವ ಕರ್ಮಗಳಿಗೂ ಪ್ರತಿಫಲಗಳು ಇದ್ದೇ ಇರುತ್ತವೆ. ಅವುಗಳನ್ನು ಮುಂದಿನ ಜನ್ಮಗಳಲ್ಲೇನೂ ಹುಡುಕಬೇಕಾಗಿಲ್ಲ. ಒಬ್ಬ ವ್ಯಕ್ತಿಯು ಒಳ್ಳೆಯ ಕೆಲಸಗಳನ್ನೇ ಮಾಡುತ್ತಿದ್ದರೆ, ಅವುಗಳ ಪರಿಣಾಮ ಇತರರ ಅನುಕೂಲದಲ್ಲಿ ಮತ್ತು ಆತನ ಸ್ವಸಂತೋಷದಲ್ಲಿ ಕಾಣಬಹುದು. ಆ ಪರಿಣಾಮವನ್ನು ಮುಂಬರುವ "ಉತ್ತಮ ಜನ್ಮದಲ್ಲೋ ಅಥವಾ ಸ್ವರ್ಗದಲ್ಲೋ ಹುಡುಕಬೇಕಾಗಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯು ದುಷ್ಟ ಕರ್ಮಗಳ ಪರಿಣಾಮಗಳನ್ನು ಆತನು ಮತ್ತು ಇತರರು ಅನುಭವಿಸುತ್ತಲೇ ಇರುತ್ತಾರೆ. ನಮ್ಮ ಸಾಮಾಜಿಕ ಹಾಗೂ ರಾಜಕೀಯ ನ್ಯಾಯ ವ್ಯವಸ್ಥೆ ಸರಿಯಾಗಿದ್ದ ಪಕ್ಷದಲ್ಲಿ ದುಷ್ಕರ್ಮಿಯು ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ. ನಮ್ಮ ಮನುಷ್ಯನಿರ್ಮಿತ ವ್ಯವಸ್ಥೆಯಲ್ಲಿರುವ ನ್ಯೂನತೆಯಿಂದ ಉಂಟಾಗಿರುವ ಕಂದರವನ್ನು ತುಂಬಲು ಕರ್ಮಸಿದ್ಧಾಂತಕ್ಕೆ ಮೊರೆ ಹೋಗಬೇಕೆ? ನಮ್ಮ ಸಮಾಧಾನಕ್ಕಾಗಿ ಅದರ ಅವಶ್ಯಕತೆ ಇರಬಹುದು.

ಇಂತಹ ಪರಿಸ್ಥಿತಿಯಲ್ಲೇ ಮಾನವೀಯ ಮೌಲ್ಯಗಳ ಅವಶ್ಯಕತೆ ಬರುವುದು. ಒಬ್ಬಾತ ಕಷ್ಟಪಡುತ್ತಿದ್ದಾಗ ಆತನನ್ನು ನಾವು ಸಹಾಯ ಮಾಡಿ ಕಷ್ಟಗಳಿಂದ ಪಾರುಮಾಡಿಸುವುದು ಮಾನವೀಯತೆ. ಇದಕ್ಕೆ ಪುಣ್ಯಫಲವನ್ನೋ ಸ್ವರ್ಗವನ್ನೋ ಅಪೇಕ್ಷಿಸಿದರೆ, ಅದು ಸ್ವಾರ್ಥ! ಇನ್ನು ಕಾರ್ಯ–ಕಾರಣಗಳ ಸಂಬಂಧ ಪ್ರಶ್ನೆ ನಾವು ಅನುಭವಿಸುವ ಕಷ್ಟ ಮತ್ತು ಸುಖಗಳಿಗೆ ನೇರವಾದ ಕಾರಣಗಳನ್ನು ಹೊಂದಿರುವುದೇನೂ ಕಷ್ಟವಲ್ಲ. ಒಬ್ಬ ವ್ಯಕ್ತಿಯು ಕುರುಡನೋ ಕುಂಟನೋ ಆಗಿದ್ದರೆ, ಸಂಭವಿಸುವ ಅಪಘಾತಗಳೇ ಕಾರಣ. ಹುಟ್ಟಿನಿಂದಲೇ ಈ ದೋಷಗಳಿದ್ದರೆ ಅದಕ್ಕೆ ಅನುವಂಶೀಯತೆ (heredity) ಕಾರಣ. ಇಲ್ಲಿ ಕೂಡ, ಕೆಲವೊಮ್ಮೆ ಆಕಸ್ಮಿಕಗಳಿಂದಾಗಿ ಹೆಚ್ಚು ಕಡಿಮೆಯಾಗುವ ಸಂಭವಗಳೂ ಉಂಟು. ವಿಜ್ಞಾನವು ಹೆಚ್ಚು ಹೆಚ್ಚು ಬೆಳೆದಂತೆ ಎಷ್ಟೋ ನಿಜವಾದ ಕಾರಣಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆ.

ನಮ್ಮ ಸಂಪ್ರದಾಯವಾದಿಗಳ ಒಂದು ದೃಢವಾದ ನಂಬಿಕೆಯೆಂದರೆ, ಹಿಂದಿನ ಜನ್ಮಗಳಲ್ಲಿ ಸಂಪಾದಿಸಿದ ಕೆಟ್ಟ ಕರ್ಮವು ವ್ಯಾಧಿಗಳಲ್ಲಿ ಪರಿಣಮಿಸುತ್ತದೆ. ("ಪೂರ್ವ ಜನ್ಮಾರ್ಜಿತಂ ಪಾಪಂ ವ್ಯಾಧಿರೂಪೇಣ ಜಾಯತೇ") ಆದರೆ, ವೈಜ್ಞಾನಿಕವಾಗಿ ರೋಗಗಳು ಹೇಗೆ ಉಂಟಾಗುತ್ತವೆ ಎಂದು ಇಂದು ಬಹಳ ಮಟ್ಟಿಗೆ ತಿಳಿಯಲು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ, ಹಿಂದೆ ವಾಸಿ ಮಾಡಲಾಗದ ಎಷ್ಟೋ ಕೆಟ್ಟ ಕಾಯಿಲೆಗಳನ್ನು ಇಂದು ಪೂರ್ಣವಾಗಿ ವಾಸಿಮಾ–

ಡಬಹುದು. ಹಾಗಿಲ್ಲದಿದ್ದರೆ, ಹಿಂದಿನ ಕಾಲದಲ್ಲಿ ತೀವ್ರವಾದ ಕಷ್ಟಗಳನ್ನು ಅನುಭವಿಸುತ್ತಿದ್ದ ಅಥವಾ ಅಕಾಲ ಮೃತ್ಯುವನ್ನೇ ಅಪ್ಪುತ್ತಿದ್ದ ರೋಗಿಗಳ ಪೂರ್ವಜನ್ಮ ಪಾಪಗಳು ಬಹಳ ತೀವ್ರವಾಗಿರುತ್ತಿದ್ದವು. ಆದರೆ ಇಂದಿನ ರೋಗಿಗಳು ಎಸಗಿದ್ದ ಪಾಪಗಳು ಅಷ್ಟು ತೀವ್ರವಲ್ಲವೆಂದು ಅರ್ಥವೆ?

ಒಬ್ಬ ವಾಚಕರ ಆಕ್ಷೇಪಣೆಯೇನೆಂದರೆ, ನನ್ನ ಲೇಖನದಲ್ಲಿ, "ವಿಚಾರಯುಕ್ತವೂ, ಸೃಜನಾತ್ಮಕವೂ ಹಾಗೂ ನಿತ್ಯ ಜೀವನದ ಮೌಲ್ಯಗಳನ್ನು ಬೆಳೆಸುವಂತಹ ಮಾನವೀಯ ಸಿದ್ಧಾಂತವನ್ನು ರೂಢಿಸಿಕೊಳ್ಳಬೇಕು. ಇಂತಹ ಮಾನವೀಯತಾ ಸಿದ್ಧಾಂತದಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಆಗಿಂದಾಗ್ಗೆ ಕಂಡುಹಿಡಿಯಲ್ಪಡುವ ವೈಜ್ಞಾನಿಕ ಸತ್ಯಗಳನ್ನು ಅಳವಡಿಸಿಕೊಳ್ಳುವ ಅವಕಾಶವಿರಬೇಕು" ಎಂದು ಸೂಚಿಸಿದಾಗ, ಅಂತಹ ಸಿದ್ಧಾಂತದ ಸ್ಥೂಲ ಪರಿಚಯವನ್ನು ಈ ಮೇಲೆ ಕೊಟ್ಟಿದ್ದೇನೆ. ಅಷ್ಟಕ್ಕೂ ಅದರ ಪೂರ್ಣ ವಿವರಗಳನ್ನೊಳಗೊಂಡ ಒಂದು ಸಂಹಿತೆಯನ್ನು ರಚಿಸುವ ಹೊಣೆಗಾರಿಕೆಯನ್ನು ನಾನೊಬ್ಬನೇ ಹೊತ್ತಿದ್ದೇನೆ, ಎಂದು ಹೇಳಿಕೊಂಡಿಲ್ಲವಷ್ಟೆ! ಇನ್ನೂ, ಅಡಿಗರ ಮಾತಿನಂತೆಯೇ "ತನ್ನ ಅನುಭವವನ್ನು ವ್ಯಕ್ತಪಡಿಸುವುದಕ್ಕೆ ಪ್ರತಿಯೊಬ್ಬ ಮನುಷ್ಯನಿಗೂ ಎಲ್ಲಾ ಹಕ್ಕುಗಳು ಕೂಡ ಇವೆ." ಅಂತಹ ಹಕ್ಕನ್ನು ನಮ್ಮಂತಹ 'ಅವಿಚಾರಿಗಳಿಂದ' ಕಸಿದುಕೊಳ್ಳುವುದಾದರೂ ಏತಕ್ಕೆ?

ಎಷ್ಟೋ ನಮ್ಮ ಕಷ್ಟ ಕಾರ್ಪಣ್ಯಗಳು ಮಾನವನಿರ್ಮಿತ. ಅವುಗಳನ್ನು ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಸರಿಪಡಿಸುವುದರಿಂದ ನಿವಾರಿಸಬಹುದು. ಅಂತಹ ಕಷ್ಟಗಳಿಗೆ ಪೂರ್ವಜನ್ಮದ ಪಾಪಕರ್ಮಗಳು ಕಾರಣವಲ್ಲ. ಸಾವಿರಾರು ವರ್ಷಗಳ ಹಿಂದಿದ್ದ ಅಲೆಮಾರುತನವನ್ನು ಬಿಟ್ಟು ನಮ್ಮ ಪೂರ್ವಿಕರು ನೆಲೆಸುವ ಜೀವನವನ್ನು ಪ್ರಾರಂಭಿಸಿದ ಮೇಲೆ ರಾಜಕೀಯ ಆಡಳಿತಶಾಹೀ ರಾಜ ಮಹಾರಾಜರುಗಳು ಅಂತೆಯೇ ಬೇರೆ ಬೇರೆ ಮತೀಯ ಧರ್ಮಾಧಿಕಾರಿಗಳ ಸ್ವಾರ್ಥ ದಬ್ಬಾಳಿಕೆಯಿಂದ ಸಾಮಾಜಿಕ ಮತ್ತು ಆರ್ಥಿಕ ಪದರುಗಳು ಏರ್ಪಟ್ಟು ಬಹುಸಂಖ್ಯಾತರು ಶೋಷಣೆಗೆ ಸಾವಿರಾರು ವರ್ಷಗಳಿಂದ ಒಳಗಾಗಿದ್ದಾರೆ ಎಂಬುದು ನಿರ್ವಿವಾದ. ಹೀಗೆ ಉಂಟಾಗಿರುವ ಬಹುಸಂಖ್ಯಾತರ ಬವಣೆಗಳಿಗೆ ಪೂರ್ವಕರ್ಮವು ಕಾರಣವೇ? ಪರದೇಶಗಳಲ್ಲಿ ಮಾರ್ಟಿನ್ ಲೂಥರ್, ವೋಲ್ಟೇರ್, ರುಸ್ಸೋ, ವಾಷಿಂಗ್ಟನ್, ಕಾರ್ಲ್ ಮಾರ್ಕ್ಸ್, ಲೆನಿನ್ ಮುಂತಾದ ವಿಚಾರಪರರ ಅಭಿಪ್ರಾಯಗಳು ಹಲವೆಡೆಗಳಲ್ಲಿ ಶೋಷಣೆ ಮಾಡುವವರ ಕುಲವನ್ನು ನಾಶಮಾಡಲು ಕಾರಣವಾಗಿವೆ. ಅಂದರೆ ವಿಮೋಚನೆಯನ್ನು ಹೊಂದಿದ ಶೋಷಿತರ ಪಾಪಕರ್ಮಗಳೆಲ್ಲ ದಿಢೀರ್ ಎಂದು ಕ್ಷೀಣಿಸಿದವೆ?

ಅಥವಾ, ಕರ್ಮಿಷ್ಠರು ತಮ್ಮ ಕರ್ಮಫಲಗಳನ್ನು ಅನುಭವಿಸಲು ಈ 'ಕರ್ಮಭೂಮಿಯಾದ ಪವಿತ್ರ ಭಾರತಲ್ಲೇ (ಸ್ವರ್ಗಾಪವರ್ಗಾಸ್ಪದ ಭೂಮಿಭಾಗೇ) ಜನ್ಮ ತಾಳುತ್ತಾರೆಂದು ನಮ್ಮ ಸಂಪ್ರದಾಯವಾದಿಗಳ ನಂಬಿಕೆಯೇನೋ! ಪುನರ್ಜನ್ಮದ ಬಗ್ಗೆ ವೈಜ್ಞಾನಿಕ ಶೋಧಗಳು ನಡೆದಿವೆ ಎಂಬುದು ಅರ್ಧಸತ್ಯ. ಅಂತಹ ಸಂಶೋಧನೆಗಳು ಹೆಚ್ಚಾಗಿ ವ್ಯಕ್ತಿನಿಷ್ಠವಾದುವುಗಳೇ ಹೊರತು ವಸ್ತುನಿಷ್ಠವಾಗಿರಲು ಸಾಧ್ಯವಿಲ್ಲ. ಆದ್ದರಿಂದ, ಆ ಸಂಶೋಧನೆಗಳ ಫಲಿತಾಂಶಗಳು ಪೂರ್ಣವಾಗಿ ಸತ್ಯವೆಂದು ತೆಗೆದುಕೊಳ್ಳಲಾಗುವುದಿಲ್ಲ. ಇನ್ನೂ, ರಾಜಸ್ಥಾನ ವಿಶ್ವವಿದ್ಯಾನಿಲಯದ ಅತಿಮಾನಸ ವಿಭಾಗದ ಪ್ರಾಧ್ಯಾಪಕರು ಪುನರ್ಜನ್ಮವನ್ನು ದೃಢೀಕರಿಸಲು ನಡೆಸಿದ 'ಸಂಶೋಧನೆ'ಗಳು ಪೂರ್ಣವಾಗಿ ಕಟ್ಟುಕತೆಗಳು ಎಂದು ಬಹಳ ಹಿಂದೆಯೇ ಸಾಬೀತಾಗಿದೆಯಷ್ಟೆ. (ಪರಮಹಂಸ ಯೋಗಾನಂದರ?) "ಯೋಗಿಯೊಬ್ಬನ ಆತ್ಮಕಥೆ" ಯಂಥ ಗ್ರಂಥಗಳನ್ನು ಓದಿ ಪುನರ್ಜನ್ಮವು ಸತ್ಯವೆಂದು ಮನವರಿಕೆ ಮಾಡಿಕೊಳ್ಳುವುದು, 'ಚಂದಮಾಮಾ' ಮಾಸಪತ್ರಿಕೆಯಲ್ಲಿ ಹಿಂದೆ

ಬರೆದಿದ್ದ 'ಧೂಮಕೇತು' ಎಂಬ ಧಾರಾವಾಹಿಯಿಂದ ವಿಜ್ಞಾನವನ್ನು ಕಲಿಯುವಷ್ಟೇ ಲಾಭಕರವಾದ ಪ್ರಯತ್ನ!

"ಕರ್ಮಸಿದ್ಧಾಂತವೂ ಪುನರ್ಜನ್ಮ ಸಿದ್ಧಾಂತ ಕಲ್ಪನೆಯೂ ವೈಜ್ಞಾನಿಕ ನೆಲೆಗಟ್ಟನ್ನು ಹೊಂದಿರುವುದರಿಂದಲೇ ಇಲ್ಲಿಯವರೆಗೂ ಅವುಗಳು ಉಳಿದು ಬಂದಿವೆ" ಎಂಬ ಸಮರ್ಥನೆಯೂ ಒಂದು ಟೊಳ್ಳು ವಾದ. ಹಾಗೆ ನೋಡಿದರೆ, ಗುಲಾಮಗಿರಿ ಪದ್ಧತಿ, ಪಶುಬಲಿ, ನರಬಲಿ, ಸತಿಬಲಿ, ಜಾತೀಯ (ವರ್ಣ) ವ್ಯವಸ್ಥೆ, ಅಸ್ಪೃಶ್ಯತೆ, ವಿಧವಾ ವಿವಾಹ-ನಿಷೇಧ ಮತ್ತು ಬಾಲ್ಯವಿವಾಹ ಪದ್ಧತಿಗಳು ಸಾವಿರಾರು ವರ್ಷಗಳಿಂದ ನಮ್ಮ ದೇಶವನ್ನು ಕಟ್ಟಿ ಹಾಕಿದಂತೆ ಆವರಿಸಿವೆ. ಅವುಗಳೆಲ್ಲಾ ವೈಜ್ಞಾನಿಕವೇ? ವೇದೋಪನಿಷತ್ತುಗಳಲ್ಲಿಯೂ ಮತ್ತು ಇತರ ಪ್ರಾಚೀನ ಗ್ರಂಥಗಳಲ್ಲೂ ಪ್ರತಿಪಾದಿಸಲ್ಪಟ್ಟಿವೆ ಎಂಬ ಕಾರಣದಿಂದಲೇ ಕರ್ಮಸಿದ್ಧಾಂತವನ್ನು ಒಪ್ಪಿಕೊಳ್ಳಬೇಕೆ? ಆಚಾರ್ಯಶ್ರೇಷ್ಠರಾದ ಆದಿ ಶಂಕರರ ಭಾಷ್ಯದಲ್ಲೇ ಹೇಳುವುದಾದರೆ, "ನಹಿ ಶ್ರುತಿಶತಮಪಿ ಶೀತೋಽಗ್ನಿಃ ಅಪ್ರಕಾಶೋವಾ ಇತಿ ಬ್ರುವತ್ ಪ್ರಾಮಾಣ್ಯಮುಪೈತಿ" (ನೂರು ಶ್ರುತಿಗಳು ಕೂಡ ಅಗ್ನಿಯು ತಂಪಾಗಿದೆ ಅಥವಾ ಬೆಳಕನ್ನು ಹೊಂದಿಲ್ಲವೆಂದು ಹೇಳಿದರೂ ಅವುಗಳು ಪ್ರಮಾಣವಲ್ಲ.)

ಇನ್ನು ಜ್ಯೋತಿಷದ ವಿಷಯ. ಇದು ಬರೆದಷ್ಟು ಮುಗಿಯದ ಕಥೆ! ಸೂರ್ಯನಿಂದ ಬೆಳಕು ಮತ್ತು ಶಾಖಗಳು ಬರುತ್ತವೆ ನಿಜ. ಅವುಗಳಿಂದ ಅನೇಕ ಭೌತಿಕ ರಾಸಾಯನಿಕ ಹಾಗೂ ಜೈವಿಕ ಕ್ರಿಯೆಗಳು ಉಂಟಾಗುವುದೂ ನಿಜ. ಇನ್ನು ಚಂದ್ರ ಮತ್ತು ಗ್ರಹಗಳನ್ನು ತೆಗೆದುಕೊಂಡರೆ, ನಮ್ಮ ಭೂಮಿಯು ಅವುಗಳ ಕೇವಲ ಭೌತಿಕವಾದ ಗುರುತ್ವಾಕರ್ಷಣೆಗೆ ಮಾತ್ರ ಒಳಗಾಗಿದೆ. ಅವುಗಳಿಂದ ಬರುವ ಬೆಳಕಾದರೋ, ಸೂರ್ಯನ ಬೆಳಕೇ ಪ್ರತಿಬಿಂಬಿತವಾಗಿ ನಮಗೆ ಸೇರುತ್ತದೆ; ಗುರುತ್ವಾಕರ್ಷಣೆಯೂ ಬಹಳ ಅಲ್ಪಮಟ್ಟದ್ದು. ಹೀಗಿರಬೇಕಾದರೆ, ಈ ಗ್ರಹಗಳು ನಮ್ಮ ವೈಯಕ್ತಿಕ ಘಟನೆಗಳಾದ ಮದುವೆ, ಹುಟ್ಟು ಮುಂತಾದವುಗಳನ್ನಾಗಲೀ ಅಥವಾ ವಿಧಾನಸಭೆ ಮತ್ತು ಲೋಕಸಭೆಗಳ ಚುನಾವಣೆಗಳ ಫಲಿತಾಂಶಗಳನ್ನಾಗಲಿ ಹೇಗೆ ತಾನೆ ನಿರ್ಧರಿಸಬಲ್ಲವು? ಇಲ್ಲಿ ಕಾರ್ಯ-ಕಾರಣ ಸಂಬಂಧದ ಪ್ರಶ್ನೆ ಬರುವುದಿಲ್ಲವೆ? ಇನ್ನು, "ಹಸ್ತಗಳಲ್ಲಿರುವ ಗೆರೆಗಳು ನಮ್ಮ ಭೂತ ಹಾಗೂ ಭವಿಷ್ಯತ್ತುಗಳನ್ನು ಸೂಚಿಸುತ್ತವೆಂದು ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ" ಎಂಬುದು ಸತ್ಯಕ್ಕೆ ಬಹಳ ದೂರವಾದ ಮಾತು. ಅಂತಹ ಯಾರಾದರೂ ವಿಜ್ಞಾನಿಗಳಿದ್ದರೆ, ಅವರಿಂದ ಖಂಡಿತವಾಗಿಯೂ ವಿಜ್ಞಾನಕ್ಕೆ ಬಹಳ ಅಪಚಾರವಾಗುತ್ತದೆ! "ಹಸ್ತಸಾಮುದ್ರಿಕವು ಪೋಲೀಸರ ನೆರವಿಗೆ ಬರುತ್ತದೆ" ಎಂಬುದು ವಾಚಕಮಿತ್ರರಲ್ಲಿ ಹಸ್ತ-ಸಾಮುದ್ರಿಕಕ್ಕೂ ಮತ್ತು ಬೆರಳು ಗುರುತುಗಳ ವಿಜ್ಞಾನಕ್ಕೂ ಉಂಟಾಗಿರುವ ಗೊಂದಲವನ್ನು ಸೂಚಿಸುತ್ತದೆ. ಪೋಲೀಸರು ಅಪರಾಧಿಗಳನ್ನು ಗುರುತಿಸಲು ಹಸ್ತರೇಖೆಗಳ ವ್ಯತ್ಯಾಸಗಳನ್ನು ಉಪಯೋಗಿಸಿಕೊಳ್ಳುತ್ತಾರೆಯೇ ಹೊರತು ಭವಿಷ್ಯ ಹೇಳಲು ಅಲ್ಲ!

"ಕೇತು - ರಾಹು ಸಂಧಿ ಮೊದಲಾದ ದುಷ್ಟ ಪರಿಣಾಮಗಳನ್ನು ನಿವಾರಿಸಲು ಶಾಂತಿ ಕರ್ಮಗಳನ್ನು ಶಾಸ್ತ್ರದಲ್ಲಿ ಹೇಳಿರುವುದರಿಂದ ಶಾಂತಿ ಕರ್ಮಗಳನ್ನು ಮಾಡಿದರೆ ಅವು ನಿವಾರಣೆಯಾಗುತ್ತದೆಂದು ಹೇಳುತ್ತೇವೆ" ಎಂಬುದು ಇನ್ನೊಬ್ಬ ವಾಚಕರ ಸಮರ್ಥನೆ. ನಮ್ಮ ಜನರ ಒಂದು ವೈಚಿತ್ರ್ಯವೆಂದರೆ, ವೇದೋಪನಿಷತ್ತುಗಳಲ್ಲಿ ಮತ್ತು ಶಾಸ್ತ್ರಗಳಲ್ಲಿ ಹೇಳಲ್ಪಟ್ಟ [illegible] ಮೂಢ ನಂಬಿಕೆಗಳನ್ನು ಬಹಳ ಗೌರವದಿಂದ ಒಪ್ಪಿಕೊಳ್ಳುತ್ತಾರೆ. ಅದೇ ವಿಜ್ಞಾನಸತ್ಯವನ್ನು ಪಠನ ಮಾಡಿ ಗೂಢವೂ ಗಹನವೂ ಆದ ನಿಯಮಗಳು ನಮ್ಮ ಶ್ರುತಿಸ್ಮೃತಿಗಳಲ್ಲೇ ಅಡಕವಾಗಿದ್ದರೂ ಅವುಗಳನ್ನು ಬಹಳ ಸುಲಭವಾಗಿ ಕೈಬಿಟ್ಟು ಬಿಡುತ್ತಾರೆ. ಮತ್ತೆ ನಮ್ಮ ಜನರ ಇಂತಹ


ಮೌಢ್ಯವನ್ನು ಕುರಿತೇ ತಾನೇ ಆದಿ ಶಂಕರರು ಬಹಳ ವ್ಯಥೆಯಿಂದ ಹೀಗೆಂದು ಉದ್ಗಾರ ತೆಗೆದದ್ದು–

"ಅಷ್ಟಮೀತಿ ನವಮೀತಿ ಚತುರ್ದ
ಶೀತಿ ಜ್ಯೋತಿಷ್ಕವಾಕ್ಯೋಪವಸಂತಿ ಭಕ್ತ್ಯಾ!
ಶ್ರುತೇಸ್ತ್ವಮೋಃ ತತ್ತ್ವಮಸೀತಿ ವಾಕ್ಯಂ ನ
ವಿಶ್ವಸಂತಿ ಅದ್ಭುತಮೇವ ದೇವ॥

(ಇಂದು ಅಷ್ಟಮೀ, ನವಮೀ, ಚತುರ್ದಶೀ ಎಂಬ ಜ್ಯೋತಿಷ್ಕರ ಮಾತಿನಂತೆ ಭಕ್ತಿಯಿಂದ ಉಪವಾಸ ಮಾಡುತ್ತಾರೆ. ಆದರೆ 'ತತ್ತ್ವಮಸಿ' ಎಂಬ ಶ್ರುತಿಯ ವಾಕ್ಯದಲ್ಲಿ ವಿಶ್ವಾಸವಿಲ್ಲ! ಇದಿರುವುದು ನಿಜಕ್ಕೂ ಆಶ್ಚರ್ಯವೇ ಸರಿ.)

ನನ್ನ ಲೇಖನದಲ್ಲಿ ಪಾಪಕರ್ಮಗಳಿಗೆ ಪ್ರಾಯಶ್ಚಿತ್ತಗಳನ್ನು ಧರ್ಮಗ್ರಂಥಗಳಲ್ಲಿ ಸೂಚಿಸಿರುವುದನ್ನೂ ಮತ್ತು ಶ್ರೀ ಮದ್ಭಗವದ್ಗೀತೆಯ "ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ಎಂಬ ವಾಕ್ಯವನ್ನೂ ಉಲ್ಲೇಖಿಸಿದ್ದೇನಷ್ಟೆ! ಆದರೆ ಧರ್ಮಗ್ರಂಥಗಳು ಹೀನ ಕೃತ್ಯಗಳನ್ನು ಮಾಡಲು ಪ್ರೋತ್ಸಾಹವನ್ನು ಕೊಟ್ಟಿದ್ದಾವೆಂದು ನನ್ನ ಅಭಿಪ್ರಾಯ ಪಟ್ಟಿದೆ. ಪ್ರಾಯಶ್ಚಿತ್ತವನ್ನು ಹೇಳಿದ ಮಾತ್ರಕ್ಕೆ ಪಾಪಗಳನ್ನು ಮಾಡಬೇಕೆಂದು ಅರ್ಥವಲ್ಲ ನಿಜ. ಆದರೆ, ಸುಲಭವಾದ ಭೋಗ-ಸುಖಗಳನ್ನೇ ಇಚ್ಛಿಸುವ ಜನರು ಹೇಗಿದ್ದರೂ ಪ್ರಾಯಶ್ಚಿತ್ತಗಳಿವೆಯಲ್ಲ ಅಂತಲೂ, ಕರುಣಾಮಯನಾದ ಭಗವಂತನು ಕ್ಷಮಿಸುತ್ತಾನೆಂದಲೂ ತಕ್ಷಣದ ಸುಖಗಳನ್ನು ಕೊಡುವ "ಪಾಪ ಕರ್ಮ"ಗಳನ್ನು ಎಸಗುವುದು ಆಶ್ಚರ್ಯವೇನಿಲ್ಲ. ಡಯಾಬಿಟಿಸ್ ಕಾಯಿಲೆಯಿರುವವರು ಹೇಗಿದ್ದರೂ ಇನ್ಸುಲಿನ್ ಇಂಜೆಕ್ಷನ್ ತೆಗೆದುಕೊಳ್ಳಬಹುದಲ್ಲ ಎಂದು ಹೆಚ್ಚಿನ ಸಿಹಿಯೂಟವನ್ನು ಮಾಡುವಂತೆ! ನಿತ್ಯ ಜೀವನದಲ್ಲಾದರೂ, ಕಾನೂನಿನಲ್ಲಿ ಇರಬಹುದಾದ ನ್ಯೂನತೆ(loopholcs)ಗಳನ್ನು ಮೊರೆಹೊಕ್ಕು ತಮ್ಮ ಸ್ವಾರ್ಥವನ್ನು ಸಾಧಿಸುವುದಿಲ್ಲವೆ? ಅದ್ದರಿಂದ "ಸಾಬೂನು ಇದೆಯೆಂ–ಟೆಂದು ಯಾರೂ ಕೊಳೆಯನ್ನು ಮೈಮೇಲೆ ಹಾಕಿ ಕೊಳ್ಳುವುದಿಲ್ಲ." ಎಂಬುದು ಬಹಳ ಮಟ್ಟಿಗೆ ನಿಜವಾದರೂ ಮೈಮೇಲೆ ಕೊಳೆಯನ್ನುಂಟು ಮಾಡಿಕೊಳ್ಳುವುದೇ ಕೆಲವರಿಗೆ ಕೆಲವು ಸಂದರ್ಭಗಳಲ್ಲಿ ಸಂತೋಷ ಕೊಡುವುದಾದ ಪಕ್ಷದಲ್ಲಿ ಮಂಗಗಳಂತೆ ಅಥವಾ ಸ್ವಾರ್ಥಸಾಧನೆಗೆ ಅನುಕೂಲವಾಗುವ ಪಕ್ಷದಲ್ಲಿ ಅಂತಹ ಒಂದು ಹೇಯ ಕಾರ್ಯದಲ್ಲಿ ನಿರತರಾಗುವುದು ಸ್ವಾಭಾವಿಕ–ಹೇಗಿದ್ದರೂ ಆಮೇಲೆ ತೊಳೆದುಕೊಳ್ಳಲು ನಿರ್ಮಲವಾದ ನೀರಿದೆಯಷ್ಟೆ!

ಕರ್ಮಸಿದ್ಧಾಂತವು ನಿಷ್ಕ್ರಿಯತೆಯನ್ನು ಬೋಧಿಸುವುದಿಲ್ಲವಾದರೂ ಜನಸಾಮಾನ್ಯರಲ್ಲಿ 'ದೈವವಾದ' (fatalism) ಬಹಳ




"ಗುರುಗಳು ನಿದ್ರಿಸುತ್ತಿದ್ದಾರೆಂದು ಹೇಳಬಾರದು ಕಣೋ- ಪ್ರಾಯೋಗಿಕವಾಗಿ ಮಾಡಿ ತೋರಿಸುತ್ತಿದ್ದಾರೆ. ಅಷ್ಟೆ."

## ಸಮರ್ಪಕ

‘ಕರ್ಮಸಿದ್ಧಾಂತ’ವನ್ನು ಕುರಿತು ಬರೆದವರು (ಶ್ರೀ ಎಸ್. ಬಾಲಚಂದ್ರರಾಯರು) ಅದರ ಮುಕ್ತಾಯವನ್ನು ಸಮರ್ಪಕವಾಗಿ ಮಾಡಿದ್ದಾರೆ ಕೊನೆಯ ಪರಿಚ್ಛೇದದಲ್ಲಿ ಅವರು ಬರುತ್ತಿದ್ದಾರೆ’ ಈ ಬಗೆಯ ಆಶಯದ ಪುಸ್ತಕಗಳು ಅಮೇರಿಕೆಯಲ್ಲಿ ಹೆಚ್ಚಾಗಿ ಪ್ರಕಟವಾಗುತ್ತವೆ. Carl Sagan ಎಂಬವನ ಗ್ರಂಥಗಳು ಅಲ್ಲಿ ‘ಮಾನ್ಯತೆ’ ಪಡೆವ ದಾರಿಯಲ್ಲಿವೆ. ಆದರೆ ನನಗೆ ಈ ವೈಚಾರಿಕ ಪದ್ಧತಿ ಸದೋಷವಾಗಿ ಕಾಣುತ್ತಿದೆ. ಜೀವನ-ಸಂಸ್ಕೃತಿಯ ಛಾಪೆಯಿಲ್ಲದೆ ಅರಿಕೆಗೆ ಬರಲಾರದು. ಆದರೆ ಈ ಸಂಶೋಧಕರು ರೇಡಿಯೋ ಸಿಗ್ನಲ್ಲುಗಳ ಮೂಲಕ, ಅವುಗಳ ಭಾಷೆ ಗೊತ್ತಾಗದೆ **ತರ್ಕಮಾತ್ರದಿಂದಲೇ** ಎಲ್ಲ ಗ್ರಹಿಸುವ ಈ ರೀತಿ ಎಷ್ಟರ ಮಟ್ಟಿಗೆ ಸಮರ್ಪಕವೋ ತಿಳಿಯದು !

**ಶಂ. ಬಾ. ಜೋಶಿ**

ಬೀರಲಿ, ಅವರು ಯಾವ ಸಕ್ರಿಯ ಹೋರಾಟದಲ್ಲೂ ಭಾಗಿಗಳಾಗದಿರುವುದು ನಮ್ಮ ನಿಜ ಜೀವನದಲ್ಲಿ ಕಾಣುವ ಕಠೋರ ಸತ್ಯ! ಇಂಥ ನಿಷ್ಕ್ರಿಯತೆಗೆ ಅನಕ್ಷರತೆ ಮತ್ತು ಬಡತನಗಳೇ ಕಾರಣವಲ್ಲ. ಧರ್ಮ ಮತ್ತು ಧಾರ್ಮಿಕ ನಂಬಿಕೆಗಳು ನಮ್ಮ ಜನರಲ್ಲಿ ಪುನರ್ಜನ್ಮ ಸಿದ್ಧಾಂತಗಳು ಅವರ ನಿತ್ಯ ಜೀವನದಲ್ಲಾಗಲಿ ದೇಶದ ಪ್ರಗತಿಯಲ್ಲಾಗಲಿ ಪರಿಣಾಮ ಮಾಡಿಲ್ಲ. ಅದ್ದರಿಂದಲೇ ಜಪಾನಿಗಳು ನಮ್ಮ ನಿರುತ್ಸಾಹೀ ನಿರಾಶಾವಾದಿಗಳಲ್ಲ.

“ಮುಂದಿನ ಜನ್ಮದಲ್ಲಿ ದೊರೆಯಬಹುದಾದ ‘ಶಿಕ್ಷೆ’ಗೆ ಹೇತುವಾದ ಪಾಪಕರ್ಮದ- ಅರಿವು ಆ ಜನ್ಮದಲ್ಲಿ ಉಂಟಾಗುವುದೇ ಇಲ್ಲ. ಒಂದು ಶಿಕ್ಷೆಯು ಪರಿಣಾಮಕಾರಿಯಾಗಬೇಕಾದರೆ ಆ ಶಿಕ್ಷೆಗೆ ಕಾರಣವಾದ ಅಪರಾಧದ ಪರಿಚಯವೂ ಅಪರಾಧಿಗೆ ಇರಬೇಕಾದದ್ದು ಅವಶ್ಯಕ” ಎಂಬ ನನ್ನ ಮುಖ್ಯವಾದ ಸಮರ್ಥನೆಗೆ ವಾಚಕ ಮಿತ್ರರು ಯಾರೂ ತಮ್ಮ ಪ್ರತಿಕ್ರಿಯೆಯನ್ನು ತೋರಿಸದೇ ಇರುವುದು ಬಹಳ ಆಶ್ಚರ್ಯ ! ನನ್ನ ಗೌರವಾನ್ವಿತ ವೈಚಾರಿಕ ಮಿತ್ರರಾದ ಕುಂದಾಪುರದ ಕೋಟ ಶಿವರಾಮ ಕಾರಂತರ ಮಾತುಗಳಲ್ಲಿ ಹೇಳಬೇಕಾಗಿದ್ದರೆ, “ಮಾಡಿದ ಪಾಪದ ಪ್ರಜ್ಞೆ ಕೊಡದೆ ಯಾರೊಬ್ಬನಿಗೂ ಸೈತಾನನೂ ಕೂಡ ಶಿಕ್ಷೆ ಕೊಡನು.” ಇನ್ನು, ಆ ಕರುಣಾಳುವಾದ ಜಗನ್ನಿಯಾಮಕ ಭಗವಂತನ ಬಗ್ಗೆ ಏನು ಹೇಳೋಣ?

ವ್ಯಕ್ತಿಯಾದ ಭಗವಂತನ (ಅಥವಾ ಉತ್ತಮವಾದ ತತ್ತ್ವದ) ನೇತೃತ್ವದಲ್ಲಿರುವ ನ್ಯಾಯ ನೀತಿ ನಿಷ್ಠವಾದ ಪ್ರಪಂಚ ಮತ್ತು ಕಾರ್ಯ-ಕಾರಣ ಸಂಬಂಧಗಳ ನಂಬಿಕೆಗಳನ್ನು ಆಧರಿಸಿದ ಪುನರ್ಜನ್ಮ- ಕರ್ಮಸಿದ್ಧಾಂತವು ಒಂದು ತಾತ್ತ್ವಿಕವಾಗಿ ಅವಶ್ಯಕವಾದ ಜಾಣ ಉಪಾಯವೇ ಹೊರತು ಈ ಸಿದ್ಧಾಂತವನ್ನು ತಥ್ಯವೆಂದು ಒಪ್ಪಿಕೊಳ್ಳಬೇಕಾಗಿಲ್ಲ ಎಂಬುದು ನನ್ನ ಲೇಖನದ ಅಭಿಪ್ರಾಯ. ಇಷ್ಟಕ್ಕೂ ವೈಜ್ಞಾನಿಕವಾಗಿ ಮುಂದೆ ಯಾರಾದರೂ ಕರ್ಮಸಿದ್ಧಾಂತವನ್ನು ಸಾಬೀತುಪಡಿಸಿದಲ್ಲಿ ನನಗೇನೂ ನಿರಾಶೆಯಾಗುವುದಿಲ್ಲವೆಂದು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ! ✡

**‘ಕರ್ಮಸಿದ್ಧಾಂತ’ ಕುರಿತ ವಿಚಾರ ವೇದಿಕೆಯನ್ನು ಮೂಲ ಲೇಖಕರ ಉತ್ತರದೊಂದಿಗೆ ಸಮಾರೋಪಗೊಳಿಸುತ್ತಿದ್ದೇವೆ. ಆದರೆ ಇನ್ನೂ ಹಲವಾರು ಪ್ರಾಜ್ಞ ಓದುಗರು ಈ ವಿಷಯದಲ್ಲಿ ತಂತಮ್ಮ ಅಭಿಪ್ರಾಯಗಳನ್ನು ಕಳಿಸಿರುವರಾದರೂ ಅವುಗಳನ್ನು ಪ್ರಕಟಿಸಲು ಸಾಧ್ಯವಾಗದಿರುವುದಕ್ಕಾಗಿ ವಿಷಾದಿಸುತ್ತೇವೆ.**

**ಸಂಪಾದಕ**

# ಅಗಸ್ತ್ಯರ ಸಮುದ್ರಪಾನ ಸಾಂಕೇತಿಕವೆ?!


**ಅಮೃತರಾವ್ ಪಾಟೀಲ**

ಋಗ್ವೇದ ಕಾಲದಲ್ಲಿ ಏಶಿಯಾ ಖಂಡದ ವಾಯವ್ಯ ಭಾಗದಲ್ಲಿ ಬಾಲ್ಯ ಮತ್ತು ಕೇಶೀ ಸಮುದ್ರವು (Black cum Caspian) ಅತಿ ದೊಡ್ಡ ಸಾಗರವಾಗಿತ್ತು. ಅದಕ್ಕೆ ಸರಸ್ವತಿ, ವಸ್ವನಾ (Oxus), ಓಗಣಸ (ರಶಿಯಾದ Volga) ನಿಷ್ಟಷೀ (ರಶಿಯಾದ Dnieper), ನಿಷ್ಟ್ಯ (Dniester), ಓಣ ರಶಿಯಾದ (Don), ದಾನವ ದಕ್ಷಿಣ ಯುರೋಪದ (Danube) ಮುಂತಾದ ಏಶಿಯಾ ಹಾಗೂ ಯುರೋಪಿನ ಪ್ರಖ್ಯಾತ ನದಿಗಳು ಕೂಡುತ್ತಿದ್ದವು. ಈ ನದಿಗಳಲ್ಲದೆ ಯುರೋಪ್ ಏಶಿಯಾ ಖಂಡಗಳ ಅನೇಕ ನದಿಗಳ ಮತ್ತು ಪ್ರದೇಶದ ಹೆಸರುಗಳು ಋಗ್ವೇದದಲ್ಲಿ ಬರುತ್ತವೆ. ಈ ನದಿಗಳ ಹೆಸರುಗಳು ಪ್ರದೇಶದ ಹೆಸರುಗಳನ್ನು ಅನೇಕ ಋಗ್ವೇದ ಪಂಡಿತರು ಅರ್ಥ ಮಾಡಿಕೊಂಡಿಲ್ಲವೆಂಬುದು ದುರ್ದೈವದ ಮಾತು. ನಮ್ಮ ಋಗ್ವೇದ ಪೂರ್ವಜರು ಯುರೇಶಿಯಾದ ಅನೇಕ ಭಾಗಗಳಲ್ಲಿ ಇತಿಹಾಸಪೂರ್ವ ಕಾಲದಲ್ಲಿ ವಾಸವಾಗಿದ್ದರೆಂದು ಋಗ್ವೇದದಲ್ಲಿ ಪ್ರತ್ಯಕ್ಷವಾಗಿ ಉಲ್ಲೇಖವಾಗಿದೆ. ನಮ್ಮ ಋಗ್ವೇದ ಪಂಡಿತರ ದೋಷಪೂರಿತ ಅಥವಾ ಸಂಕುಚಿತ ದೃಷ್ಟಿಯಿಂದ ಅಥವಾ ಭಾವನೆಗಳಿಂದ ಋಗ್ವೇದ ಸಂಶೋಧನೆ ಅಥವಾ ಅರ್ಥ ಮಾಡಿಕೊಂಡಿದ್ದರಿಂದ ಅವರಿಗೆ ಈ ಐತಿಹಾಸಿಕ ಸತ್ಯವು ಕಂಡುಬಂದಿಲ್ಲ. ಯುರೇಶಿಯಾದ ಬಾಲ್ಯ (Black Sea) ಸಮುದ್ರವನ್ನು ವಿಸ್ತಾರ ಮಾಡಿದವರೂ ನಮ್ಮ ಋಗ್ವೇದ ಪೂರ್ವಜರು.

ಈಗಿನ ಕಪ್ಪು ಸಮುದ್ರದ ಈಶಾನ್ಯ ಭಾಗಕ್ಕೆ ಇರುವ ಪರ್ವತಕ್ಕೆ ಈಗ್ಗೆ ಊರಲ್ ಪರ್ವತ ಮತ್ತು ಅದರ ಹತ್ತಿರದ ಪ್ರದೇಶವು ಋಗ್ವೇದದಲ್ಲಿ ಉರ್ವಶೀ ಎಂದು ಕರೆಯಲ್ಪಟ್ಟಿದೆ. ಒಮ್ಮೆ ಋಗ್ವೇದ ಕಾಲದ ಪುರೂರವನೆಂಬ ರಾಜನು, ಇದನ್ನು ವಶ ಮಾಡಿಕೊಂಡಿದ್ದನು. ಇವನು ಮಂಗೋಲಿದ 'ಇಳಾ' ದೇಶದವನು. ಇವನಿಗೆ 'ಐಲ' ಎಂಬ ಹೆಸರಿದೆ. ಆದರೆ ಅಲ್ಲಿಯ ಅನಾರ್ಯರು ಈ ಉರ್ವಶೀ ಪ್ರದೇಶವನ್ನು ಈ ಪುರೂರವ ರಾಜನಿಂದ ಪುನಃ ಗೆದ್ದುಕೊಂಡರು. ಅಗ್ನಿ

ಪುರೂರವ ರಾಜನು ನಿರಾಶನಾಗಿ ಉರ್ವಶೀ ದೇಶವನ್ನು ಉದ್ದೇಶಿಸಿ, ತನ್ನ ವಶಕ್ಕೆ ಬರಲು ಬೇಡಿಕೊಂಡನು. ಆಗ್ಗ ಉರ್ವಶಿಯು ಪುರೂರವ ರಾಜನಿಗೆ ತನ್ನ ಸೈನ್ಯ ಶಕ್ತಿಯಿಂದ ಕೂಡಿಕೊಂಡು ಬಂದು ಗೆದ್ದುಕೊಳ್ಳಲು ಬೋಧಿಸಿದಳು. ಈ ಉರ್ವಶೀ ಪುರೂರವರ ಸಂಭಾಷಣೆಯೇ ಮುಂದಿನ ಸಾಹಿತ್ಯದಲ್ಲಿ ಕಥೆಯ ರೂಪ ತಾಳಿದ ಮೇಲೆ, ಕಾಳಿದಾಸನು ಅದನ್ನು ಮೂಲವಾಗಿಟ್ಟುಕೊಂಡು ವಿಕ್ರಮೋರ್ವಶೀಯ ನಾಟಕವನ್ನು ರಚಿಸಿದ್ದಾನೆ. ನದಿಯನ್ನಾಗಲೀ, ಪರ್ವತವನ್ನಾಗಲಿ, ದೇಶವನ್ನಾಗಲೀ, ಬೇರೆ ಬೇರೆ ರೂಪಕಗಳನ್ನಾಗಲೀ ಮುಂದಿಟ್ಟುಕೊಂಡು ಭಾಷಣ ಮಾಡುವುದನ್ನು ಋಗ್ವೇದದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಕಾಣಬಹುದು. ಕಾಳಿದಾಸನೂ ಆಕಾಶದಲ್ಲಿಯ ಮೇಘವನ್ನು ಉದ್ದೇಶಿಸಿ ಮೇಘದೂತವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ.

ಅಗಸ್ತ್ಯ ಮತ್ತು ವಸಿಷ್ಠ ಋಷಿಗಳು ಋಗ್ವೇದದ ಪ್ರಖ್ಯಾತ ವೇದ ದ್ರಷ್ಟಾರರು. ಈ ಗೋತ್ರದಲ್ಲಿಯ ಋಷಿಗಳು ಅನೇಕ ಶತಮಾನಗಳ ವರೆಗೆ ತಮ್ಮ ಮೂಲ ಋಷಿಗಳಾದ ಅಗಸ್ತ್ಯ – ವಸಿಷ್ಠರ ಹೆಸರುಗಳಿಂದಲೇ ಕರೆದುಕೊಂಡಿದ್ದಾರೆ. ಈ ಗೋತ್ರದ ವಶಿಷ್ಠ ಮತ್ತು ಅಗಸ್ತ್ಯಗಳು ಉರ್ವಶೀ ಪ್ರದೇಶದ ಸುಂದರ ರೂಪದಿಂದ ಮೋಹಗೊಂಡು ಮಿತ್ರಾ–ವರುಣಾ ದೇವರ ರೇತಸ್ಸಿನಿಂದ ಹುಟ್ಟಿದ ಮಾನಸಪುತ್ರರೆಂದು ಪುರಾಣ ರೂಪದಲ್ಲಿ ಋಗ್ವೇದದಲ್ಲಿ ವರ್ಣಿಸಲಾಗಿದೆ. (ಋ. ಸಂ. VII-33-11) ಇದರಿಂದ ಈ ಋಷಿಗಳು ಉರ್ವಶೀ ಪ್ರದೇಶದಲ್ಲಿ ಪೂರ್ವಭಾಗದಿಂದ ಬಂದವರೆಂದು ತಿಳಿದುಕೊಳ್ಳಬೇಕು. ಇವರು ಪುರೂರವ ಪುತ್ರರಲ್ಲ. ಪುರೂರವನು ತಾನು 'ವಶಿಷ್ಠ' ನೆಂದು ಋಗ್ವೇದದಲ್ಲಿ ಹೇಳಿಕೊಂಡಿದ್ದಾನೆ. ಇವರಿಗೆ 'ಕುಂಭ'ದಲ್ಲಿ ಸಂಚಿತವಾದ (ಮಿತ್ರಾ–ವರುಣಾ) ರೇತಸ್ಸಿನಿಂದ ಹುಟ್ಟಿದವರೆಂದು ಋಗ್ವೇದದಲ್ಲಿ ಹೇಳಲಾಗಿದೆ. ಋಗ್ವೇದದಲ್ಲಿ ಕಂಡುಬರುವ ಕುಂಭ, ಕುರು, ಕುತ್ಸ, ಕುಶ, ಕೂಪ ಮೊದಲಾದ ಹೆಸರುಗಳು ಉರ್ವಶೀ ಪ್ರದೇಶದಲ್ಲಿದ್ದ ಭಾಗಗಳ ಹೆಸರುಗಳು.



ಮಹಾಭಾರತದಲ್ಲಿ ವರ್ಣಿಸಲಾಗಿದ್ದ ಉತ್ತರ ಕುರುದೇಶ ಉರಾದ ಪರ್ವತದ ಪೂರ್ವ ಭಾಗವಾಗಿತ್ತು. ಅಲ್ಲಿ ವರ್ಣಿತವಾದ 'ತಪತೀ' ಎಂಬ ಶಬ್ದ ಅಥವಾ ಹೆಸರು ಈ ಪರ್ವತದ ಪೂರ್ವಭಾಗದಲ್ಲಿರುವ 'ತೋಬಲ್' ನದಿಯ ಮೂಲ ಹೆಸರು. ಕುರುಕುಲದ ಸಂವರಣನೆಂಬ ರಾಜನು ಈ ತಪತೀ ಅಥವಾ ತೋಬಲ್ ದೇಶದ ರಾಜನು. ಈ ಭಾಗದಲ್ಲಿ ಉತ್ಖನನದ ಅವಶೇಷಗಳು ಕಂಡಿವೆ.

ಉರ್ವಶೀ ಪ್ರದೇಶದಲ್ಲಿದ್ದ ಅಗಸ್ತ್ಯ ಋಷಿಗಳನ್ನು 'ಮಾನ' ಎಂದು ವರ್ಣಿಸಲಾಗಿದೆ. ಋಗ್ವೇದದಲ್ಲಿ ಇವರನ್ನು ಮಾನಸಃ (ಋ. ೧-೧೭೧-೫, ೧-೧೮೨-೮) ಎಂದೂ, ಮಾನ್ಯ (ಋ ಸಂ. ೧-೧೭೭-೫, ೧-೧೮೪-೪) ಮಾನ ಎಂದೂ (ಋ, ಸ. ೧-೧೮೯-೮) ಮುಂತಾದ ಶಬ್ದಗಳಿಂದ ಕರೆಯಲಾಗಿದೆ. ಈ ಅಗಸ್ತ್ಯ ಋಷಿಗಳು ಮನು ದೇಶದ ಭಾಗದವರಾಗಿದ್ದರಿಂದ ಮತ್ತು ಅಲ್ಲಿದ್ದ ಮನು ಋಷಿಯ ವಂಶದವರಾಗಿದ್ದರಿಂದ ಹಾಗೆ ಕರೆಯಲಾಗಿದೆ. ಮನು ದೇಶವು ಈಗಿನ ಚೀನ ದೇಶದ ಭಾಗವಾಗಿದ್ದ ಮಂಗೋಲಿಯಾ ದೇಶದ ಪೂರ್ವ ಭಾಗದಲ್ಲಿರುವ ಸರಸ್ವತಿ (ಅಂದಿನ) ಈಗಿನ ಜಕ್ಸಾರ್ಟಿಸ್ ಅಥವಾ ಸಾರ (Sar Syr) ನದಿಯ ಪೂರ್ವೋತ್ತರ ಭಾಗದಲ್ಲಿತ್ತು. ಕೆಲವು ಋಗ್ವೇದ ಪಂಡಿತರು ಸರಸ್ವತೀ ನದಿಯನ್ನು ಈಗಿನ ಭಾರತದಲ್ಲಿಯ ಒಂದು ಸಣ್ಣ ನದಿಯಾದ (Sasut- ಸಸೂತ) ಎಂದೂ ಈ ನದಿಯು ರಾಜಸ್ಥಾನದ ಮರುಭೂಮಿಯಲ್ಲಿ ಅಡಗಿಹೋಗಿದೆ ಎಂದೂ ಹೇಳುತ್ತಾರೆ. ಇದು ಸಿಂಧೂ ನದಿಯೆಂದೂ ಕೆಲವರು ಹೇಳುತ್ತಾರೆ. ಈ ಹೇಳಿಕೆಗೆ ಏನೂ



ಅರ್ಥವಿಲ್ಲ. ಸರಸ್ವತೀ ನದಿಯು ಸಮುದ್ರದಂತೆ ವಿಶಾಲವಾಗಿತ್ತೆಂದು ಋಗ್ವೇದದಲ್ಲಿ ವರ್ಣನೆ ಇದೆ. ಇಂಥ ವಿಶಾಲವಾದ ಸರಸ್ವತೀ ನದಿಯು ಮರು ಭೂಮಿಯಲ್ಲಿ ಒಣಗಿ ಹೋಗಿದೆ ಎಂದರೆ ನಂಬದಂತಹ ಮಾತು. ಸಿಂಧೂ ಮತ್ತು ಸರಸ್ವತೀ ನದಿಗಳು ಋಗ್ವೇದದಲ್ಲಿ ಬೇರೆ ಬೇರೆಯಾಗಿ ವರ್ಣಿಸಲ್ಪಟ್ಟಿವೆ. ಈಗ್ಗೆ ಜಕ್ಸಾರ್ಟಿಸ್ ನದಿಯು ಕೂಡುವ ಅರಾಲ (Aral) ಸರೋವರವು (ಸೈಬೀರಿಯಾದಲ್ಲಿ ಇರುವಂಥದು) ಮಹಾಭಾರತದಲ್ಲಿ ವರ್ಣಿಸಿದ ಅರುಣತೀರ್ಥವು ಎಂದೂ, ಅದೂ ಸರಸ್ವತೀ ನದಿಯ ಪೂರ್ವದ ಒಂದು ಭಾಗವೆಂದೂ ಹೇಳಬಹುದು. ಚೀನದ ಈಗಿನ ಮಂಗೋಲಿಯಾ ದೇಶವು (ಮನು + ಗೋಬಿ ಅಥವಾ ಗೋ ಅಥವಾ ಭುಜವೆಂದು) ಮಂಚೂರಿಯಾ ದೇಶವು (ಮನು + ರೂರಿ ವೆಂದೂ), ಕೋರಿಯಾ ಸಾಗರವು (ಗೋ ಅರ್ಣವ ವೆಂದೂ), ಮತ್ತು ಚೀನದ ಹಳದೀ (Yellow or Po) ನದಿಯು ಪೂರುಷವೆಂದೂ ಆ ದೇಶಗಳು ಸಹ ಋಗ್ವೇದ ಕಾಲದ ಆರ್ಯರ ನಿಬಿಡಗಳಾಗಿದ್ದವು ಎಂದು ಹೇಳಬಹುದು.

ಅಗಸ್ತ್ಯ ಋಷಿಗಳು ಮತ್ತು ಅವರ ಸಹಚರರು ಅಥವಾ ಅನುಯಾಯಿಗಳು ಮಾನುಷರೆಂದು ಕರೆಯಲ್ಪಟ್ಟವರಾಗಿ ಮನು ಭಾಗದಿಂದಲೇ ಉರಾಲ ಭಾಗಕ್ಕೆ ಹೋಗಿದ್ದರು. ಋಗ್ವೇದದಲ್ಲಿ ಪುರುವಂಶದ ಪೂರ್ವ ರಾಜನಾದ ಮಾಂಧಾತನ ಹೆಸರು ಬರುತ್ತದೆ. ಮಹಾಭಾರತದಲ್ಲಿ ಈ ರಾಜನು ಯುವನಾಶ್ವನೆಂಬ ರಾಜನ ತೊಡೆಯಿಂದ ಹುಟ್ಟಿದವನೆಂದು ಹೇಳಲಾಗಿದೆ. ಈ ಶಬ್ದದ ವ್ಯುತ್ಪತ್ತಿಯನ್ನು ಇಂದ್ರದೇವನು "ಮಾಮ್‌ಧಾಸ್ಯತಿ" ಎಂದು ಹೇಳಿದ್ದಾನೆಂದು ವರ್ಣಿಸಲಾಗಿದೆ. ಆದರೆ ಈ ರಾಜನ ಹೆಸರು ಮನು – ಧಾರಕ ಅಥವಾ ಮನು–ಧಾತೃ ಶಬ್ದಕ್ಕೆ ಸಂಬಂಧವಾದುದೆಂದು ಹೇಳಬಹುದು. ಈ ಮಾಂಧಾತ ರಾಜರುಗಳ ನಂತರ ಆಗಿ ಹೋದ ಪುರುಕುತ್ಸ ರಾಜರಾಗಲೀ ತ್ರಸದಸ್ಯು ರಾಜರುಗಳಾಗಲೀ ತಾವು 'ಮನು'ಗಳೆಂದೇ ಕರೆದುಕೊಂಡಿದ್ದಾರೆ.

ಅಗಸ್ತ್ಯ ಋಷಿಗಳು, ವಶಿಷ್ಠ ಋಷಿಗಳು, ಗೌತಮ ಅಥವಾ ಕಣ್ವ ಋಷಿಗಳು ರಶಿಯಾದ ಉರಾಲ ಭಾಗಕ್ಕೆ ಬಂದಾಗ, ಈ ಪರ್ವತದ ಪಶ್ಚಿಮ ಭಾಗದಲ್ಲಿ ರಶಿಯಾದ ಮಧ್ಯದಲ್ಲಿ 'ಮಾಂಕ್ಷತ್ವ' ಎಂಬ ಉಪಸಾಗರವಿತ್ತು. ಅದು ಪೋಲಂಡಿನ ಭಾಗಗಳಲ್ಲಿಯೂ ವಿಸ್ತರಿಸಿತ್ತು. ಈ ಋಗ್ವೇದದ ಆರ್ಯರು ಈ ಸಮುದ್ರದ ನೀರನ್ನು ಅದಕ್ಕೆ ಕಾಲುವೆಗಳನ್ನು ಮಾಡಿ ಬೇರೆ ಬೇರೆ ನದಿಗಳಿಗೆ ಜೋಡಿಸಿ, ರಶಿಯಾದ ಪಶ್ಚಿಮೋತ್ತರಕ್ಕೆ ಇರುವ ಬಾಲ್ಟಿಕ್ ಸಮುದ್ರಕ್ಕೆ ಮತ್ತು ಪೂರ್ವ – ದಕ್ಷಿಣಕ್ಕಿರುವ ಕಪ್ಪು ಸಮುದ್ರಗಳಿಗೆ ಹೊರಳಿಸಿದರು. ಈ ಉಪಸಾಗರದ ಉತ್ತರ ಭಾಗವನ್ನು ನಿ–ಬಾಳ್ಟು ಎಂದು ಕರೆಯುಲಾಗಿದ್ದು ಬಾಲ್ಟಿಕ್ ಶಬ್ದವು ಈ ಶಬ್ದದಿಂದ ವ್ಯುತ್ಪತ್ತಿಯಾಗಿದೆಂದು ಹೇಳಬಹುದು. ಇನ್ನು ಕೊಳಚೆಯಾದ ರಶಿಯಾದ ಭಾಗಕ್ಕೆ ಪ್ರಿಪೆಟ್ ಮಾರ್ಶಿಸ್ ಎಂಬ ಹೆಸರಿದೆ. ಸಮುದ್ರದಿಂದ ಹೊರಗೆ ಬಂದ ಪ್ರದೇಶಗಳನ್ನು ಋಗ್ವೇದ ಆರ್ಯರು ಸುಧಾರಿಸಿ, ಅಭಿವೃದ್ಧಿಗೊಳಿಸಿ ಸಮೃದ್ಧವನ್ನಾಗಿ ಮಾಡಿದರು. ಅಗಸ್ತ್ಯ ಋಷಿಗಳು ಇದರಲ್ಲಿ ಪಾಲುಗೊಂಡಿದ್ದರಿಂದ ಈ ವಿದ್ಯೆಯ ಪರಮ ಅನುಭವಿಗಳಾಗಿದ್ದರು.

ಈ ಭಾಗಗಳಲ್ಲಿ ವೈದಿಕ ಜನಾಂಗವು ಬೆಳೆದುದರಿಂದಾಗಲೀ ಅಥವಾ ಅಲ್ಲಿಯ ಜನಾಂಗಗಳ ಕಿರಿಕಿರಿಯಿಂದಾಗಲೀ, ಋಗ್ವೇದದ ಕೆಲ ಆರ್ಯರು ಈ ಭಾಗಗಳಿಂದ ರಶಿಯಾದ ಪೂರ್ವಕ್ಕೆ ಇರುವ ಜರ್ಮನಿ, ಪೋಲಂಡುಗಳಿಗೆ ವಲಸೆ ಹೋದರು. ಮತ್ತೆ ಕೆಲವು ಆರ್ಯರು ದಕ್ಷಿಣಕ್ಕಿರುವ ಕಾರ್ಪಥಿಯನ್ ಪರ್ವತದ ಕಡೆಗೆ (ಈ ಪರ್ವತವು ಋಗ್ವೇದದಲ್ಲಿ ಕೃಪೀತ, ಕೃಪ, ಪೃಥ ಇತ್ಯಾದಿ ಶಬ್ದಗಳಿಂದ ಕರೆಯಲಾಗಿದೆ.) ಆದರೆ ನೆರೆಹೊರೆಯ ದೇಶಗಳಾದ ರುಮಾನಿಯ (ಋಗ್ವೇದ ರುಮದೇಶ), ಝೆಕೋಸ್ಲೋವಾಕಿಯಾ (ಋಗ್ವೇದದ ಚಪ್ಪ ಅಥವಾ ಸಕ್ತದೇಶ), ಹಂಗೇರಿಯಾ (ಮನಋಂಗ) ಮೊದಲಾದ ಭಾಗಗಳಿಗೆ ತೆರಳಿದರು. ಇಲ್ಲಿ ಇವರು ಡ್ಯಾನ್ಯೂಬ್

(ದಾನವ) ನದಿಯ ಉತ್ತರಕ್ಕೇ ಉಳಿದರು. ದಾನವ ನದಿಯು ಕಪ್ಪು ಸಮುದ್ರಕ್ಕೆ ಸಂಗಮವಾಗುವ ಭಾಗದಲ್ಲಿ ಬಹಳ ವಿಶಾಲವೂ ಆಳವೂ ಇತ್ತು. ಕಪ್ಪು ಸಮುದ್ರವು ಕ್ಯಾಸ್ಪಿಯನ್ ಸಮುದ್ರವು ಕೂಡಿದ್ದು ಇವುಗಳ ಒತ್ತಡವು ದಾನವ ನದಿಯ ಮೇಲೆ ಬಹಳವಾಗಿತ್ತು. ಈ ಸಮುದ್ರಗಳು ಈ ನದಿಗಿಂತ ಉತ್ತರ ಭಾಗದಲ್ಲಿ ಇದ್ದುದರಿಂದ, ಸಮುದ್ರದ ನೀರೇ ಈ ನದಿಯ ಬಹು ಭಾಗದ ವರೆಗೆ ಹೋಗುತ್ತಿತ್ತು. ಆದ್ದರಿಂದ ಈ ಭಾಗಗಳಲ್ಲಿಯ ನದಿಯ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ಹೋಗುವುದು ಯಾರಿಗೂ ಸಾಧ್ಯವಿದ್ದಿಲ್ಲ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಿಂದ ವೈದಿಕ ಆರ್ಯರಿಗೆ ರಾಜರಿಗೆ ಮತ್ತು ಋಷಿಗಳಿಗೆ ಮುಂದೆ ಹಬ್ಬಲು ಮಾರ್ಗವೇ ಉಳಿದಿರಲಿಲ್ಲ. ಆದ್ದರಿಂದ ವೈದಿಕ ಆರ್ಯರು ಈ ದಾನವ ನದಿಯನ್ನು ಅವರ ಉಗಮ ಸ್ಥಾನ ಅಥವಾ ಸಮುದ್ರದಿಂದ ಸಾವಿರಾರು ಮೈಲು ಹಿಂದಿನ ಭಾಗದ ಜರ್ಮನಿಯ ಬವೇರಿಯಾ ಭಾಗಕ್ಕೆ ಹೋಗಿ ಅಲ್ಲಿಂದ ಈ ನದಿಯನ್ನು ದಾಟಿದರು. ಈ ಭಾಗದ ಪ್ರದೇಶಗಳ ಹೆಸರುಗಳು ಋಗ್ವೇದದಲ್ಲಿ ಕಂಡು ಬರುತ್ತವೆ.

ಹೀಗೆ ಈ ನದಿಯನ್ನು ದಾಟಿ ದಾನವ ನದಿಯ ದಕ್ಷಿಣ ಭಾಗಕ್ಕೆ ವೈದಿಕ ಆರ್ಯರು ಸಾಗಿದರು. ಮನುಋಷಿಯ ಶಿಷ್ಯನಾದ ತ್ರಸದಸ್ಯು ರಾಜನು ಆಸ್ಟ್ರಿಯಾ ಭಾಗದಲ್ಲಿ ಮುಂದೆ ಸಾಗಿ ದಾನವ ನದಿಯನ್ನು ದಾಟಿ, ಆಸ್ಟ್ರಿಯ ಇಟಲಿಯ ಭಾಗಗಳಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿದನು. ಋಗ್ವೇದದಲ್ಲಿ ಇವನೇ ಇಕ್ಷ್ವಾಕು ರಾಜನು. ಈ ಭಾಗಗಳಲ್ಲಿ ಈ ರಾಜರು ಮತ್ತು ಋಷಿಗಳು ಆರ್ಯ ಸಂಸ್ಕೃತಿಯನ್ನು ಸ್ಥಾಪಿಸಿದ್ದು ಇತಿಹಾಸ ಪೂರ್ವಕಾಲದಲ್ಲಿ. ಆ ಕಾಲದಲ್ಲಿ ಇವರು ದನ ಸಾಕುವ ಅಸಂಸ್ಕೃತ ಜನಾಂಗವಾಗಿದ್ದಿಲ್ಲ ಇವರು ಅಲ್ಲಿಯ ದಸ್ಯುಗಳನ್ನು ತಮ್ಮ ವಶದಲ್ಲಿ. ಇಟ್ಟುಕೊಂಡಿದ್ದರಿಂದ ಪುರು ಕುತ್ಸ್ಯ ವಂಶದ ರಾಜನಿಗೆ ತ್ರಸದಸ್ಯುವೆಂದು ಹೆಸರಿತ್ತು. ಅವರಿಗೆ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಳ್ಳುವ ಕೌಶಲವೂ, ಸಾಮರ್ಥ್ಯವೂ ಇತ್ತು. ದಾನವ ನದಿಯನ್ನು ದಾಟಿ ಬಂದವರಲ್ಲಿ ಅಗಸ್ತ್ಯ ಋಷಿಯೂ ಒಬ್ಬರು.

ಅಗಸ್ತ್ಯ ವಂಶದಲ್ಲಿ ಹುಟ್ಟಿದ ಪ್ರಸ್ತುತ ಒಬ್ಬ ಅಗಸ್ತ್ಯರು ದಾನವ ನದಿಯನ್ನು ದಾಟಿ ದಕ್ಷಿಣ ಭಾಗದಲ್ಲಿ ಬಾಲ್ಕ ಸಮುದ್ರದ ದಕ್ಷಿಣದಲ್ಲಿ ತಮ್ಮ ಆಶ್ರಮವನ್ನು ಕಟ್ಟಿಕೊಂಡಿದ್ದರು. ಇವರು ದೊಡ್ಡ ತಪಸ್ವಿಗಳಾಗಿದ್ದು ಯಾವಾಗಲೂ ತಪಸ್ಸಿನಲ್ಲಿಯೇ ಮಗ್ನರಾಗಿರುತ್ತಿದ್ದರು. ಇವರ ಹೆಂಡತಿಯ ಹೆಸರು ಲೋಪಾಮುದ್ರಾ. ಇವಳೂ ಸಾಧ್ವಿಯೂ ಪತಿವ್ರತೆಯೂ ಆಗಿದ್ದಳು. ಈರ್ವರಿಗೂ ದಾನವ ನದಿಯ ಉತ್ತರ ಭಾಗದಲ್ಲಿ ಸ್ವಲ್ಪೇ ದೂರದಲ್ಲಿ ತಮ್ಮ ಬಂಧು ಬಳಗದವರು ಮತ್ತು ಅನೇಕ ಆರ್ಯರು ಇದ್ದರು. ಅವರನ್ನು ಸಮುದ್ರ ಒತ್ತಡದ ಕಾರಣದಿಂದ ಕಾಣುವ ಯೋಗ ಇರದ್ದರಿಂದ ಮನಸ್ಸಿನಲ್ಲಿ ಒಂದು ತರಹದ ಹಳಹಳಿ, ದುಗುಡ ಅನಿಸುತ್ತಿತ್ತು.




"ನೀನು ಕಲಾವಿದನಾಗೋದು ನನಗೆ ಸುತರಾಂ ಇಷ್ಟವಿಲ್ಲ."

ಇವರು ಒಮ್ಮೆ ತಪಸ್ಸಿನಲ್ಲಿದ್ದಾಗ. ದೇವ ವಾಣಿಯು. "ಋಷಿಯೇ, ಈ ಬಾಲ್ಕ ಸಮುದ್ರವನ್ನು ಸ್ವಾಧೀನವನ್ನಾಗಿ ಮಾಡು. ಈ ಕಾರ್ಯ ನಿನ್ನಿಂದಲೇ ಸಾಧ್ಯ. ಮುಂದಾಗು! ಮುಂದಾಗು! ಸಮುದ್ರವನ್ನು ಕಡಿದೇ ಬಿಡು! ಕೊರೆದೇ ಬಿಡು!" ಎಂದು ಹೇಳಿತು.

ಅಗಸ್ತ್ಯರು ಇದನ್ನು ಪತ್ನಿಗೆ ಹೇಳಿದರು. ಇದರಿಂದ ಅವಳೂ ಉತ್ತೇಜಿತಳಾಗಿ ಅಗಸ್ತ್ಯರಿಗೆ ಈ ಕೆಲಸವನ್ನು ಪ್ರಾರಂಭ ಮಾಡಲು ಪ್ರೋತ್ಸಾಹಿಸಿದಳು. ಅಗಸ್ತ್ಯರು ಇದರ ಸಲುವಾಗಿ ಬಾಲ್ಕ ಸಮುದ್ರದ ದಕ್ಷಿಣ ಭಾಗದಲ್ಲಿ ಸುತ್ತಾಡಿ ಅದರ ಬಗ್ಗೆ ಅಧ್ಯಯನವನ್ನು ಮಾಡಿದರು. ಅನತಿ ದೂರದಲ್ಲಿರುವ ಮಹಾಪಟೂರಿಯಾ (Mediterranean) ಸಮುದ್ರವನ್ನೂ ನೋಡಿದರು. ಈ ಸಮುದ್ರಕ್ಕಿಂತ ಉನ್ನತ ಭಾಗದಲ್ಲಿ ಬಾಲ್ಕ ಸಮುದ್ರವಿದ್ದುದರಿಂದ, ಅದನ್ನು ಈ ಸಮುದ್ರಕ್ಕೆ ಕೂಡಿಸಿ ಬಾಲ್ಕ ಸಮುದ್ರದ ಅಗಲವನ್ನು ಕಡಿಮೆ ಮಾಡಬಹುದೆಂದು ಯೋಜಿಸಿದರು. ಇವೆರಡೂ ಸಮುದ್ರಗಳ ನಡುವೆ ಒಂದು ಕೊಡು-ಕಾಲುವೆಯನ್ನು ಮಾಡುವ ರೂಪ-ರೇಷೆಯನ್ನು ತಯಾರಿಸಿದರು.

ಅಗಸ್ತ್ಯ ಋಷಿಯು ಸಮೀಪದ ದಕ್ಷಿಣ ಭಾಗದಲ್ಲಿದ್ದ ತಮ್ಮ ಕೃಪೆಗೆ ಒಳಗಾದ ತ್ರಸದಸ್ಯು ರಾಜನನ್ನು ಮತ್ತು ಶ್ರುತರ್ವಾ ಬ್ರಸ್ಕಕ್ಷ ಮೊದಲಾದ ರಾಜರನ್ನು ಕಂಡು ಅವರ ಸಹಾಯವನ್ನು ಪಡೆದರು. ಅನಾರ್ಯರ ಈ ಭಾಗದ ದೊಡ್ಡ ರಾಜನಾದ ಇಲ್ಬದ (Illyrian) ರಾಜನು ತಾನು ಎಲ್ಲ ಬಗೆಯ ಸಹಾಯ ಮಾಡುವೆನೆಂದು ಋಷಿಗಳಿಗೆ ತಿಳಿಸಿ ತಾನೇ ಈ ಕಾರ್ಯವನ್ನು ಪ್ರತ್ಯಕ್ಷವಾಗಿ ಕೈಕೊಳ್ಳಲು ಮುಂದಾದನು. ಅಗಸ್ತ್ಯ ಋಷಿಯು ಸುಲಭವಾಗಿ ಈ ಕಾರ್ಯ ಸಾಧಿಸುವದಕ್ಕಾಗಿ ಮಿತ್ರ - ವರುಣರ ಪ್ರೀತ್ಯರ್ಥ ಒಂದು ಸೋಮಯಾಗವನ್ನು ಮಾಡಿ. ಸುಮುಹೂರ್ತದಲ್ಲಿ ಕಾಲುವೆ ತೋಡುವ ಕೆಲಸವನ್ನು ಪ್ರಾರಂಭಿಸಿದರು.

ಬಾಲ್ಕ ಸಮುದ್ರವು ಬಹು ವಿಸ್ತಾರವಾಗಿದ್ದು ಅದರ ಅಗಲವನ್ನು ಹೇಗೆ ಕಡಿಮೆ ಮಾಡುವದು, ಬಳಿಯ ಸಮುದ್ರಕ್ಕೆ ಹಂತ ಹಂತವಾಗಿ ಹೇಗೆ ಬಿಡುವದು. ಅದರ ವೇಗವನ್ನು ಗತಿಯನ್ನು ಹೇಗೆ ಮಂದಗೊಳಿಸಬೇಕಾಗುವದು. ಮತ್ತು ಕೆಳಗಿನ ಸಮುದ್ರದ ನೆರೆಯ ದೇಶದಲ್ಲಿ ಇದರಿಂದಾಗುವ ಜಲಪ್ರಳಯದಿಂದ ದೂರ ವಿರಲು ಜನರಿಗೆ ಮುನ್ಸೂಚನೆ ಕೊಡುವದು. ಕೆಲಸದಲ್ಲಿರುವವರ ಪ್ರಾಣ ರಕ್ಷಣೆಗಾಗಿ ನಾವೆಗಳನ್ನು ಸಂಗ್ರಹಿಸುವದು – ಈ ಎಲ್ಲ ವಿಚಾರಗಳೇ ಅವರನ್ನು ನಿತ್ಯವೂ ಪೀಡಿಸುತ್ತಿದ್ದವು. ಅಲ್ಲದೇ ಕಾಲುವೆ ತೋಡಿಸುವದು, ಮತ್ತು ಕಾಲುವೆ ಭಾಗದಲ್ಲಿ ಸಣ್ಣ, ಸಣ್ಣ ಸಮುದ್ರಗಳನ್ನು ಮಾಡಿಸಿ ಮುಂದೆ ಸಾವಧಾನವಾಗಿ ಆ ನೀರನ್ನು ಬಿಡುವ ಕಾರ್ಯದ ನಿರ್ವಹಣೆಯನ್ನು ನೋಡುವದೂ ಅವರ ನಿತ್ಯ ಕಾರ್ಯವಾಗಿತ್ತು. ಈ ದುಡಿಮೆಯು ಬಹಳ ದಿನಗಳವರೆಗೆ ಸಾಗಿದ್ದರಿಂದ ಅವರು ಸ್ವಲ್ಪ ಬಳಲಿದಂತೆ ಕಾಣುತ್ತಿದ್ದರು. ಆದರೆ ಅವರ ಮನೋದಾರ್ಢ್ಯ ಸ್ವಲ್ಪವೂ ಕಡಿಮೆಯಾಗಲಿಲ್ಲ. ಅವರ ಈ ಜಿಗುಟುತನಕ್ಕಾಗಿ ಅವರಿಗೆ 'ದಾರ್ಢ್ಯ' ಎಂಬ ಹೆಸರೇ ಬಿದ್ದಿತ್ತು. ಋಷಿಗಳ ಬಳಲಿಕೆಯು ಲೋಪಾಮುದ್ರೆಯು ಕಳವಳಕ್ಕೆ ಕಾರಣವಾಯಿತು. ಈ ಕಳವಳವೇ ಋಗ್ವೇದದ ಒಂದು ಋಕ್ ಆಗಿದೆ. (ಋಗ್ವೇದ ೧-೧೭೯.)

ಅಗಸ್ತ್ಯರು ಮಾಡಿದ ಈ ಕಾರ್ಯವನ್ನು ಇತಿಹಾಸವು ಎಂದೂ ಮರೆಯಲಾರದು. ಈ ದಾರ್ಢ್ಯರು ಮಾಡಿದ ಕಾರ್ಯ ಇನ್ನೂ ಅವರ ಹೆಸರಿನಲ್ಲಿದೆ (Dardanellis). ಅವರ ಹೆಸರು ಇನ್ನೂ (Moramora) ಸಮುದ್ರದ ಹೆಸರಿನಲ್ಲಿದೆ. ಈ ಶಬ್ದವು 'ಮಾಸ್ಯ ಮಾನ' ಶಬ್ದದ ಅಪಭ್ರಂಶ (Aegis) ಸಮುದ್ರಕ್ಕೆ ಮಾನುಷ ಸಮುದ್ರದ ಹೆಸರಿತ್ತು. ಇದೇ ಅವರ ಹೆಸರನ್ನು ಸ್ಥಿರ ಮಾಡಿದೆ. ಈ ಬಾಲ್ಕ ಸಮುದ್ರದ ದಿನವೇ ಅವರ ರೂಪವನ್ನು ಬದಲಿಸಿದ್ದು ಅಗಸ್ತ್ಯರ ಸಮುದ್ರಪಾನ.

# ನಾವೂ ಏಕೆ ಮಾಡಬಾರದು?

ಎನ್. ಗೋಪಾಲಕೃಷ್ಣ

ಭೌತಶಾಸ್ತ್ರದ ಅಧ್ಯಾಪಕನಾಗಿದ್ದ ತಮ್ಮ ವಿದ್ಯಾರ್ಥಿಯೊಬ್ಬ ಸತತವಾಗಿ ಕೆಮ್ಮುತ್ತಿದ್ದುದನ್ನು ಕಂಡ ಡಾ. ಎಚ್. ನರಸಿಂಹಯ್ಯನವರು ಆತನ ಕೆಮ್ಮಿನ ಕಾರಣವನ್ನು ವಿಚಾರಿಸಿದರು. "ನಿನ್ನೆ ಗ್ರಹಣವಿತ್ತಲ್ಲ ಸಾರ್. ಸ್ನಾನ ಮಾಡಬಾರದಿತ್ತು, ಆದರೂ ಸ್ನಾನ ಮಾಡಬೇಕಾಯಿತು. ಅದರಿಂದಾಗಿ ಕೆಮ್ಮು. ಜ್ವರ ಆಗಿದೆ ಸಾರ್," ಎಂದ ಶಿಷ್ಯ. "ಮಾಡಬಾರದಿದ್ದರೂ ಸ್ನಾನ ಏಕೆ ಮಾಡಿದೆ?" ಎಂದು ಕೇಳಿದಾಗ "ನಿನ್ನೆ ಚಂದ್ರಗ್ರಹಣ ಅಲ್ವೇ ಸಾರ್? ಸ್ನಾನ ಮಾಡದೇ ಇರೋದೇ? ಸ್ನಾನ ಮಾಡಿದೆ. ಜ್ವರ ಬಂತು," ಎಂದ. "ಅಲ್ಲಪ್ಪಾ. ನಾನು ಪಾಠ ಮಾಡುವಾಗ ಗ್ರಹಣದ ಬಗ್ಗೆ ವಿವರಿಸಿರಲಿಲ್ಲವೇ? ಅದಾದ ಮೇಲೂ ಸ್ನಾನ ಮಾಡಬೇಕು ಎಂದು ಅನ್ನಿಸಿದೆ?" ಎಂದಾಗ "ಅಯ್ಯೋ. ಅದೆಲ್ಲಾ ಕಾಲೇಜಿನಲ್ಲಿ ಸಾರ್. ಮನೆಯಲ್ಲಿ ಆಚಾರ ವಿಚಾರಗಳನ್ನೆಲ್ಲಾ ಹ್ಯಾಗೆ ಬಿಟ್ಟುಬಿಡೋದು?" ಎಂದನಂತೆ ಭೌತಶಾಸ್ತ್ರದ ಅಧ್ಯಾಪಕ.

ಕಳೆದ ನವೆಂಬರ್ ೮ ರಂದು ನಗರದಲ್ಲಿ ಜರುಗಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಪ್ರಥಮ ವಿಜ್ಞಾನ ಸಮ್ಮೇಳನದಲ್ಲಿ ಡಾ. ನರಸಿಂಹಯ್ಯನವರು ವಿಜ್ಞಾನಿಗಳ, ವಿಜ್ಞಾನ ಬೋಧಕರ ಮನಃಪರಿವರ್ತನೆಯಾಗಬೇಕಾದ ಬಗೆ ಬಿತ್ತಿ ಹೇಳುತ್ತಾ, ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ಎಂತೆಂಥ ವಿಜ್ಞಾನಿಗಳಿದ್ದಾರೆ. ಎಲ್ಲ ಸಂಶೋಧನೆಗಳು ನಡೆಯುತ್ತಿದ್ದರೂ ಆ ಸಂಸ್ಥೆಯಲ್ಲಿ ನವ ವಿಜ್ಞಾನಿಗಳ ವೈಜ್ಞಾನಿಕ ಮನೋಧರ್ಮವೇ ತುಂಬಿದೆ ಎಂದಲ್ಲ. ಬದಲು, ಇಂಥ ಜನರನ್ನೇ ಕಾಣುತ್ತೇವೆ.

ವಿಜ್ಞಾನದ ಫಲ ಎಲ್ಲರಿಗೂ ಬೇಕು. ಆದರೆ ವೈಜ್ಞಾನಿಕ ಮನೋಧರ್ಮದ ಪ್ರಶ್ನೆ ಬಂದಾಗ ಹಿಂದೇಟು. ಬೆಂಗಳೂರಿನಂಥ ನಗರಗಳಲ್ಲೇ ವಿದ್ಯಾವಂತರಿರುವ ಜಾಗದಲ್ಲೇ ಈ ರೀತಿಯ ಮನೋಧರ್ಮ ಅಪರಿಚಿತವಾಗ ಗ್ರಾಮೀಣ ಪ್ರದೇಶಗಳ ಜನರ ಪಾಡೇನು ?

ಗ್ರಾಮೀಣ ಪ್ರದೇಶಗಳ ಜನರಿಗೆ ವಿಜ್ಞಾನವನ್ನು ಕೊಂಡೊಯ್ಯುವ ಉದ್ದೇಶದಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕಾರ್ಯ ನಿರ್ವಹಿಸುತ್ತಾ ಬಂದಿದೆ. ಆರೇಳು ವರ್ಷ. ರಾಜ್ಯದ ಹಳ್ಳಿಗಳಲ್ಲಿ ವಿಜ್ಞಾನ ಪರಿಷತ್ತಿನ ಘಟಕಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳು, ಅಧ್ಯಾಪಕರು, ವಿಜ್ಞಾನಾಸಕ್ತರು ಸ್ವಯಂಪ್ರೇರಣೆಯಿಂದ ವಿಜ್ಞಾನ ಪಸರಿಸುವ ಕಾರ್ಯ ಕೈಗೊಳ್ಳಲು ಈ ಸಂಸ್ಥೆ ಅನುವು ಮಾಡಿಕೊಟ್ಟಿದೆ.

ಆದಾಗ್ಯೂ, ವಿಜ್ಞಾನ ಪ್ರಸಾರ ಕಾರ್ಯ ಕೆಲವು ಗ್ರಾಮೀಣ ಮಟ್ಟದಲ್ಲಿ ಅಷ್ಟೊಂದು ಯಶಸ್ವಿಯಾಗಿ ಆಗುತ್ತಿಲ್ಲವೆಂಬುದು ಅಂದು ಏರ್ಪಡಿಸಿದ ಒಂದು ಸಮ್ಮೇಳನದಲ್ಲಿ ಮಾತನಾಡಿದ ಅನೇಕ ಪ್ರತಿನಿಧಿಗಳ ಮಾತುಗಳಿಂದ ವೇದ್ಯವಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ವೈಜ್ಞಾನಿಕ ಮನೋಧರ್ಮ ಮೂಡಿಸುವಲ್ಲಿ ಆಯಾ ಪ್ರದೇಶಗಳ ಶಾಲಾ ಉಪಾಧ್ಯಾಯರ ಸಹಕಾರವನ್ನು ಉಪಯೋಗಿಸಿಕೊಳ್ಳುವ ಯೋಜನೆ ಈ ಸಂಸ್ಥೆಗೆ ಇದೆಯಾದರೂ, ಮೊದಲಾಗಿ ಅಲ್ಲಿನ ಉಪಾಧ್ಯಾಯರುಗಳಿಗೇ ಇರಬೇಕಾದ ಮನೋಧರ್ಮದ ನಿರೀಕ್ಷೆ ಆಗಬೇಕಲ್ಲವೇ ?

ಸಾಮಾಜಿಕ ಕ್ರಾಂತಿಯ ನಿರ್ಮಾಣದಲ್ಲಿ ವಿಜ್ಞಾನದ ಪಾತ್ರ ಗಮನಾರ್ಹವಾದುದು. ಈ ಬಗೆಯಲ್ಲಿ ನೆರೆಯ ಕೇರಳದಲ್ಲಿ ೧೯೬೨ ರ ಸುಮಾರಿಗೆ ಕೆಲವು ಜನಪ್ರಿಯ ವಿಜ್ಞಾನ ಲೇಖಕರು ಒಂದುಗೂಡಿ 'ಶಾಸ್ತ್ರ ಸಾಹಿತ್ಯ ಪರಿಷತ್ತನ್ನು' ರಚಿಸಿಕೊಂಡರು. ಮಲಯಾಳಂ ಭಾಷೆಯಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ಬೆಳೆಸುವುದು.

ಇವರ ಉದ್ದೇಶವಾಗಿತ್ತು. ಅದಕ್ಕಾಗಿ 'ಆಧುನಿಕ ಶಾಸ್ತ್ರಂ' ಎಂಬ ತ್ರೈಮಾಸಿಕ ಪತ್ರಿಕೆಯನ್ನೂ ಪ್ರಕಟಿಸಲಾರಂಭಿಸಿದರು.

ಮುಂದೆ ೧೯೬೨ ರ ವೇಳೆಗೆ 'ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತ'ನ್ನು ಇವರು ಸ್ಥಾಪಿಸಿದರು. ಈ ಸಂಸ್ಥೆ ೧೯೬೬ರ ತನಕ ಜನಪ್ರಿಯ ವಿಜ್ಞಾನ ಲೇಖಕರ ಸಂಸ್ಥೆಯಾಗಿಯೇ ಮುಂದುವರಿದರೂ ಸಾಮಾನ್ಯ ಜನರ ಬಳಿಗೆ ಹೋಗಲಿಲ್ಲ. ೧೯೬೭ ರಲ್ಲಿ ವಿಜ್ಞಾನದಲ್ಲಿ ಸಂಚಿಕೆಯುಳ್ಳ ಯಾವುದೇ ವ್ಯಕ್ತಿ ಈ ಸಂಸ್ಥೆಯ ಸದಸ್ಯನಾಗಬಹುದೆಂದು ಘೋಷಿಸಿ, ಸಾಮಾನ್ಯ ಜನರಿಗೂ ತನ್ನ ಬಾಗಿಲನ್ನು ತೆರೆಯಿತು. ಇದೀಗ ನಾಲ್ಕು ಸಾವಿರಕ್ಕೂ ಹೆಚ್ಚಿನ ಸದಸ್ಯರನ್ನೊಳಗೊಂಡ ಈ ಪರಿಷತ್ತಿನ ಸುಮಾರು ೨೫೦ ಘಟಕಗಳು ಕೇರಳದಾದ್ಯಂತ ವಿಜ್ಞಾನ ಪ್ರಸಾರ ಕಾರ್ಯದಲ್ಲಿ ನಿರತವಾಗಿವೆ. ವಿದ್ಯಾವಂತರಿಂದ ಮೊದಲುಗೊಂಡು ನಿರಕ್ಷರಿಗಳಿಗೂ ಈಗ ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಆಸಕ್ತಿ.

'ಶಾಸ್ತ್ರಗತಿ' ವಿಶ್ವವಿದ್ಯಾನಿಲಯ ಮಟ್ಟದ ಓದುಗರಿಗಾಗಿ ಪ್ರಕಟವಾಗುವ ಮಾಸಿಕ. 'ಶಾಸ್ತ್ರ ಕೇರಳಂ' ವಿದ್ಯಾರ್ಥಿಗಳಿಗೆ, ಪ್ರಮುಖವಾಗಿ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳಿಗೆಂದು ಪ್ರಕಟವಾಗುತ್ತಿದ್ದು, ಇದರ ಪ್ರಸಾರ ತಿಂಗಳಿಗೆ ಇಪ್ಪತ್ತು ಸಾವಿರ ಪ್ರತಿಗಳು. ಮಕ್ಕಳಿಗಾಗಿಯೇ ಪ್ರಕಟವಾಗುವ 'ಯುರೇಕಾ' ನಲವತ್ತು ಸಾವಿರ ಖರ್ಚಾಗುತ್ತವೆ. ಹಳ್ಳಿಗಾಡಿನ ಜನರಿಗಾಗಿ ಪ್ರಕಟವಾಗುವ 'ಗ್ರಾಮಶಾಸ್ತ್ರಂ' ಅಲ್ಲಿ ಬಹು ಜನಪ್ರಿಯ. ಹತ್ತು ವರ್ಷದ ಕೆಳಗಿನ ಮಕ್ಕಳಿಗಾಗಿ ವರ್ಣರಂಜಿತ ಛಿತ್ರಚಿತ್ರ 'ಬಾಲಶಾಸ್ತ್ರಂ' ಇವು ಐದೂ ಪ್ರಕಟಣೆಗಳನ್ನು ಹೊರತರುವವರು ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತಿನವರು. ಹಾಗೆಂದು ಇದೇನೂ ಪ್ರಕಾಶನ ಸಂಸ್ಥೆಯಲ್ಲ. ಆದರೂ ಈ ಕ್ಷೇತ್ರದಲ್ಲಿ ಅದ್ವಿತೀಯ.

ಇವೇ ಅಲ್ಲದೇ 'ಮಾನವ ಮತ್ತು ಪರಿಸರ 'ಸೂಕ್ತ ತಂತ್ರಜ್ಞಾನ', ಎಂಬಿತ್ಯಾದಿ ಪುಸ್ತಕಗಳ ಪ್ರಕಟಣೆಯೂ ಆಗಿದೆ. ಅಂತಾರಾಷ್ಟ್ರೀಯ ಮಕ್ಕಳ ವರ್ಷದ ಅಂಗವಾಗಿ 'ಸೈನ್ಸ್ ಕ್ರೀಮ್' ಎಂಬ ಶೀರ್ಷಿಕೆಯ ಐವತ್ತು ಪುಸ್ತಕಗಳನ್ನು ಪ್ರಕಟಿಸಿದಾಗ, ಎಂಟು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾದುವು.

ಇಷ್ಟೆಲ್ಲಾ ಮಾಡಲು ಈ ಸಂಸ್ಥೆಯಲ್ಲಿ ಬಹಳ ಹಣ ಇರಬಹುದೇ ? ಎಂಬ ಅನುಮಾನ ಬರಲಿಕ್ಕೂ ಸಾಕು. ಈ ಸಂಸ್ಥೆಯ ಚಟುವಟಿಕೆಗಳಿಗೆ ಸದಸ್ಯತ್ವ, ಸಾರ್ವಜನಿಕರ ಕೊಡುಗೆ, ಪ್ರಕಟಣೆಗಳು– ಇವೇ ಬಂಡವಾಳ. ಸರಕಾರದ ಅನುದಾನವಿಲ್ಲದೇ. ಲಾಭೋದ್ದೇಶವಿಲ್ಲದೆ ಒಂದು ಸಂಸ್ಥೆ ಒಂದು ವಿಶ್ವವಿದ್ಯಾನಿಲಯ ಮಾಡುವುದಕ್ಕಿಂತ ಹೆಚ್ಚಿನ ಕೆಲಸವನ್ನೇ ಮಾಡುತ್ತಿದೆ ಎನ್ನಬಹುದು. ಈ ಸಂಸ್ಥೆಗೆ ಸೇರಿದ ಸರಕಾರೀ ನೌಕರಿಯಲ್ಲಿರುವವರು, ಅಗತ್ಯವೆನಿಸಿದಾಗ ರಜೆ ತೆಗೆದುಕೊಂಡು, ಇಲ್ಲಿ ಸೇವೆ ಸಲ್ಲಿಸುತ್ತಿರುವುದು ಇತರರಿಗೆ ಅನುಕರಣೀಯವಲ್ಲವೇ ?

ಕೇರಳದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ 'ಜಾಥಾ' ಹೊರಟು, ಐದು ಲಕ್ಷಕ್ಕೂ ಹೆಚ್ಚು ಜನರಿಗೆ ವಿಜ್ಞಾನ ವಿಷಯವಾಗಿ ತಿಳುವಳಿಕೆ ಕೊಟ್ಟಿದೆ ಈ ಪರಿಷತ್ತು. ಸುಮಾರು ಹನ್ನೊಂದು ಸಾವಿರ ಕಿಲೋಮೀಟರುಗಳ ದೂರ ಪ್ರಯಾಣ ಮಾಡಿ, ವಿಜ್ಞಾನ ವಿಷಯ ಪ್ರಸಾರ ಕೈಗೊಂಡ ಕಾರ್ಯಕ್ರಮವನ್ನು 'ಶಾಸ್ತ್ರ ಸಂಸ್ಕಾರಿಕ' ಎಂದು ಕರೆದಿದೆ.

ರಾಜ್ಯ ಸರಕಾರದ ಸಹಯೋಗದಿಂದ ವಿಜ್ಞಾನ ಕ್ಲಬ್ಬುಗಳನ್ನು, ವಿಜ್ಞಾನ ಕೇಂದ್ರಗಳನ್ನು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಕ್ವಿಜ್ ಕಾರ್ಯಕ್ರಮ, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಕಾರ್ಯಕ್ರಮ, ಗ್ರಾಮಸ್ಥರಿಗಾಗಿ 'ಗ್ರಾಮೀಣ ವಿಜ್ಞಾನ ಅಕಾಡೆಮಿ' ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ನಿರತ.

ವಿಜ್ಞಾನವನ್ನು ಆಚರಣೆಗೆ ತಂದವ ಮಾನವ ಇದೀಗ ವಿಜ್ಞಾನದ ಅಗತ್ಯ ಉಂಟಾಗಿರುವುದು ಅವನಿಗೇ. ಅವನಿಗೆ ವಿಜ್ಞಾನವನ್ನು ತಲುಪಿಸುವ ಕಾರ್ಯದಲ್ಲಿ ಕೇರಳವಾಗಲಿ, ಕರ್ನಾಟಕವಾಗಲಿ, ತಮಿಳು ನಾಡಾಗಲಿ, ರಾಷ್ಟ್ರಾದ್ಯಂತ ಇಂಥ ಕಾರ್ಯಕ್ರಮಗಳಾಗಬೇಕು, ಇಂಥ ಸಂಸ್ಥೆಗಳು ಬೆಳೆದು ಹೆಚ್ಚಬೇಕು.

# ಅಮ್ಮ ಮತ್ತು ಬಾಡಿಗೆಯವನು

ಮೂಲ : ಕ್ಯಾಥರಿನ್ ಫೋರ್ಬಸ್
ಕನ್ನಡಕ್ಕೆ : ಸುನಂದಾ ಗುರುರಾಜ

ಆ ದಿನ ಹೈಡ್ ನಮ್ಮ ಮನೆಯ ಕಿಟಕಿಗೆ ತೂಗು ಹಾಕಿದ್ದ 'ಕೊಠಡಿ ಖಾಲಿ ಇದೆ' ಎಂಬ ಬೋರ್ಡ್ ನೋಡಿ, ವಿಚಾರಿಸಿಕೊಂಡು ಬಂದಾಗ, ಬಹುಶಃ ಇದು ಅವಳ ಮೊದಲ ಅನುಭವವಾದ್ದರಿಂದ ಇರಬೇಕು, ಅಮ್ಮ ಅವನ ಪೂರ್ವೋತ್ತರವನ್ನಾಗಲಿ, ಮುಂಗಡ ಹಣವನ್ನಾಗಲಿ ಕೇಳಲಿಲ್ಲ.

"ಕೋಣೆ ನನಗೆ ಒಪ್ಪಿಗೆಯಾಯಿತು. ಇಂದು ಸಂಜೆ ನನ್ನ ಸಾಮಾನು ಹಾಗೂ ಪುಸ್ತಕಗಳನ್ನು ಕಳುಹಿಸುತ್ತೇನೆ," ಎಂದು ತಿಳಿಸಿದ ಹೈಡ್.

ಹೈಡ್ ನಮ್ಮ ಮನೆಗೆ ಬಹಳ ಸುಲಭವಾಗಿ ಹೊಂದಿಕೊಂಡುಬಿಟ್ಟ. ಅವನ ಕೆಲಸದ ವೇಳೆ ನಿಗದಿಯಾಗಿರುತ್ತಿರಲಿಲ್ಲ. ಆದರೆ ಅವನು ಯಾವಾಗಲೂ ನಗುತ್ತಾ ಮಕ್ಕಳನ್ನು ಮಾತನಾಡಿಸುತ್ತಿದ್ದ. ಅಮ್ಮನನ್ನು ಹಜಾರದಲ್ಲಿ ಯಾವಾಗ ಕಂಡರೂ ಗೌರವದಿಂದ ನಮಸ್ಕರಿಸುತ್ತಿದ್ದ. ಅಪ್ಪ ಕೂಡ ಅವನನ್ನು ಇಷ್ಟಪಡುತ್ತಿದ್ದರು. ನಾರ್ವೆಯಲ್ಲಿ ಸ್ವಲ್ಪ ಕಾಲವಿದ್ದ ಅವನು ಅಪ್ಪನೊಡನೆ ಮೀನುಗಾರಿಕೆಯ ಸೊಬಗನ್ನು ಹಂಚಿಕೊಳ್ಳುತ್ತಿದ್ದ.

ಆದರೆ ಬಾಡಿಗೆಗೆ ಕೊಟ್ಟು ಅನುಭವವಿದ್ದ ಚಿಕ್ಕಮ್ಮ ಮಾತ್ರ ಅಸಮಾಧಾನದಿಂದ, "ಅವನು ಬಾಡಿಗೆ ಯಾವಾಗ ಕೊಡುತ್ತಾನಂತೆ?" ಎಂದು ಪ್ರಶ್ನಿಸುತ್ತಿದ್ದಳು.

"ಕೇಳುವುದಕ್ಕೆ ಕಷ್ಟವಾಗುತ್ತದೆ–ಖಂಡಿತ ಕೊಡುತ್ತಾನೆ ಇಷ್ಟರಲ್ಲೆ," ಎಂದು ಅಮ್ಮ ಸಮಾಧಾನವಾಗಿ ಉತ್ತರಿಸುತ್ತಿದ್ದಳು.

ಆದರೆ ಅನುಮಾನದ ಸ್ವಭಾವವುಳ್ಳ ಚಿಕ್ಕಮ್ಮ, ಇಂತಹ ಅನೇಕರನ್ನು ನೋಡಿದ್ದಳಾದ್ದರಿಂದ ಅವಳು ನನಗೆ, "ನಿಮ್ಮ ಅಮ್ಮ ಅವನು ಕೊಡುವ ದುಡ್ಡಿನಲ್ಲಿ ಹೊಸ ಕೋಟು ಕೊಳ್ಳಬೇಕೆಂದು ಯೋಚಿಸುತ್ತಿದ್ದಾಳೆ. ಅದು ಸಾಧ್ಯವೇ ಇಲ್ಲ. ಮರೆತು ಬಿಡಲಿ ಅದನ್ನು," ಎನ್ನುತ್ತಿದ್ದಳು.

ಅಮ್ಮ ನಗುತ್ತಾ, "ಏನು ಮಾತನಾಡುತ್ತೀಯಾ?" ಎನ್ನುತ್ತಾ ಅವಳ ಗೊಣಗಾಟವನ್ನು ನಿಲ್ಲಿಸುವಂತೆ ಕಾಫಿ ಕೊಡುತ್ತಿದ್ದಳು.

ಮಳೆಗಾಲ ಬಂದಾಗ, ಹೈಡನ ಕೋಣೆ ಸಂಜೆಯ ಹೊತ್ತು ತಂಪಾಗಿರುವುದೆಂದು ಯೋಚಿಸಿ ಅಮ್ಮ ಅವನನ್ನು ನಮ್ಮ ಬೆಚ್ಚ

ಗಿನ ಹಜಾರಕ್ಕೆ ಕರೆಯುವಂತೆ ಅಪ್ಪನಿಗೆ ಹೇಳಿದಳು.

ನಾವು ನಾಲ್ವರು ಹುಡುಗರು (ಡಾಗ್‌ಮಟ್, ಕ್ರಿಸ್ಟಿನ್, ನೆಲ್ಸ್ ಮತ್ತು ನಾನು) ದೀಪದ ಬೆಳಕಿನ ಹತ್ತಿರ ಅಂದಿನ ಪಾಠವನ್ನು ಓದುತ್ತಾ ಕುಳಿತುಕೊಳ್ಳುತ್ತಿದ್ದೆವು. ಹೈಡ್ ಮತ್ತು ಅಪ್ಪ ಚಿಂಕಿಯ ಹತ್ತಿರ ಪೈಪು ಸೇದುತ್ತಾ ಕುಳಿತುಕೊಳ್ಳುತ್ತಿದ್ದರು. ಅಮ್ಮ ತನ್ನ ಪಾಡಿಗೆ ತಾನು ಬ್ರೆಡ್ ಅಥವಾ ಬಟರುಗಳನ್ನು ಮಾಡುತ್ತಿರುತ್ತಿದ್ದಳು.

ಹೈಡ್, ನನ್ನ ಅಣ್ಣ ನೆಲ್ಸ್‌ಗೆ ಸ್ಕೂಲು ಪಾಠದ ಬಗ್ಗೆ ಸಲಹೆ ಕೊಡುತ್ತಿದ್ದ. ಕೆಲವು ಸಲ ಲ್ಯಾಟಿನ್ ಹೇಳಿಕೊಡುತ್ತಿದ್ದ. ಇದರಿಂದ ನೆಲ್ಸ್‌ನಿಗೆ ಪಾಠದ ಬಗ್ಗೆ ಆಸಕ್ತಿ ಹುಟ್ಟಿತು. ಅವನು ಹೆಚ್ಚು ಅಂಕ ಗಳಿಸತೊಡಗಿದ. ಮುಖ್ಯವಾಗಿ ನೆಲ್ಸ್, "ನಾನು ಸ್ಕೂಲು ಬಿಟ್ಟು, ಕೆಲಸ ಮಾಡುತ್ತೇನೆ," ಎಂದು ಅಪ್ಪನನ್ನು ಕಾಡುವುದನ್ನು ಬಿಟ್ಟುಬಿಟ್ಟ.

ನಾವು ಪಾಠಗಳನ್ನು ಮುಗಿಸುವ ಹೊತ್ತಿಗೆ ಅಮ್ಮ ಕೆಲಸ ಮುಗಿಸಿಕೊಂಡು ಬಂದು, ವುಲ್ಲನ್ ಹಿಡಿದು ಆರಾಮಾಸನದಲ್ಲಿ ಕುಳಿತುಕೊಳ್ಳುತ್ತಿದ್ದಳು, ಆಗ ಹೈಡ್ ನಮಗೆಲ್ಲಾ ಅವನು ಕೈಗೊಂಡ ಪ್ರವಾಸ ಹಾಗೂ ನಡೆಸಿದ ಸಾಹಸ ಪಡಗಿನಲ್ಲಿ ಪ್ರಪಂಚಗಳ ಬಗ್ಗೆ ಹೇಳುತ್ತಿದ್ದ. ಚರಿತ್ರೆ ಹಾಗೂ ಭೂಗೋಳ ಜೀವಂತವಾಗುತ್ತಿತ್ತು.

ಒಂದು ರಾತ್ರಿ ಹೈಡ್ ನಮಗೆ ಚಾರ್ಲ್ಸ್ ಡಿಕನ್ಸನ ಕಥೆ ಪುಸ್ತಕವನ್ನು ಓದಿ ಹೇಳಿದ. ಅಂದಿನಿಂದ ಪಾಠದ ನಂತರ ಕಥೆ ಹೇಳುವುದು ಒಂದು ಹವ್ಯಾಸವಾಗಿ ಹೋಯಿತು. ಹೈಡ್ ತನ್ನ ಪುಸ್ತಕಗಳಲ್ಲೊಂದನ್ನು ಕೆಳಗೆ ತಂದು ಜೋರಾಗಿ ಓದಿ ಹೇಳುತ್ತಿದ್ದ. ಆಗ ಹೊಸ ಪ್ರಪಂಚವೇ ನಮ್ಮ ಕಣ್ಣ ಮುಂದೆ ತೆರೆದುಕೊಳ್ಳುತ್ತಿತ್ತು. ಅವನ ಧ್ವನಿ ಆಳವಾಗಿತ್ತು–ಒಬ್ಬ ದೊಡ್ಡ ನಟನ ಧ್ವನಿ ಹೇಗಿರಬೇಕೆಂದು



ನಾವುಗಳು ಕಲ್ಪಿಸಿಕೊಳ್ಳುತ್ತಿದ್ದವೋ ಹಾಗೆ ಇತ್ತು ಹೈಡನ ಧ್ವನಿ.

ಮಳೆಗಾಲ ಕಳೆದು ಬೇಸಿಗೆ ಪ್ರಾರಂಭವಾದರೂ ನಾವು ಹುಡುಗರು ಸಂಜೆ ಆಟಕ್ಕೆ ಹೋಗುತ್ತೇವೆಂದು ಕೇಳುತ್ತಿರಲಿಲ್ಲ. ಇದರಿಂದ ಅಮ್ಮನಿಗೆ ಸಂತೋಷವಾಯಿತೆನ್ನಿಸಿತು– ನಾವು ಬೀದಿಯಲ್ಲಿ ಆಟ ಆಡಲು ಆಡುವುದನ್ನು ಅವಳು ಇಷ್ಟಪಡುತ್ತಿರಲಿಲ್ಲವಾದ್ದರಿಂದ.

ಇದೆಲ್ಲಕ್ಕಿಂತ ಮಹತ್ವವೆಂದರೆ ನೆಲ್ಸ್ ಸಂಜೆಯ ಹೊತ್ತು ಅಕ್ಕಪಕ್ಕದ ಹುಡುಗರ ಜೊತೆ ಬೀದಿಯ ಕೊನೆಯಲ್ಲಿ ಹರಟೆ ಕೊಚ್ಚುತ್ತಾ ನಿಲ್ಲುವುದು ಕಡಿಮೆಯಾಗುತ್ತಾ ಬಂದಿತು. ಅವನ ಗೆಳೆಯರು ಡಿಲ್ಲನನ ಅಂಗಡಿಯನ್ನು ಒಡೆದು ತೊಂದರೆಗೆ ಸಿಕ್ಕಿ ಹಾಕಿಕೊಂಡ ರಾತ್ರಿ, ನೆಲ್ಸ್ 'ಡಾಂಟೆ ಅಂಡ್ ಸನ್' ಕತೆಯ ಕಡೆಯ ಭಾಗವನ್ನು ಕೇಳುವ ಕುತೂಹಲದಿಂದ ಮನೆಯಲ್ಲೇ ಇದ್ದ.

ಹೈಡ್ ನಮ್ಮನ್ನು ಸ್ಕಾಟ್‌ನ 'ಐವಾನ್ ಹೋ'ದಲ್ಲಿ ಮುಳುಗಿಸಿದ್ದಾಗ, ಅವನಿಗೆ ಒಂದು ಪತ್ರ ಬಂತು.

ಅವನು ಅಮ್ಮನಿಗೆ, "ನಾನು ಹೊರಡಬೇಕು, ನೆಲ್ಸ್ ಮತ್ತು ಹುಡುಗರಿಗಾಗಿ ಎಲ್ಲಾ ಪುಸ್ತಕಗಳನ್ನು ಬಿಟ್ಟು ಹೋಗುತ್ತೇನೆ. ಇದು ಬಾಡಿಗೆಯ ಹಣ," ಎಂದು ಚೆಕ್ ಕೊಟ್ಟು ಅಮ್ಮನ ಆತಿಥ್ಯವನ್ನು ಹೃದಯಪೂರ್ವಕವಾಗಿ ಹೊಗಳಿದ.

ಹೈಡ್ ಹೊರಟು ಹೋದದ್ದು ನಮಗೆಲ್ಲಾ ಬಹಳ ಬೇಸರವಾಯಿತು. ಆದರೆ ಬಹಳ ಉತ್ಸಾಹದಿಂದ ಕೋಣೆಯಲ್ಲಿದ್ದ ಪುಸ್ತಕಗಳನ್ನು ತಂದು ಹಜಾರದಲ್ಲಿ ಜೋಡಿಸಿದೆವು. ಎಷ್ಟೊಂದು ಪುಸ್ತಕಗಳಿದ್ದವು ಅಲ್ಲಿ!

ಅಮ್ಮ ಪುಸ್ತಕಗಳನ್ನು ಒರೆಸಿ ಇಡುತ್ತಾ "ಎಷ್ಟೊಂದು ವಿಷಯಗಳನ್ನು ಕಲಿಯಬಹುದು!" ಎನ್ನುತ್ತಾ ನೆಲ್ಸ್ ನಮಗೆಲ್ಲಾ

ಜೋರಾಗಿ ಓದಿ ಹೇಳಬಹುದು ಸಂಜೆಯ ಹೊತ್ತು, ಫೈಡ್ ತರಹವೇ. ಏಕೆಂದರೆ ನೆಲ್ಸನ ಧ್ವನಿಯು ಚೆನ್ನಾಗಿದೆ." ಇದರಿಂದ ನೆಲ್ಸನ ಬಹಳ ಹೆಮ್ಮೆಯಾಯಿತು ಎಂಬುದನ್ನು ನಾನು ಗಮನಿಸಿದೆ.

ಅಮ್ಮ ಚಿಕ್ಕಮ್ಮನಿಗೆ ಚೆಕ್ಕನ್ನು ತೋರಿಸುತ್ತಾ "ನೋಡಿದೆಯಾ? ನಾನು ಚಳಿಗಾಲಕ್ಕೆ ಕೋಟನ್ನು ಕೊಳ್ಳಬಹುದು," ಎಂದಳು.

ಆದರೆ ಜೆನ್ನಿ ಚಿಕ್ಕಮ್ಮ ಇರುವಾಗಲೇ ನಮ್ಮ ರಸ್ತೆಯ ಕೊನೆಯಲ್ಲೇ ಬೇಕರಿ ಹಾಗೂ ಹೋಟೆಲ್ ಇಟ್ಟಿದ್ದ ಕೂಪರ್ ಬಂದ. ಅವನು ಬಹಳ ಕೋಪದಲ್ಲಿದ್ದ. "ಆ ಮನುಷ್ಯ ಒಬ್ಬ ಮೋಸಗಾರ, ಈ ಚೆಕ್ ನೋಡಿ, ಉಪಯೋಗವಿಲ್ಲದ್ದು. ಬ್ಯಾಂಕಿನಲ್ಲಿ ಹೇಳಿದರು– ಅವನು ಈ ಬೀದಿಯಲ್ಲಿರುವವರಿಗೆಲ್ಲಾ ಇದೇ ರೀತಿ ಮಾಡಿದ್ದಾನಂತೆ."



ಚಿಕ್ಕಮ್ಮ ವಿಜಯದ ಗತ್ತಿನಿಂದ ತಲೆ ಅಲ್ಲಾಡಿಸಿದ ರೀತಿ 'ನಾನು ಮೊದಲೇ ಹೇಳಿದ್ದೆ' ಎಂದು ನುಡಿಯುವ ಹಾಗಿತ್ತು.

"ನಿಮಗೂ ಅವನು ಬಹಳ ಕೊಡಬೇಕು ಅಂತಾ ಕಾಣುತ್ತೆ ಅಲ್ಲವೆ?" ಎಂದು ಕೇಳಿದ ಕೂಪರ್.

ಅಮ್ಮ ನಮ್ಮೆಲ್ಲರ ಕಡೆ ನೋಡಿದಳು, ನೆಲ್ಸನ ಮೇಲೆ ಅವಳ ದೃಷ್ಟಿ ಬಹಳ ಹೊತ್ತು ನೆಲೆಸಿತ್ತು. ನಂತರ ಅವಳು ಒಲೆಯ ಹತ್ತಿರ ಹೋಗಿ, 'ಚೆಕ್' ಅನ್ನು ಬೆಂಕಿಗೆ ಹಾಕಿ, ಹೇಳಿದಳು, "ಇಲ್ಲ, ಅವನು ನಮಗೇನೂ ಕೊಡಬೇಕಾಗಿಲ್ಲ."



ನಮಗೆ ಬರುವ ಆದಾಯ ಒಂದು ರೀತಿಯಲ್ಲಿ ನಾವು ತೊಡುವ ಚಪ್ಪಲಿಯಿದ್ದ ಹಾಗೆ. ಆಕಾರ ಚಿಕ್ಕದಾಗಿದ್ದರೆ ನೋವಾಗುವ ಹಾಗೆ ಒತ್ತುತ್ತದೆ. ದೊಡ್ಡದಾಗಿದ್ದರೆ ಎಡವಿ ಬೀಳುವಂತಾಗುತ್ತದೆ.

–ಚಾರ್ಲ್ಸ್ ಕೋಲ್ಟನ್

ನಾಳೆಯನ್ನು ಹಾಳುಗೆಡವುವಂತಹ ಸುಖವನ್ನು ಇಂದೇ ಒದ್ದೋಡಿಸಿರಿ.

–ಜಾರ್ಜ್ ಹರ್ಬರ್ಟ್

ಸುದರ್ಶನ ದೇಸಾಯಿ

> ಆನೆಯಂತೆ ಬಾಳಿದ
> ಸರ್ಕಸ್ಸು ಇರುವೆಯಂತೆ
> ಮರಣವನ್ನಪ್ಪಬೇಕಾಯಿತು

# ಕಾರ್ಲೇಕರ್ ಸರ್ಕಸ್ಸಿನ ಅವಸಾನ

ಒಂದು ಕಾಲದಲ್ಲಿ ಕಾರ್ಲೇಕರ್ ಸರ್ಕಸ್ಸು ಏಶಿಯಾದಲ್ಲಿ ಅಷ್ಟೇ ಅಲ್ಲ, ಯುರೋಪಿನಲ್ಲಿಯೂ ಹೆಸರುಗಳಿಸಿತ್ತು. ಪೂರ್ಣ ಭಾರತೀಯರಿಂದ ನಡೆಸಲ್ಪಡುತ್ತಿದ್ದ ಈ ಸರ್ಕಸ್ಸು, ತನ್ನ ರೋಮಾಂಚಕರ ಆಟಗಳಿಂದ ಪ್ರೇಕ್ಷಕರನ್ನು ವಿಸ್ಮಯಗೊಳಿಸುತ್ತಿತ್ತು. ಭಾರತೀಯರ ಈ ಸಾಫಲ್ಯ ಬೇರೆ ಸರ್ಕಸ್ಸಿನವರಿಗೆ, ಅದರಲ್ಲೂ ವಿದೇಶೀಯರಿಗೆ ಹೊಟ್ಟೆಯುರಿಯುಂಟು ಮಾಡಿತು. ಇದರಿಂದಾಗಿ ಸರ್ಕಸ್ಸಿನ ಹಿರಿಮೆಯನ್ನು ಕುಗ್ಗಿಸುವ ಅನೇಕ ಪ್ರಯತ್ನಗಳೂ ನಡೆದವು. ಆದರೆ ಅವೆಲ್ಲ ವಿಫಲವಾಗಿ ಅವರೆಲ್ಲ ಕೈ ಕೈ ಹಿಸುಕಿಕೊಳ್ಳುವಂತಾಯಿತು.

ಆದರೆ ಒಂದು ದಿನ, ಕೇವಲ ಇಪ್ಪತ್ತು ನಾಲ್ಕು ಗಂಟೆಗಳಲ್ಲಿ, ಅತಿ ಪ್ರಸಿದ್ಧಿ ಪಡೆದ ಈ ಸಧೃಢ ಭಾರತೀಯ ಸರ್ಕಸ್ಸು ಹೇಳಹೆಸರಿಲ್ಲದಂತೆ ನಾಶವಾಯಿತು. ಆನೆಯಂತೆ ಬಾಳಿ ಬದುಕಿದ ಸರ್ಕಸ್ಸು ಇರುವೆಯಂತೆ ಮರಣವನ್ನಪ್ಪಿತು.

ಈ ಹೃದಯವಿದ್ರಾವಕ ಘಟನೆ ನಡೆದದ್ದು ಬರ್ಮಾದ ರಾಜಧಾನಿ ರಂಗೂನಿನಲ್ಲಿ (೧೯೪೨). ಬಣ್ಣ ಬಣ್ಣದ ಅಸಂಖ್ಯಾತ ವಿದ್ಯುತ್ ದೀಪಗಳಿಂದ ಅಲಂಕರಿಸಲ್ಪಟ್ಟ ಸರ್ಕಸ್ಸು ಇಂದ್ರನಗರಿಯಂತೆ ಕಂಗೊಳಿಸುತ್ತಿತ್ತು. ಸರ್ಕಸ್ಸಿನ ಕಲಾವಿದರು, ವಿದೂಷಕರು ಪ್ರೇಕ್ಷಕರನ್ನು ರಂಜಿಸತೊಡಗಿದ್ದರು. ಸರ್ಕಸ್ಸು ನೋಡಲು ಬಂದಿದ್ದ ಸುಮಾರು ಐದು ಸಾವಿರ ಜನರು ಅವಾಕ್ಕಾಗಿ ಆಟವನ್ನು ವೀಕ್ಷಿಸತೊಡಗಿದ್ದರು.

ಅದೇ ವೇಳೆಗೆ ಅಪತ್ಕಾಲದ ಸೈರನ್ ಥಟ್ಟನೆ ಪ್ರತಿಧ್ವನಿಸಿತು. ಸಮಸ್ತ ಪ್ರೇಕ್ಷಕರಲ್ಲಿ ಕೋಲಾಹಲವುಂಟಾಯಿತು. ವಾಯು ದಾಳಿಯ ಮುನ್ಸೂಚನೆ ನೀಡಲು ಬಾರಿಸಿದ ಸೈರನ್ ಕೇಳಿ ಅವರೆಲ್ಲರೂ ಪ್ರಾಣ ಭಯದಿಂದ ತತ್ತರಿಸಿದರು. ಜೀವ ಉಳಿಸಿಕೊಳ್ಳಲು ಸುರಕ್ಷಿತವಾಗಿ ತಮ್ಮ ತಮ್ಮ ಗೂಡುಗಳನ್ನು ಸೇರಲು ಹಾತೊರೆದರು.

ಸರ್ಕಸ್ಸು ನಡೆದ ಸ್ಥಳ ರಣರಂಗವಾಯಿತು. ಜನರು ದಾರಿ ಸಿಕ್ಕತ್ತ ಓಡಿದ್ದರಿಂದ ಡೇರೆಗಳ ಪರದೆಗಳು ಹರಿದು ಹೋದವು. ಮುರಿಯುವ ಕುರ್ಚಿಗಳು ಜೋರಾಗಿ ಬಿದ್ದವು. ಕಬ್ಬಿಣದ ಬೆಂಚುಗಳನ್ನು ದಾಟಲು ಹೋದ ಅನೇಕರು ದಾಟಲಾಗದೆ ಎಡವಿ ಕೆಳಗೆ ಬಿದ್ದರು. ಕೆಳಗೆ ಬಿದ್ದವರಿಗೆ ಏಳಲು ಅವಕಾಶ ಸಿಗಲಿಲ್ಲ. ಸಮುದ್ರದ ತೆರೆಯಂತೆ ಧಾವಿಸಿ ಬಂದ ಜನರ

ಪ್ರವಾಹ ಕೆಳಗೆ ಬಿದ್ದವರನ್ನು ತಮ್ಮ ಕಾಲು ಗಳಿಂದ ತುಳಿಯುತ್ತ, ಹೊಸಕುತ್ತ ದಾಟಿ ಹೋಯಿತು. ನೂರಾರು ಜನ ಪ್ರಾಣಬಿಟ್ಟರು. ನಾಲ್ಕು ಜನರಿಗೆ ಹೃದಯಾಘಾತವಾಗಿ ಕುಳಿತಲ್ಲಿಯೇ ಅಸು ನೀಗಿದರು.

ಜಪಾನು ಪ್ರಾರಂಭಿಸಿದ ಬಾಂಬ್ ದಾಳಿಗೆ ಸಾವಿರಾರು ಜನ ಪ್ರಾಣ ತೆತ್ತರು. ಇಂಗ್ಲಂಡ್ ಹಾಗೂ ಅಮೇರಿಕೆಗಳ ವಿರುದ್ಧ ಸಮರ ಘೋಷಿಸಿದ ಜಪಾನು, ಸಿಂಗಾಪುರವನ್ನು ವಶಪಡಿಸಿಕೊಂಡು ಬರ್ಮಾದತ್ತ ಧಾವಿಸಿತ್ತು.

ಸರ್ಕಸ್ಸು ಆಗ ತಾನೆ ಬಂಗಾಲದ ಪ್ರವಾಸ ವನ್ನು ಮುಗಿಸಿಕೊಂಡು ಬರ್ಮಾ ಪ್ರವೇಶಿ ಸಿತ್ತು. ರಂಗೂನಿನಲ್ಲಿ ಅದರ ಎಂಟನೆಯ ಪ್ರಯೋಗ ನಡೆದಿತ್ತು. ಬರ್ಮಾ ಸರಕಾರದ ಅಧಿಕಾರಿಗಳ ಕಠೋರ ವರ್ತನೆಯಿಂದಾಗಿ ಸರ್ಕಸ್ ಕಂಪನಿ ಸತ್ಯಾನಾಶವಾಗಬೇಕಾಯಿತು. ಮನುಷ್ಯ ಮುನಿದರೆ ತಡೆಯಬಹುದು, ಪ್ರಕೃತಿ



ಮುನಿದರೆ ಎದುರಿಸಬಹುದು, ಆದರೆ ದೈವ ಮುನಿದರೆ ?

ಆದರೆ ಈಗ ಒಂದು ದೃಷ್ಟಿಯಿಂದ ದೈವವೇ ಮುನಿದಿತ್ತು. ಸರ್ಕಸ್ ಕಂಪನಿಯಿದ್ದಡೆ ಸಿಡಿಲೆರಗಿದಂತೆ ಬಾಂಬ್ ದಾಳಿ ಪ್ರಾರಂಭ ವಾಗಿತ್ತು.

ರಾತ್ರಿ ಕಳೆದು ಬೆಳಗಾದಾಗ ರಂಗೂನಿನಲ್ಲಿ ಮೃತ್ಯು ತಾಂಡವವಾಡುತ್ತಿತ್ತು. ಎಲ್ಲೆಡೆ ಹೆಣಗಳ ರಾಶಿ– ಸಾವಿರಾರು ಜನ ಪ್ರಾಣ ತೆತ್ತಿದ್ದರು... ಒಂದು ಬಾಂಬಂತೂ ಸರ್ಕಸ್ ಕಂಪನಿಯ ಬಾಗಿಲಿಗೇ ಬಿದ್ದಿದ್ದರಿಂದಾಗಿ ಹೊರಗೆ ಓಡಲು ಪ್ರಯತ್ನಿಸಿದವರಲ್ಲಿ ಹಲ ವಾರು ಜನರು ಅಲ್ಲಿಯೇ ಅಸು ನೀಗಿದ್ದರು. ಬಣ್ಣದ ಡೇರೆಗೆ ಬೆಂಕಿ ತಗುಲಿ ಅದು ಸುಟ್ಟು ಹೋಗಿತ್ತು. ಅಂದು ಸರ್ಕಸ್ಸು ನಡೆಯುವುದೇ ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಹಾನಿಯಾ ದ್ದರಿಂದ, ಅಂದು ಆಟ ನಿಲ್ಲಿಸಬೇಕೆಂಬ ನಿರ್ಣಯ ತೆಗೆದುಕೊಳ್ಳಲಾಯಿತು.

ಅದೇ ವೇಳೆಗೆ ಮತ್ತೊಂದು ಅಗ್ನಿಪರೀಕ್ಷೆ ಎದುರಾಯಿತು. ಇಪ್ಪತ್ತನಾಲ್ಕು ಗಂಟೆಗಳಲ್ಲಿ ಸರ್ಕಸ್ಸನ್ನು ಕಿತ್ತಿ ಊರ ಹೊರಗೆ ಸಾಗಿಸಬೇ ಕೆಂದು ಬರ್ಮಾ ಸರಕಾರ ಕಂಪನಿ ಮಾಲಿಕರಿಗೆ ಸೂಚನೆ ನೀಡಿತು. ಒಂದು ವೇಳೆ ನಿಗದಿ ಪಡಿಸಿದ ಅವಧಿಯಲ್ಲಿ ಸರ್ಕಸ್ಸು ಸ್ಥಳಾಂತರವಾಗದಿದ್ದರೆ ಸರಕಾರಿ ಅಧಿಕಾರಿಗಳು ಮಧ್ಯ ಪ್ರವೇಶಿಸಿ, ಸರ್ಕಸ್ಸನ್ನು ಕಿತ್ತಿ ಎಸೆಯುವರು. ಪ್ರಾಣಿಗಳಿಗೆ ಗುಂಡು ಹಾಕಿ ಕೊಲ್ಲುವರು ಮತ್ತು ಇತರ ವಸ್ತುಗಳಿಗೆ ಬೆಂಕಿ ಇಟ್ಟು ಸುಟ್ಟು ಬಿಡುವರು ಎಂದೂ ತಿಳಿಸಲಾಗಿತ್ತು.

ಇದು ಯುದ್ಧಕಾಲದ ಆಜ್ಞೆ. ಇದನ್ನು ಉಲ್ಲಂಘಿಸುವಂತೆಯೂ ಇರಲಿಲ್ಲ, ಆದರೆ ಈಡೇರಿಸುವಂತೆಯೂ ಇರಲಿಲ್ಲ. ಏಶಿಯಾ ಹಾಗೂ ಯುರೋಪಿನಲ್ಲೆಲ್ಲ ಖ್ಯಾತಿ ಪಡೆದ ಈ ಬೃಹತ್ ಸರ್ಕಸ್ಸನ್ನು ಇಪ್ಪತ್ತನಾಲ್ಕು ಗಂಟೆಗಳಲ್ಲಿ ಕಿತ್ತಿ ಮೂವತ್ತು ಮೈಲಿ ದೂರ ಸ್ಥಳಾಂತರಿಸುವುದು ಹೇಗೆ ? ಇದೊಂದು ಸಾಧ್ಯವಾಗದ ಕೆಲಸ. ಸರ್ಕಸ್ ಮ್ಯಾನೇಜರನು ಕನಿಷ್ಠ ಮೂರು ದಿನಗಳ ಗಡುವು ಬೇಕೆಂದು ಕೇಳಿಕೊಂಡ. ಕೈ ಮುಗಿದ, ಕಾಲು ಬಿದ್ದು ಬೇಡಿಕೊಂಡ. ಆದರೂ ಅಧಿಕಾರಿಗಳಿಗೆ ಕರುಣೆ ಬರಲಿಲ್ಲ. ಮನ ಕರಗಲಿಲ್ಲ. ಮರುದಿನ ಮುಂಜಾನೆ ಬರುವುದಾಗಿ ಅವರು ಎಚ್ಚರಿಸಿ ಹೊರಟು ಹೋದರು.

ಆ ವೇಳೆಗೆ ಸರ್ಕಸ್ಸಿನಲ್ಲಿ ಇಪ್ಪತ್ತೈದು ಆನೆ ಗಳು, ಅರವತ್ತು ಕುದುರೆಗಳು, ಹನ್ನೆರಡು ಒಂಟೆಗಳು, ಆರು ಆಸ್ಟ್ರೇಲಿಯಾದಿಂದ ತರಿಸಿದ ಕಾಂಗರೂಗಳು, ಮೂರು ಗೋರಿಲ್ಲಾಗಳು, ಆರು ಜಿಬ್ರಾಗಳು, ಎರಡು ಜಿರಾಫೆಗಳು, ಇಪ್ಪತ್ತೈದು ನಾಯಿಗಳು, ಒಂದು ನೀರುಗುದುರೆ ಅಲ್ಲದೆ ಆರು ಕರಡಿಗಳಿದ್ದವು. ಇವುಗಳನ್ನು ಬಿಟ್ಟು ನೀಲೀ ಆಕಳು, ಹೆಬ್ಬಾವು, ಮೊಸಳೆ, ಪಾರಿವಾಳಗಳು, ಮಂಗ ಮುಂತಾದ ಬೇರೆ ಬೇರೆ ಪಶು ಪಕ್ಷಿಗಳೂ ಇದ್ದವು. ಹುಲಿ ಹಾಗೂ ಸಿಂಹಗಳಿಗಾಗಿ ನಲವತ್ತು ಪಂಜರಗಳಿದ್ದವು.

ಎಲ್ಲ ಬಗೆಯ ಕೆಲಸಗಾರರನ್ನು ಅವರ ಪರಿ ವಾರದವರನ್ನು ಹಿಡಿದು ಒಟ್ಟು ಐದು ನೂರಕ್ಕೂ ಮಿಕ್ಕಿದ ದೊಡ್ಡ ಪರಿವಾರ. ಇವರಲ್ಲಿ ನೂರಾ ಇಪ್ಪತ್ತೈದು ಯುರೋಪಿಯನ್ ಕಲಾವಿದರು. ಉಳಿದವರಲ್ಲಿ ಚೀನೀ, ಜಪಾನಿ, ಮಲಯಾಳಿ, ತೆಲಗು, ತಮಿಳು, ಪಂಜಾಬಿ ಮುಂತಾದ ಪಂಚರಂಗಿ ಕಲಾವಿದರು. ಹೆಚ್ಚಾಗಿ ಭಾರತೀಯರು.

ಸರ್ಕಸ್ಸಿನ ಡೇರೆ ಎಷ್ಟು ವಿಶಾಲವಾಗಿ ತ್ತೆಂದರೆ, ಅದನ್ನು ಹತ್ತು ಸಾವಿರ ಪ್ರೇಕ್ಷಕರು ಸುಲಭವಾಗಿ ಕುಳಿತು ನೋಡಬಹುದಾಗಿತ್ತು. ಬರ್ಮಾದ ಪ್ರವಾಸಕ್ಕೆಂದೇ ನಲವತ್ತು ಸಾವಿರ ರೂಪಾಯಿ ವೆಚ್ಚ ಮಾಡಿ, ಹೊಸ ಡೇರೆ ನಿರ್ಮಿಸಲಾಗಿತ್ತು. ಈ ಡೇರೆ ನಿಲ್ಲಿಸಲು ಮಧ್ಯದಲ್ಲಿ ನಾಲ್ಕು ದೊಡ್ಡ ದೊಡ್ಡ ಉಕ್ಕಿನ ಕಂಬಗಳಿದ್ದವು. ಇವುಗಳ ಎತ್ತರ ಒಂದು ನೂರು ಅಡಿಗಳಷ್ಟಿತ್ತು. ಪ್ರತಿಯೊಂದು ಕಂಬದ ಬೆಲೆ ಆಗಿನ ಕಾಲಕ್ಕೆ ಐದು ಸಾವಿರ ರೂಪಾಯಿ ಗಳಷ್ಟಾಗುತ್ತಿತ್ತು.

ಭೀಮಕಾಯದ ಈ ನಾಲ್ಕೂ ಕಂಬಗಳೆ–

ನ್ನುಳಿದು ಅವುಗಳಿಗೆ ಸಹಾಯಕವಾಗುತ್ತಿದ್ದ ಮೂವತ್ತೆರಡು ಚಿಕ್ಕ ಚಿಕ್ಕ ಉಕ್ಕಿನ ಕಂಬಗಳಿದ್ದವು. ಅವುಗಳ ಬೆಲೆ ಮೂವತ್ತೈದು ಸಾವಿರ ರೂಪಾಯಿಗಳಷ್ಟಾಗುತ್ತಿತ್ತು. ಪ್ರೇಕ್ಷಕರಿಗಾಗಿ ನಿರ್ಮಿಸಿದ ಗ್ಯಾಲರಿ, ಉಕ್ಕಿನ ಖುರ್ಚಿಗಳು, ಕಟ್ಟಿಗೆಯ ಮಡಚುವ ಕುರ್ಚಿಗಳು ಮುಂತಾದವುಗಳಿಗಾಗಿ ಸುಮಾರು ಹದಿನೈದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಇವುಗಳ ಹೊರತಾಗಿ ವಿದ್ಯುತ್ ಉಪಕರಣಗಳು, ಧ್ವನಿವರ್ಧಕ, ದೀಪಾಲಂಕಾರ ಅವೆಲ್ಲವುಗಳಿಗಾಗಿ ಮಾಡಿಸಿದ ಪೆಟ್ಟಿಗೆಗಳು, ಇವೆಲ್ಲಾ ನಾಲ್ಕಾರು ಸಾವಿರ ರೂಪಾಯಿ ವಸ್ತುಗಳು.

ಇಷ್ಟೆಲ್ಲ ಸಾಮಾನುಗಳನ್ನು ಹೇರಿಕೊಂಡು ಸಾಗಿಸಲು ಬೇಕಾಗಿದ್ದ ನಲವತ್ತು ಟ್ರಕ್‌ಗಳೂ ಸರ್ಕಸ್ಸಿಗೇ ಸೇರಿದ್ದವು.

ಸರ್ಕಸ್ ಮಾಲಕರು ಹಾಗೂ ಮ್ಯಾನೇಜರಿಗೆ ಅಲ್ಲದೆ ಇತರ ಅಧಿಕಾರಿ ವರ್ಗಕ್ಕೆ, ಕಂಪನಿ ಕೆಲಸಗಾರರಿಗೆ, ಕಲಾವಿದರಿಗೆ ವಾಸಿಸಲು ವಿಶೇಷ ರೀತಿಯಿಂದ ತಯಾರಿಸಿದ ಕೊಠಡಿಗಳಿದ್ದವು ಪ್ರಥಮ ವರ್ಗದ ರೈಲು ಬೋಗಿಯಂತಿರುವ ಈ ಕೊಠಡಿಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿ ವೆಚ್ಚವಾಗಿತ್ತು. ಈ ಕೊಠಡಿಗಳನ್ನು ಕೊಂಡೊಯ್ಯಲು ಉಗಿಯಿಂದ ನಡೆಯುವ ನಲವತ್ತು ಸಾವಿರ ರೂಪಾಯಿ ತೆತ್ತು ಕೊಂಡ ರೇಲ್ವೆ ಇಂಜಿನ್ ಈ ರೇಲ್ವೆ ಇಂಜಿನ್ ಸರ್ಕಸ್ ಪ್ರಪಂಚವನ್ನು ಒಂದೂರಿನಿಂದ ಮತ್ತೊಂದು ಊರಿಗೆ ಎಳೆದೊಯ್ಯುತ್ತಿತ್ತು. ಅದಕ್ಕಾಗಿ ಮೂವತ್ತೇಳು ರೇಲ್ವೆ ಬೋಗಿಗಳಿದ್ದವು.

ಇಷ್ಟೆಲ್ಲ ಸರಂಜಾಮುಗಳಿದ್ದ ಪರ್ವತಾಕಾರದ ಸರ್ಕಸ್‌ನ್ನು ಸ್ಥಳಾಂತರಿಸಲು ಒಂದು ದಿನ ಸಾಕಾದೀತೆ? ಅದರಲ್ಲೂ ಆಗಲೇ ಎಂಟು ತಾಸುಗಳು ಕಳೆದುಹೋಗಿದ್ದವು......ಸಾಗಿಸಲಾಗದಿದ್ದರೆ, ಮಕ್ಕಳಂತೆ ಸಾಕಿ, ಬೆಳೆಸಿ ಅವುಗಳೊಡನೆ ಆಡಿದ, ಪ್ರಾಣಿಗಳನ್ನು ಗುಂಡಿಟ್ಟು ಕೊಲ್ಲಲಾಗುವುದು. ಅದನ್ನು ನೆನೆಸಿಕೊಳ್ಳುತ್ತಲೇ ದುಃಖ ಉಕ್ಕಿ ಬಂದು ಎಳೆಯ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು ಮ್ಯಾನೇಜರ್ ಜೋಶಿ ಹಾಗೂ ಮಾಲಕರಾದ ಸಮಯುವತ ಶಿವಾಜಿ ಕಾರ್ಲೇಕರ್.

ಶಿವಾಜಿ ಕಾರ್ಲೇಕರರು ಶಂಕರರಾವ್ ಕಾರ್ಲೇಕರ್ ಅವರ ಹಿರಿಯ ಮಗ. ಆದೇ ಮೆಟ್ರಿಕ್ ಪರೀಕ್ಷೆ ಪಾಸಾಗಿದ್ದರು. ತಂದೆ ಒಮ್ಮಿಂದೊಮ್ಮೆಲೆ ಅಸ್ವಸ್ಥರಾಗಿದ್ದರಿಂದ ಬರ್ಮಾಪ್ರವಾಸಕ್ಕೆ ಶಿವಾಜಿ ತಾವೇ ಬಂದಿದ್ದರು. ವಯಸ್ಸು ಚಿಕ್ಕದಾಗಿದ್ದರೂ-ಅನುಭವ ವಿಶಾಲವಾಗಿತ್ತು. ಮೊದಲಿನಿಂದಲೂ ತಂದೆಯೊಡನೆ ಓಡಾಡಿದ್ದರಿಂದ ಎಲ್ಲ ಬಗೆಯ ಕೆಲಸದ ಮಾಹಿತಿ ಇತ್ತು.

ಕರಾಳ ದಿವಸ ಆಗಮಿಸಿತು. ಹತ್ತು ಹನ್ನೆರಡು ಗಂಟೆಗಳು ಕಳೆಯಲು ಸಮಯವೆಷ್ಟು ಬೇಕು? ಮಾಲಿಕರು, ಮ್ಯಾನೇಜರರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿ, ಸಮಯ ಕೇಳಿದರು, ಅಧಿಕಾರಿಗಳು ಒಪ್ಪಲಿಲ್ಲ. ಯುದ್ಧದ ಸಮಯ, ಅವರು ರಿಸ್ಕ್ ತೆಗೆದುಕೊಳ್ಳಲು ಮುಂದಾಗಲಿಲ್ಲ.

ಒಮ್ಮೆಲೆ ಸರ್ಕಸ್ ಡೇರೆ ಗುಂಡಿನ ಸುರಿಮಳೆಯ ಸಪ್ಪಳದೊಂದಿಗೆ ಪ್ರತಿಧ್ವನಿಸಿತು. ಇಪ್ಪತ್ತು ನಿಮಿಷ ಗುಂಡು ಹಾರಿಸಿ ಅಧಿಕಾರಿಗಳು ವಾಪಸಾದಾಗ ಲಕ್ಷಾವಧಿ ಜನರನ್ನು ತಮ್ಮ ಮುದ್ದು ಚಟುವಟಿಕೆಗಳಿಂದ ನಕ್ಕು ನಲಿಸಿದ ಮೂಕ ಪ್ರಾಣಿಗಳು ರಕ್ತದ ಮಡುವಿನಲ್ಲಿ ಮಲಗಿದ್ದವು.

ಜಪಾನಿನ ಬಾಂಬ್ ದಾಳಿಯಿಂದಾಗಿ ಸರ್ಕಸ್ ಕಂಪನಿಯ ಆಳಿಕೆ ಮುಗಿದಿತ್ತು. ರಂಗೂನು ಅಶಾಂತಿಯ ಮಡಿಲಾಗಿತ್ತು. ಎಲ್ಲೆಡೆ ಸಾವು ನಾಟ್ಯವಾಡುತ್ತಿತ್ತು ಪ್ರಾಣ ಉಳಿಸಿಕೊಳ್ಳುವುದು ಮುಖ್ಯವಾಗಿತ್ತು. ಅದರೊಂದಿಗೆ ಸರ್ಕಸ್ಸಿನಲ್ಲಿದ್ದ ಐದುನೂರು ಜನರ ಪರಿವಾರವನ್ನು ನೋಡಿಕೊಳ್ಳಬೇಕಾಗಿತ್ತು. ಹೀಗಾಗಿ ಶಿವಾಜಿ ಕಾರ್ಲೇಕರರು ಮ್ಯಾನೇಜರ್ ಜೋಶಿಯವರ ಸಮೇತ, ಭಾರತದತ್ತ ಪ್ರಯಾಣ ಹೊರಟರು– ಅದೂ ಪಾದಯಾತ್ರೆಯಿಂದ.

ಅವರೆಲ್ಲ ಜೊತೆಗೂಡಿ ರಂಗೂನನ್ನು ಬಿಟ್ಟಾಗ ಮತ್ತಿಷ್ಟು ಜನ ಅವರೊಂದಿಗೆ ಸೇರಿಕೊಂಡು ಅದೊಂದು ಎಂಟು ನೂರು ಜನರ ದೊಡ್ಡ ಗುಂಪಾಯಿತು.

ಪ್ರಯಾಣದ ಮಧ್ಯೆ, ಒಂದು ರಾತ್ರಿ ಲೂಟಿಗಾರರು ಅವರ ಮೇಲೆ ಬಿದ್ದು ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಪರಾರಿಯಾದರು. ಒಂದು ಕಡೆ ಸಶಸ್ತ್ರ ನಾಗಾಗಳೊಂದಿಗೆ ಘರ್ಷಣೆಯೂ ಆಯಿತು. ಅದರಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನ ಪ್ರಾಣತೆತ್ತರು.

ಆಸಾಮ ಹಾಗೂ ಆರಾಕೋರಮ್ ಅರಣ್ಯಗಳಂತೂ ಕ್ರೂರ ಮತ್ತು ವಿಷಜಂತುಗಳ ಬೀಡು. ಹೆಜ್ಜೆ ಹೆಜ್ಜೆಗೂ ಗಂಡಾಂತರ. ರಾತ್ರಿ ಮಲಗಿಕೊಂಡರೆ ಯಾವ ಆಪತ್ತು ಒದಗುವುದೋ ಎಂದು ಭಯಪಟ್ಟು ಸಾಧ್ಯವಾದಷ್ಟು ಕಡಿಮೆ ನಿದ್ದೆ ಮಾಡಿ ಹಗಲು ರಾತ್ರಿ ದಾರಿ ಸವೆಸುತ್ತಿದ್ದರು. ಕಣ್ಣಿಗೆ ಕಾಣುವ ಕ್ರೂರ ಪ್ರಾಣಿಗಳಿಂದ ಹೇಗೋ ಪಾರಾಗಬಹುದು. ಆದರೆ ಒಮ್ಮೆಲೆ ಭುಸ್ ಎಂದು ಹತ್ತಿರವೇ ಪ್ರತ್ಯಕ್ಷವಾಗುವ ಸರ್ಪಗಳಿಂದ ಹೇಗೆ ಪಾರಾಗುವುದು ? ಆ ಅರಣ್ಯಗಳಲ್ಲಿಯಂತೂ ಒಂದು ಅಡಿಯಿಂದ ಹಿಡಿದು ಐವತ್ತು ಅಡಿಗಳಷ್ಟು ಉದ್ದವಾಗಿರುವ ಸರ್ಪಗಳು ಇದ್ದವು. ಹಸಿವು, ನೀರಡಿಕೆ, ನಿದ್ದೆ, ಯಾವುದಕ್ಕೂ ಲಕ್ಷ್ಯಗೊಡದೆ ದಾರಿ ಸವೆಸುತ್ತಿದ್ದರು.

ಅಷ್ಟಾದರೂ, ಒಂದು ಭಯಾನಕ ರೋಮಾಂಚಕಾರ ಘಟನೆಯೊಂದು ನಡೆದೇಹೋಯಿತು. ಅವರು ಅಡವಿಯ ಮಾರ್ಗದಲ್ಲಿ ಸಾಗುತ್ತಿದ್ದಾಗ ಸುಮಾರು ನಲವತ್ತು ಐವತ್ತು ಅಡಿ ಉದ್ದಾದ ಹೆಬ್ಬಾವೊಂದು ಎದುರಾಯಿತು. ಅದನ್ನು ಕಂಡು ನಾಲ್ಕಾರು ಜನರು ಚೀರಿಕೊಂಡು ದೂರ ಓಡಿದರು. ಆ ನಂತರ ತಮ್ಮ ಹಿಂದೆ ಇದ್ದವರನ್ನು ಎಚ್ಚರಿಸಿದರು. ಇದರಿಂದಾಗಿ ಹಿಂದೆ ಬರುತ್ತಿದ್ದವರು ಸರ್ಪದಿಂದ ದೂರಕ್ಕೆ ಹಾಯ್ದುಹೋಗುತ್ತಿದ್ದರು.

ಸಂಜಪ್ಪ ಕುರುಡ. ಸರ್ಕಸ್ಸಿನಲ್ಲಿ ಕೆಲಸ ಮಾಡುವ ಕಲಾವಿದ. ಅವನ ಕೈ ಹಿಡಿದು ಕರೆತರುತ್ತಿದ್ದ ಬಾಲಕ, ಹಾವನ್ನು ಕಂಡು ಭೀತಿಯಿಂದ ಚೀರಿಕೊಂಡು ಓಡಿಹೋದ. ಆಗ ಸಂಜಪ್ಪ ದಾರಿಗಾಣದೆ ನೇರವಾಗಿ ಹೆಬ್ಬಾವಿನ ಬಾಯಿಗೇ ಬಂದ. ಜನ ಕೂಗಿಕೊಂಡರು. ಅದರಿಂದಾಗಿ ಭಯಭ್ರಾಂತವಾದ ಆತ ಎತ್ತ ಹೋಗಬೇಕೆಂಬುದು ಅರ್ಥವಾಗದೇ ಕೊನೆಗೆ ಹೆಬ್ಬಾವಿನ ಸಮೀಪಕ್ಕೇ ನಡೆದ. ಹೆಬ್ಬಾವು ಅವನನ್ನು ಸುತ್ತಿ ನುಂಗಿಬಿಟ್ಟಿತು. ನೂರಾರು ಜನ ಈ ಭೀಭತ್ಸ ದೃಶ್ಯವನ್ನು ನೋಡಿದರು.

ಅಷ್ಟರಲ್ಲಿ ಹತ್ತಿಪ್ಪತ್ತು ಜನ ಧೈರ್ಯಶಾಲಿಗಳು ಮುಂದೆ ಬಂದರು. ತಮ್ಮ ಕೈಯಲ್ಲಿದ್ದ ಕೊಡಲಿ, ಚೂರಿಗಳಿಂದ ಹಾವನ್ನು ಕೊಂದು, ನಂತರ ಅದನ್ನು ಉದ್ದಕೂ



ಸೀಳಿದರು. ಅವರ ಹೊಟ್ಟೆಯೊಳಗೆ ಪವಡಿಸಿದ್ದ ನಂಜಪ್ಪನಿಗೆ ಎಚ್ಚರವಿರಲಿಲ್ಲ. ಎಲ್ಲರೂ ಸೇರಿ ಪ್ರಥಮೋಪಚಾರ ಮಾಡಿದ ನಂತರ ಎಚ್ಚರ ಬಂದಿತು.

ಈ ರೀತಿ ಸಾವಿನ ಗರ್ಭ ಹೊಕ್ಕು ಹೊರ ಬಂದ ನಂಜಪ್ಪ ಮುಂದೆ ಎಂಟು ವರ್ಷ ಬದುಕಿ. ಪ್ರಸಿದ್ಧ ಜೆಮಿನಿ ಸರ್ಕಸ್ಸಿನಲ್ಲಿ ಕೆಲಸ ಮಾಡಿದ.

ಪ್ರಯಾಣ ಮುಂದುವರೆಯಿತು. ಆರಾಕೋರವ್ ಅರಣ್ಯದಲ್ಲಿಯು ಸೊಳ್ಳೆಗಳು ದಾಳಿ ಮಾಡಿದವು. ಅದರ ಪರಿಣಾಮವಾಗಿ ನೂರಾರು ಜನ ಮಲೇರಿಯಕ್ಕೆ ತುತ್ತಾದರು. ಐವತ್ತಕ್ಕೂಹೆಚ್ಚು ಜನರು ಅದಕ್ಕೆ ಬಲಿಯಾದರು.

ಹಸಿವು, ನೀರಡಿಕೆ, ಕಳ್ಳಕಾಕರ ಹಾವಳಿ, ವನ್ಯ ಮೃಗಳ ಭಯ ಇವೆಲ್ಲವುಗಳಿಗೆ ಸಿಕ್ಕು ಅವರೆಲ್ಲ ಜರ್ಜರಿತರಾದರು. ಶಿವಾಜಿ ಕಾರ್ಲೇಕರರಂತೂ ಬುದುಕುವ ಆಶೆಯನ್ನೇ ಬಿಟ್ಟಿದ್ದರು. ದಿನನಿತ್ಯ ತಂದೆ– ತಾಯಿಗಳ ನೆನಪು ಅವರಿಗೆ ಬರುತ್ತಿತ್ತು. ಮ್ಯಾನೇಜರ್ ಜೋಶಿ ಅವರು ಸಂತೈಸದಿದ್ದರೆ ಬಹುಶಃ ಶಿವಾಜಿ ಕಾರ್ಲೇಕರರು ಸಹ ದಾರಿ ಮಧ್ಯದಲ್ಲಿಯೇ ಸಾವನ್ನಪ್ಪುತ್ತಿದ್ದರೇನೋ.

ಹಾಗೂ ಹೀಗೂ ಕೊನೆಗೊಮ್ಮೆ ಅಳಿದುಳಿದ ಜನರು ಮಣಿಪುರ ಅರಣ್ಯಕ್ಕೆ ಬಂದು ತಲುಪಿದರು. ದುರ್ದೈವ ಅಲ್ಲಿಯೂ ಅವರ ಬೆನ್ನು ಬಿಡಲಿಲ್ಲ. ಅವರನ್ನು ತಡೆದ ದರೋಡೆಕೋರರು ಹರಕು ಬಟ್ಟೆ ಸಹ ಬಿಡದೆ ಇದ್ದುಬಿದ್ದುದನ್ನೆಲ್ಲ ಕಿತ್ತುಕೊಂಡು ಓಡಿಹೋದರು.

ಒಂದಲ್ಲ ಎರಡಲ್ಲ, ಹತ್ತಾರು ಬಗೆಯ ಆಪತ್ತುಗಳಲ್ಲಿ ಸಿಕ್ಕು ತತ್ತರಿಸಿದ ಅವರ ಮೇಲೆ ಕೊನೆಗೊಮ್ಮೆ ದೇವರು ಕರುಣೆಯ ದೃಷ್ಟಿ ಬೀರಿದ. ಬರ್ಮಾದಲ್ಲಿದ್ದ ಬ್ರಿಟಿಶರ ಸಹಾಯಕ್ಕೆ ಭಾರತದಿಂದ ಹೋಗಿದ್ದ ಬ್ರಿಟಿಶ ಸೈನಿಕ ಟ್ರಕ್ಕುಗಳು ಮಾರ್ಗ ಮಧ್ಯದಲ್ಲಿ ಇವರಿಗೆ ಕಂಡವು. ಜೋಶಿಯವರು ಕ್ಯಾಪ್ಟನ್ನನಿಗೆ ಎಲ್ಲವನ್ನೂ ತಿಳಿಸಿ ಹೇಳಿದ. ಅವರಿಂದ ಸಹಾಯದ ಭರವಸೆ ದೊರೆಯಿತು. ಆಹಾರ, ನೀರು, ವಸತಿ, ಬಟ್ಟೆ ಎಲ್ಲವೂ ಅವರಿಂದ ದೊರೆತವು.

ಇಂಫಾಲದ ವರೆಗೆ ಟ್ರಕ್ಕುಗಳಲ್ಲಿ ಬಂದು, ಪುನಃ ಅಲ್ಲಿಂದ ಕಾಲುನಡಿಗೆಯ ಪ್ರವಾಸ ಪ್ರಾರಂಭವಾಯಿತು. ಅಲ್ಲಿಂದ ದಿಗ್ಬೋಯಿ. ದಿಗ್ಬೋಯಿಯಿಂದ ಕಲಕತ್ತಾ.

ಮುಂದೆ ಈ ಪ್ರವಾಸ ಸುಖಕರವಾಗಿ ಮುಕ್ತಾಯವಾಯಿತು. ರಂಗೂನಿನಿಂದ ಹೊರಟ ಎಂಟುನೂರು ಜನರಲ್ಲಿ, ಸರಿಯಾಗಿ ತಮ್ಮ ತಮ್ಮ ಜಾಗೆ ಸೇರಿದವರು ಕೇವಲ ನೂರಾ ಐವತ್ತೆಂಟು ಜನ ಮಾತ್ರ. ಉಳಿದವರೆಲ್ಲ ಮಧ್ಯದಾರಿಯಲ್ಲೇ ಅಸು ನೀಗಿದ್ದರು.

ಶಿವಾಜಿ ಕಾರ್ಲೇಕರರು ಭಾರತ ಸೇರಿದ ನಂತರ ಸುಮಾರು ಆರು ತಿಂಗಳು ಹಾಸಿಗೆ ಹಿಡಿದರು. ಮಲಗಿದಾಗ, ರಾತ್ರಿ ಕನಸುಗಳಲ್ಲಿ ಅವರು ಅನುಭವಿಸಿದ ನರಕ, ಕಂಡ ಭಯಂಕರ ದೃಶ್ಯಗಳಿಂದಾಗಿ ಎಷ್ಟೋ ಬಾರಿ ನಿದ್ದೆಯಲ್ಲಿ ಕೂಗುತ್ತ ಎದ್ದು ಕುಳಿತುಕೊಳ್ಳುತ್ತಿದ್ದರು.

ಶಂಕರ ಕಾರ್ಲೇಕರರಂತೂ ಒಂದು ಕ್ಷಣ– ಒಂದೇ ಒಂದು ಕ್ಷಣ– ದೇಹದಲ್ಲಿ ಮಿಂಚು ಹರಿದಾಗ, ತತ್ತರಿಸುವಂತೆ ತತ್ತರಿಸಿ ಕಣ್ಣು ಮುಚ್ಚಿದರು. ಅವರ ಕಣ್ಣುಗಳ ತುದಿಯಲ್ಲಿ ಎರಡು ಹನಿಗಳು ಗೋಚರಿಸಿದವು.

ಈ ರೀತಿ ಜಗತ್ತಿನಲ್ಲಿ ಭಾರತದ ಹಿರಿಮೆಯನ್ನು ಸಾರಿದ ಕಾರ್ಲೇಕರ್ ಸರ್ಕಸ್ಸು ಅವಸಾನ ಹೊಂದಿತು. ಅದರೊಂದಿಗೆ ಭಾರತದ ಸರ್ಕಸ್ಸಿನ ಇತಿಹಾಸದ ಅಧ್ಯಾಯವೊಂದು ಕೊನೆಗೊಂಡಿತು.

(ಸಾಧಾರ)



ಪುಸ್ತಕ ವಿಭಾಗ



# ರಾಧೇಯ

ಆದ್ಯ ರಾಮಾಚಾರ್ಯ

# ರಾಧೇಯ

ಕಳೆದ ಸಂಚಿಕೆಯಿಂದ ಮುಂದುವರೆದ ಸಂಗ್ರಹಾನುವಾದದ ಎರಡನೆಯ ಹಾಗೂ ಕೊನೆಯ ಕಂತು ಇದು,

## ದಾನಶೂರತೆ

ಒಂದು ರಾತ್ರಿ ಕರ್ಣನಿಗೆ ಎಚ್ಚರವಾಯಿತು. ಭಯಂಕರ ಶಬ್ದ ಕೇಳಿಸಿತು. ಅದ್ಭುತ ಪ್ರಕಾಶ ಕಾಣಿಸಿತು. ಕರ್ಣನ ಉಪಾಸ್ಯ ದೇವತೆಯಾದ ಸೂರ್ಯನು ಕಾಣಿಸಿಕೊಂಡನು. "ಇನ್ನು ಬೇಗನೆ ಪಾಂಡವರ ವನವಾಸ ಮುಗಿಯುವುದು. ಅಜ್ಞಾತವಾಸದ ಅವಧಿ ಮುಗಿದು ಅವರು ಹೊರಬರುವರು. ಅವರ ವಿಜಯಕ್ಕಾಗಿ ನಾಳೆ ನಿನ್ನ ಬಳಿಗೆ ಇಂದ್ರನು ಯಾಚಕನಾಗಿ ಬರುವನು. ಅರ್ಜುನನು ಇಂದ್ರನ ಭಕ್ತನು. ಅರ್ಜುನನಿಗೆ ಯುದ್ಧದಲ್ಲಿ ಜಯವನ್ನುಂಟು ಮಾಡುವುದಕ್ಕಾಗಿ, ಇಂದ್ರನು ನಿನ್ನ ಕವಚ ಕುಂಡಲಗಳನ್ನು ಬೇಡುವನು. ಯಾಚಿತನಿಂದ ಬಂದವರಿಗೆ ಕೇಳಿದ್ದನ್ನು ಕೊಡುವುದು ದಾನಿಯ ಲಕ್ಷಣವಲ್ಲ; ಅದು ಉಪದೇಶ. ಅವನ್ನು ಕೊಟ್ಟರೆ ನಿನಗೆ ಉಳಿಯುವುದು ಕೀರ್ತಿ ಮಾತ್ರ; ಜೀವವುಳಿಯದು"–ಎಂದು ತಿಳಿಸಿದನು. ಆದರೆ ಕರ್ಣನು ತನ್ನ ತ್ಯಾಗ ಗುಣವನ್ನು ಬಿಡಲು ಒಪ್ಪಲಿಲ್ಲ. "ಹಾಗಿದ್ದರೆ ಇಂದ್ರನಿಂದ ಅಮೋಘ ವಾದ ವರವನ್ನು ಪಡೆದುಕೋ"–ಎಂದು ಸೂಚಿಸಿ, ಸೂರ್ಯದೇವನು ಮರೆಯಾದನು.

ಮರುದಿನ ಕರ್ಣನು ಸೂರ್ಯೋಪಾಸನೆಗಾಗಿ ಗಂಗಾ ನದಿಯ ದಡಕ್ಕೆ ಹೋದನು. ನಿತ್ಯ–ದಂತೆ ರಥವನ್ನು ಮರದ ನೆರಳಿನಲ್ಲಿ ನಿಲ್ಲಿಸಿ, ಸಾರಥಿಯನ್ನೂ ಅಲ್ಲಿಯೇ ಬಿಟ್ಟು, ನದೀ ಪಾತ್ರಕ್ಕಿಳಿದು ತರ್ಪಣ ಕೊಡುತ್ತಾ, "ಯಾರಾದರೂ ಯಾಚಕರಿದ್ದಾರೆಯೆ ?" ಎಂದನು. ಇಂದ್ರನು ವೃದ್ಧಬ್ರಾಹ್ಮಣನಾಗಿ ಅಲ್ಲಿಗೆ ಬಂದಿದ್ದನು. ತನ್ನ ಪೌರುಷ ಹಾಗೂ ಧರ್ಮ–ಇವೆರಡರ ಹೊರತಾಗಿ ಯಾವುದನ್ನೂ ಕೇಳ ಬಹುದೆಂದು ಹೇಳಿದ ಕರ್ಣನ ಮಾತನ್ನು ಕೇಳಿ ಬ್ರಾಹ್ಮಣನು, "ಅಂಗರಾಜ, ನನಗೆ ನಿಮ್ಮ ಕವಚಕುಂಡಲಗಳು ಬೇಕಾಗಿವೆ," ಎಂದನು. "ಕೊಟ್ಟೆ," ಎಂದು ಒಡನೆಯೇ ಕರ್ಣನು ಉತ್ತರ ವಿತ್ತನು. "ಬಡತನವೆಂಬುದು ಎಷ್ಟೊಂದು ಕಷ್ಟ ! ಸ್ವರ್ಗಾಧಿಪನಾದ ಇಂದ್ರನೂ ಯಾಚನೆಗಾಗಿ ಬಡ ಬ್ರಾಹ್ಮಣ ವೇಷದಲ್ಲಿ ಬರಬೇಕಾಯಿತಲ್ಲ!" ಎಂದುಕೊಂಡು ಆತನನ್ನು ನೋಡಿದಾಗ, ಬ್ರಾಹ್ಮಣನು ದೇವೇಂದ್ರನಾಗಿಯೇ ಕಾಣಿಸಿದನು. "ಈ ದಾನದಿಂದ ನಾನು ವಿರೂಪಿಯಾಗಬಾರದು." ಎಂಬ ವರವನ್ನು ಕರ್ಣನು ಕೇಳಿಕೊಂಡ. ಇಂದ್ರನಿಂದಲೇ ಕೊಡಲ್ಪಟ್ಟ ಅಸ್ತ್ರದಿಂದ ತನ್ನ ಕುಂಡಲಗಳನ್ನೂ ಕವಚವನ್ನೂ ಕಿತ್ತನು. ಮುಖದಲ್ಲಿ ನೋವಿನ ಛಾಯೆಯಿರಲಿಲ್ಲ;

ಸ್ವಲ್ಪವೂ – ಅಳುಕಲಿಲ್ಲ. ಮುಖವು ಮುಗುಳು ನಗೆ ಬೀರುತ್ತಿತ್ತು. ಕವಚವನ್ನು ಕಿತ್ತಂತೆಲ್ಲ ಆ ಭಾಗಗಳು ಮೊದಲಿನಂತೆ ಕೂಡಿಬಂದವು. "ಆ ಕವಚಕುಂಡಲಗಳೊಂದಿಗೆ ಈ ಪ್ರಾಣ ಕೂಡ ದಾನವಾಗಿ ಸಲ್ಲುತ್ತಿದ್ದರೆ ಚೆನ್ನಾಗಿರ ತ್ತಿತ್ತು," ಎಂದುಕೊಂಡನು. "ರಾಧೇಯಾ, ಏನು ಬೇಕು, ಕೇಳು," ಎಂದಾಗ ಕರ್ಣನು, "ದೇವ, ನಿಮ್ಮ ಅನುಗ್ರಹದಿಂದಲೇ ಮಳೆ ಬೆಳೆಯಾಗುತ್ತದೆ. ಕವಚ ಕುಂಡಲಗಳನ್ನು ಕೊಡುತ್ತ ಒಂದು ಶಕ್ತಿಯನ್ನು ಪಡೆಯಲು ವಚನಬದ್ಧನಾಗಿದ್ದೇನೆ. ಪ್ರಬಲ ಶತ್ರುವನ್ನು ನಾಶಪಡಿಸುವ ಶಕ್ತಿ ನನಗೆ ಬರಲಿ," ಎಂದು ಕೇಳಿಕೊಂಡನು. ಅದಕ್ಕೆ ಇಂದ್ರನು ಅವನಿಗೆ ವಾಸವೀಶಕ್ತಿಯನ್ನು ಕೊಟ್ಟು, "ಈ ಶಕ್ತಿಯನ್ನು ನೀನು ಒಂದು ಸಲ ಮಾತ್ರ ಪ್ರಯೋಗಿಸ ಬಹುದು. ಅನಂತರ ಆ ಶಕ್ತ್ಯಾಯುಧ ಮರಳಿ ನನ್ನಲ್ಲಿಗೆ ಬರುವುದು. ನಿನ್ನ ಸ್ವಾರ್ಥಕ್ಕಾಗಿ ಇದನ್ನು ಬಳಸಬೇಡ," ಎಂದು ನುಡಿದು ಅಂತರ್ಧಾನವಾದನು. ಕರ್ಣನು ತನ್ನ ಅರ ಮನೆಗೆ ಹಿಂದೆರಳಿದನು.

ವಿರಾಟ ನಗರದಲ್ಲಿ ಕೀಚಕನ ಸಂಹಾರವಾದ ಒಂದು ಸುದ್ದಿಯನ್ನು ಓರ್ವ ದೂತನು ಹಸ್ತಿನಾವತಿಗೆ ತಂದಿದ್ದ. "ಆ ಕಾರ್ಯವು ಗಂಧರ್ವ ರಿಂದಾಗಿದೆ. ವಿರಾಟನ ಸಂಗೀತ ನೃತ್ಯ ಶಾಲೆಯಲ್ಲಿ ತುಂಡು ತುಂಡಾದ ಕೀಚಕನ ದೇಹ ಭಾಗಗಳು ದೊರಕಿವೆ. ಅರಮನೆಯಲ್ಲಿದ್ದ ಸೈರಂಧ್ರಿ ಎಂಬ ಸುಂದರಿಯ ಮೇಲೆ ಕೀಚಕನು ಬಲಾತ್ಕಾರ ಮಾಡಲು ಬಂದುದರಿಂದ ಅವನ ವಧೆಯಾಯಿತು" ಎಂದು ತಿಳಿದು ಬಂತು. ಕೂಡಲೇ ದುರ್ಯೋಧನನು ಕರ್ಣನನ್ನು ಕರೆಸಿ, ಅವನಲ್ಲಿ ಈ ಸಂಗತಿಯನ್ನು ತಿಳಿಸಿದನು. ಆಗ ಕರ್ಣನು, "ಕೀಚಕನನ್ನು ಕೊಂದವನು ಭೀಮನೇ ಇರಬೇಕು. ವಿರಾಟನ ಮನೆಯ ಪಾಂಡವರು ಇರಬಹುದು. ಚಾಣಾಕ್ಷರಾದ ಗುಪ್ತಚಾರರನ್ನು ಕಳುಹು," ಎಂದನು. ಕೌರವರು ಗುಪ್ತಚರರನ್ನು ಕಳುಹಲೊಪ್ಪಿದನು. ತ್ರಿಗರ್ತದ ರಾಜನಾದ ಸುಶರ್ಮನು ಬಂದು, ಈಗ ಕೀಚಕನಿಲ್ಲದಿರುವುದರಿಂದ ವಿರಾಟನನ್ನು ಸೋಲಿಸುವುದು ಸುಲಭವೆಂದು ಸೂಚಿ ಸಿರುವುದಾಗಿಯೂ ತಿಳಿಸಿದನು.

ಭೀಷ್ಮ, ದ್ರೋಣರೊಂದಿಗೆ ಕೌರವಸೇನೆ ವಿರಾಟನಗರದ ಮೇಲೆ ದಂಡೆತ್ತಿತು. ಸೈನ್ಯ ವನ್ನು ಎರಡು ಭಾಗಮಾಡಿ, ಒಂದು ಭಾಗವು ಸುಶರ್ಮನ ನೇತೃತ್ವದಲ್ಲಿ ನಡೆದು ವಿರಾಟನ ಗೋಪಾಲಕರನ್ನು ಹೊಡೆದೋಡಿಸಿತು. ಗೋವುಗಳನ್ನು ಬಂಧಿಸಲಾಯಿತು. ಎದುರಿಸಿದ ವಿರಾಟನನ್ನು ಸೆರೆಹಿಡಿಯಲಾಯಿತು. ಕೌರವನ ಇನ್ನೊಂದು ಸೈನ್ಯವು ಮುಂದೆ ಬಂತು. ಅಜ್ಞಾತವಾಗಿದ್ದ ಪಾಂಡವರು ಪ್ರಕಟವಾದರೂ ವಿರಾಟನನ್ನು ಬಿಡಿಸಿದರು. ಯುದ್ಧದಲ್ಲಿ ಅರ್ಜುನನು ಭೀಷ್ಮ, ದ್ರೋಣ, ಕರ್ಣರನ್ನು ಸೋಲಿಸಿದನು. ಪಾಂಡವರು ಪ್ರಕಟವಾದೊಡನೆ ಕರ್ಣನು ದುರ್ಯೋಧನನಿಗೆ ಹಿಂದಿರುಗಲು ಸಲಹೆ ನೀಡಿದನು. ಮುಂದಿನ ಯುದ್ಧಕ್ಕೆ ಸಿದ್ಧತೆ ಮಾಡೋಣವೆಂದು ತಿಳಿಸಿದನು. ಕೌರವ ಸೇನೆ ಹಿಂದೆರಳಿತು. ಇನ್ನೀಗ ಎರಡೂ ಕಡೆಯಲ್ಲಿ ರಾಜತಂತ್ರಗಳು ಭರದಿಂದ ಸಾಗತೊಡಗಿದವು.

## ಸಂಧಿ ಪ್ರಸ್ತಾವ

ಪಾಂಡವರು ದ್ರುಪದನ ಪುರೋಹಿತನನ್ನು ಅರ್ಧರಾಜ್ಯದ ಬೇಡಿಕೆಗಾಗಿ ಕೌರವರಲ್ಲಿಗೆ ಕಳುಹಿಸಿದರು. ದುರ್ಯೋಧನನು ಒಪ್ಪಲಿಲ್ಲ. ಈಕಡೆಯಿಂದ ಧೃತರಾಷ್ಟ್ರನು ಸಂಜಯನನ್ನು ಪಾಂಡವರ ಬಳಿಗೆ ಕಳುಹಿಸಿ ಸಮಾಧಾನ ಪ್ರಯತ್ನವನ್ನು ಮಾಡಿದನು. ಅದೂ ಫಲಿಸಲಿಲ್ಲ. ಕೃಷ್ಣನು ಸಂಧಾನಕ್ಕಾಗಿ ಹಸ್ತಿನಾ ವತಿಗೆ ಬಂದನು. ಅವನಿಗೆ ಎಲ್ಲೆಡೆ ಸ್ವಾಗತ ಲಭಿಸಿತು. ಧೃತರಾಷ್ಟ್ರನನ್ನು ಕಂಡು ಮರಳು ತ್ತಿದ್ದ ಕೃಷ್ಣನಿಗೆ ದುರ್ಯೋಧನನು ಆತಿಥ್ಯವನ್ನು ಕೊಡುವುದರಲ್ಲಿದ್ದನು. ಆದರೆ ಕೃಷ್ಣನು, ಅದನ್ನು ಸ್ವೀಕರಿಸದೆ, ವಿದುರನ ಬಿಡಾರಕ್ಕೆ ತೆರಳಿದನು. ಇದರಿಂದ ದುರ್ಯೋಧನನು ಬೇಸರಗೊಂಡ. ಕರ್ಣನು "ದೂತ ಕಾರ್ಯಮುಗಿ

ಯುವ ಮೊದಲು ಆತಿಥ್ಯ ಸ್ವೀಕರಿಸುವುದು ದೂತಧರ್ಮವಲ್ಲ; ಈಗ ಅಂಥ ವಿಚಾರಕ್ಕೆ ಗಮನಕೊಡವೆ. ನಾಳೆ ಕೃಷ್ಣನು ಹೇಳುವುದನ್ನು ನಾವು ಮನ್ನಿಸಬೇಕೋ ಬೇಡವೋ ಯೋಚಿಸು," ಎಂದು ಹೇಳಿದನು. "ಯೋಚಿಸುವುದೇನಿದೆ? ಅವನ ಸಲಹೆ ಒಪ್ಪಿಗೆಯಾದರೆ ಸ್ವೀಕರಿಸೋಣ. ಇಲ್ಲದಿದ್ದರೆ ಅವನನ್ನೇ ಬಂಧಿಸಿ ಇಟ್ಟು ಬಿಡೋಣ," ಎಂದು ದುರ್ಯೋಧನನು ನುಡಿದು ಹೊರಟುಹೋದನು. ಮರುದಿನ ಬೆಳಗ್ಗೆ ಕೃಷ್ಣನು ವಿದುರನ ಮನೆಯಲ್ಲಿ ಅಹ್ನಿಕಗಳನ್ನು ಮುಗಿಸಿ, ಕೌರವನ ಸಭೆಗೆ ಹೊರಡಲು ಸಿದ್ಧನಾದ ಹೊತ್ತಿಗೆ ಸರಿಯಾಗಿ ದುರ್ಯೋಧನನು ಕರ್ಣ ಶಕುನಿಯರೊಂದಿಗೆ ಬಂದು ಕೃಷ್ಣನ ದರ್ಶನವನ್ನು ಪಡೆದನು.

"ದುರ್ಯೋಧನಾ, ನಿನ್ನ ಆತಿಥ್ಯವನ್ನು ನಾನು ಸ್ವೀಕರಿಸಲಿಲ್ಲವೆಂದು ನೀನು ಸಿಟ್ಟಾಗಿಲ್ಲವಷ್ಟೆ?" ಎಂದು ಕೃಷ್ಣನೆಂದಾಗ ದುರ್ಯೋಧನನು, "ಹಾಗೇನೂ ಇಲ್ಲ. ಚಿಕ್ಕಪ್ಪನ ಮನೆಯ ಆತಿಥ್ಯವನ್ನು ನಾನು ನನ್ನ ಮನೆಯದೆಂದೇ ಭಾವಿಸುವೆ," ಎಂದು ಉತ್ತರಕೊಟ್ಟನು.

ಕೃಷ್ಣನು ವಿದುರನೊಂದಿಗೆ ರಥವೇರಿ ರಾಜ ಸಭೆಯತ್ತ ಸಾಗಿದನು. ಅವನ ಹಿಂದೆ ದುರ್ಯೋಧನ ಹಾಗೂ ಕರ್ಣನ ರಥಗಳಿದ್ದವು. ಸಾತ್ಯಕಿ, ಕೃತವರ್ಮರು ತಮ್ಮ ಆನೆ-ಕುದುರೆಗಳ ದಳದೊಂದಿಗೆ ಬಂದರು. ಕೃಷ್ಣನು ಸಭೆಗೆ ಬಂದು ಅಷ್ಟಕೋನಾಕೃತಿಯ ಸಿಂಹಾಸನದಲ್ಲಿ ಕುಳಿತ ಮೇಲೆ ಸಭಾಭವನದಲ್ಲಿದ್ದವರೆಲ್ಲ ಕುಳಿತುಕೊಂಡರು. ದ್ವಾರಕಾಧೀಶನಾಗಿ ತಾನು ಬಂದಿಲ್ಲ; ಪಾಂಡವರ ರಾಯಭಾರಿಯಾಗಿ ಬಂದಿರುವೆನೆಂದು ಕೃಷ್ಣನು ಸಂಧಿ ಪ್ರಸ್ತಾಪ ವನ್ನು ಮಾಡಿದನು. "ಆ ಪಾಂಡವರು ನಮಗೆ ರಾಜ್ಯ ಬೇಡ, ವೈಭವ ಬೇಡ. ನಮ್ಮ ಬಾಹು

ಬಲದಿಂದ ಅದನ್ನು ಪಡೆಯುತ್ತೇವೆ. ಆದರೂ ಪೂರ್ವಜರಿಂದ ಬಂದ ಬಳುವಳಿ ಎಂದು ಭಾವಿಸಿ, ಐದೇ ಐದು ಹಳ್ಳಿಗಳನ್ನು ಮಾತ್ರ ದಯಪಾಲಿಸಿರಿ ಎಂದು ಕೇಳಿಕೊಂಡಿದ್ದಾರೆ"–ಎಂದು ಹೇಳಿದನು. ಕೌರವರಿಂದ ಪಾಂಡವರಿಗಾದ ಅನ್ಯಾಯಗಳನ್ನೆಲ್ಲ ಬಯಲು ಮಾಡಿದ ಕೃಷ್ಣನು ಮಾಡಿದ ಸಂಧಿಪ್ರಸ್ತಾಪಕ್ಕೆ ದುರ್ಯೋಧನನು ಒಡಂಬಡಲಿಲ್ಲ. "ನಾನು ಜೀವಿಸಿರುವವರೆಗೆ ನಾನು ಐದು ಹಳ್ಳಿಗಳಲ್ಲ, ಸೂಜಿ ಮೊನೆಯು ಮುಂದಿರುವಷ್ಟು ಮಣ್ಣನ್ನು ಸಹ ಕೊಡಲಾರೆ," ಎಂದು ಖಡಾಖಂಡಿತವಾಗಿ ತಿಳಿಸಿದನು.

ದುರ್ಯೋಧನನ ಮಾತುಗಳಿಂದ ಸಂತಾಪಗೊಂಡ ಕೃಷ್ಣನು ಧೃತರಾಷ್ಟ್ರನೊಡನೆ ಹೀಗೆಂದನು– "ಈ ದುರ್ಮಾರ್ಗಿಯಾದ ದುರ್ಯೋಧನನ್ನು ಮತ್ತು ಅವನ ಸಲಹೆಗಾರರಾದ ಶಕುನಿ, ಕರ್ಣ, ದುಶ್ಶಾಸನರನ್ನು ಬಂಧಿಸಿ, ಪಾಂಡವರ ಸ್ವಾಧೀನಕ್ಕೊಪ್ಪಿಸು". ದುರ್ಯೋಧನ ಚಕಿತನಾದ. ದುಶ್ಶಾಸನನು ಗರ್ಜಿಸಿ. "ಅವನ್ನೇ ಯುವರಾಜರು ನಿನಗೆ ಮಾಡಿದರೆ?" ಎಂದು ಪ್ರಶ್ನಿಸಿದನು. ಕೃಷ್ಣನು, "ಆದೂ ಆಗಲಿ. ಮುಂದೆ ನಡೆಯಬೇಕಾದ ಯುದ್ಧ ಇಂದೇ ಈ ಕ್ಷಣವೇ ನಡೆಯಲಿ," ಎಂದು ತನ್ನ ಶಕ್ತಿಯ ವಿರಾಟರೂಪವನ್ನು ತೋರಿಸಿದನು. ಅಪಮಾನಿತನಾಗಿ ದುರ್ಯೋಧನನ, ಸಭಾಗೃಹವನ್ನು ತೊರೆದುಹೋದನು. ಕರ್ಣ, ಶಕುನಿ, ದುಶ್ಶಾಸನರೂ ಹೋದರು. "ಈ ಅವಿವೇಕದಿಂದ ನಿನ್ನ ಮಗನನ್ನು ಎಚ್ಚರಿಸಲು ಸಾಧ್ಯವಿದ್ದರೆ ನೋಡು," ಎಂದು ಕೃಷ್ಣನು ಧೃತರಾಷ್ಟ್ರನಿಗೆ ತಿಳಿಸಿ, ವಿದುರನ ಮನೆಗೆ ತೆರಳಿದನು. ಕೃಷ್ಣನನ್ನು ಸ್ವಗೃಹಕ್ಕೆ ಮುಟ್ಟಿಸಿದ ವಿದುರನು ಧೃತರಾಷ್ಟ್ರನ ಬಳಿಗೆ

ಬಂದನು. ಅಲ್ಲಿ ಭೀಷ್ಮನಿದ್ದನು, ಗಾಂಧಾರಿಯೂ ಇದ್ದಳು. ಕರ್ಣ ದುರ್ಯೋಧನರೂ ಬಂದರು. ಭೀಷ್ಮ, ಧೃತರಾಷ್ಟ್ರ, ವಿದುರ, ಗಾಂಧಾರಿ– ಇವರೆಲ್ಲರೂ ಪಾಂಡವರಿಗೆ ಐದು ಹಳ್ಳಿಗಳನ್ನು ಕೊಡಲು ಒಪ್ಪುವಂತೆ ದುರ್ಯೋಧನನಿಗೆ ಬಗೆ ಬಗೆಯಾಗಿ ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಯುದ್ಧವನ್ನೇ ನಿರ್ಣಯಿಸಲಾಯಿತು.

ಕೃಷ್ಣನು ವಿದುರ ಭೀಷ್ಮಾದಿಗಳಿಂದ ಬೀಳ್ಕೊಂಡು ರಥಾರೂಢನಾಗಿ ಹೊರಡುವ ಹೊತ್ತಿಗೆ ಕರ್ಣನನ್ನು ಕರೆದು, ತನ್ನ ರಥವನ್ನೇರಿಸಿದನು. ಬಹುದೂರ ಬಂದ ಮೇಲೆ ಮಾತಿಗೆ ತೊಡಗಿದನು. ಅವನ ಜನ್ಮವೃತ್ತಾಂತವನ್ನು ತಿಳಿಸಿದನು. "ನೀನು ಕೌಂತೇಯನು. ಸೂರ್ಯನ ವರಪ್ರಸಾದದಿಂದ ಕುಂತಿಯಲ್ಲಿ ಆಕೆ ಕನ್ಯಾವಸ್ಥೆಯಲ್ಲಿದ್ದಾಗ ಜನಿಸಿ ಕಾನೀನನೆನಿಸಿದೆ. ಅಧಿರಥನ ಮಗನಲ್ಲ. ಜ್ಯೇಷ್ಠ ಪುತ್ರನಾದ ನೀನು ಪಾಂಡುವಿನ ರಾಜ್ಯಕ್ಕೆ ವಾರಸುದಾರ. ನಿನ್ನ ಸ್ಥಾನ ಕೌರವರಲ್ಲಿ ಅಲ್ಲ. ನನ್ನೊಂದಿಗೆ ಬಾ. ಪಾಂಡವರು ನಿನ್ನ ಪಾದಕ್ಕೆ ಎರಗುವರು. ದ್ರೌಪದಿಯು ನಿನ್ನನ್ನು ಆರನೆಯ ಪತಿ ಎಂದು ವರಿಸುವಳು. ನಾಳೆ ರಣರಂಗದಲ್ಲಿ ನೀನು ಸೋದರರ ವಧೆಗೆ ಯತ್ನಿಸಬೇಕಾಗುತ್ತದೆ. ತಮ್ಮಂದಿರ ಕೊಲೆಯೆಂಬುದು ಪುತ್ರ ಹತ್ಯೆಗೆ ಸಮಾನ," ಎಂದು ಬೋಧಿಸಿದರೂ ಕರ್ಣನು ತನ್ನ ಇದುವರೆಗಿನ ಗೆಳೆಯನಾದ ದುರ್ಯೋಧನನನ್ನು ಕಳೆದುಕೊಳ್ಳಲು ಇಚ್ಛಿಸಲಿಲ್ಲ. ಅವನ ಮನೋದಾರ್ಢ್ಯವನ್ನು ಕಂಡು ಕೃಷ್ಣನ ಹೃದಯ ತುಂಬಿ ಬಂದಿತು. ಕರ್ಣನು ತನ್ನದೊಂದು ಪ್ರಾರ್ಥನೆಯನ್ನು ಕೃಷ್ಣನ ಮುಂದಿಟ್ಟನು– "ಈ ರಹಸ್ಯವನ್ನು ಹೊರಗೆಡಹಬೇಡ. ಯುಧಿಷ್ಠಿರನಿಗೆ ಈ ಸಂಗತಿಯನ್ನು ತಿಳಿಸಬೇಡ. ಅವನು ಮಹಾಧರ್ಮಿಷ್ಠ. ಅವನು ತಿಳಿದರೆ ಎಲ್ಲವನ್ನೂ ಬಿಟ್ಟು ವನವಾಸಿಯಾದಾನು!" ತನ್ನ ಅಂತಿಮ ಇಚ್ಛೆಯನ್ನು ತಿಳಿಸುತ್ತ ಕರ್ಣನು, "ನೀವು ಅರ್ಜುನನ ಸಾರಥಿಯಾಗಿ ನನ್ನೆದುರಿಗೆ ಬಂದಾಗ ನನಗೆ ಧನುಸ್ಸಿಗೆ ಹೆದೆಯೇರಿಸುವ ಬಲವನ್ನು ಅನುಗ್ರಹಿಸಬೇಕು, ಸ್ವಕೀಯರು ನನ್ನಿಂದ ಹತವಾಗಬಾರದು. ಎಂದಾದರೊಮ್ಮೆ ತಮ್ಮ ಕೊಳಲಿನ ದನಿಯನ್ನು ಮತ್ತೆ ಕೇಳುವ ಅವಕಾಶ ದೊರೆಯಬೇಕು," ಎಂದನು. ಕೃಷ್ಣನು ಕರ್ಣನನ್ನು ಬೀಳ್ಕೊಟ್ಟನು. ದಾರುಕನು ಸಾರಥಿಯಾದನು. ಕೃಷ್ಣನು ಪಾಂಡವರ ಶಿಬಿರದ ಕಡೆ ತೆರಳಿದನು. ಚಕ್ರಧರನ ಸಾರಥ್ಯದಲ್ಲಿ ಕರ್ಣನು ಹಿಂದೆರಳಿದನು.

## ಪೋಷಕರ ವಿಯೋಗ

ಈ ಕಡೆ ಕರ್ಣನ ಸಾಕು ತಂದೆ ಅಧಿರಥನ ಮರಣ ಸಂಭವಿಸಿತು. ಅಧಿರಥನು ಮಾಡುತ್ತಿದ್ದ ರಥ ಪರೀಕ್ಷೆಯ ವಿಧಾನ ಅಪ್ರತಿಮವಾಗಿತ್ತು. ಸಮತೂಕದ ರಥವನ್ನು ತಯಾರಿಸುವುದರಲ್ಲಿ ಸಿದ್ಧಹಸ್ತನಾದ ಅಧಿರಥನು ರಥದ ಕೀಲುಗಳನ್ನು ಕಳಚಿ ಕುದುರೆಗಳನ್ನು ನಾಗಾಲೋಟದಿಂದ ಓಡಿಸುತ್ತಿದ್ದನು. ಆಕಸ್ಮಿಕವಾಗಿ ರಥದ ಗಾಲಿ ಹೊರಬಂದು ಚಕ್ರವು ಕಳಚಿತು. ಅದರ ಅಡಿಗೆ ಸಿಕ್ಕಿ ಅಧಿರಥನು ಸತ್ತು ಹೋಗಿದ್ದನು. ನಡು ಮಧ್ಯಾಹ್ನದಲ್ಲಿ ಚಕ್ರಧರನೊಂದಿಗೆ ಕರ್ಣನು ಹಸ್ತಿನಾವತಿಗೆ ಬರುತ್ತಿರುವಾಗ ದುರ್ಯೋಧನನು ರಥದಲ್ಲಿ ಕರ್ಣನಿಗೆದುರಾಗಿ ಬಂದನು. ಮುಖ ಸಪ್ಪೆಯಾಗಿತ್ತು. ಅವನು ಅಧಿರಥನ ಸಾವಿನ ಸಂಗತಿಯನ್ನು ಕರ್ಣನಿಗೆ ತಿಳಿಸಿದನು. "ನಿನ್ನ ತಂದೆಯ ಕಳೇಬರವನ್ನು ನದಿ ದಂಡೆಗೆ ಕೊಂಡು ಹೋಗಿದ್ದಾರೆ. ಎಲ್ಲರೂ ನಿನ್ನ ಮಾರ್ಗ ನಿರೀಕ್ಷಣೆಯಲ್ಲಿದ್ದಾರೆ," ಎಂದನು. ಕರ್ಣನು ತುಂಬಾ ವ್ಯಥೆಪಟ್ಟು ಅಲ್ಲಿಗೆ ತೆರಳಿದನು. ಕ್ರಿಯಾಕರ್ಮ ಮುಗಿಸಿ ಎಲ್ಲರೂ ಮನೆಗೆ ಬಂದರು. ತಮ್ಮನಾದ ದ್ರುಮನೂ ರಾಧಾ ತಾಯಿಯೂ ದುಃಖದಲ್ಲಿದ್ದುದನ್ನು ಕಂಡನು. ತಾಯಿಯನ್ನು ಅಪ್ಪಿಕೊಂಡನು.

ಕುರುಕ್ಷೇತ್ರದ ಯುದ್ಧ ಭೂಮಿಯಲ್ಲಿ ಸನ್ನದ್ಧವಾಗಿ ಕೌರವ ಪಾಂಡವ ಸೈನ್ಯಗಳು ಶಿಬಿರ ಹೂಡಿದ್ದವು. ಪಾಂಡವರು ಹಸ್ತಿನಾವತಿಯ ನದಿಯ ಆಚೆಯ ದಡದಲ್ಲಿದ್ದರು. ಈಚೆ ಕರ್ಣ ದುರ್ಯೋಧನಾದಿಗಳು ಸೇನಾ ಸಿದ್ಧತೆಯಲ್ಲಿದ್ದರು. ರಾತ್ರಿಯಲ್ಲಿ ಇದ್ದಕ್ಕಿದ್ದಂತೆ ರಾಧಾತಾಯಿ ನದಿಯ ಪೂಜೆಗೆಂದು, ಏಕಾಂತದ ವ್ರತಾಚರಣೆಗೆಂದು

ಓರ್ವದಾಸಿಯೊಂದಿಗೆ ನದಿಯ ದಡಕ್ಕೆ ಬಂದಳು. ನೌಕೆಯಲ್ಲಿ ನದಿಯನ್ನು ಇಬ್ಬರೂ ದಾಟಿದರು. ರಾಧೆಯು ಶ್ರೀ ಕೃಷ್ಣನ ಬಿಡಾರವನ್ನು ಪ್ರವೇಶಿಸಿದಳು. ಕೃಷ್ಣನು ಆಕೆಯನ್ನು ಗೌರವಿಸಿ, ಆಕೆಯ ವಿಚಾರವಾಗಿ ಕೇಳಿದಾಗ, ಆಕೆ ತನ್ನ ಪೂರ್ವ ಸಂಗತಿಗಳೆಲ್ಲ ವಿವರವಾಗಿ ತಿಳಿಸಿ, ತಾನು ಕರ್ಣನ ಸಾಕು ತಾಯಿಯೆಂದು ಸ್ಪಷ್ಟಪಡಿಸಿ, "ನನ್ನ ಮಗನು ಸುರಕ್ಷಿತವಾಗಿ ಉಳಿಯಲು ಸಹಾಯಮಾಡಿ," ಎಂದು ಬೇಡಿಕೊಂಡಳು. "ಅವನು ಸುರಕ್ಷಿತನು ಕೈಯಲ್ಲಿದ್ದಾನೆ" ಎಂದು ಕೃಷ್ಣನು ಹೇಳಿದನು. ಆಕೆ ಸಂತಸದ ಮನಸ್ಸಿನಿಂದ ನೌಕೆಯಲ್ಲಿ ಕುಳಿತು ಹಿಂದಿರುಗಿ ಬಂದಳು.

ಕರ್ಣನು ಬಿಡಾರದಿಂದ ರಥ ಹತ್ತಿ ನದಿಗೆ ಬಂದನು. ಅಲ್ಲಿಗೆ ರಾಧಾತಾಯಿಯೂ ಬಂದು ತನ್ನ ಮನೋವೇದನೆಯನ್ನು ಹೇಳಿಕೊಂಡು, "ನಾನಿನ್ನು ಬದುಕುವುದಿಲ್ಲ. ನೀನು ಹೋಗುವಲ್ಲಿಗೆ ಮುಂಚಿತವಾಗಿ ಹೋಗುವೆನು," ಎಂದುಕೊಂಡು ನದಿಯ ಪ್ರವಾಹದ ಕಡೆಗೆ ಹೋದಳು.

ಕರ್ಣನು ಆಕೆಯನ್ನು ಓಡಿ ಹೋಗಿ ಹಿಂದಕ್ಕೆ ಕರೆತರಲಾರದೆ ಇದ್ದನು. ಹೀಗಿರಲು ಕರ್ಣನ ಬಳಿಗೆ ದುರ್ಯೋಧನನು ರಥದಲ್ಲಿ ಬಂದಿಳಿದನು. ಕರ್ಣನ ಕಣ್ಣಿನಲ್ಲಿ ನೀರ ಹನಿಗಳಿದ್ದವು. ಅದನ್ನು ಅವನು ಆನಂದಬಾಷ್ಪವೆಂದು ಹೇಳಿಕೊಂಡನು. ದುರ್ಯೋಧನನು ತನ್ನ ಸಂತೋಷದ ಸುದ್ದಿಯಾಗಿ ಪಾಂಡವರ ಪಕ್ಷಕ್ಕೆ ಸೇರಲು ಹೋಗುತ್ತಿದ್ದ ಶಲ್ಯರಾಜನನ್ನು ತನ್ನ ಕಡೆಗೆ ಬರುವಂತೆ ಮಾಡಿದ್ದನ್ನು ತಿಳಿಸಿದನು. ಇಬ್ಬರೂ ರಥವೇರಿ ನಗರದ ಉತ್ತರಭಾಗದತ್ತ ತೆರಳಿದರು.

ಕರ್ಣನು ಗಂಗಾ ಪ್ರವಾಹದಲ್ಲಿ ನಿಂದು ಆಹ್ನಿಕವನ್ನು ಮುಗಿಸಿ ಗಂಗಾಜಲವನ್ನು ಬೊಗಸೆಯಲ್ಲಿ ಹಿಡಿದು, "ಯಾಚಕರು ಇದ್ದಾರೆಯೇ?" ಎಂದು ಕೇಳಿದನು. ಆಗ ಅಲ್ಲಿಗೆ ಶ್ವೇತ ವಸ್ತ್ರಧಾರಿಣಿಯಾಗಿ ಕುಂತಿ ಬಂದಳು. "ಪಾಂಡವರ ಮಾತೆ ಅರ್ಜುನನ ತಾಯಿ ಕುಂತೀದೇವಿ" ಎಂದು ವಂದನೆಯನ್ನು ಸಲ್ಲಿಸಿದನು. "ತಾನು ಯಾಚಕಳಾಗಿ ಬಂದಿದ್ದೇನೆ. ಆದರೆ ನಿನ್ನ ಪರಾಜಯಕ್ಕಾಗಿ ಅಲ್ಲ; ನಿನ್ನ ಯಶಸ್ಸಿಗಾಗಿ ನಿನ್ನ ವಿಜಯವನ್ನು

ನೋಡುವುದಕ್ಕಾಗಿ," ಎಂದು ಕುಂತಿಯು ತನ್ನ ಕೈಯಲ್ಲಿದ್ದ ಉತ್ತರೀಯವನ್ನು ಕರ್ಣನ ಕೈಗಿತ್ತಳು. "ನಿಮಗೇನು ಬೇಕಾಗಿದೆ?" ಎಂದು ಕರ್ಣನು ಕೇಳಿದ. "ನನಗೆ ಏನೇ ಬೇಕಾಗಿದೆ. ನಿನ್ನನ್ನು ಕರೆದೊಯ್ಯಲೆಂದೇ ಬಂದೆ. ನಿನ್ನ ತಾಯಿ ನಾನು." ಎಂದು ಹೇಳಿ ತನ್ನ ಪೂರ್ವ ಕಥೆಯನ್ನೆಲ್ಲ ವಿವರವಾಗಿ ವಿವರಿಸಿದಳು. ಕುಂತಿರಾಜನ ಕನ್ಯೆಯಾದ ತಾನು ಕುಂತೀಭೋಜನಲ್ಲಿದ್ದಾಗ ಒಬ್ಬ ಮಹಾ ತಪಸ್ವಿಯ ಪ್ರತಾಚರಣೆಗೆ ಸಹಾಯಕಳಾದುದರಿಂದ ಆತನು ಉಪದೇಶಿಸಿದ ಒಂದೆರಡು ಮಂತ್ರಗಳಲ್ಲಿ ಒಂದರಿಂದ ಕರ್ಣನನ್ನು ಪಡೆದು ಪೆಟ್ಟಿಗೆಯಲ್ಲಿ ನದಿಗೆ ಬಿಟ್ಟುದನ್ನೂ ಆಗ ತನ್ನ ಅಸಹಾಯಕ ಸ್ಥಿತಿಯನ್ನೂ ವಿವರಿಸಿದಳು. ಕರ್ಣನು ಆಕೆಯೊಂದಿಗೆ ಬರಲು ಒಪ್ಪಲಿಲ್ಲ. ತನ್ನ ಉತ್ತರೀಯವನ್ನು ಕುಂತಿಯು ಕೈಗಿಟ್ಟು ತಲೆಬಾಗಿದನು. "ನಿನ್ನ ಮನಸ್ಸಿಗೆ ಗಾಸಿಯಾಗುವ ಯಾವ ಕೆಲಸವನ್ನೂ ಮಾಡೆನು. ಯಾವಾಗ ನಿನ್ನ ಮಗನು ತನ್ನ ಜೀವನದ ಪ್ರಯಾಣವನ್ನು ಮುಗಿಸುವನೋ ಆಗ ನನಗಾಗಿ ಎರಡು ಹನಿ ಕಣ್ಣೀರು ಸುರಿಸು. ಆ ಕಣ್ಣೀರು ನನಗೆ ಸ್ವರ್ಗದ ಹಾದಿಯನ್ನು ತುಳಿಯುವಾಗ ಮಹಾಬಲವನ್ನೀಯುತ್ತದೆ," ಎಂದನು. ಕರ್ಣನಿತ್ತ ಉತ್ತರೀಯದೊಡನೆ ಕುಂತಿ ಹೊರಟುಬಿಟ್ಟಳು. ಮಾತೃದರ್ಶನದಿಂದ ಕರ್ಣನಿಗೆ ತೇಜಸ್ವಿಯಾದ ಜೀವನವನ್ನು ಪಡೆದಂತಾಯಿತು. ಅವನಿಗೀಗ ಒಂದೇ ಒಂದು ಅಪ್ಪಾಸ ಉಳಿದಿತ್ತು. ಅದೇ ಮೃತ್ಯು. ಕರ್ಣನು ತನ್ನ ರಥದಲ್ಲಿ ರಾಜಗೃಹದ ಕಡೆಗೆ ತೆರಳಿದನು. ಅವನ ಮನಸ್ಸು ಕುರುಕ್ಷೇತ್ರದ ಯುದ್ಧ ವಿಚಾರದಲ್ಲಿ ಲೀನವಾಗಿದ್ದಿತು.

ಹಿರಣ್ವತೀ ನದೀದಂಡೆಯ ! ಆಚೆ ! ಈಚೆ ಪಾಂಡವ ಕೌರವ ಸೈನ್ಯಗಳು ಸುಸಜ್ಜಿತವಾದವು. ಕೌರವ ಸೈನ್ಯಕ್ಕೆ ಸರ್ವಾನುಮತಿಯಿಂದ ಭೀಷ್ಮರು

ಸೇನಾಪತಿಯಾದರು. "ನನಗೆ ಎರಡು ಹಂಗಗಳಿವೆ- ಪ್ರತಿದಿನವೂ ನಾನು ಹತ್ತು ಸಾವಿರ ಶತ್ರುಯೋಧರನ್ನು ಕೊಲ್ಲುವೆನು. ಆದರೆ ಪಾಂಡವರನ್ನು ಸಂಹಾರ ಮಾಡಲಾರೆ," ಎಂದರು. ರನ್ನು ಸೇನೆಯಲ್ಲಿರುವ ಅತಿರಥ ಮಹಾರಥರನ್ನು ಎಣಿಸಿಕೊಂಡರು. ಆದರೆ ಅವರೊಂದಿಗೆ ಕರ್ಣನ ಹೆಸರನ್ನು ಉಚ್ಚರಿಸಲಿಲ್ಲ. ದುರ್ಯೋಧನನು ಕರ್ಣನ ವಿಚಾರವನ್ನೆತ್ತಿದಾಗ ಭೀಷ್ಮರು "ಆ ರಾಧೇಯನ ಹೆಸರು ಈ ಸಭೆಯಲ್ಲಿ ಏಕೆ? ಅವನು ಸಾಮಾನ್ಯ ರಥಿಕನೂ ಅಲ್ಲ. ಮಹಾರಥಿ ಹೇಗೆ ಆಗುತ್ತಾನೆ? ಅವನು ಅರ್ಧರಥಿ. ಯುದ್ಧದಲ್ಲಿ ಅರ್ಜುನನೊಂದಿಗೆ ಹೋರಾಡುವ ಬಲ ಅವನಿಗಿಲ್ಲ," ಎಂದರು. ಆಗ ಕರ್ಣನು ಸಹಿಸದೆ ಭೀಷ್ಮರನ್ನು ನಿಂದಿಸತೊಡಗಿದನು. ದ್ರೋಣರು ಭೀಷ್ಮರ ಪರವಾಗಿ ಮಾತಾಡಿ ಕರ್ಣನನ್ನು ಹೀಗಳೆದರು. "ಯುವರಾಜ ದುರ್ಯೋಧನನ ಗೆಳೆತನವೇ ಅವನ ಜೀವಾಳ," ಎಂದರು. ಕರ್ಣನು ಪ್ರತಿಯಾಗಿ ದ್ರೋಣರನ್ನು ನಿಂದಿಸಿದನು. "ನಾನು ಬದುಕಿರುವಷ್ಟು ಕಾಲ ನನ್ನ ಸೇನೆಯಲ್ಲಿ ಈ ಕರ್ಣನಿಗೆ ಸ್ಥಾನವಿಲ್ಲ. ಅವಾಗದು ಬೇಕಾದರೆ ಅವನೇ ಯುದ್ಧ ಮಾಡಲಿ. ಅವನು ನನ್ನೊಡನೆ ಸ್ಪರ್ಧಿಸುವುದು ಬೇಡ," ಎಂದರು ಭೀಷ್ಮರು. ಆಗ ಕರ್ಣನು ಪ್ರತಿಜ್ಞೆ ಮಾಡಿದನು. "ಈ ಭೀಷ್ಮರು ಜೀವಂತರಾಗಿರುವವರೆಗೆ ನಾನು ಯುದ್ಧ ಮಾಡೆನು. ಅವರು ಮೃತರಾದ ನಂತರ ಅರ್ಜುನನೊಂದಿಗೆ ಯುದ್ಧಕ್ಕೆ ನಿಲ್ಲುವೆನು," ಎಂದು ನುಡಿದು ಕರ್ಣನು ರಾಜಸಭೆಯಿಂದ ಎದ್ದು ಹೊರಟುಹೋದನು.

ಕೌರವ ಪಾಂಡವರೊಳಗೆ ಯುದ್ಧ ಪ್ರಾರಂಭವಾಯಿತು. ಭೀಷ್ಮರು ಕೌರವರ ಸೇನಾಪತಿಯಾಗಿದ್ದರು. ಪ್ರತಿದಿನ ಹತ್ತು ಸಾವಿರ ಸೈನಿಕರನ್ನು ಸಂಹಾರ ಮಾಡುವುದಾಗಿ ಭೀಷ್ಮರು ಪ್ರತಿಜ್ಞೆ ಮಾಡಿದ್ದರು. ಹತ್ತು ದಿನಗಳ ಯುದ್ಧ ನಡೆಯಿತು. ಪಾಂಡವರ ಪಕ್ಷದ ಶ್ವೇತ

ನನ್ನು ಭೀಷ್ಮರು ವಧಿಸಿದ್ದರು. ಹೀಗಿರಲು ದುರ್ಯೋಧನನು ಕರ್ಣನಲ್ಲಿಗೆ ಬಂದು, "ನೀನು ನಿನ್ನ ಪ್ರತಿಜ್ಞೆಯಿಂದ ಪರಾವರ್ತನಾಗು," ಎಂದು ಕೇಳಿಕೊಂಡನು. ಆದರೆ, ಇದಕ್ಕೆ ಕರ್ಣನು ಸಮ್ಮತಿಸಲಿಲ್ಲ. ಒಂದು ಉಪಾಯವನ್ನು ಸೂಚಿಸಿದನು–"ಯುವರಾಜ, ಭೀಷ್ಮರಲ್ಲಿಗೆ ಹೋಗಿ ಹೇಳಿರಿ. ನಿಮ್ಮ ಕೈಯಿಂದ ಯುದ್ಧ ಮಾಡಿ ಗೆಲ್ಲುವವನಾಗದಿದ್ದಲ್ಲಿ ವೃಥಾ ಸೇನೆಯನ್ನು ನಾಶ ಮಾಡಿಸುವುದನ್ನು ನಿಲ್ಲಿಸಿ, ಶಸ್ತ್ರ ಸಂನ್ಯಾಸ ಸ್ವೀಕರಿಸಿ." ಎಂದನು. ಈ ಉಪಾಯದಿಂದ ಭೀಷ್ಮರು ಮತ್ತೆ ನನ್ನು ಕಿರೀಟಿಯುದ್ಧ ಮಾಡುವಂತಾಯಿತು. ಕರ್ಣನು ಯುದ್ಧದಲ್ಲಿ ಭಾಗವಹಿಸದಿದ್ದರೂ ಯುದ್ಧವನ್ನು ದೂರದಿಂದ ನೋಡುತ್ತಿದ್ದನು. ಯುದ್ಧ ಭೂಮಿಯ ಕಡೆಯಿಂದ ರಥವಲ್ಲಿ ದ್ಯುಮ್ನ, ಚಿತ್ರರಥ, ವೃಷಸೇನ ಇವರು ಬಂದರು. ಚಿತ್ರರಥನು ತಿಳಿಸಿದಂತೆ, ಕರ್ಣನಿಗೆ ಭೀಷ್ಮರ ಯುದ್ಧದ ಕೊನೆಯ ಹಂತದ ವಿವರ ತಿಳಿಯಿತು. ಪಾಂಡವರು ಭೀಷ್ಮರ ಮುಂದೆಗೆ ಶಿಖಂಡಿಯನ್ನು ನಿಲ್ಲಿಸಿದರು. ಅವನನ್ನು ಕಂಡ ಭೀಷ್ಮರು ಶಸ್ತ್ರವನ್ನೇ ಕೆಳಗಿಟ್ಟರು. ಅರ್ಜುನನು ಬಿಡದೆ ಬಾಣ ಪ್ರಯೋಗ ಮಾಡಿದನು. ಭೀಷ್ಮರು ಗಾಯಗೊಂಡು ದರ್ಭಾಸನದ ಶಯ್ಯೆಯಲ್ಲಿ ಮಲಗಿದರು. ಉತ್ತರಾಯಣದ ವರೆಗೆ ಜೀವಧಾರಣೆ ಮಾಡುವ ನಿಗ್ರಹ ಅವರಲ್ಲಿದ್ದಿತು. ಭೀಷ್ಮರ ವ್ಯಕ್ತಿತ್ವದ ಬಗ್ಗೆ ಕರ್ಣನು ತುಂಬಾ ಗೌರವ ತಾಳಿದ್ದನು. ಅವನು ಹೀಗೆಯೇ ಯೋಚಿಸುತ್ತಿರಲು ಅಶ್ವತ್ಥಾಮನು ಬಂದು, "ದುರ್ಯೋಧನನು ನಿನ್ನನ್ನು ಕರೆತರಲು ನನ್ನನ್ನು ಕಳಿಸಿದ್ದಾನೆ." ಎಂದು ತಿಳಿಸಿದನು. ಕರ್ಣನು ಕಮಲ ಧ್ವಜಯುಕ್ತವಾದ ರಥದಲ್ಲಿ ಚಿತ್ರರಥನೊಂದಿಗೆ ಶಸ್ತ್ರಸಜ್ಜಿತನಾಗಿ ಕೌರವ ಶಿಬಿರಕ್ಕೆ ಬಂದನು. ಸೇನಾಪದವಿಯನ್ನು ಸ್ವೀಕರಿಸುವಂತೆ ದುರ್ಯೋಧನನು ಕೇಳಿಕೊಂಡನು. ಆದರೆ ಕರ್ಣನು ಭೀಷ್ಮರ ನಂತರ ದ್ರೋಣಾಚಾರ್ಯರಿಗೆ ಸೇನಾಪತಿತ್ವವನ್ನು ಕೊಡಬೇಕೆಂದೂ ತಾನು ಅವರ ಅಧೀನದಲ್ಲಿರುವೆನೆಂದೂ ತಿಳಿಸಿದನು. ದುರ್ಯೋಧನ, ಕರ್ಣ ಹಾಗೂ ಉಳಿದ ವೀರರೆಲ್ಲ ದ್ರೋಣರನ್ನು ಕೇಳಿಕೊಂಡ ಪ್ರಕಾರ ದ್ರೋಣರು ಸೇನಾಪತಿಯಾದರು. ಕರ್ಣನು ಭೀಷ್ಮರ ಆಶೀರ್ವಾದವನ್ನು ಪಡೆಯುವುದಕ್ಕಾಗಿ ತೆರಳಿದನು. ಅಲ್ಲಿ ಕೃಷ್ಣನೂ ಇದ್ದನು. ಭೀಷ್ಮರು ಹಿಂದೆ ಕರ್ಣನನ್ನು ಅರ್ಧರಥಿ ಎಂದು ಕರೆದು ತೇಜೋಭಂಗ ಮಾಡಿದ್ದರು. ಆದರೆ, ಈಗ ಅವನ ನಯವಿನಯಗಳಿಗೆ ಮೆಚ್ಚಿ, "ಮಹಾರಥಿ ಕರ್ಣಾ" ಎಂದು ಸಂಬೋಧಿಸಿದರು. "ನೀನು ಸೂತ ಪುತ್ರನಲ್ಲ, ಕೌಂತೇಯನಿರುವಿ; ವಿದುರನ ಮೂಲಕ ನಾನು ನಿನ್ನ ಜನ್ಮದ ರಹಸ್ಯವನ್ನು ತಿಳಿದೆ. ಪಾಂಡವರಲ್ಲಿ ನೀನು ಸಖ್ಯವನ್ನು ಬೆಳೆಸು. ನೀನು ಅವರ ಸೋದರನು," ಎಂದು ಉಪದೇಶಿಸಿದನು. ಆಗ ಕರ್ಣನು–"ಹಾಗಿದ್ದರೆ ಮಿತ್ರ ದುರ್ಯೋಧನನಿಗೆ ಏನು ಗತಿ?" ಎಂದು ಪ್ರಸ್ತಾಪಿಸಿದಾಗ, ಕರ್ಣನ ಮಿತ್ರ ಪ್ರೇಮಕ್ಕೆ ಭೀಷ್ಮನು ತಲೆದೂಗಿದನು. ಶೌರ್ಯವನ್ನು ಕೊಂಡಾಡಿದನು. ಕರ್ಣನು ತಾನು ಯಾವಾಗಲೂ ಚಾರಿತ್ರ್ಯವನ್ನು ರಕ್ಷಿಸಿಕೊಂಡು ಬಂದವನಾದರೂ ದ್ರೌಪದಿಯ ವಸ್ತ್ರಾಪಹರಣಕ್ಕೆ ಅಜ್ಞೆಮಾಡಿದುದು ದೊಡ್ಡ ತಪ್ಪೆಂದು ಹೇಳಿಕೊಂಡನು. ಭೀಷ್ಮನು ಕರ್ಣನಿಗೆ ಬೇಕಾದ ವರವನ್ನು ಕೊಡುವುದಾಗಿ ಹೇಳಿದನು. ಅದಕ್ಕೆ ಕರ್ಣನು ಮಿತ್ರನಿಗಾಗಿ ಆತ್ಮಾರ್ಪಣೆ ಮಾಡುವ ಬಲವನ್ನು ವರವಾಗಿ ಕೇಳಿಕೊಂಡನು. ಭೀಷ್ಮರು ಆಶೀರ್ವದಿಸಿದರು.

ಕರ್ಣನು ಮತ್ತೆ ಅಲ್ಲಿಂದ ಹೊರಟು ಹಿರಣ್ಯವತೀ ನದಿಯ ದಡಕ್ಕೆ ಬಂದನು. ಪ್ರವಾಹವನ್ನು ನೋಡುತ್ತ ವಿಚಾರಮಗ್ನನಾದನು. ಸಾವು ನೋವುಗಳೇ ಅವನ ವಿಚಾರಗಳಾಗಿದ್ದವು. ಮನದ ವಿಚಾರಗಳನ್ನು ಬದಿಗಿಟ್ಟು, ರಥದ ಕಡೆಗೆ ಬರುತ್ತ ಅವನ ಕಾಲು ಮರಳಿನಲ್ಲಿ ಹೂತುಕೊಂಡಿತು. ದೂರದಿಂದ ಸುಮಧುರವಾದ ಕೊಳಲಿನ ದನಿ ಕೇಳಿ ಬರತೊಡಗಿತು. ನಾದ ಮಾಧುರ್ಯದಲ್ಲೇ ಮಗ್ನನಾದನು. "ಈ ದೇಹವೇ ಒಂದು ಕೊಳಲು, ವಿಧಾತನಿತ್ತ ಉಸಿರಿರುವವರೆಗೆ ದೇಹವು ಸಜೀವ" ಎಂಬ

ಆಧ್ಯಾತ್ಮ ಚಿಂತನೆ ಅವನದು.

ಕರ್ಣನು ಸಸೂತಿಸಲ್ಲಿದ್ದ ದ್ರೋಣರ ನೇತೃತ್ವದಲ್ಲಿ ಯುದ್ಧಕ್ಕೆ ಅಣಿಯಾಗಿ ಕೌರವ ಶಿಬಿರಕ್ಕೆ ಬಂದನು. ದ್ರೋಣರು ತಮ್ಮ ಯುದ್ಧ ಯೋಜನೆಯನ್ನು ಅವನಿಗೆ ತಿಳಿಸಿದರು. ಯುಧಿಷ್ಠಿರನನ್ನು ಸೆರೆ ಹಿಡಿದು ತರುವುದಾಗಿ ದ್ರೋಣರು ದುರ್ಯೋಧನನಿಗೆ ಮಾತುಕೊಟ್ಟಿದ್ದರು. ಹೂಡಿದ ಯೋಜನೆಯಂತೆ ಅರ್ಜುನನನ್ನು ಸಮಸ್ತ ಪ್ರಮುಖರೊಡನೆ ಯುದ್ಧಕ್ಕೆ ಕರೆಯಲಾಯಿತು. ಚಕ್ರವ್ಯೂಹವನ್ನು ರಚಿಸಲಾಯಿತು. ಅದನ್ನು ಭೇದಿಸಲು ಅಭಿಮನ್ಯು ಬಂದನು. ಅವನ ಪರಾಕ್ರಮ ಅದ್ಭುತವಾಗಿತ್ತು. ಅವನು ಶಲ್ಯನನ್ನು ಗಾಯಗೊಳಿಸಿದನು. ದುಶ್ಶಾಸನನನ್ನು ಮೂರ್ಛೆಗೊಳಿಸಿದನು. ಕರ್ಣನಿಗೂ ಅಭಿಮನ್ಯುವಿಗೂ ಯುದ್ಧವಾಯಿತು. ಕರ್ಣನ ಸೋದರನನ್ನು ಅಭಿಮನ್ಯು ಕೊಂದನು. ಕರ್ಣನ ಬಾಣದಿಂದ ಅಭಿಮನ್ಯುವಿನ ಬಿಲ್ಲು ತುಂಡಾಯಿತು. ಆಗ ಅಭಿಮನ್ಯು ಗದೆಯನ್ನು ಹಿಡಿದನು. ದುಶ್ಶಾಸನನ ಮಗನೂ ಅಭಿಮನ್ಯುವೂ ಕಾದಾಡಿ ಮೂರ್ಛಿತರಾದರು. ಮೊದಲು ದುಶ್ಶಾಸನನ ಮಗನು ಎಚ್ಚೆತ್ತು ಅಭಿಮನ್ಯುವಿಗೆ ಪ್ರಹಾರ ಮಾಡಿದ್ದನ್ನು ನೋಡಿ [illegible]. ಕರ್ಣನು ತನ್ನ ಶಿಬಿರಕ್ಕೆ ತೆರಳಿದನು. ಮಗನ ಮರಣದಿಂದ ಕೆರಳಿದ ಅರ್ಜುನನು ಸೂರ್ಯಾಸ್ತದೊಳಗೆ ಜಯದ್ರಥನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು. ಕೌರವ ವೀರರೆಲ್ಲ ಜಯದ್ರಥನಿಗೆ ರಕ್ಷಣೆ ಕೊಟ್ಟರು. ಸೂರ್ಯನು ಪಶ್ಚಿಮಾದ್ರಿಯನ್ನು ಸೇರುವುದರಲ್ಲಿದ್ದನು. ಆಕಾಶವು ಮೋಡದಿಂದ ಕವಿಯಿತು. ಸಂಜೆಯಾಗಿ ಕಾಣಿಸಿತು. ಯಾರೋ ಶಂಖನಾದ ಮಾಡಿದರು. ಮರೆಯಿಂದ ಜಯದ್ರಥನು ತನ್ನ ರಕ್ಷಾಕೋಟೆಯಿಂದ ಹೊರಗೆ ಬಂದನು. ಅರ್ಜುನನ ರಥ

ಅವನಿಗೆದುರಾಯಿತು. ಮೋಡದ ಒಂದು ಮರೆಯಿಂದ ಸೂರ್ಯ ಕಿರಣಗಳು ಕಾಣಿಸಿದವು. ಅರ್ಜುನನು ಜಯದ್ರಥನ ಕೊರಳನ್ನು ಬಾಣದಿಂದ ಕತ್ತರಿಸಿದನು.

ಅಂದು ರಾತ್ರಿಯೂ ಯುದ್ಧ ನಡೆಯಿತು. ಪಾಂಡವರ ಮಗನಾದ ಘಟೋತ್ಕಚನು ಕೌರವ ಸೇನೆಯನ್ನು ಚಿಂದಿ ಚಿಂದಿ ಮಾಡುತ್ತಿದ್ದನು. ಅವನನ್ನು ಶಕ್ತ್ಯಾಯುಧದಿಂದ ಎದುರಿಸುವಂತೆ ದುರ್ಯೋಧನನು ಕರ್ಣನನ್ನು ಕೇಳಿಕೊಂಡನು. ಕರ್ಣನು ಅರ್ಜುನನಿಗಾಗಿ ಕಾದಿರಿಸಿದ್ದ ವಾಸವೀ ಶಕ್ತಿಯನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿ, ಕೌರವ ಸೈನ್ಯಕ್ಕೆ ಜಯವನ್ನುಂಟು ಮಾಡಿದನು. ದ್ರೋಣರು ಯುದ್ಧದಲ್ಲಿ ದ್ರುಪದ ವಿರಾಟರನ್ನು ಕೊಂದರು. ಇದರಿಂದ ದೃಷ್ಟದ್ಯುಮ್ನನು ಸೇಡು ತೀರಿಸಲು ಕಾದಿದ್ದನು. ಭೀಮನು ಅಶ್ವತ್ಥಾಮ ಎಂಬ ಆನೆಯನ್ನು ಕೊಂದುದಾಗಿ ದ್ರೋಣರಿಗೆ ತಿಳಿಸಿದನು. ಹಾಗೆ ತಿಳಿಸುವಾಗ "ಅಶ್ವತ್ಥಾಮನನ್ನು ಕೊಂದೆ" ಎಂದು ಹೇಳಿದನೇ ಹೊರತು, "ಆನೆಯನ್ನು ಕೊಂದೆ" ಎನ್ನಲಿಲ್ಲ. ಆಗ ದ್ರೋಣರು ಸತ್ಯಸಂಧನಾದ ಯುಧಿಷ್ಠಿರನನ್ನು ಕೇಳಿದನು. ಅವನೂ ಅದೆ ಸತ್ಯವನ್ನೇ ಹೇಳಿದ. ಪುತ್ರ ಶೋಕದಿಂದ ದ್ರೋಣರು ಶಸ್ತ್ರಸಂನ್ಯಾಸ ಸ್ವೀಕರಿಸಿದರು. ಇದನ್ನು ಕಾಯುತ್ತಿದ್ದ ದೃಷ್ಟದ್ಯುಮ್ನನು ದ್ರೋಣರ ಶಿರವನ್ನು ಛೇದಿಸಿದನು. ಕರ್ಣನಿಗೆ ಈ ವೃತ್ತಾಂತವನ್ನು ವೃಷಸೇನ ಚಕ್ರಧರನು ತಿಳಿಸಿದನು.

## ರಣರಂಗ

ನಸುಕಿನಲ್ಲಿ ಎದ್ದ ಕರ್ಣ–ವೃಷಸೇನರಿಬ್ಬರೂ ಯುದ್ಧರಂಗಕ್ಕೆ ಹೊರಟರು. ಕೌರವನ ಶಿಬಿರದಲ್ಲಿ ಕರ್ಣನನ್ನೇ ಎಲ್ಲರೂ ಎದುರು

ನೋಡುತ್ತಿದ್ದರು. ದುರ್ಯೋಧನನು ಅವನಿಗೆ ಸ್ವಾಗತ ನೀಡಿದ. ಕರ್ಣನಿಗೆ ಸೇನಾಪತಿತ್ವದ ಪಟ್ಟಾಭಿಷೇಕ ನಡೆಯಿತು. ವೃಷಸೇನನು ದುರ್ಯೋಧನನಿಗೂ ಕರ್ಣನಿಗೂ ನಮಸ್ಕರಿಸಿ, ಯುದ್ಧ ಮಾಡಲು ಮುಂದಾದನು. ಕರ್ಣ ದುರ್ಯೋಧನರಿಬ್ಬರೂ ತಂತಮ್ಮ ರಥಗಳನ್ನೇರಿದರು. ಪಾಂಡವರ ಕೌರವರ ಕಡೆಯಿಂದ ಶಂಖಧ್ವನಿಗಳಾದವು. ಯುದ್ಧ ಆರಂಭವಾಯಿತು. ತನಗೆ ಸಮಾನನಾದವನನ್ನು ಕರ್ಣನು ಎದುರು ನೋಡುತ್ತಿರಲು ನಕುಲನು ಅವನಿಗೆ ಎದುರಾಗಿ ಬಂದು ವೀರಾವೇಶದಿಂದ ಕಾದಿ ಸೋತನು. ಅವನ ಧನುಸ್ಸು ಮುರಿಯಿತು. ರಥದ ಧ್ವಜ ಕೆಳಗೆ ಬಿದ್ದಿತು. ಸಂಜೆಯ ವರೆಗೆ ಯುದ್ಧ ನಡೆಯಿತು. ಕರ್ಣನು ಶಿಬಿರದಲ್ಲಿ ವಿಶ್ರಾಂತಿ ಪಡೆಯುತ್ತಿರಲು ಅಲ್ಲಿಗೆ ದುರ್ಯೋಧನನು ಬಂದನು. ಅವನ ಮುಖ ಬಾಡಿತ್ತು. ಕ್ಷೇಮಧೂರ್ತನೇ ಮೊದಲಾದವರು ಯುದ್ಧದಲ್ಲಿ ಮಡಿದಿದ್ದರು. ಹದಿನಾರು ದಿನಗಳ ಯುದ್ಧದಲ್ಲಿ ತನ್ನ ಪಕ್ಷವೇ ಸೋಲುತ್ತಿರುವುದನ್ನು ಕಂಡು ದುರ್ಯೋಧನನು ವ್ಯಾಕುಲಗೊಂಡಿದ್ದನು. "ಸಾಧ್ಯವಾದಷ್ಟು ಬೇಗ ವಿಜಯವು ನಮ್ಮದಾಗುವಂತೆ ಪ್ರಯತ್ನಿಸಬೇಕು," ಎಂದು ಕರ್ಣನಿಗೆ ಸೂಚಿಸಿದನು. ಈ ಸಂದರ್ಭದಲ್ಲಿ ಕರ್ಣನು ತನಗೊಬ್ಬ ಸುಯೋಗ್ಯ ಸಾರಥಿಯಿಲ್ಲದಾಗಿದೆಯೆಂದೂ ಮದ್ರರಾಜನಾದ ಶಲ್ಯನನ್ನು ಸಾರಥ್ಯಕ್ಕೆ ಒಪ್ಪಿಸಬೇಕೆಂದೂ ಕೇಳಿಕೊಂಡನು. "ನಾಳೆ ಶಲ್ಯರಾಜನು ನಿನ್ನ ಸಾರಥ್ಯ ವಹಿಸುವುದು ನಿಶ್ಚಯ" ಎಂದು ದುರ್ಯೋಧನನು ಕರ್ಣನಿಗೆ ಭರವಸೆ ಕೊಟ್ಟನು.

ಕರ್ಣನ ಸೇನಾ ಶಿಬಿರದಲ್ಲಿ ಎರಡನೆಯ ದಿನ. ನಸುಕಿನಲ್ಲಿಯೇ ಕರ್ಣನು ಕೌರವ ಶಿಬಿರಕ್ಕೆ ಬಂದೊಡನೆ, ಶಲ್ಯನು ಸಾರಥ್ಯಕ್ಕೆ ಒಪ್ಪಿದ ಸಂಗತಿ ತಿಳಿಯಿತು. ಕರ್ಣ ದುರ್ಯೋಧನರಿಬ್ಬರೂ ಶಲ್ಯರಾಜನ ಶಿಬಿರವನ್ನು ಹೊಕ್ಕರು. ಶಲ್ಯನು ಕುಳಿತ

ಲ್ಲಿಂದ ಏಳಲಿಲ್ಲ. ಕರ್ಣನು ಅವನಿಗೆ ವಂದನೆ ಸಲ್ಲಿಸಿದಾಗ– "ಸೂರಪುತ್ರ ರಾಧೇಯಾ, ನಾನು ಬಳಸುವ ಶಬ್ದಗಳಿಂದ ನೀನು ಅಸಮಾಧಾನ ಹೊಂದಿಲ್ಲವಷ್ಟೆ?"–ಎಂಬ ಪ್ರಶ್ನೆಯೂ ಬಂತು.

"ಶಲ್ಯರಾಜ, ನಾನು ರಾಧೇಯು ಹೌದು. ಆದರೆ ನನ್ನನ್ನು ಹೆಸರಿನಿಂದ ಕೂಗುವ ಆತ್ಮೀಯತೆಯಾಗಲಿ ಅಧಿಕಾರವಾಗಲಿ ತಮ [illegible]"

"ಇನ್ನು ಮುಂದೆ ನಿನ್ನನ್ನು ನಾನು ಸೂತ ಪುತ್ರನೆಂದೇ ಕೂಗುವೆ. ನಿನಗೆ ಒಪ್ಪಿಗೆ ಯುಷ್ಟೇ?"

"ನಾನು ಸೂತನಿರುವಂತೆ ಅಂಗದೇಶದ [illegible] ಆಗಿರುವೆ".

ಅದಕ್ಕೆ ಶಲ್ಯನು, "ಅದು ಕೇವಲ [illegible]. [illegible] ಕೊಟ್ಟ ಮಾತ್ರಕ್ಕೆ ನೀನು ರಾಜ [illegible]"–ಎಂದಾಗ ಸಹಿಸಲಾರದೆ ಕರ್ಣನು [illegible] "ಶಲ್ಯ ರಾಜಾ" ಎಂದು ಕೂಗಿದನು. ಶಲ್ಯನು [illegible], [illegible] ನೋಡುತ್ತ ಹೇಳಿದ, "[illegible] ಸಾರಥ್ಯ [illegible] ಯುದ್ಧದಲ್ಲಿ ನನ್ನ [illegible] ನೀನು ಕೇಳಲೇಬೇಕು. ಈ ಶರ್ತಿಗೆ [illegible] ನಾನು ಸಾರಥಿಯಾಗಿರುವುದು." ದುರ್ಯೋಧನನು ಆಗ ಅದಕ್ಕೆ ಸಮ್ಮತಿಸುತ್ತ, "ಮಿತ್ರನಾದ ಕರ್ಣಾ, ಅದು ನಿಜ. ನನ್ನ ಸಲುವಾಗಿಯಾದರೂ ನಿನ್ನ ಕೋಪವನ್ನು ಪಡೆದುಕೋ, ಶಲ್ಯನಿಂದಾಗುವ ಅವಮಾನವನ್ನು ಸಹಿಸಿಕೋ," ಎಂದನು.

ಶಲ್ಯನು ಕರ್ಣನ ಸಾರಥ್ಯವನ್ನು ವಹಿಸಿದನು. ಆಗಾಗ ಅರ್ಜುನನ ಶೌರ್ಯವನ್ನು ಹೊಗಳುತ್ತ, ಕರ್ಣನನ್ನು ನಿಂದಿಸಿದನು. "ಸಿಂಹವೂ ನರಿಯೂ ಎದುರಾದಾಗ ನರಿ ಜೀವಂತವಾಗಿ ಉಳಿದೀತೇ?" ಎಂದು ಅಣಕಿಸಿದನು. ರಥ ವನ್ನು ನಡೆಸುತ್ತ ಒಂದು ಕತೆಯನ್ನು ಹೀಗೆ ಹೇಳಿದನು–

"ಸಮುದ್ರ ತೀರದಲ್ಲಿ ಸಂಪನ್ನನಾದ ಒಬ್ಬ ವೈಶ್ಯನಿದ್ದ. ಅವನ ಮನೆಯ ಸಮೀಪದ ಒಂದು ಮರದಲ್ಲಿ ಒಂದು ಕಾಗೆಯಿತ್ತು. ವೈಶ್ಯನ ಮನೆಯವರು ಬಿಸಾಡಿದ ಅನ್ನ ತಿಂದು ಕೊಬ್ಬಿದ್ದಿತು. ಒಂದು ದಿನ ಮಾನಸ ಸರೋ ವರಕ್ಕೆ ಹೋಗುತ್ತಿದ್ದ ಒಂದು ಹಂಸ ವಿಶ್ರಾಂತಿಗಾಗಿ ಆ ಮರಕ್ಕೆ ಬಂತು. ಅದನ್ನು ಕಂಡ ವೈಶ್ಯ ಪುತ್ರನು ಕಾಗೆಯೊಡನೆ 'ಆ ಹಂಸ ಕ್ಕಿಂತ ನೀನೇ ನಮಗೆ ಶ್ರೇಷ್ಠನಾಗಿ ತೋರುವಿ.' ಎಂದನು. ಕಾಗೆ ಈ ಮಾತನ್ನು ನಂಬಿ, ಹಂಸ ವನ್ನು ತನ್ನೊಡನೆ ಉಡ್ಡಾಣ ಮಾಡಲು ಕರೆ ಯಿತು. ಹಂಸ ಪಕ್ಷಿಗೆ ಇದೊಂದು ವಿನೋದ ವೆನಿಸಿ, 'ಹೌದು, ನೀನೇ ಶ್ರೇಷ್ಠ, ನಾನು ಒಪ್ಪಿಕೊಳ್ಳುವೆ.' ಎಂದಿತು ಕಾಗೆಗೆ ಸಮಾಧಾನ ವಿಲ್ಲ. ಉಡ್ಡಾಣದಿಂದಲೇ ನಿರ್ಣಯವಾಗ ಬೇಕೆಂದು ಹಟ ಮಾಡಿತು. ಹಂಸವು ರಾಜ ಗಾಂಭೀರ್ಯದಿಂದ ಉಡ್ಡಾಣಮಾಡಿತು. ಕಾಗೆಗೆ ರೆಕ್ಕೆಯ ಶಕ್ತಿ ಕುಗ್ಗಿ ಸಮುದ್ರಕ್ಕೆ ಬೀಳು ವಂತಾಯಿತು. ಕಡೆಗೆ ಹಂಸವು, ತನ್ನ ರೆಕ್ಕೆಯಲ್ಲಿ ಕಾಗೆಯನ್ನು ಹಿಡಿದುಕೊಂಡು ಮೊದಲಿನ ಸ್ಥಳಕ್ಕೆ ತರಬೇಕಾಯಿತು."

ಈ ಕಥೆಯನ್ನು ವಿವರಿಸಿದ ಶಲ್ಯನು ಕರ್ಣ ನನ್ನು ಆ ಕಾಗೆಗೆ ಹೋಲಿಸಿದನು. ಕರ್ಣನು ಅದಕ್ಕೆ ಒಪ್ಪಿ, "ಹಂಸವು ಮುಳುಗುತ್ತಿರುವ ಕಾಗೆಯನ್ನು ಸಂರಕ್ಷಿಸಿದಂತೆ ತಾವು ಮಾತ್ರ ನನ್ನನ್ನು ರಕ್ಷಿಸುವಂತೆ ಕಾಣುವುದಿಲ್ಲ," ಎಂದನು.

ಸೂರ್ಯೋದಯದೊಂದಿಗೆ ಕರ್ಣನ ಯುದ್ಧವು ಆರಂಭವಾಯಿತು, ಕರ್ಣನ ರಥವು ಯುಧಿ ಷ್ಠಿರನಿಗೆ ಎದುರಾಯಿತು. ಬಹು ಹೊತ್ತಿನ ವರೆಗೆ ಯುದ್ಧವಾಯಿತು. ಕೊನೆಗೆ ಯುಧಿ ಷ್ಠಿರನ ಬಿಲ್ಲು ಮುರಿಯಿತು. ಸಾರಥಿ ಸತ್ತನು. ಅಂಗರಕ್ಷಕ ದಳ ನಾಶವಾಯಿತು. ಬೇರೊಂದು ರಥವನ್ನು ಹತ್ತಿ ಯುಧಿಷ್ಠಿರನು ಓಡಿ ಹೋದನು. ಅವನನ್ನು ಬೆನ್ನಟ್ಟಿ ಹಿಡಿದು, "ಇದು ಯುದ್ಧ ರಂಗ; ಜೂಜಿನ ಪಟವಲ್ಲ. ಈ ಯುದ್ಧ ಭೂಮಿಯಲ್ಲಿ ಇನ್ನೊಮ್ಮೆ ಕಾಣಿಸ ಬೇಡ!" ಎಂದು ನುಡಿದು, ಕಳುಹಿಸಿದನು. ಅರ್ಜುನನು ತನಗೆ ಎಲ್ಲಿ ಸಿಗುತ್ತಾನೆ–ಎಂದು ಎದುರು ನೋಡುತ್ತಿದ್ದ ಕರ್ಣನಿಗೆ ನಡು

ಮಧ್ಯಾಹ್ನದ ಹೊತ್ತಿಗೆ ಭೀಮನು ಎದುರಾದನು. ಸಾಕ್ಷಾತ್ ಅಗ್ನಿ ಸೂರ್ಯರಂತೆ ಇಬ್ಬರೂ ಕಾದಿದರು. ಭೀಮನ ಪ್ರಹಾರದಿಂದ ಕರ್ಣ ಆಯಾಸಗೊಳ್ಳುತ್ತಿದ್ದ. ಭೀಮನ ಒಂದು ಬಾಣ ಕರ್ಣನ ಹೆಗಲಿಗೆ ತಗಲಿದ್ದಿತು. ದೂರದಲ್ಲಿ ಚಕ್ರಧರ ಬರುತ್ತಿದ್ದ. ಅಲ್ಲಿಗೆ ರಥವನ್ನು ತಿರುಗಿಸಲು ಹೇಳಿದನು. ಶಲ್ಯನು ಆ ಕಡೆಗೆ ರಥವನ್ನು ಹೊರಳಿಸಿದಾಗ ಭೀಮನು, "ಹೇಡಿ! ರಣಭೂಮಿಯಿಂದ ಓಡಿ ಹೋಗುತ್ತಿರುವೆಯಾ?" ಎಂದಾಗ "ತಮ್ಮಂತಹ ಮಹಾಯೋಧರ ಮುಂದೆ ಯಾರು ನಿಲ್ಲುತ್ತಾರೆ?" ಎಂದು ಉದ್ವಿಗ್ನತೆಯಿಂದ ಕರ್ಣನು ಉತ್ತರವಿತ್ತನು.

ಕರ್ಣನ ರಥ ಚಕ್ರಧರನ ಹತ್ತಿರ ಬಂತು. ರಥವನ್ನು ನಿಲ್ಲಿಸಿ ಕರ್ಣನು ಕೆಳಗಿಳಿದು ಚಕ್ರಧರನೊಡನೆ ಮಾತೆತ್ತಿದನು. ಅವನಿಗೆ ಆಗ ಭೀಮನು ತನಗೆ ಎದುರಾಗುವ ಮೊದಲೇ ದುಶ್ಶಾಸನನನ್ನು ಕೊಂದ ಸಂಗತಿ ತಿಳಿಯಿತು. ವಿವರವಿದು–

ದುಶ್ಶಾಸನನು ಭೀಮನ ಗದಾ ಪ್ರಹಾರದಿಂದ ನೆಲಕ್ಕುರುಳಿದ. ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿದ್ದ ಅವನೊಡನೆ ಭೀಮನು, "ದ್ರೌಪದಿಯ ವಸ್ತ್ರವನ್ನು ಯಾವ ಕೈಯಿಂದ ಸೆಳೆದೆ?" ಎಂದು ಕೇಳಿದನು. ದುಶ್ಶಾಸನನು ಬಲಗೈಯನ್ನೆತ್ತಿ ತೋರಿ–"ಇದೇ ಕೈಯಿಂದ ನಾನು ಧನಗಳನ್ನು ದಾನಮಾಡಿದ್ದೇನೆ. ಇದೇ ಕೈಯಲ್ಲಿ ಖಡ್ಗ ಧರಿಸಿದ್ದೇನೆ. ತುಂಬಿದ ಸಭೆಯಲ್ಲಿ ನಿಮ್ಮೆಲ್ಲರ ಮುಂದೆ ಯಾಜ್ಞಸೇನಿಯ ತುರುಬನ್ನು ಹಿಡಿದೆಳೆದೆ. ಈ ಕೈ ಪರಾನ್ನವನ್ನು ಮುಟ್ಟಿಲ್ಲ. ಇದೇ ನನ್ನ ವಿಜಯ ಹಸ್ತ"–

ಬಂದನು. ಭೀಮನು ರೌದ್ರ ತಾಳಿ ಅವನ ಬಳಿಗೆ ಹಾರಿಬಿದ್ದು ಅವನ ಕೈಯನ್ನು ಕಿತ್ತೆಸೆದನು. ಎದೆ ಮೇಲೆ ಕುಳಿತು ಉಗುರುಗಳಿಂದ ವಕ್ಷಸ್ಥಳವನ್ನು ಸೀಳಿ ರಕ್ತವನ್ನು ಪಾನಮಾಡಿದನು.

ಈ ಘಟನೆಯನ್ನು ಕೇಳಿ ಕರ್ಣನು ನಡುಗಿ ಹೋದ. ಚಕ್ರಧರನ ಚಿತ್ರ ಒಂದು ಕಣ್ಣೆದುರೇ ನಿಂತು ಹೋಗುತ್ತಿತ್ತು. ಸ್ವಲ್ಪ ಮುಂದೆ ಹೋಗುವಾಗಲೇ ಅವನು [illegible]. [illegible] ಬೇರೆ ರಥವನ್ನು ಏರುತ್ತಿದ್ದಾಗ ಅವನಿಗೆ [illegible] ಪ್ರಹಾರ ಮಾಡಿದ್ದರು. ಬಿದ್ದ ಅವನಿಗೆ ಕರ್ಣನು ತನ್ನ ಉತ್ತರೀಯವನ್ನು ಹೊದಿಸಿ ತನ್ನ ರಥದ ಕಡೆಗೆ ತೆರಳಿದನು. ಅವನ ರಥವು ಶಿಬಿರದ ಕಡೆಗೆ ತೆರಳಿತು. ಶಿಬಿರದಲ್ಲಿ ವಿಶ್ರಾಂತಿ ಪಡೆಯುತ್ತಿರಲು ಅಲ್ಲಿಗೆ ದುರ್ಯೋಧನ ಬಂದನು. ನಕುಲನನ್ನಾಗಲಿ ಭೀಮನನ್ನಾಗಲಿ ಯುಧಿಷ್ಠಿರನನ್ನಾಗಲಿ ಕರ್ಣನು ಸೆರೆಹಿಡಿಯಲಿಲ್ಲವೆಂಬುದು ದುರ್ಯೋಧನನಿಗೆ ಬೇಸರದ ಸಂಗತಿಯಾಗಿತ್ತು. ಅವರನ್ನು ಸೆರೆಹಿಡಿದು [illegible]? ಎಂಬುದೇ ಕರ್ಣನ ಪ್ರಶ್ನೆ. ಯುಧಿಷ್ಠಿರನನ್ನು ಸೆರೆಹಿಡಿದು ತಂದು [illegible] ಎಂದು ದುರ್ಯೋಧನ ಬಂದನೆ(?). ಇದಕ್ಕುತ್ತರ ಕರ್ಣನು— "ದುರ್ಯೋಧನಾ. ನಾನು ಧರ್ಮದಂತೆ ಶಸ್ತ್ರಯುದ್ಧ ಮಾಡಿದೆನು. ನಾಳೆಯು ಹಾಗೆ ಮಾಡುವೆ. ಯುದ್ಧಕ್ಕಾಗಿ ಬಂದ ಶತ್ರುವನ್ನು ಎದುರಿಸುವೆ. ನನ್ನ ಬಿಲ್ಲಿನ ವಿದ್ಯೆಯಲ್ಲಿ ಕಾಣುವಿ. [illegible] [illegible] ನೋಡುವವರೆಗೆ ಕಾಯುವೆನು." ಎಂದನು.

"ನೀನು ನನ್ನ ಸ್ವಲ್ಪ ವಿಶ್ರಾಂತಿ ಪಡೆಯಬೇಕು. ನಾನು ರಣ ಭೂಮಿಯತ್ತ ಹೋಗುವೆನು," ಎನ್ನುತ್ತಾ ದುರ್ಯೋಧನನು ತೆರಳಿದನು.

ಕರ್ಣನು ಅರ್ಜುನನಿಗೆ ಎದುರಾಗುವ ಕಡೆ ಬಂದ ಶಲ್ಯನ ಸಾರಥ್ಯದಲ್ಲಿ ರಣಭೂಮಿಗೆ ಹೋದನು. ಆಗ ಅಶ್ವತ್ಥಾಮನು ಬಂದು, "ಕರ್ಣಾ, ಉತ್ತರ ಭಾಗದಲ್ಲಿದ್ದ ನಿನ್ನ ಮಗ ವೃಷಸೇನನನ್ನು ಅರ್ಜುನನು ಹುಡುಕುತ್ತಿದ್ದಾನೆ," ಎಂದನು. ಅರ್ಜುನನನ್ನು ಎದುರಿಸುವಂತೆ ಅಲ್ಲಿಗೆ ರಥವನ್ನು ನಡೆಸಲು ಕರ್ಣನು ಶಲ್ಯನಿಗೆ ಆಜ್ಞಾಪಿಸಿದನು.

ಆ ಕದನದಲ್ಲಿ ವೃಷಸೇನನು ನಕುಲನನ್ನು ಸೋಲಿಸಿದ್ದನು. ತುಂಬಾ ಗಾಯಗಳಾಗಿದ್ದರೂ ಅರ್ಜುನನೊಡನೆ ಕಾದಾಡುತ್ತಿದ್ದನು. ಅರ್ಜುನನು ಆಗ ಅಲ್ಲಿಗೆ ಬಂದ ಕರ್ಣನನ್ನು ಕುರಿತು, "ರಾಧೇಯಾ, ಸಮಯಕ್ಕೆ ಸರಿಯಾಗಿ ಬಂದಿರುವೆ. ನಾನಿಲ್ಲದಿರುವಾಗ ನೀವೆಲ್ಲ ಕೂಡಿ ನನ್ನ ಮಗ ಅಭಿಮನ್ಯುವನ್ನು ಸಂಹಾರ ಮಾಡಿದಿರಿ. ಇಂದು ನಾನೊಬ್ಬನೇ ನಿನ್ನ ಮಗನನ್ನು ಕೊಲ್ಲುವೆನು. ನಿನಗೆ ಸಾಮರ್ಥ್ಯವಿದ್ದರೆ ಅವನನ್ನು ರಕ್ಷಿಸು," ಎಂದು ನುಡಿದು ವೃಷಸೇನನ ಮೇಲೆ ಬಾಣವನ್ನು ಪ್ರಯೋಗಿಸಿದನು. ವೃಷಸೇನನು ಉರುಳಿ ಬಿದ್ದನು. ಕರ್ಣನು ಬಹಳ ಸಂತಾಪತಾಳಿದನು. ನಾಳೆ ಅರ್ಜುನನ ಮೇಲೆ ಈ ಸೇಡನ್ನು ತೀರಿಸುತ್ತೇನೆಂದು ಕರ್ಣನು ಪ್ರತಿಜ್ಞಿಸಿದನು. ಸಂಜೆಯಾದನಂತರ ಮನೆಯ ಕಡೆಗೆ ರಥದಲ್ಲಿ ತೆರಳಿದನು. ಅವನ ಮನಸ್ಸು ದುಃಖದಿಂದ ತುಂಬಿಹೋಗಿತ್ತು. ಅವನ ಹೆಂಡತಿ ವೃಷಾಲಿಯು ಕಾಯುತ್ತಿದ್ದಳು. ಈ ಮರಣ ವಾರ್ತೆಯನ್ನು ತಿಳಿಸಲು ಮನೆಗೆ ಹೋಗುತ್ತಿರುವಂತೆ [illegible] ಹೇಗೆ [illegible]? ಎಂದು ಯೋಚಿಸುತ್ತ ಮನೆಗೆ ಬಂದನು. "ವೃಷಾಲಿ, [illegible] ಅವನನ್ನು [illegible] [illegible]. ಶತ್ರುವು ವೃಷಸೇನನ ಮಸ್ತಕವನ್ನು, ಚಕ್ರಧರನು [illegible]. ನಾಳೆ ನಿರ್ಣಾಯಕ ಯುದ್ಧ ಮಾಡುವುದಾಗಿ ಅರ್ಜುನನಿಗೆ ಆಹ್ವಾನಿಸಿದ್ದೇನೆ," ಎಂದು ವೃಷಾಲಿಯನ್ನು ಸಂತೈಸಲು ಯತ್ನಿಸಿದನು. "ನೀವು [illegible]. ಅರ್ಜುನನನ್ನು ಸೋಲಿಸುತ್ತೀರಿ" ಎಂದು ವೃಷಾಲಿ ಹೇಳಿದಳು. ಕರ್ಣನ ತೋಳ ತೆಕ್ಕೆಯಲ್ಲಿಯೇ ಆಕೆ ರಾತ್ರಿಯನ್ನು ಕಳೆದಳು.

ನಸುಕಿನಲ್ಲಿ ಕರ್ಣನು ಹೊರ ಭಾಗದ ಉಪ್ಪರಿಗೆಯಲ್ಲಿ ನಿಂತುಕೊಂಡು ಯೋಚನಾ ಮಗ್ನನಾಗಿದ್ದ. ತನ್ನ ಜೀವನದಲ್ಲಿ ನಡೆದ ವಿಧಿಯ ಆಟವನ್ನೇ ಯೋಚಿಸುತ್ತಿದ್ದ. ಆಕಾಶ ವನ್ನು ನೋಡುತ್ತಿರಲು ಆಕಸ್ಮಿಕವಾಗಿ ಒಂದು ಉಜ್ವಲ ನಕ್ಷತ್ರ ಕಳಚಿ ಬಿದ್ದಂತೆ ಕಂಡಿತು. ಲಕ್ಷೋಪಲಕ್ಷ ತಾರೆಗಳಲ್ಲಿ ಒಂದು ಬಿದ್ದರೆ ನಷ್ಟವೇನೂ ಇಲ್ಲ ಎಂದು ಭಾವಿಸಿಕೊಂಡನು. ಒಂದೆಡೆ ವೃಷಸೇನನ ಅಗಲಿಕೆಯ ದುಃಖವೂ ಕವಿಯಿತು. ವೃಷಾಲಿಯು ಎಂದಿನಂತೆ ಢಾಲನ್ನು ಹಿಡಿದುಕೊಂಡು ಬಂದಳು. ಅದನ್ನು ನಿತ್ಯ ದಂತೆ ಅವನ ಸೊಂಟಕ್ಕೆ ಸುತ್ತಲಿಲ್ಲ. ಆತನ ಕೈಗೆ ಒಪ್ಪಿಸಿದಳು. ಆಕೆಗೆ ಸಮಾಧಾನವನ್ನು ಹೇಳಿ, "ನಾನಿನ್ನು ಹೊರಡುವೆ" ಎಂದನು. ಭೀತಳಾದ ಆಕೆ, "ತಾವು ಹೊರಡುವಾಗಲೆಲ್ಲ ನಾನು ಬರುವೆ ಎನ್ನುತ್ತಿದ್ದಿರಿ. ಇಂದೇಕೆ ಹೀಗೆ?" ಎಂದು ಕೇಳಿದಳು. ಅದಕ್ಕೆ ಕರ್ಣನು "ಆ ಶಬ್ದ ತಪ್ಪಿ ನನ್ನಿಂದ ಹೊರ ಬಿದ್ದಿದೆ." ಎಂದುಕೊಂಡು ಹೊರಡಲು ಉದ್ಯುಕ್ತನಾದನು. ಆಕೆ ಮತ್ತೆ ಮುಂದೆ ಬಂದು ಕಾಲನ್ನು ತಡೆದಳು. ಆಕೆಗೆ ಸಮಾಧಾನವನ್ನು ಹೇಳಿ ಕೊಂಡೇ ಕರ್ಣನು ಮುಂದುವರಿದು ಕೌರವ ಶಿಬಿರಕ್ಕೆ ಬಂದನು.

## ಸಮಾರೋಪ

ಶಲ್ಯನು ಕರ್ಣನ ರಥವನ್ನು ಸಿದ್ಧಗೊಳಿಸಿದ್ದನು. ಕರ್ಣ ದುರ್ಯೋಧನರಿಬ್ಬರ ರಥಗಳೂ ಯುದ್ಧ ರಂಗವನ್ನು ತಲುಪಿದವು. ಕರ್ಣನು ಒಮ್ಮೆ ರಣ ಭೂಮಿಯನ್ನೆಲ್ಲ ನೋಡಿದ. ಆಗ ಶಲ್ಯನು, "ಸೂತ ಪುತ್ರನೇ. ನಿನಗೆ ಜಯವಾಗ ಬೇಕೆಂದು ನನ್ನ ಇಚ್ಛೆಯಾದರೂ ಅರ್ಜುನನ ಮುಂದೆ ನಿನ್ನ ಪರಾಕ್ರಮಕ್ಕೆ ಸ್ಥಾನವಿರಲಾರದು," ಎಂದನು. ಕರ್ಣನು ಆಗ ಸಂತಪ್ತನಾದನು.

"ಶಲ್ಯನೇ, ಇಂಥ ಭಯದ ಮಾತುಗಳ

[illegible] ನಿನ್ನಂಥ ಜ್ಯೋತಿಷಿ ಬೇಕಾಗಿಲ್ಲ. ಯುದ್ಧದ [illegible] ನನಗೆ ಗೊತ್ತಿದೆ. ಅರ್ಜುನನ [illegible] ತಪ್ಪು ಗುರಿಯೊಂದುಕೊಂಡು ಸಾರಥ್ಯ ವಹಿಸುವ ಕೃಷ್ಣನೆಲ್ಲಿ! ನನ್ನ ಸಾರಥಿಯಾಗಿದ್ದು ನನಗೆ ಅಪಮಾನಿಸುತ್ತಿರುವ [illegible] ನೀನೆಲ್ಲಿ? ಪಾಂಡವರ ಅಪೇಕ್ಷೆಯಂತೆ ನನ್ನ ತೇಜೋಭಂಗ ಮಾಡುವುದಕ್ಕಾಗಿಯೇ ನೀನು ನನ್ನ ಸಾರಥ್ಯ ವಹಿಸಿರುವಿ. ಕುಲದ ಅಹಂಕಾರನಿನಗಿದೆ. ಅದರೊಂದಿಗೆ ವಿಶ್ವಾಸಘಾತ, ಅಸತ್ಯ, ಪರನಿಂದೆ ಇವೇ ನಿನ್ನ ಕುಲದ ಹಿರಿಮೆಯ ಸಂಕೇತಗಳು! ಹೀಗಿದ್ದರೂ ಈ ಸೂತ ಪುತ್ರನ ತೇಜಸ್ಸಿಗೆ ಭಂಗ ಬರಲಾರದು."

ಕರ್ಣನು ಶಂಖವನ್ನೂದಿದನು. ಯುದ್ಧ ಪ್ರಾರಂಭವಾಯಿತು. ರಣರಂಗ ಹುಚ್ಚೆದ್ದ ಸಮುದ್ರದಂತೆ ಕಾಣುತ್ತಿತ್ತು. ಪಾಂಡವರ ಪಕ್ಷದ ಅನೇಕ ವೀರರನ್ನು [illegible]. ಅವನ ಗದೆಯ [illegible] ಅರ್ಜುನನನ್ನು ಹುಡುಕುತ್ತಿತ್ತು. ಕರ್ಣನ [illegible] ವನ್ನು ಶಲ್ಯನು ಕೊಂಡಾಡಿದನು. ಆಗ ಕರ್ಣನು, "ಶಲ್ಯರಾಜ, ನಿಮ್ಮ ಪರಾಕ್ರಮಕ್ಕೆ ಸಂತೋಷ [illegible] ಅರ್ಜುನನ ಎದುರಿಗೆ ನನ್ನನ್ನು ಒಯ್ಯಿ. ಅವನನ್ನು ಕೊಂದು ಈ ರಣಯಜ್ಞವನ್ನು ಸಮಾಪ್ತಿಗೊಳಿಸುವೆನು," ಎಂದನು.

ಕರ್ಣನು ರಣರಂಗದ ಬಡಗಣಭಾಗದಲ್ಲಿ ಯುದ್ಧ ಮಾಡುತ್ತಿದ್ದನು. ಕೃಷ್ಣನು ಅರ್ಜುನನ ರಥವನ್ನು ದಕ್ಷಿಣದ ಕಡೆಗೆ ಕೊಂಡುಹೋಗಿದ್ದನು. ಸಾರಥ್ಯ ಕಲೆಯಲ್ಲಿ ನಿಪುಣನಾದ ಶಲ್ಯನು ಕರ್ಣನ ಅಪೇಕ್ಷೆಯಂತೆ, ರಥವನ್ನು ಯುದ್ಧ ಭೂಮಿಯ ಇನ್ನೊಂದು ತುದಿಯಲ್ಲಿರುವ ಅರ್ಜುನನ ರಥಕ್ಕೆ ಎದುರಾಗುವಂತೆ ಮಾಡ ಬೇಕಾದರೆ, ನೇರವಾದ ದಾರಿಯಲ್ಲಿ ಹೋಗುವುದು ಉಚಿತವಲ್ಲ; ಅಲ್ಲಿ ಅರ್ಜುನನ ರಕ್ಷಣೆಗಾಗಿ ಕಾಯ್ದಿಟ್ಟ ಸೇನೆ ಹಾಗೂ ಪಾಂಡವ ವೀರರು ಅಡ್ಡವಾಗಿರುತ್ತಾರೆ ಎಂಬ ಕಾರಣದಿಂದ ರಥವನ್ನು ಯುದ್ಧ ಭೂಮಿಯ ಹೊರ ಭಾಗಕ್ಕಾಗಿ ಹೋಗುವಂತೆ ಓಡಿಸಿದನು. ಕರ್ಣನಿಗೆ ದೂರದಲ್ಲಿ ಅರ್ಜುನನ ರಥ ಕಾಣಿಸಿತು. ಶರೀರ ರೋಮಾಂಚನಗೊಂಡಿತು. ಕಪ್ಪು ಹೊಲದಲ್ಲಿ ನೇಗಿಲು ಹೊಡೆದಾಗ ಕೇಳಿಬರುವ ಶಬ್ದವು ರಥದಲ್ಲಿ ಆಗತೊಡಗಿತು. ರಥದ ಓಟ ನಿಧಾನವಾಯಿತು. ಕುದುರೆಗಳನ್ನು ಪ್ರಹರಿಸಿದರೂ ರಥ ಮುಂದುವರಿಯಲಿಲ್ಲ. ರಥದ ಎಡದ ಗಾಲಿ ಭೂಮಿಯಲ್ಲಿ ಹೂತು ಹೋಗಿದ್ದಿತು. ಕರ್ಣನು ಖಿನ್ನನಾದ. ಅವನಿಗೆ ಹಿಂದಿನದೊಂದು ಘಟನೆ ನೆನಪಿಗೆ ಬಂತು–

ಪರಶುರಾಮರಲ್ಲಿ ಬ್ರಹ್ಮಾಸ್ತ್ರ ವಿದ್ಯೆ ಕಲಿಯುತ್ತಿದ್ದಾಗ ಒಂದು ದಿನ ಒಬ್ಬ ಮುನಿಯ ಹಸುವನ್ನು ಹೊಡೆದಿದ್ದನು. ಆಗ ಮುನಿಯು "ಒಳ್ಳೆಯ ಸಂದರ್ಭದಲ್ಲಿ ನಿನ್ನ ರಥದ ಚಕ್ರ ಭೂಮಿಯಲ್ಲಿ ಹೂತುಹೋಗಲಿ," ಎಂದು ಶಪಿಸಿದ್ದನು. ಅದು ಈಗ ಪರಿಣಮಿಸಿತು. ಗಾಲಿಯೆತ್ತಲು ರಕ್ಷಕ ದಳ ಇದ್ದಿಲ್ಲ. ಕರ್ಣನು– "ಶಲ್ಯರಾಜ, ನೀವು ಸಹಾಯ ಮಾಡಿದಲ್ಲಿ ಹೊತುಹೋದ ಚಕ್ರವನ್ನು ನಾವಿಬ್ಬರೂ ಎತ್ತಬಹುದು" ಎಂದನು. ಶಲ್ಯನು ಸಹಕರಿಸಲಿಲ್ಲ. [illegible] ರಥಿಕನಿಗೆ ಸಾರಥ್ಯ ಮಾಡಿದುದು [illegible] ದುರ್ಯೋಧನನಿಗೆ [illegible] ಹೇಳಿದ್ದನು. ಶಲ್ಯನು ರಥದಿಂದ ಕುದುರೆಗಳನ್ನು ಬಿಚ್ಚತೊಡಗಿದನು.

"ನೀವು ಇದೇನು ಮಾಡುತ್ತಿರುವಿರಿ?"


"[illegible] ಯೋಗ್ಯವಾದ [illegible] ತ್ತಿದ್ದೇನೆ. ರಥದ ಚಕ್ರವನ್ನೆತ್ತುವುದರಲ್ಲಿ ನೀನು ಯಶಸ್ವಿಯಾದರೆ ಶಂಖನಾದ ಮಾಡು. ಆಗ ಈ ಕುದುರೆಗಳನ್ನು ಹೂಡಿ, ಸಾರಥ್ಯ ಹೂಡುವೆನು. ದುರ್ದೈವಿ ರಾಧೇಯನೇ, ನಿನ್ನ ಕೊನೆಗಳಿಗೆ ಸಮೀಪಿಸುತ್ತಿದೆ. ಅರ್ಜುನನ ರಥ ನಿನ್ನೆದುರಿಗೇ ಬರುತ್ತಿದೆ" ಎಂದು ನುಡಿದು ಕರ್ಣನತ್ತ ಹೊರಳಿಯೂ ನೋಡದೆ, ಶಲ್ಯನು ಕುದುರೆಯೊಂದಿಗೆ ಹೊರಟು ಹೋದನು.

ಕರ್ಣನು ರಥದಿಂದಿಳಿದು ಪೂರ್ಣ ಶಕ್ತಿಯಿಂದ ಚಕ್ರವನ್ನೆತ್ತಲು ಪ್ರಯತ್ನ ಮಾಡಿದನು. ಆದರೆ ಅದು ಫಲಿಸಲಿಲ್ಲ. ಆಯುಷ್ಯದುದ್ದಕ್ಕೂ ಧರ್ಮಕಾರ್ಯವನ್ನೆ ಮಾಡಿದ ತನಗೆ ಈ ಫಲವೆ? ಯಾವ ಧರ್ಮವನ್ನು ತಾನು ರಕ್ಷಿಸಿದೆನೋ

# ಕೇವಲ ಟಾಲ್ಕಂ ಪೌಡರುಗಳಿಂದ ಬೆವರುಸಾಲೆ ಉಪಶಮನ ಹೊಂದುವುದಿಲ್ಲ-ಅದಕ್ಕೆ ಬೇಕು ನೈಸಿಲ್








HTB-GLL/8806

## ನೈಸಿಲ್ ಬಳಸಿರಿ

## ಬೆವರುಸಾಲೆಯಿಂದ ಬಲು ಬೇಗ ಉಪಶಮನ ಪಡೆಯಿರಿ

ನೈಸಿಲ್ ಔಷಧಯುಕ್ತ ಪೌಡರ್. ಬೆವರುಸಾಲೆಯನ್ನು ಪ್ರತಿಯೊಂದು ಹಂತದಲ್ಲಿಯೂ ಎದುರಿಸುವುದಕ್ಕಾಗಿಯೇ ವಿಶೇಷವಾಗಿ ತಯಾರಿಸಲ್ಪಟ್ಟಿದೆ. ಇದು ಬೆವರುಸಾಲೆಯ ಸೋಂಕನ್ನು ಎದುರಿಸಿ ಅದರ ಸಮಸ್ಯೆ ಹದಗೆಡದಂತೆ ಮಾಡುತ್ತದೆ. ಬರಿಯ ಟಾಲ್ಕಂ ಪೌಡರುಗಳು ಹೀಗೆ ಮಾಡುವುದಿಲ್ಲ.

1. ವಿಪರೀತ ಬೆವರುವುದನ್ನು ತಡೆಗಟ್ಟುತ್ತದೆ. 2. ಬೆವರನ್ನು ಹೀರುತ್ತದೆ. 3. ದುರ್ವಾಸನೆ ಉಂಟುಮಾಡುವ ರೋಗಾಣುಗಳನ್ನು ನಾಶಗೊಳಿಸುತ್ತದೆ. 4. ಚರ್ಮಕ್ಕೆ ಆರಾಮವನ್ನೀಯುತ್ತದೆ.

2 ಪ್ಯಾಕ್‌ಗಳಲ್ಲಿ ಲಭ್ಯ—'ಬ್ಲೂ' ಮತ್ತು 'ಸ್ಯಾಂಡಲ್‌ವುಡ್'

(ಉತ್ತಮ ಆರೋಗ್ಯದ ಮೂಲ)

**ಗ್ಲಾಕ್ಸೋ**

ಅದು ತನ್ನನ್ನು ನಾಶಮಾಡಲು ಹೊರಟುಂತಿದೆ ಯೆಂದು ತಿಳಿದುಕೊಂಡನು. ಅರ್ಜುನನ ರಥ ಅವನಿಗೆ ಎದುರಾಯಿತು. ಅರ್ಜುನನು ಧನುಸ್ಸನ್ನೆತ್ತಿದನು.

"ನಿಲ್ಲು ಅರ್ಜುನಾ. ಸ್ವಲ್ಪ ನಿಲ್ಲು! ನನ್ನ ರಥದ ಗಾಲಿ ಹೂತುಹೋಗಿದೆ. ಅದನ್ನೆತ್ತುವಷ್ಟು ಅವಕಾಶ ಕೊಡು. ರಥದ ಚಕ್ರ ಹೂತಿರುವಾಗ ಯುದ್ಧ ಮಾಡುವುದು ಧರ್ಮವಲ್ಲ"– ಎಂದನು. ಕರ್ಣನ ಅವಸ್ಥೆಯನ್ನು ತಿಳಿದ ಅರ್ಜುನನ ಮನಸ್ಸು ನಿಶ್ಶಸ್ತ್ರನ ಮೇಲೆ ಬಾಣ ಪ್ರಯೋಗಕ್ಕೆ ಒಪ್ಪಲಿಲ್ಲ. ಆಗ ಕೃಷ್ಣನು ಹೇಳಿದನು, "ರಾಧೇಯ, ಇಷ್ಟು ಬೇಗ ನಿನಗೆ ಧರ್ಮದ ನೆನಪು ಬಂತೆ? ಏಕವಸ್ತ್ರಳಾಗಿದ್ದ ದ್ರೌಪದಿಯನ್ನು ಸಭೆಗೆ ಕರೆಸಿ, ಅವಳನ್ನು ವಿವಸ್ತ್ರಳನ್ನಾಗಿ ಮಾಡಬಯಸಿದೆಯಲ್ಲ. ಆಗ ನಿನ್ನ ಧರ್ಮಬುದ್ಧಿ ಎಲ್ಲಿತ್ತು! ಅಭಿಮನ್ಯುವಿನ ವಧೆಯನ್ನು ಮಾಡಿದಾಗ ಧರ್ಮದ ಒಲವು ಕಾಡಿತ್ತೇ?" ಎಂದು ಪ್ರಶ್ನಿಸಿದನು.

ಕೃಷ್ಣನ ಮಾತುಗಳಿಂದ ಕರ್ಣನ ಕೋಪ ಇಮ್ಮಡಿಸಿತು. ಅವನು ಪ್ರತಿಯಾಗಿ, "ಕಪಟ ದ್ಯೂತ ಕುಶಲನಾದ ಶಕುನಿಯೊಂದಿಗೆ ಯುಧಿಷ್ಠಿರನು ಜೂಜಾಡಲು ಒಪ್ಪಿದುದರಲ್ಲಿ ಧರ್ಮವಿತ್ತೆ? ದ್ಯೂತದಲ್ಲಿ ಸೋತದ್ದು ಮಾತ್ರ ಅಧರ್ಮವೆ? ಕೃಷ್ಣಾ, ನೀನು ಮಾಡಿದ ಪ್ರತಿಜ್ಞೆಗೆ ವಿರುದ್ಧವಾಗಿ ಭೀಷ್ಮರನ್ನೆದುರಿಸಲು ಸುದರ್ಶನವನ್ನು ಹಿಡಿದು ಮುನ್ನುಗ್ಗಿದೆ. ಅಭಿಮನ್ಯುವಿನ ಮರಣ ಸಾಮೂಹಿಕವಾದುದು ತಪ್ಪು; ಈ ಕರ್ಣನ ಮಕ್ಕಳು ಇದೇ ರಣರಂಗದಲ್ಲಿ ಮಡಿದಾಗ ಅದರ ಬಗ್ಗೆ ಯಾರೂ ಏನೂ ಅನಲಿಲ್ಲ. ಸುಳ್ಳಿನ ಆಲೋಚನೆಗಳನ್ನು ಹೊಂದುವುದು ನಿನ್ನಂಥವನಿಗೆ ಯೋಗ್ಯವೆ? ನನಗಿನ್ನು ಒಂದೇ ಒಂದು ಅಪೇಕ್ಷೆಯಿದೆ. ಅದೆಂದರೆ ಮೃತ್ಯುವನ್ನು ಎದುರುಗೊಳ್ಳುವುದು," ಎಂದು ನುಡಿದನು.

ಆಗ ಕೃಷ್ಣನು, "ಅರ್ಜುನಾ ನಿಮ್ಮ ಎಲ್ಲ ಅವಮಾನಗಳಿಗೆ, ಅಪಾಯಕ್ಕೆ, ಹಾಗೂ ಈ ಕುರುಕ್ಷೇತ್ರ ಯುದ್ಧಕ್ಕೆ ಈ ಕರ್ಣನೇ ಮೂಲ ಕಾರಣ. ಆದುದರಿಂದ ದಯೆಗೆ ಈತನು ಪಾತ್ರನಲ್ಲ. ನಿನ್ನ ಕರ್ತವ್ಯವನ್ನು ಮಾಡು. ಈ ಪಾಪಿಯನ್ನು ಸಂಹರಿಸಿ ವಿಜಯವನ್ನು ಸಂಪಾದಿಸು," ಎಂದನು. ಅರ್ಜುನನು ಬಾಣಪ್ರಯೋಗ ಮಾಡತೊಡಗಿದನು. ಕರ್ಣನು ರುದ್ರನಂತಾದನು. ಹೂತು ಹೋಗಿದ್ದ ರಥವನ್ನೇ ಹತ್ತಿ ನಿಂತು ಕರ್ಣನು ಯುದ್ಧ ಮಾಡತೊಡಗಿದನು. ಕರ್ಣನು ಬಳಸಿದ ಅಸ್ತ್ರಗಳಿಗೆ ಸಮಾನವಾದ ಅಸ್ತ್ರಗಳನ್ನು ಅರ್ಜುನನೂ ಬಳಸಿದ. ಅರ್ಜುನನ ಕಿರೀಟ ನೆಲಕ್ಕುರುಳಿತು. ಕರ್ಣನ ಕವಚ ಚೂರು ಚೂರಾಯಿತು. ಇಬ್ಬರಿಗೂ ಗಾಯಗಳಾದವು. ಕರ್ಣನ ಒಂದು ತೀಕ್ಷ್ಣ ಬಾಣ ಅಗ್ನಿಯ ಪ್ರತಿರೂಪವಾಗಿದ್ದು ನಾಗರ ಹಾವಿನಂತೆ ಅರ್ಜುನನ ಎದೆಗೆ ತಗುಲಿತು. ಅರ್ಜುನ ರಥದಲ್ಲೇ ಕುಸಿದು ಬಿದ್ದ. ಕೃಷ್ಣನು ಅರ್ಜುನನ ಸೊಂಟಕ್ಕೆ ಸುತ್ತಿದ್ದ ಶಾಲನ್ನು ತೆಗೆದು ಅವನಿಗೆ ಗಾಳಿ ಹಾಕುತ್ತಿದ್ದ. ಆ ಶಾಲು ಕರ್ಣನಿಗೆ ಪರಿಚಿತವಾಗಿತ್ತು. ಅದನ್ನವನು ಹಿಂದೆ ಕುಂತಿಗೆ ಕೊಟ್ಟಿದ್ದ. ಅದನ್ನು ಕಂಡು ಕರ್ಣನ ಬಲವೆಲ್ಲ ಕುಗ್ಗಿತು. ತಾನು ಕೊಟ್ಟಿದ್ದ ಮಾತುಗಳು ನೆನಪಿಗೆ ಬಂದವು. ಕೈಯಲ್ಲಿದ್ದ ಧನುಸ್ಸು ಜಾರಿತು, ರಥದಿಂದ ಇಳಿದು ಹೂತಿದ್ದ ಚಕ್ರವನ್ನೆತ್ತಲು ಯತ್ನಿಸಿದ. ಆಗ ಎಚ್ಚರಗೊಂಡ ಅರ್ಜುನನು ಕರ್ಣನಿಗೆ ಬಾಣ ಪ್ರಯೋಗ ಮಾಡುವಂತೆ ಕೃಷ್ಣನು ಪ್ರೇರೇಪಿಸಿದನು. ಅರ್ಜುನನು ಬಾಣ ಪ್ರಯೋಗ ಮಾಡಿದ. ಅರ್ಜುನನ [illegible] ಓಡಿಹೋಯಿತು. ಹೋಗುವಾಗ ಅರ್ಜುನನ ಮೈಯಲ್ಲಿ ಅದೇ ನೀಲ ಬಣ್ಣದ ಶಾಲು ತೇಲಿರುವುದು ಕರ್ಣನಿಗೆ ಕಾಣಿಸಿತು. ಅದನ್ನೇ ನೋಡುತ್ತ ಕರ್ಣನ ಕಣ್ಣುಗಳು ಮುಚ್ಚಿಕೊಂಡವು.

ಸೂರ್ಯಾಸ್ತದ ಸಮಯ ಪಾಂಡವರ ವಿಜಯದ ಸೂಚಕವಾಗಿ ಶಂಖನಾದ ಕೇಳಿಸುತ್ತಿತ್ತು. ದುರ್ಯೋಧನನು ತನ್ನ ರಥವನ್ನು ಕರ್ಣನು ಇದ್ದೆಡೆಗೆ ನಡೆಸುವಂತೆ ಸಾರಥಿಗೆ ತಿಳಿಸಿದ. ಕರ್ಣನು ಬಿದ್ದಿರುವುದನ್ನು ಕಂಡು ಶೋಕವನ್ನು ತಡೆದುಕೊಳ್ಳುತ್ತಾ ರಥದ




# ಸುಪರ್ ರಿನ್
# ಹೆಚ್ಚಿನ ಬಿಳುಪು ಹರಡುತ್ತದೆ,
## ಸರಿಗಟ್ಟುವ ಡಿಟರ್ಜೆಂಟ್ ಬಿಲ್ಲೆ ಬೇರೊಂದಿಲ್ಲ!

ಗಮನವಿಟ್ಟು ನೋಡಿರಿ
ಸುಪರ್ ರಿನ್
ಹೊಸ ಆಕರ್ಷಕ ರ್‍ಯಾಪರ್‌ನಿಂದ
ಅಲಂಕೃತವಾಗಿದೆ. ಜೊತೆಗೆ ಹೊಸ
ಸುವಾಸನೆ ಇದೆ!




ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ಉತ್ಪಾದನೆ

ಯಲ್ಲಿದ್ದ ಕರ್ಣನ ಕೈಗಳನ್ನು ಹೊರತೆಗೆದು ಅವನ ದೇಹದಲ್ಲಿ ನೆಟ್ಟ ಬಾಣವನ್ನು ಕಿತ್ತು, ಉತ್ತರೀಯದಿಂದ ಅವನ ಮುಖವನ್ನೊರಸಿದ. ಗೊಳೋ ಎಂದು ದುರ್ಯೋಧನನು ಅತ್ತನು. ಕರ್ಣನು ಮೆಲ್ಲನೆ ಕಣ್ದೆರೆದ. "ಮಿತ್ರಾ, ಬಂದೆಯಾ! ನಿನ್ನ ದಾರಿ ಕಾಯುತ್ತಿದ್ದೆ. ರಣಭೂಮಿಯಲ್ಲಿ ಮಡಿಯುವುದೇ ನಿಜವಾದ ಸಾವು. ವೀರತೆಯ ಲಕ್ಷಣ, ವಿಜಯದ ಸಂಕೇತ. ನಾನು ಅದನ್ನು ಗಳಿಸಿದೆ," ಎಂದನು.

"ದುರ್ಯೋಧನಾ, ಹೆದರಬೇಡ, ನಿನಗೆ ಲೌಕಿಕವಾದ ವಿಜಯ ಬೇಕಾಗಿದ್ದರೆ ನನ್ನ ಮರಣಾನಂತರ ಶಲ್ಯನ ಬದಲಾಗಿ ಅಶ್ವತ್ಥಾಮನನ್ನು ಸೇನಾಪತಿಯಾಗಿ ಮಾಡು. ಶಲ್ಯನು ಪಾಂಡವರ ಆಪ್ತನು."


"ಅಂಗರಾಜಾ, ಅದು ಸಾಧ್ಯವಿಲ್ಲ. ನಾನು ಮೊದಲೇ ಶಲ್ಯನಿಗೆ ಮಾತು ಕೊಟ್ಟಿದ್ದೇನೆ. ನಾನು ಸೋತರೂ ಚಿಂತೆಯಿಲ್ಲ, ಕೊಟ್ಟ ಮಾತಿಗೆ ತಪ್ಪಲಾರೆ."

ದುರ್ಯೋಧನನ ದೃಢತೆಗೆ ಕರ್ಣನು ಮೆಚ್ಚಿದ. "ಯುವರಾಜ, ನಿನ್ನ ಕಣ್ಣೀರನ್ನು ನೋಡುತ್ತ ಮರಣವನ್ನಪ್ಪುವ ಭಾಗ್ಯದ ಮುಂದೆ ಬೇರಾವ ಭಾಗ್ಯವಿದೆ? ನನ್ನ ಪರಾಕ್ರಮ, ದಾತೃತ್ವ ಹಾಗೂ ಚಾರಿತ್ರ್ಯ ಇವು ನನಗೆ ಉಪಯೋಗಕ್ಕೆ ಬರಲಿಲ್ಲ. ಜೀವನದಲ್ಲಿ ತಲೆಯೆತ್ತಿ ನಡೆಯುವಂತಾದುದು ನಿನ್ನ ಮಿತ್ರತ್ವದಿಂದ. ಆದುದರಿಂದ ನಿನ್ನ ಸ್ನೇಹಕ್ಕಾಗಿ ಕೃತಜ್ಞನಾಗಿದ್ದೇನೆ. ಒಂದೇ ಒಂದ ಕೆಲಸ ನಿನ್ನಿಂದಾಗಬೇಕು. ಅಗೋ ನೋಡು. ಒಂದು ನೀಲಿ ಶಾಲು ಬಿದ್ದಿದೆ. ಅದನ್ನು ತಂದು ನನಗೆ ವೀರಶಯ್ಯೆಯನ್ನು ಮಾಡಿಸು," ಎಂದನು.

ದುರ್ಯೋಧನನು ಆ ನೀಲಿ ಶಾಲನ್ನು ತಂದನು. ಅದನ್ನು ಕರ್ಣನ ತುದಿಗಾಲಿನಿಂದ ಕಂಠದವರೆಗೆ ಹೊದಿಸಿದ. ತನ್ನ ದುಃಖವನ್ನೆಲ್ಲ ಬದಿಗಿಟ್ಟು ಕರ್ಣನ ಬಳಿ ಕುಳಿತ. ಕರ್ಣನು ತೃಪ್ತಿ ಪಟ್ಟನು. "ನನ್ನ ಸಲುವಾಗಿ ಕಣ್ಣೀರು ಸುರಿಸಬೇಡ" ಎಂದು ಹೇಳಿದವನೇ, "ಯುವರಾಜ, ಮಧ್ಯಾಹ್ನದಲ್ಲಿ ನೀವು ಸೂರ್ಯಾಸ್ತವನ್ನು ನೋಡಿದ್ದೀರಾ?" ಎಂದು ಪ್ರಶ್ನಿಸಿದನು.

ಗಾಬರಿಗೊಂಡ ದುರ್ಯೋಧನ ಆಕಾಶದತ್ತ ಸೂರ್ಯನ ಕಡೆಗೆ ನೋಡಿ, ಮತ್ತೆ ಕರ್ಣನ ಕಡೆ ದೃಷ್ಟಿ ಹರಿಸಿದ. ಕರ್ಣನ ಕಣ್ಣುಗಳು ಸೂರ್ಯನನ್ನು ನೋಡುತ್ತಿರುವಂತೆ ತೆರೆದೇ ಇದ್ದವು. ದುರ್ಯೋಧನನು ಅಧೋಮುಖಿಯಾದ. ಕರ್ಣನ ಮುಚ್ಚಿದ ಕೈ ಅರಳಿತು. ಆ ಅಂಗೈಯ ಮೇಲೆ ದುರ್ಯೋಧನನ ಕಣ್ಣೀರು ಸುರಿಯುತ್ತಲಿತ್ತು. ಕರ್ಣನು ತನ್ನ ಕೊನೆಯ ದಾನವನ್ನೀಯುತ್ತಿರುವಂತೆ ಭಾಸವಾಗುತ್ತಿತ್ತು.

(ಮುಗಿಯಿತು)



ಹುಚ್ಚು ಸಾರಾಸಾರ ವಿಚಾರ ಮಾಡುವ ಶಕ್ತಿಯನ್ನು ನಾಶಗೊಳಿಸುತ್ತದೆಯೇ ವಿನಾ ಜಾಣ್ಮೆಯನ್ನಲ್ಲ.

- ನಥಾಲಿಯಲ್ ಎವ್ಯಾನ್ಸ್

Edited, printed & published by M. N. Mahishi on behalf of the Receiver (Moveables), Loka Shikshana Trust, Samyukta Karnataka Press, Koppikar Road, Hubli-580 020. Rept: Bombay: V. Satyamurthy Phone: 5510592. Calcutta: H. Majumdar Phone: 46-42331 Madras: K. A. Subramanian Phone: 842201; New Delhi: V. K. Chopra Phone: 7114785.

Rega No. KRNG 43
Registered with the Registrar of News papers for India under No 3533/57

